ಲಂಕೇಶ್

ಫೆಬ್ರವರಿ 1, 2012 ಪುಟ 20 ರೂ. 14/-

ಬೇಡ-ಜಂಗಮ ಮೀಸಲಾತಿ ಕಳ್ಳತನ



ಧೂಮಪಾನಿ ಮಾಂಸಾಹಾರಿ ಸನ್ಯಾಸಿಯ ವಿಚಿತ್ರ ಕತೆ!

ಅಷ್ಟ ಅನಿಷ್ಟಾಧೀಶರ ಪರ್ಯಾಯ ಫೈಟಿಂಗ್!

ವಿವೇಕವಿದ್ದರೆ ಆನಂದ


ಹಾವೇರಿ: ವಾಸ್ತುಗಾಗಿ ದಲಿತನ ನರಬಲಿ



ಗೋವರ್ಧನ್ ರಕ್ಷಣೆಗೆ ಸಿಐಡಿ ತನಿಖೆ!




ಪುನೀತ್‌ಗೆ ಕನ್ನಡವೇ ಕಷ್ಟ



ಸಿಂಗ್ ಬಾಬು ದಿವಾಳಿ

ಹಳಸಿದ ಅನ್ನ ಮತ್ತು ಹಸಿದ ನಾಯಿಗಳ ವರ್ತಮಾನ



ಕರ್ನಾಟಕದ ವರ್ತಮಾನ ಅಂಥಾ ಆಶಾದಾಯಕವಾಗಿಯೇನೂ ಇಲ್ಲ. ಇದು ಯಡಿಯೂರಪ್ಪನವರ ಆರ್ಭಟ, ಕಾಂಗ್ರೆಸ್‌ನ ಹೋರಾಟದ ಮುಂಚಿನ ಶರಣಾಗತಿ, ಜೆಡಿಎಸ್‌ನ ಮೇರೆ ಇಲ್ಲದ ಅವಕಾಶವಾದ, ಇತ್ಯಾದಿಗಳನ್ನು ನೋಡಿ ಅನಿಸುತ್ತಿರುವ ಮಾತಲ್ಲ. ಈ ಪಕ್ಷಗಳು ಇದಕ್ಕಿಂತ ಡೈನಮಿಕ್ ಆಗಿದ್ದಾಗಲೂ ಸಾಮಾನ್ಯ ಜನರಿಗೆ ದಕ್ಕಿದ್ದೇನೂ ಇಲ್ಲ. ವರ್ತಮಾನ ಕರ್ನಾಟಕದ್ದು ಮಾತ್ರವಲ್ಲ, ಇಡೀ ದೇಶ ವರ್ತಮಾನ ಕೂಡಾ ಅಂಥಾ ಆಶಾದಾಯಕವಾಗಿಲ್ಲ ಎನಿಸಲು ಪ್ರಧಾನ ಕಾರಣ ಪ್ರಗತಿಪರ ಕುಟುಂಬದ ಒಂದು ಧಾರೆಯ ವರ್ತಮಾನದ ನಡೆನುಡಿಗಳು.

ಪ್ರಗತಿಪರ ಚಳವಳಿಗಳು ಉತ್ತುಂಗದಲ್ಲಿದ್ದ ಕಾಲದಲ್ಲಿ ಜನ ಅವರ ಹಿಂದೆ ಇದ್ದರು. ಆಗಿನ ನಾಯಕರಿಗೆ ವಿಧಾನಸೌಧಕ್ಕಿಂತ ತಮ್ಮ ಹಳ್ಳಿಯ ಜನತೆಯ ಸಮಸ್ಯೆಗಳು ಪ್ರಧಾನವಾಗಿತ್ತು. ಹೀಗಾಗಿ ವಿಧಾನಸೌಧ ತಮ್ಮ ಹಳ್ಳಿಗೆ ಸ್ಪಂದಿಸುವಂತೆ ಮಾಡುವ 'ಹೋರಾಟ ರಾಜಕಾರಣ'ದಲ್ಲಿ ಅಂದಿನ ಎಲ್ಲಾ ಪ್ರಗತಿಪರ ಚಳವಳಿಗಳು ತೊಡಗಿಕೊಂಡಿದ್ದವು. ಆ ಹೋರಾಟದ ಪ್ರಕ್ರಿಯೆಯಲ್ಲಿ ವಿಧಾನಸೌಧ ಹೇಗೆ ಸಾರಾಂಶದಲ್ಲಿ ಜನರ ಪ್ರಾತಿನಿಧಿಕ ಸಂಸ್ಥೆಯಾಗುಳಿದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುತ್ತಿದ್ದವು. ವಿಧಾನಸೌಧದೊಳಗೆ ಹೋಗುವುದಕ್ಕಿಂತ ವಿಧಾನಸೌಧವೇ ಹಳ್ಳಿಗೆ ಬರುವ ರಾಜಕಾರಣ ಅರ್ಥಾತ್ ಪ್ರಜೆಗಳೇ ಪ್ರಭುಗಳಾಗುವ ರಾಜಕಾರಣವನ್ನು, ಹೋರಾಟ ನಿರತ ಪ್ರಗತಿಪರ ಸಂಘಟನೆಗಳು ಮಾಡುತ್ತಿದ್ದವು. ಪರಿಣಾಮವಾಗಿ ಹಲವು ಜನವಿರೋಧಿ ಕಾನೂನುಗಳು ತಡೆಗಟ್ಟಲ್ಪಟ್ಟವು. ಎಲ್ಲಕ್ಕಿಂತ ಹೆಚ್ಚಾಗಿ ಜನರಿಗೆ ಈ ನೆಲದ ಪ್ರಭುಗಳು ನಾವು; ಸರ್ಕಾರ, ಶಾಸಕ ಮತ್ತು ಅಧಿಕಾರಿ ತಮ್ಮ ಸೇವಕ ಅನ್ನುವ ನಿಜವಾದ ಪ್ರಜಾತಾಂತ್ರಿಕ ಪ್ರಜ್ಞೆ ಮೂಡತೊಡಗಿತ್ತು. ಹೀಗೆ ಸ್ವತಂತ್ರ ಭಾರತದಲ್ಲಿ ತಡವಾಗಿಯಾದರೂ ಕೆಳಗಿನಿಂದ ಪ್ರಜಾತಂತ್ರ ಕುಡಿಯೊಡೆಯತೊಡಗಿತ್ತು.

ಆದರೆ 1985ರಲ್ಲಿ ರಾಮಕೃಷ್ಣ ಹೆಗಡೆಯವರು ಪ್ರಾರಂಭಿಸಿದ 'ಮೌಲ್ಯಾಧಾರಿತ' ರಾಜಕಾರಣ ಸಂಸದೀಯ ರಾಜಕಾರಣದಲ್ಲಿ ಮೌಲ್ಯದ ಹುಸಿ ಭ್ರಾಂತಿಯನ್ನು ಹುಟ್ಟು ಹಾಕಿತು. ಅದಕ್ಕಿಂತಲೂ ಹೆಚ್ಚಾಗಿ ಕೆಳಗಿನಿಂದ ಕುಡಿಯೊಡೆಯುತ್ತಿದ್ದ ನಿಜವಾದ ಪ್ರಜ್ಞಾಶೀಲ ಪ್ರಜಾತಾಂತ್ರಿಕ ರಾಜಕಾರಣವನ್ನು ಅಪಮೌಲ್ಯಗೊಳಿಸಲು ಪ್ರಾರಂಭಿಸಿತು. ಗುಡಿಸಲುಗಳಿಂದ ಗುಡುಗುತ್ತಿದ್ದ ಹಲವು ನಾಯಕರು ಬಂಗಲೆಗಳನ್ನು ಕಂಡಿದ್ದು; ರೈಲ್ವೇ ಸ್ಟೇಷನ್ನು, ಪಾರ್ಕುಗಳು ಮತ್ತು ಬೀದಿಗಳಲ್ಲಿ ಜೀವದ ಉಸಿರು ಪಡೆಯುತ್ತಿದ್ದ ಹೋರಾಟಗಳಿಗೆ ವಿಧಾನಸೌಧದಲ್ಲಿ ಚಿನ್ನದ ನೇಣು ಬಿಗಿದದ್ದು ಇದೇ ಕಾಲಘಟ್ಟದಲ್ಲಿ.

ಕೆಲವು ಸಂಘಟನೆ ಮತ್ತು ಕೆಲವು ಹೋರಾಟಗಳನ್ನು ಬಿಟ್ಟರೆ ಅಂದಿನಿಂದ ಇಂದಿನವರೆಗೆ ವಿಧಾನಸೌಧದ ಧೃತರಾಷ್ಟ್ರ ಆಲಿಂಗನದಿಂದ ಕರ್ನಾಟಕದ ಪ್ರಗತಿಪರ ರಾಜಕಾರಣದ ಬಹುದೊಡ್ಡ ಧಾರೆ ಪಾರಾಗಿಲ್ಲ. ಎಡಪಂಥೀಯ ಸಂಘಟನೆಗಳ ಶರತ್ತುಬದ್ಧ ಸಂಸತ್ ಆಲಿಂಗನ ನಿಧಾನವಾಗಿ ಅವರ ರಾಜಕಾರಣದ ಕ್ರಾಂತಿಕಾರಿ ಸತ್ವವನ್ನೇ ನುಂಗಿಹಾಕಿದ್ದನ್ನು ನೋಡುತ್ತಿರುವಂತೆ ಕರ್ನಾಟಕದ ರೈತಸಂಘ, ದಲಿತ ಸಂಘರ್ಷ ಸಮಿತಿಗಳು, ಲಂಕೇಶ್ ಅವರು ಹುಟ್ಟುಹಾಕಿದ ಪ್ರಗತಿರಂಗ ಇತ್ಯಾದಿಗಳು ಸಹ ವಿಧಾನಸೌಧವನ್ನು ಒಳಗಿಂದ ಬದಲಾವಣೆ ಮಾಡುವ ರಾಜಕಾರಣವು ಬೃಹತ್ ಪ್ರಯಾಸಕ್ಕೆ ಕಾಲಬಾಹಿರವಾಗಿ ಮತ್ತು ಜನರನ್ನು ಸಾಕಷ್ಟು ಸಜ್ಜುಗೊಳಿಸದೆ ಕೈಹಾಕಿ ವಿಫಲಗೊಂಡವು. ಆ ಪ್ರಯತ್ನದಲ್ಲಿ ಕೆಲವು ಸಂಘಟನೆ ಮತ್ತು ನಾಯಕರಂತೂ ವಿಧಾನಸೌಧವನ್ನು ಬದಲಿಸದೆ ತಾವೇ ಬದಲಾಗಿ ವಿಧಾನಸೌಧದ ವಕ್ತಾರರಾಗಿಬಿಟ್ಟರು. ಅರ್ಥಾತ್ ಈ ನಾಡಿನ ಉಳ್ಳವರ ಮತ್ತು ದಾಳಿ ಇಡುತ್ತಿರುವ ಜಾಗತಿಕ ಮಾರುಕಟ್ಟೆ ಶಕ್ತಿಗಳ ವಕ್ತಾರರಾಗಿಬಿಟ್ಟರು.

ಹೀಗಾಗಿ ಹಲವು ಹೋರಾಟಗಳು ರಕ್ತಪಾತಕ್ಕೆ, ಇನ್ನುಳಿದವು ಗರ್ಭಪಾತಕ್ಕೆ, ಇನ್ನು ಕೆಲವು ಪ್ರಜ್ಞಾ ಪ್ರಪಾತಕ್ಕೆ ಉರುಳುತ್ತಿರುವ ಸನ್ನಿವೇಶದಲ್ಲಿ ಜಾಗತೀಕರಣದ ಶಕ್ತಿಗಳು ಪ್ರಭುತ್ವದ ಸ್ವರೂಪವನ್ನು, ಸಮಾಜದ ಶಕ್ತಿಗಳ ಸಮತೋಲನವನ್ನು, ಜನರ ಪ್ರಜ್ಞೆಯನ್ನು ತನ್ನ ಲಾಭಕ್ಕೆ ತಕ್ಕಂತೆ ಪುನರ್ ರೂಪಿಸುತ್ತಾ ದಮನಿತ ಜನಸಮುದಾಯದ ವರ್ತಮಾನ ಮತ್ತು ಭವಿಷ್ಯಕ್ಕೆ ದೊಡ್ಡ ಸವಾಲನ್ನು ಹಾಕುತ್ತಿವೆ. ಈ ಸಂದರ್ಭ ಜನಪರ ಶಕ್ತಿಗಳಿಂದ ಬದಲಾಗುತ್ತಿರುವ ವರ್ತಮಾನದ ಬಗ್ಗೆ, ಶಕ್ತಿಗಳ ಸಮೀಕರಣದ ಬಗ್ಗೆ ಆಳವಾದ ತಿಳಿವಳಿಕೆಯನ್ನು, ಹಲವು ಆಮಿಷಗಳ ಬಿರುಗಾಳಿಯಲ್ಲಿ ತೇಲಿ ಹೋಗದೆ ದೃಢವಾಗಿ ನಿಲ್ಲಲು ಬೇಕಾದ ಗಟ್ಟಿಯಾದ ಸೈದ್ಧಾಂತಿಕ ಬೇರುಗಳನ್ನು ಮತ್ತು ಜನಪರ ಬದ್ಧತೆಯನ್ನು ಕೇಳುತ್ತಿದೆ. ಪ್ರತಿಗಾಮಿಗಳು ಅಜೆಂಡಾ ರೂಪಿಸುವ ಮತ್ತು ಅದಕ್ಕೆ ಪ್ರಗತಿಪರರು ಟೌನ್‌ಹಾಲ್ ಮೆಟ್ಟಿಲ ಮೇಲೆ ನಡೆಸುವ ಮೂರು ಗಂಟೆಗಳ ಪ್ರತಿಭಟನೆಯ ಅಲ್ಪತೃಪ್ತಿಯನ್ನು ಮೀರಿ ಜನಹೋರಾಟಗಳು ಮತ್ತೆ ಬೀದಿ ಸೇರಬೇಕಿದೆ.



ಶಿವಸುಂದರ್

ಚಾರ್ವಾಕ

ವಿಧಾನಸೌಧದ ನೆರಳಿಂದ ಹೋರಾಟಗಳು, ಜಾಗತೀಕರಣದ ಫಲಾನುಭವಿಗಳ ಫಂಡಿನ ಹಂಗಿನಿಂದ ಸಂಘಟನೆಗಳು, ಕೆಲವೇ ವ್ಯಕ್ತಿಗಳ ಛಭಿಯಿಂದ ನಾಯಕತ್ವಗಳು ಹೊರಬಂದು ನಿಜಕ್ಕೂ ಜನರ ಆಕ್ರೋಶವನ್ನು ಕೂಡುಗಟ್ಟಿಸಿ ಪ್ರತಿಭಟನೆಯ ಘೋಷಣೆಗೆ ಪ್ರಾಮಾಣಿಕ ಧ್ವನಿ ಮತ್ತು ಕಸುವು ತಂದುಕೊಡುವ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿದೆ.

ಆದರೆ ಕರ್ನಾಟಕದ ವರ್ತಮಾನದ ಪ್ರಗತಿಪರ ಹೋರಾಟಗಳ ಒಂದು ಧಾರೆ ಜನರಿಗಿಂತಲೂ ಹೆಚ್ಚಾಗಿ ಆಳುವ ಪಕ್ಷಗಳಲ್ಲಿ ಅಥವಾ ದಮನಿತ ಜಾತಿಯ ಹಿನ್ನೆಲೆಯೊಂದನ್ನು ಬಿಟ್ಟರೆ ಮಿಕ್ಕೆಲ್ಲಾ ರೀತಿಯಿಂದಲೂ ಜನಶೋಷಕರೇ ಆಗಿರುವ ವ್ಯಕ್ತಿಗಳ ಹಿಂದೆ ಗಿರಕಿ ಹೊಡೆಯುವ ಪ್ರವೃತ್ತಿಯನ್ನೇ ತೋರುತ್ತಿವೆ. ಇದು ಅತ್ಯಂತ ವಿಷಾದನೀಯ ಮತ್ತು ಅಪಾಯಕಾರಿ. ಅವರು ತಾವೂ ಮೋಸ ಹೋಗುವ ಮತ್ತು ಜನರನ್ನೂ ಮೋಸಹೋಗುವಂತೆ ಮಾಡುವ ಮತ್ತೊಂದು ಹೆಜ್ಜೆಯನ್ನು ಇಡುವಂತೆ ತೋರುತ್ತಿದೆ.

ಈ ಧಾರೆ ಈಗ ಆತ್ಮಘಾತುಕವಾಗಿ, ಅಪಾಯಕಾರಿಯಾಗಿ ಶ್ರೀರಾಮುಲು ಬಿಜೆಪಿ ಬಿಟ್ಟು ಹೊರಬಂದ ಮೇಲೆ ಎಲ್ಲಾ ತರ್ಕವನ್ನು ಮೀರಿ ಅವಕಾಶವಾದೀ ರಾಜಕಾರಣದ ಕಡೆಗೆ ಧಾವಿಸುತ್ತಿದೆ. ಶ್ರೀರಾಮುಲು ಬಳಿ ಜಾಗತೀಕರಣದ ಜನವಿರೋಧಿ ಆರ್ಥಿಕನೀತಿಗಳು ಸಕ್ರಮ ಮತ್ತು ಅಕ್ರಮ ಮಾರ್ಗಗಳ ದುರ್ಲಾಭ ಮಾಡಿಕೊಂಡು ಕೂಡಿಟ್ಟ ಸಾವಿರಾರು ಕೋಟಿ ಆಸ್ತಿ ಇದೆ. ಬದಲಾದ ರಾಜಕೀಯ ಸಮೀಕರಣದಲ್ಲಿ ಅದನ್ನು ಕಾಪಾಡಿಕೊಳ್ಳಲು ಹಲವು ನೂರು ಕೋಟಿ ಹೂಡಿ ರಾಜಕೀಯ ಅಧಿಕಾರ ಪಡೆದುಕೊಳ್ಳಲು ಶ್ರೀರಾಮುಲು ಅಂಡ್ ಕೋ. ಹಪಹಪಿಸುತ್ತಿದೆ.

- ಗಣಿಧಣಿಗಳು ಹೀಗೆ ತಮ್ಮ ಬಂಡವಾಳಶಾಹಿ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಮಾಡಬೇಕೆಂದಿರುವ ರಾಜಕಾರಣಕ್ಕೆ ಅಹಿಂದ ರಾಜಕಾರಣದ ತಾತ್ವಿಕತೆಯ ಚೌಕಟ್ಟನ್ನು ಕೊಡಲು ಪ್ರಗತಿಪರರ ಒಂದು ಗುಂಪು ಮುಂದೆಹೋಗಿದೆ. ಅವರಲ್ಲಿ ಕೆಲವರಿಗಂತೂ ಶ್ರೀರಾಮುಲುವಿನಲ್ಲಿ ದೇವರಾಜ್ ಅರಸಿನ ಶಿಷ್ಯ ಕಾಣುತ್ತಿದ್ದಾನೆ. ಹೀಗೆ ಅರ್ಧರಾತ್ರಿಯಲ್ಲಿ ಶ್ರೀರಾಮುಲುವಿಗೆ ಅರಸುವಿನ ಪೋಷಾಕು ತೊಡಿಸಿ ಪ್ರಗತಿಪರರ ಮುಂದೆ ಮೆರವಣಿಗೆ ನಡೆಸಲು ಹೈದರಾಬಾದಿನ ಫೈವ್‌ಸ್ಟಾರ್ ಹೋಟೆಲಿನಲ್ಲಿ ಯೋಜನೆ ಮಾಡುತ್ತಿದ್ದಾರೆ. ಅವರಲ್ಲಿ ಕೆಲವರು ತಾವು ಮುತ್ಸದ್ದಿಗಳೆಂದು [sic: ಮುತ್ಕಾಳರಲ್ಲವೆಂದು], ಶ್ರೀರಾಮುಲು ಇನ್ನೂ ರಾಜಕೀಯ ಎಳಸು ಆದ್ದರಿಂದ ಆತನನ್ನು ಅಹಿಂದ ರಾಜಕಾರಣಕ್ಕೆ ಒಪ್ಪಿಸಬಹುದೆಂದೂ, ಬಲಾಢ್ಯರೇ ತುಂಬಿರುವ ಶಕ್ತಿ ರಾಜಕಾರಣದಲ್ಲಿ ಅಹಿಂದ ರಾಜಕಾರಣಕ್ಕೆ ಬೇಕಾದ ಇಡುಗಂಟನ್ನು ಶ್ರೀರಾಮುಲುನಿಂದ ಪಡೆದುಕೊಂಡರೆ ತಪ್ಪೇನೆಂದು ಮರುತರ್ಕ ಹೂಡುತ್ತಾರೆ. ಹಿಂದುಳಿದ ದಮನಿತ ಸಮುದಾಯ ಅಧಿಕಾರಕ್ಕೆ ಬರಬೇಕೆಂದರೆ ಇವೆಲ್ಲಾ ಮಾಡಬೇಕೆಂದು ಸಮರ್ಥಿಸಿಕೊಳ್ಳುತ್ತಾರೆ!!

ಶ್ರೀರಾಮುಲು ಮತ್ತು ಅವರ ರೆಡ್ಡಿ ಸಖರು ಬಳ್ಳಾರಿಯಲ್ಲಿ ತಮ್ಮ ಸಾಮ್ರಾಜ್ಯ ಕಟ್ಟಿದ್ದೇ ಅಲ್ಲಿನ ಜನರ ಮತ್ತು ದೇಶದ ಸಂಪತ್ತನ್ನು ಲೂಟಿ ಮಾಡಿಲ್ಲ ಅಲ್ಲವ್ವೋ? ಅವರ ಆರ್ಥಿಕ ಸಂಪನ್ನತೆಯಲ್ಲಿ ಯಾವ ಪರ್ಯಾಯ ಅಥವಾ ಜನಪರ ರಾಜಕಾರಣವಿದೇ?

ಇದಕ್ಕಿಂತ ಆತ್ಮವಂಚನೆ ಮತ್ತೊಂದಿಲ್ಲ. ಕರ್ನಾಟಕದ ಮಟ್ಟಿಗೆ ಈ ತರ್ಕ ಹೊಸತೂ ಅಲ್ಲ ಮೊದಲನೆಯದೂ ಅಲ್ಲ. ಎಲ್ಲಾ ಪ್ರಗತಿಪರ ಪಕ್ಷಗಳು ಮತ್ತು ಸಂಘಟನೆಗಳು ಅಧಿಕಾರ ರಾಜಕಾರಣದ ಗಟಾರಕ್ಕೆ ಇಳಿಯುವ ಮುನ್ನ ಇದೇ ಬಟ್ಟೆಗಳನ್ನು ತೊಟ್ಟಿದ್ದರು. ಗಟಾರದಲ್ಲಿ ಇರದಿದ್ದ ರತ್ನವನ್ನು ಹೆಕ್ಕಿ ತರಲು ಹೋದವರು ಇನ್ನೂ ವಾಪಸ್ ಬಂದಿಲ್ಲ. ಜನ ಅವರ ಬರುವಿಕೆಗೇನೂ ಕಾಯುತ್ತಿಲ್ಲ ಎನ್ನುವುದು ಬೇರೆ ಮಾತು.

63 ವರ್ಷಗಳ ಸ್ವತಂತ್ರ ಭಾರತದ ರಾಜಕಾರಣ ಸಾಕಷ್ಟು ಪಾಠಗಳನ್ನು ಹೊಟ್ಟೆಯಲ್ಲಿಟ್ಟುಕೊಂಡಿದೆ.

ಜನರ ಎಲ್ಲಾ ಸಮಸ್ಯೆಗಳ ನಿವಾರಣೆಯ ಕೀಲಿಕೈ ರಾಜಕೀಯ ಅಧಿಕಾರದಲ್ಲಿದೆ ಎಂಬ ಅಂಬೇಡ್ಕರ್ ಮಾತು ಅಕ್ಷರಶಃ ಸತ್ಯ. ಆದರೆ ಈ ಸಂಸತ್ತು ಮತ್ತು ವಿಧಾನಸೌಧದ ದಮನಿತ ಸಮುದಾಯದ ಪರವಾಗಿ ಕೆಲವರು ಪ್ರತಿನಿ[ಧಿ]ಗಳಾಗುವುದು ಆ ಸಮುದಾಯಗಳಿಗೆ ಮತ್ತು ವ್ಯಕ್ತಿಗಳಿ[ಗೆ] ರಾಜಕೀಯ ಅಧಿಕಾರವನ್ನು ತಂದುಕೊಡುತ್ತದೆಯೆ ಎಂಬುದು ಮುಖ್ಯ ಪ್ರಶ್ನೆ. ಮಿಕ್ಕೆಲ್ಲಾ ವಿಷಯಗಳ ಬ[ಗ್ಗೆ] ಅಂಬೇಡ್ಕರ್ ಮಾತುಗಳನ್ನು ಗುರಾಣಿಯನ್ನಾಗಿ ಮಾ[ಡಿ]ಕೊಳ್ಳುವ ಈ ನಮ್ಮ ಪ್ರಗತಿಪರ ಸ್ನೇಹಿತರು ಆರ್ಥಿಕ ಸಮಾನ[ತೆ] ಮೂಲಭೂತ ಹಕ್ಕಾಗದ ಸಂಸದೀಯ ಪ್ರಜಾತಂತ್ರ ಮತ್ತದ[ರ] ಸಂಸ್ಥೆಗಳು ರಾಜಕೀಯ ಸಮಾನತೆಯನ್ನು ನೀಡಿದರು[ೂ] ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯನ್ನು ಶಾಶ್ವತಗೊ[ಳಿ]ಸುತ್ತವೆ ಎಂದು ಹೇಳಿದ್ದನ್ನು ಏಕೆ ಮರೆಯುತ್ತಾರೆ? ತಳಮ[ಟ್ಟ]ದಲ್ಲಿ ದಲಿತ-ಶೂದ್ರ ಭೂ ಹೀನ ರೈತನಿಗೆ ಜಮೀನು, ಬೆಳೆ[ದ] ಬೆಳೆಗೆ ಮಾರುಕಟ್ಟೆಯಲ್ಲಿ ಸಮಾನ ಅವಕಾಶ, ದಕ್ಕದೆ ಅಥ[ವಾ] ದೇಶದ ಸಂಪತ್ತಿನಲ್ಲಿ ಸರಿಪಾಲು ದಕ್ಕದೆ ದಮನಿ[ತ] ಸಮುದಾಯಗಳು ಮೇಲ್ಚಲನೆ ಪಡೆಯುವುದೇ ಇ[...] ಸಬಲೀಕರಣವಾಗುವುದಿಲ್ಲ. ದಮನಿತ ಸಮುದಾಯ[ದ] ಯಾವುದೇ ಪಕ್ಷ ಅಥವಾ ವ್ಯಕ್ತಿ ಚುನಾವಣಾ ಪ್ರಜಾತಂತ್ರದ [ಮೂಲಕ] ವಿಧಾನಸೌಧ ಪ್ರವೇಶ ಮಾಡಿದ ನಂತರ ಸಂಪತ್ತಿನ ಪ್ರ[ಜಾ]ತಂತ್ರೀಕರಣದ ನೀತಿಯನ್ನು ಜಾರಿಗೆ ತರಲಿರಲಿ, ಪ್ರಸ್ತಾಪವನ್ನು ಮಾಡಲಾಗಿಲ್ಲ. ಏಕೆ? ಇವರು ಅಧಿಕಾರಕ್ಕೆ ಬಂದನಂತರ ತಕ್ಷ[ಣ] ತಳಮಟ್ಟದ ಸಮುದಾಯದ ಮೇಲ್ವರ್ಗ ಮತ್ತು ಮೇಲಾ[...] ಶೋಷಕರ ಮೇಲಿನ ಅವಲಂಬಿತ ಬದುಕು ಏಕೆ ಬದ[ಲಾ]ಗಲಿಲ್ಲ? ದೇಶದ ಸಂಪತ್ತು ದಮನಿತ ಜನರೆಲ್ಲರಿಗೆ ದಕ್ಕುವ[ಂತೆ] ಏಕೆ ಮಾಡಲಾಗಲಿಲ್ಲ?

ಎಡಪಕ್ಷಗಳಾಗಲಿ, ಬಿಎಸ್‌ಪಿ, ಎಸ್‌ಪಿಯಾಗಲಿ, ಅಲ್ಲ[...] ಎಂಎಲ್‌ಎಗಳಾದ ದಲಿತ ರೈತಪ್ರತಿನಿಧಿಗಳಾಗಲಿ ಯಾರ[ೂ] ಆ ಅಜೆಂಡಾವನ್ನು ಸಂಸತ್ತು ಅಥವಾ ವಿಧಾನಸೌಧದ ಬಾಗಿ[ಲ] ಒಳಗೂ ತರಲಾಗಲಿಲ್ಲ. ಏಕೆ? ಎಡಪಕ್ಷಗಳು 1957ರ[ಲ್ಲಿ] ಕೇರಳದಲ್ಲಿ ಆ ಛಾಯೆಯುಳ್ಳ ಕಾನೂನೊಂದನ್ನು ಜಾರಿ[...]

▶ 1[...]

> ಇದು ಪರೀಕ್ಷೆಗಳ ಕಾಲ. ಆಮಿಷಗಳ[...] ನಾಯಕರನ್ನು, ಹೋರಾಟಗಳನ್ನು[...] ಕೊಳೆಸಲು ಕಾದುಕೂತಿರು[ವ] ಸಂದರ್ಭ. ಕವಿ ಫೈಜ್ ಹೇಳುವಂ[ತೆ] 'ಪ್ರತಿಮನದ ಪಡಸಾಲೆಯಲ್ಲಿ ಸ[...] ದೀಪಗಳ ಸಾಲು'ಗಟ್ಟಿರು[ವ] ಸಂದರ್ಭ. ನಾಯಿಗಳು ಹಸಿದ[ು] ಕೂತಿರುವ ಸಂದರ್ಭದಲ್ಲಿ ನಮ್ಮ[...] ತಟ್ಟೆಯ ಅನ್ನ ಹಳಸದಂ[ತೆ] ನೋಡಿಕೊಳ್ಳಬೇಕಿದ[ೆ]. ಇಲ್ಲದಿದ್ದರೆ ಅಡಿಗರಂ[...] ಅಡಿಗರೂ ಹೇಳುವಂ[ತೆ] "ಕೊಳೆಯಲ[ು] ಪ್ರಾರಂಭಿಸಿದ[...] ಒಳ್ಳೆಯದಾದರು[...] ಕೆಟ್ಟದಾದರೂ ಎಲ್ಲವ[ೂ] ಒಂದೇ ದುರ್ನಾತ.

ನೋ ಕಾಮೆಂಟ್ಸ್

"ಮೊನ್ನೆ ದೇವಧರ್ ಟ್ರೋಫಿ ಕ್ರಿಕೆಟ್ ಮ್ಯಾಚಿನಲ್ಲಿ ಬ್ಯಾಟ್ಸ್‌ಮನ್ ಹೊಡೆದ ಬಾಲು ಬೌಂಡರಿಯ ಬಳಿ ಹೋಯಿತು. ಫೀಲ್ಡಿಂಗ್ ತಂಡದ ಕ್ಯಾಪ್ಟನ್ ಮಿಡ್ ಆಫ್ ಸ್ಥಾನದಲ್ಲಿದ್ದರೂ ಓಡಿ ಬಾಲನ್ನು ಬೌಂಡರಿ ಹೋಗುವುದನ್ನು ತಡೆಯಲಿಲ್ಲ. ಬದಲಿಗೆ ಮಿಡ್ ಆನ್‌ನಲ್ಲಿದ್ದ ಫೀಲ್ಡರ್ ಬಾಲನ್ನು ತಡೆಯಲು ಓಡುತ್ತಾ ಬೌಂಡರಿ ಲೈನ್ ಬಳಿ ಡೈವ್ ಹೊಡೆದು ಬಾಲನ್ನು ತಡೆದ. ಅದನ್ನು ಕ್ಯಾಪ್ಟನ್ ಮೆಚ್ಚಿಕೊಳ್ಳುವ ಬದಲಿಗೆ 'ನಿನಗೇನು ಪ್ರಜ್ಞೆ ಇದೆಯೋ ಇಲ್ಲವ್ವೋ... ಈಗ ಬಿದ್ದು ಗಾಯ ಮಾಡಿಕೊಂಡರೆ ಬರುವ ಐಪಿಎಲ್ ಮ್ಯಾಚ್ ಹೇಗೆ ಆಡುತ್ತೀ' ಎಂದು ಗದರಿದ. ಇದು ನನ್ನ ಕಿವಿಗೆ ಬಿದ್ದು ಮನಸ್ಸಿಗೆ ಬಹಳ ದುಃಖ ಆಯಿತು. ಭಾರತದ ಕ್ರಿಕೆಟ್ಟನ್ನು ಐಪಿಎಲ್ ಕೊಂದುಹಾಕುತ್ತಿದೆ."

ಅನ್ಷುಮನ್ ಗಾಯಕ್‌ವಾಡ್

"ನಾನು ನಕ್ಸಲೈಟೋ ಅಲ್ಲವೋ ಎಂಬ ಪ್ರಶ್ನೆ ಕೇಳಲಾಗಲೀ, ಉತ್ತರ ನೀಡಲಾಗಲೀ ಪ್ರಭುತ್ವ ಹೆಚ್ಚಿನ ಆಯ್ಕೆಗಳನ್ನು ನಿಮಗೂ ನನಗೂ ಉಳಿಸುವುದೇ ಇಲ್ಲ. ನಾನು ಎಡಪಂಥೀಯ ಧೋರಣೆಯುಳ್ಳ ಕಾರ್ಯಕರ್ತ ಎನ್ನುವುದು ನಿಜ. ಹಾಗೆಯೇ ಯಾವುದೇ ಹೋರಾಟಗಳು ಸಹ ಒಂದು ಹಂತದಿಂದ ಮತ್ತೊಂದು ಹಂತಕ್ಕೆ ದಾಟುತ್ತಾ ಹೋಗುತ್ತದೆ. ಹೀಗಾಗಿ ಯಾವುದೇ ಹೋರಾಟಗಳನ್ನು ಸಶಸ್ತ್ರವೋ, ನಿಶಸ್ತ್ರವೋ, ಹಿಂಸಾತ್ಮಕವೋ, ಅಹಿಂಸಾತ್ಮಕವೋ ಎನ್ನುವ ನೆಲೆಯಲ್ಲಿ ತೀರ್ಮಾನಕ್ಕೆ ಬರಕೂಡದು. ನಾನು ನಕ್ಸಲೈಟರು ಎತ್ತಿಕೊಂಡ ವಿಷಯಗಳ ಮೇಲೆ ಹೋರಾಟ ಮಾಡಿದ ಕಾರಣಕ್ಕೆ ನಕ್ಸಲೈಟನಾಗುತ್ತೀನಾದರೆ ಜೈಲಿನಲ್ಲಿ ನಾನು ಅಲ್ಲಿನ ಕೈದಿಗಳ ವಿಷಯವೆತ್ತಿಕೊಂಡು 27 ದಿನಗಳ ಕಾಲ ಉಪವಾಸ ಸತ್ಯಾಗ್ರಹ ನಡೆಸಿದ್ದೆ. ಆ ಲೆಕ್ಕದಲ್ಲಿ ನಾನು ಗಾಂಧೀವಾದಿಯೂ ಆಗಬೇಕಾಗುತ್ತದೆ."

-ಅರುಣ್ ಫೆರಿರಾ, ನಕ್ಸಲೈಟ್ ಎಂಬ ಆರೋಪದ ಮೇಲೆ ಬಂಧಿತನಾಗಿದ್ದ ಕಾರ್ಯಕರ್ತ

"ಕಳೆದ ಹತ್ತು ವರ್ಷಗಳಿಂದ ಗುಜರಾತ್‌ನಲ್ಲಿ ವಿದ್ಯುತ್ ದರ ಏರಿಕೆ ಆಗಿಲ್ಲ. ಆದರೆ ಕರ್ನಾಟಕದಲ್ಲಿ ಮಾತ್ರ ಪ್ರತಿವರ್ಷ ದರ ಏರಿಕೆ ಆಗುತ್ತಿದೆ. ಅಲ್ಲಿ ದರ ಹೆಚ್ಚಳ ಮತ್ತು ವಿದ್ಯುತ್ ಕಡಿತ ಮಾಡದೆ ಇಲಾಖೆಯನ್ನು ಅತ್ಯುತ್ತಮವಾಗಿ ನಿರ್ವಹಿಸಲಾಗುತ್ತಿದೆ. ಇಲ್ಲಿ ಯಾಕೆ ಸಾಧ್ಯವಾಗುತ್ತಿಲ್ಲ ಅನ್ನೋ ಪ್ರಶ್ನೆ ಇಲಾಖೆಯ ಅಧಿಕಾರಿಗಳಿಂದಲೇ ಕೇಳಿಬರುತ್ತಿದೆ."

- ಪತ್ರಿಕಾ ವರದಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಲೋಕಾಯುಕ್ತ ವರದಿಯಲ್ಲೂ ಶ್ರೀರಾಮುಲು ಅವರ ಹೆಸರು ನಮೂದಾಗಿಲ್ಲ. ಜನಾರ್ದನ ರೆಡ್ಡಿಯವರು ಮಾತ್ರ ತಮ್ಮ ಹೆಸರನ್ನು ದುರ್ಬಳಕೆ ಮಾಡಿಕೊಂಡು ಅಕ್ರಮ ಗಣಿಗಾರಿಕೆ ಚಟುವಟಿಕೆಗಳಲ್ಲಿ ತೊಡಗಿಕೊಂಡರು. ನಾವು ಚುನಾವಣೆಯಲ್ಲಿ ಸ್ಪರ್ಧಿಸಿರಲಿಲ್ಲ, ನಮಗೆ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪ್ರತಿಸ್ಪರ್ಧಿಗಳು, ಅಷ್ಟೆ. ಹೀಗಾಗಿ ಇವರಿಬ್ಬರನ್ನು ಬಿಟ್ಟು ಯಾವುದಾದರೂ ಸ್ವತಂತ್ರ ಅಭ್ಯರ್ಥಿಯನ್ನು ಬೆಂಬಲಿಸಿ ಎಂಬ ನಿಲುವು ತೆಗೆದುಕೊಂಡೆವು. ಶ್ರೀರಾಮುಲು ಕೂಡಾ ಒಬ್ಬ ಸ್ವತಂತ್ರ ಅಭ್ಯರ್ಥಿಯಾಗಿದ್ದರು."

ಎಚ್.ಡಿ. ಕುಮಾರಸ್ವಾಮಿ

ಭಿನ್ನಾಭಿಪ್ರಾಯ ಇದ್ದದ್ದೇ ಅದರ ಬಗ್ಗೆ ಅಲ್ಲವೇ?

"ಸಂಘಪರಿವಾರದ ನಾಯಕರು ನಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಮಧ್ಯಪ್ರವೇಶಿಸಿದ್ದಾರೆಯೇ ವಿನಃ ನಾಯಕತ್ವ ವಿಚಾರದಲ್ಲಿ ಅಲ್ಲ. ನಾಯಕತ್ವದ ವಿಚಾರದಲ್ಲಿ ಪಕ್ಷದ ವರಿಷ್ಠರ ನಿರ್ಧಾರವೇ ಅಂತಿಮ. ಹೈಕಮಾಂಡ್ ಒಪ್ಪಿದರೆ ಸಿಎಂ ಆಗಲು ಸಿದ್ಧ."

- ಯಡಿಯೂರಪ್ಪ

ಇದು ಲೌಕಿಕವನ್ನು ತೊರೆದವರ ದ್ವೈತ ಮಾತ್ಸರ್ಯ!

"ಸೋದೆ ಮಠ ಮತ್ತು ಪುತ್ತಿಗೆ ಮಠಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ನನ್ನಿಂದಾದ ಪ್ರಯತ್ನ ಮಾಡಿದ್ದೇನೆ. ಮಠಗಳ ನಡುವೆ ತಾತ್ವಿಕ ಭಿನ್ನಾಭಿಪ್ರಾಯವಿದೆ. ಪುತ್ತಿಗೆ ಸ್ವಾಮೀಜಿ ಪರ್ಯಾಯದಲ್ಲಿ ಪಾಲ್ಗೊಂಡರೆ ಅದನ್ನು ವಿರೋಧಿಸಿ ಕಾರ್ಯಕ್ರಮದಲ್ಲಿ ಭಾಗವಹಿಸದೇ ಇರುವ ಯತಿಗಳೂ ಇದ್ದಾರೆ. ಹೀಗಾಗಿ ಈ ವಿಚಾರದಲ್ಲಿ ನಾನು ಮಧ್ಯಪ್ರವೇಶಿಸಿ ಸೋದೆ ಮಠಕ್ಕೆ ಒತ್ತಡ ಹಾಕಲು ಸಾಧ್ಯವಿಲ್ಲ. ಉಭಯಸಂಕಟ ಉಂಟುಮಾಡಲಾರೆ."

- ಪೇಜಾವರ ಸ್ವಾಮೀಜಿ

ಕಾಲಚಕ್ರಕ್ಕೆ ವಿರುದ್ಧವಾಗಿ ಚಲಿಸುತ್ತಿರುವ ಕರುನಾಡು



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಈ 25ನೇ ತಾರೀಖಿಗೆ 12 ವರ್ಷವಾಗುತ್ತದೆ. ನಿನ್ನೆ ...ಷೆಟ್ ಅವರು ಫೋನ್ ಮಾಡಿದ್ದಾಗ "ಅವತ್ತು ನಾನು, ...ನ್ನ ಹೆಂಡತಿ ಮತ್ತು ಶಿವತೀರ್ಥನ್ ಜೊತೆಯಾಗಿ ತೋಟಕ್ಕೆ ...ಬಂದಿದ್ದೆವು. ಮೊನ್ನೆ ತಾನೆ ಅದೆಲ್ಲವೂ ನಡೆದಂತೆ ಅನ್ನಿಸುತ್ತದೆ. ...ಆದರೆ 12 ವರ್ಷಗಳೇ ಉರುಳಿಹೋದವೇ?" ಎಂದರು. ...ನಿಜ, ನನ್ನ ಅಪ್ಪ ಹೋಗಿ ಅಷ್ಟೊಂದು ವರ್ಷಗಳು ಆದುವೇ ...ಅನ್ನಿಸುತ್ತದೆ.

ಈ ಹನ್ನೆರಡು ವರ್ಷಗಳಲ್ಲಿ ಏನೆಲ್ಲ ಬದಲಾವಣೆಗಳಾ...ಗಿವೆ? ನಮ್ಮ ರಾಜ್ಯ ಎತ್ತ ಸಾಗಿದೆ? ಎಂದು ಯೋಚಿಸಿದರೆ ...ಭಯವಾಗುತ್ತದೆ.

ನೆನೆಪಿದೆಯೇ, ತೊಂಭತ್ತರ ದಶಕದಲ್ಲಿ ಲಂಕೇಶ್, ...ತೇಜಸ್ವಿ, ರಾಮದಾಸ್, ಎಚ್.ಎಲ್.ಕೇಶವಮೂರ್ತಿ ಮತ್ತು ...ಇತರರು ಸೇರಿ ಪ್ರಗತಿರಂಗ ಎಂಬ ರಾಜಕೀಯ ಪಕ್ಷವನ್ನು ...ಸ್ಥಾಪಿಸಿ ಕರ್ನಾಟಕದಲ್ಲಿ ರಾಜಕೀಯವಾಗಿ-ಸಾಮಾಜಿಕವಾಗಿ-ಆರ್ಥಿಕವಾಗಿ ಹಲವು ಮೂಲಭೂತ ಬದಲಾವಣೆಗಳನ್ನು ತರುವ ಕನಸು ಕಂಡಿದ್ದರು. ಅವರ ಆ ಪ್ರಯತ್ನ...ದೊಂದಿಗೆ ರಾಜ್ಯಾದ್ಯಂತ ಸಾವಿರಾರು ಜನರು ಸ್ಪಂದಿಸಿದ್ದರು. ...ಇವತ್ತು ನಮ್ಮ ತಂಡದಲ್ಲಿರುವ ಪಾರ್ವತೀಶ ಕೂಡ ಅವತ್ತು ...ತಾವಿದ್ದ ಕನಕಪುರಕ್ಕೆ ಲಂಕೇಶರನ್ನು ಕರೆಸಿ, ಪ್ರಗತಿರಂಗದ ...ಸಭೆಯನ್ನು ಏರ್ಪಡಿಸಿದ್ದರು.

ಆದರೆ ಇವತ್ತು ನಮ್ಮ ರಾಜ್ಯದಲ್ಲಿ ರಾಜಕೀಯ ಪರಿಸ್ಥಿತಿ ...ಹೇಗಿದೆ? ಪ್ರಗತಿರಂಗದಂತಹ ಕನಸುಗಳನ್ನು ಕಾಣುವುದೇ ...ಅಸಾಧ್ಯ ಎಂಬಂತಹ ವಾತಾವರಣ ಇವತ್ತು ಸೃಷ್ಟಿಯಾಗಿದೆ. ...ಅದಕ್ಕಿಂತ ಅಪಾಯಕಾರಿ ಬೆಳವಣಿಗೆ ಯಾವುದೆಂದರೆ ಇವತ್ತು ...ಅಪ್ಪಟ ರೌಡಿ, ಗಣಿ ಕಳ್ಳ ಶ್ರೀರಾಮುಲು ತರಹದ ವ್ಯಕ್ತಿ ...ಹಿಂದುಳಿದವರ ನಾಯಕ ತಾನೆಂಬಂತೆ ಪೋಸು ಕೊಡುತ್ತಿರು...ವುದು ಮತ್ತು ಆತನಿಗೆ ಹಲವಾರು ಸೋ ಕಾಲ್ಡ್ ಪ್ರಗತಿಪರರು, ...ಬುದ್ಧಿಜೀವಿಗಳು, ಪತ್ರಕರ್ತರು ಸಲಹೆ, ಸೂಚನೆ ಮತ್ತು ...ನೆರವನ್ನು ನೀಡುತ್ತಿರುವುದು. ತನ್ನ ಕಳ್ಳ ಹಣದಿಂದಲೇ ...ಶ್ರೀರಾಮುಲು ತರಹದ ವ್ಯಕ್ತಿಗಳು ಬಳ್ಳಾರಿ ಜಿಲ್ಲೆಯನ್ನೇ ...ತಮ್ಮ ಕಪಿಮುಷ್ಟಿಯಲ್ಲಿ ಹಿಡಿದಿಟ್ಟುಕೊಳ್ಳಬಲ್ಲವರು. ಅಂತಹ...ವರಿಗೆ ಬುದ್ಧಿಜೀವಿಗಳಿಂದ ಸಾಮಾಜಿಕ ಮನ್ನಣೆ ಸಿಕ್ಕಿದರೆ ...ನಮ್ಮ ರಾಜ್ಯ ಕಗ್ಗತ್ತಲಿಗೆ ದೂಡಲ್ಪಡುವ ದಿನ ದೂರ ಉಳಿಯು...ವುದಿಲ್ಲ ಎಂದೇ ಅರ್ಥ. ಇಂತಹ ವರ್ತಮಾನದ ಬಗ್ಗೆ ನಮ್ಮ ...ಶಿವಸುಂದರ್ ತಮ್ಮ ಈ ವಾರದ ಅಂಕಣದಲ್ಲಿ ಬರೆದಿದ್ದಾರೆ.

ಇನ್ನು ಸಾಹಿತ್ಯಿಕ ವಲಯದಲ್ಲೂ ಇವತ್ತು ಯಾರು ...ಮಿಂಚುತ್ತಿದ್ದಾರೆ ಎಂದು ನೋಡಿದರೆ ಕನ್ನಡ ಸಾಹಿತ್ಯ ಮತ್ತು ...ಅದರ ಮೂಲಕ ನಮ್ಮ ಜನರ ಮೌಲ್ಯಗಳು ಯಾವ ದಿಕ್ಕಿನತ್ತ ...ಚಲಿಸುತ್ತಿವೆ ಎಂದು ಅರ್ಥವಾಗುತ್ತದೆ.

ಅಪ್ಪ ಇದ್ದಾಗ 1994ರಿಂದ 1996ರ ತನಕ - ಅಂದರೆ ...ಎರಡು ವರ್ಷಗಳ ಕಾಲ - ಪ್ರತಿವಾರ ಪತ್ರಿಕೆಯಲ್ಲಿ ಕನ್ನಡದ ...ವಿವಿಧ ಸಾಹಿತಿಗಳೊಂದಿಗಿನ ಸಂದರ್ಶನಗಳನ್ನು ...ಪ್ರಕಟಿಸಿದ್ದರು. ಆದರೆ ಒಬ್ಬರನ್ನು ಮಾತ್ರ ಸಂದರ್ಶಿಸಲಿಲ್ಲ. ...ಯಾಕೆಂದರೆ ಆತನನ್ನು ಲಂಕೇಶ ಪತ್ರಿಕೆಯ ತಂಡ ಎಂದೂ ...ಉತ್ತಮ ಸಾಹಿತಿ ಎಂದು ಪರಿಗಣಿಸಿರಲಿಲ್ಲ. ಅದಕ್ಕಿಂತ ...ಮುಖ್ಯವಾಗಿ ಆತ ಕನ್ನಡ ಸಾರಸ್ವತಲೋಕಕ್ಕೆ ಅಪಾಯಕಾರಿ...ಯಾದ ಬರಹಗಾರ ಎಂಬು ನಿಲುವು ಅಪ್ಪನದ್ದಾಗಿತ್ತು. ಆತ ...ಬೇರೆ ಯಾರೂ ಅಲ್ಲ, ಇತ್ತೀಚೆಗೆ 'ಆವರಣ' ಎಂಬ



ವಿಕೃತಿಯನ್ನು, ಅದಾದನಂತರ 'ಕವಲು' ಎಂಬ ಅಸಹ್ಯದ ಕೃತಿಗಳನ್ನು ಬರೆದಿರುವ ಎಸ್.ಎಲ್.ಭೈರಪ್ಪ.

ಆದರೆ ಮೊನ್ನೆ ಇದೇ ಭೈರಪ್ಪನನ್ನು ಕೆಲವರು ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಮೆರವಣಿಗೆಯಲ್ಲಿ ಕರೆದುಕೊಂಡು ಹೋದ ಸುದ್ದಿಯನ್ನು ದಿನಪತ್ರಿಕೆಯೊಂದರಲ್ಲಿ ಓದಿ ಆತಂಕವಾಯಿತು. ಆದರೆ ಆ ಮೆರವಣಿಗೆಯ ಒಂದು ಫೋಟೋ ನೋಡಿ ಅದನ್ನು ಆಯೋಜಿಸಿದ್ದ ಜನರ ಬಗ್ಗೆ ಮತ್ತು ಅದಕ್ಕೆ ಒಪ್ಪಿದ್ದ ಭೈರಪ್ಪನ ಬಗ್ಗೆ ನಗು ಬಂತು. ಯಾಕೆಂದರೆ ಆ 'ಬೃಹತ್' ಮೆರವಣಿಗೆಯಲ್ಲಿ ಇದ್ದದ್ದು ಸುಮಾರು ಇಪ್ಪತ್ತು ಜನರಷ್ಟೇ!

ತಮಾಷೆ ಬದಿಗಿರಲಿ. ಅನ್ಯಧರ್ಮೀಯರ ವಿರುದ್ಧ ದ್ವೇಷ ಕಾರುವ, ಆಧುನಿಕ ಮಹಿಳೆಯರನ್ನು ತೆಗಳುವ, ಎಡಪಂಥೀಯರ ಬಗ್ಗೆ ಲೇವಡಿ ಮಾಡುವ, ಬ್ರಾಹ್ಮಣ್ಯದ ಎಲ್ಲಾ ಅನಿಷ್ಟಗಳು ಹಿಂದೂ ಸಮಾಜದಲ್ಲಿ ಜಾರಿಗೆ ಬರಬೇಕೆನ್ನುವ, ಭೈರಪ್ಪನನ್ನು ನಮ್ಮ ಸಮಾಜದ ಹಲವಾರು ಜನ ಇವತ್ತು ಕೊಂಡಾಡುತ್ತಾರೆ, ಮೆರವಣಿಗೆಯಲ್ಲಿ ಹೊತ್ತೊಯ್ಯುತ್ತಾರೆ ಎಂದರೆ ನಮ್ಮ ಸಾಂಸ್ಕೃತಿಕ ಲೋಕ ಎಷ್ಟು ಹದಗೆಡುತ್ತಿದೆ ಎಂದು ಗೊತ್ತಾಗುತ್ತದೆ.

ಲಂಕೇಶರಿದ್ದಾಗ ಸ್ವಾಮಿಗಳು ತಮ್ಮ ಮಠ, ಅನುಯಾಯಿಗಳು, ಪೂಜೆ, ಪುರಸ್ಕಾರ ಇತ್ಯಾದಿಗಳಿಗೆ ಸೀಮಿತವಾಗಿದ್ದರು. ಕಾವಿಧಾರಿಗಳಿಗೆ ಮತ್ತು ರಾಜಕಾರಣಿಗಳಿಗೆ ನಂಟಿತ್ತಾದರೂ ಸ್ವಾಮಿಗಳು ನೇರವಾಗಿ ರಾಜಕೀಯಕ್ಕೆ ಕೈ ಹಾಕುತ್ತಿರಲಿಲ್ಲ, ರಾಜ್ಯ ಬೊಕ್ಕಸದತ್ತ ತಮ್ಮ ಕಣ್ಣನ್ನೂ ಹಾಯಿಸುತ್ತಿರಲಿಲ್ಲ. ಅಷ್ಟರಮಟ್ಟಿಗೆ ಅವರು ತಾವಾಯಿತು, ತಮ್ಮ ಮಠವಾಯಿತು ಎಂಬಂತೆ ಇದ್ದರು.

ಆದರೀಗ ಕಾವಿಗಳ ಹಾವಳಿ ಮಿತಿಮೀರಿದೆ. ಬಿಜೆಪಿ ಸರ್ಕಾರದಿಂದ ಸಾಮಾನ್ಯ ಜನರ ತೆರಿಗೆ ಹಣವನ್ನು ಯಾವ ನಾಚಿಕೆ ಇಲ್ಲದೆ ಸ್ವೀಕರಿಸುವಷ್ಟು ದುರಾಶೆಯನ್ನು ಮಠಾಧೀಶರು ಬೆಳೆಸಿಕೊಂಡಿದ್ದಾರೆ. ಅಷ್ಟಕ್ಕೇ ತೃಪ್ತಿಗೊಳ್ಳದೆ, ಚೆಡ್ಡಿ ಸರ್ಕಾರದ ಕೃಪೆಯಿಂದ ಅಕ್ರಮವಾಗಿ ದೇಗುಲಗಳನ್ನೇ ಕಬ್ಜಾ ಮಾಡಿಕೊಳ್ಳುವಷ್ಟು ದುರಹಂಕಾರಿಗಳಾಗಿದ್ದಾರೆ ಕೆಲವು 'ಸರ್ವಸಂಗ ಪರಿತ್ಯಾಗಿ'ಗಳು. ರಾಜಕಾರಣಿಗಳೊಂದಿಗಿನ ಇವರ ಗಳಸ್ಯಕಂಠಸ್ಯ ಎಷ್ಟು ಗಾಢವಾಗಿದೆ ಎಂದರೆ ಸ್ವಜಾತಿ ಭ್ರಷ್ಟ ಯಡಿಯೂರಪ್ಪ ಜೈಲಿಗೆ ಹೋದರೆ ಹಲವು ಸ್ವಾಮಿಗಳು ಅಲ್ಲಿಗೂ ಹೋಗಿ ಆತನಿಗೆ ಜಾತಿ ಬೆಂಬಲ ಸೂಚಿಸುವಷ್ಟು ಲಜ್ಜೆ ಗೆಟ್ಟಿದ್ದಾರೆ. ಇನ್ನು ಗೋ ರಕ್ಷಣೆಯ ಹೆಸರಲ್ಲಿ ಭೂಮಿಯನ್ನು ದೋಚುವುದಲ್ಲದೆ ಸರ್ಕಾರಿ ಶಾಲೆಗಳಲ್ಲಿ ಓದುವ ಬಡಮಕ್ಕಳಿಗೆ ಬಿಸಿಯೂಟದಲ್ಲಿ ಏನು ಕೊಡಬೇಕೆನ್ನುವುದರ ಬಗ್ಗೆಯೂ ಸರ್ಕಾರವನ್ನೇ ಆದೇಶಿಸುವಷ್ಟು ಪೊಗರು ಬೆಳೆಸಿಕೊಂಡಿದ್ದಾರೆ.

ಲಂಕೇಶರಿದ್ದಾಗ ರಾಮಕೃಷ್ಣ ಹೆಗಡೆಯ ಬಾಟ್ಲಿಂಗ್ ಹಗರಣ, ಎನ್‌ಆರ್‌ಐಎಚ್‌ಎ ಹಗರಣ, ಟೆಲಿಫೋನ್ ಕದ್ದಾಲಿಕೆ ಹಗರಣ, ಬಂಗಾರಪ್ಪನ ಕ್ಲಾಸಿಕ್ ಕಂಪ್ಯೂಟರ್ ಹಗರಣ.... ಇತ್ಯಾದಿಗಳು ನಡೆದಿದ್ದವು. ಅವೆಲ್ಲವುಗಳ ಒಟ್ಟು ಮೊತ್ತ ರೆಡ್ಡಿ ಗ್ಯಾಂಗ್ ಒಂದು ವಾರದಲ್ಲಿ ಬಳ್ಳಾರಿಯಲ್ಲಿ ಲೂಟಿ ಮಾಡಿದ್ದಕ್ಕೆ ಸಮ ತೂಗುವುದಿಲ್ಲ. ಅವತ್ತು ಕಾಟಾಚಾರಕ್ಕಾದರೂ 'ಮೌಲ್ಯಾಧಾರಿತ ರಾಜಕಾರಣ' ಎಂದು ಮಾತನಾಡುತ್ತಿದ್ದರು, ತಮ್ಮೆಲ್ಲ ಡೀಲುಗಳ ನಡುವೆಯೂ ಒಂದಿಷ್ಟು ಜನಪರ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುತ್ತಿದ್ದರು.

ಆದರೆ ಪ್ರಸ್ತುತ ರಾಜಕೀಯ ನಾಯಕರು ಕಾಟಾಚಾರಕ್ಕಾದರೂ ಅಂತಹ ಮಾತುಗಳನ್ನು ಆಡುತ್ತಾರೆಯೇ? ಜನಪರವಾದ ಯೋಜನೆಗಳನ್ನು ರೂಪಿಸುತ್ತಿದ್ದಾರೆಯೇ? ಯಡಿಯೂರಪ್ಪ ಮಾಡಿದ ಭ್ರಷ್ಟಾಚಾರಕ್ಕೆ, ಲೂಟಿಗೆ ಜೈಲಿಗೆ ಹೋಗಿ ಬಂದದ್ದಾಯಿತು. ಆದರೆ ತನ್ನ ಜೈಲುವಾಸಕ್ಕೆ ಆತ ಯಾರ್‍ಯಾರನ್ನು ದೂರಿದ್ದಾನೆ ಎಂದು ಲೆಕ್ಕಹಾಕಿದರೆ ಇವತ್ತಿನ ರಾಜಕಾರಣಿಗಳ ಅನೈತಿಕತೆ ಗೊತ್ತಾಗುತ್ತದೆ. ಆರಂಭದಲ್ಲಿ ತನ್ನ ಜೈಲುವಾಸಕ್ಕೆ ದೇವೇಗೌಡ ಮತ್ತವರ ಕುಟುಂಬವೇ ಕಾರಣ ಎಂದು ಯಡ್ಡಿ ಎಲ್ಲೆಡೆ ಚೀರಾಡಿದ. ಆನಂತರ ತನ್ನನ್ನು ಜೈಲಿಗೆ ಕಳುಹಿಸಿದ್ದು ಮಾಜಿ ಲೋಕಾಯುಕ್ತ ನ್ಯಾ. ಸಂತೋಷ್ ಹೆಗ್ಡೆ ಎಂದು ಆರೋಪಿಸಿದ. ಕೊನೆಗೆ ತನ್ನನ್ನು ಜೈಲಿಗೆ ದೂಡಿದ್ದು ತನ್ನದೇ ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷ ಈಶ್ವರಪ್ಪ ಎಂದ! ಆದರೆ ತಾನು ಜೈಲಿಗೆ ಹೋಗಿದ್ದಕ್ಕೆ ಕಾರಣ ತನ್ನ ಮತ್ತು ತನ್ನ ಪುತ್ರರತ್ನರ ದುರಾಶೆ ಎಂಬುದನ್ನು ಆತ ಒಪ್ಪಿಕೊಳ್ಳಲೇ ಇಲ್ಲ! ಇನ್ನು ಯಡ್ಡಿ ಸುತ್ತ ಇರುವ ರೇಣುಕಾಚಾರಿ, ಶೋಭಾ ಕರಂದ್ಲಾಜೆ, ಮುರುಗೇಶ್ ನಿರಾಣಿ ತರಹದವರನ್ನು ನೋಡಿದರೆ ಕರ್ನಾಟಕದ ದುರಂತಗಾಥೆ ಎಂತಹವರಲ್ಲೂ ಭೀತಿ ಮೂಡಿಸುತ್ತದೆ.

ಲಂಕೇಶರಿದ್ದಾಗ ಕಂಚೀನಹಳ್ಳಿ ಗಂಗಾಧರ ಮೂರ್ತಿ ಎಂಬ ವಕೀಲನ ಕೊಲೆಯಾಗಿತ್ತು, ಆಗ ಅದರ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಪ್ರಮುಖ ರಾಜಕಾರಣಿಗಳು ಭಾಗವಹಿಸಿದ್ದರು.

ಆದರಿವತ್ತು ಏನಾಗುತ್ತಿದೆ? ಹಿಂದೂ ಸಂಸ್ಕೃತಿಯ ಹೆಸರಲ್ಲಿ ಹಾಡುಹಗಲೇ ಮಹಿಳೆಯರ ಮೇಲೆ ದಾಳಿ, ಗೋವು ರಕ್ಷಣೆಯ ನೆಪದಲ್ಲಿ ಕೊಲೆ, ದಬ್ಬಾಳಿಕೆ, ದೌರ್ಜನ್ಯ ಸರ್ವೇಸಾಮಾನ್ಯ ಎಂಬಂತೆ ನಡೆಯುತ್ತಿದೆ. ಯಡ್ಡಿ, ಈಶ್ವರಿ ತರಹದ ನಾಯಕರು, ಸಗಣಿ ಸ್ವಾಮಿಯಂತಹ ನೀಚರು ಇವತ್ತು ನಮ್ಮ ರಾಜ್ಯದಲ್ಲಿ ರಾರಾಜಿಸುತ್ತಿರುವುದರಿಂದಲೇ 'ಸರ್ವ ಜನಾಂಗೀಯ ತೋಟ'ವಾಗಿದ್ದ ಕರುನಾಡಿನ ವಿವಿಧ ಕಡೆ ಅಲ್ಪಸಂಖ್ಯಾತರ ಮೇಲೆ, ಅನ್ಯಧರ್ಮೀಯರ ಪ್ರಾರ್ಥನಾ ಸ್ಥಳಗಳ ಮೇಲೆ ಹಿಂದೂತ್ವವಾದಿಗಳ ದಾಳಿಗಳು ದಿನನಿತ್ಯ ನಡೆಯುತ್ತಿವೆ. ದಾಳಿಕೋರರೊಂದಿಗೆ ಪೊಲೀಸರು ಮತ್ತು ಅಧಿಕಾರಿಗಳು ಕೈಜೋಡಿಸಿರುವುದರಿಂದ ರಾಜ್ಯದ ಎಲ್ಲೆಡೆ ಕಾನೂನು ವ್ಯವಸ್ಥೆಯೇ ಕಳಚಿ ಬಿದ್ದಿದೆ.

ಬಿಜೆಪಿ ತರಹದ ಕೋಮುವಾದಿ ಪಕ್ಷ ಇವತ್ತು ಅಧಿಕಾರದಲ್ಲಿದ್ದು ಸಂಘಪರಿವಾರದ ಪುಂಡರನ್ನು ಪೋಷಿಸುತ್ತಿರುವುದರಿಂದ ಅವರು ಮಹಿಳೆಯರ ಮೇಲೆ, ದಲಿತರ ಮೇಲೆ, ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡುವುದರಲ್ಲಷ್ಟೇ ತೃಪ್ತಿ ಕಾಣದೆ ಮೊನ್ನೆ 'ಪ್ರಜಾವಾಣಿ' ಪತ್ರಿಕೆ ಕಚೇರಿಯ ಮೇಲೂ ದಾಳಿ ಮಾಡುವಷ್ಟು ಸೊಕ್ಕು ಪ್ರದರ್ಶಿಸಿದ್ದಾರೆ. ಅಂದರೆ ಈ ಕೋಮುವಾದಿಗಳ ಅಭಿಪ್ರಾಯದ ವಿರುದ್ಧ ಸೊಲ್ಲೆತ್ತಿದರೆ ತಾವು ಯಾರನ್ನು, ಯಾವ ಸಂಸ್ಥೆಯನ್ನು, ಯಾವ ಸಂಘಟನೆಯನ್ನು ಬೇಕಾದರೂ ದಮನ ಮಾಡಲು ಸಿದ್ಧ ಎಂದು ಸ್ಪಷ್ಟವಾಗಿ ಪ್ರದರ್ಶಿಸಿದ್ದಾರೆ. ಸದ್ಯ ಪ್ರಜಾವಾಣಿ ಪತ್ರಿಕೆಯ ಸಂಪಾದಕರಾದ ಶಾಂತಕುಮಾರ್ ಅವರು ಈ ದುಷ್ಟರಿಗೆ ಕೇರ್ ಮಾಡದೆ ಗಟ್ಟಿ ನಿಲುವನ್ನು ತೆಗೆದುಕೊಂಡಿದ್ದಾರೆ, ಆ ಮೂಲಕ ತಮ್ಮ ಪತ್ರಿಕಾ ಸ್ವಾತಂತ್ರ್ಯವನ್ನು ಯಾರಿಂದಲೂ ಕಸಿದುಕೊಳ್ಳಲು ಸಾಧ್ಯವಿಲ್ಲ ಎಂದು ತೋರಿಸಿದ್ದಾರೆ...

ಹನ್ನೆರಡು ವರ್ಷ....

ಕಾಲ ಮುಂದುವರೆಯುತ್ತಿದೆ....

ಆದರೆ ನಮ್ಮ ರಾಜ್ಯ ಮಾತ್ರ ಎಲ್ಲ ರೀತಿಯಲ್ಲೂ ಹಿಂದಕ್ಕೆ ಚಲಿಸುತ್ತಿದೆ....

ಅಪ್ಪ ಇದ್ದಿದ್ದರೆ....

'ಕೇಸರಿ ಭಯೋತ್ಪಾದನೆ' ಪುಸ್ತಕ ಬಿಡುಗಡೆ

ಕಳೆದ ಎರಡು ದಶಕಗಳಿಂದ ಭಾರತದ ಯಾವುದೇ ಭಾಗದಲ್ಲಿ ಭಯೋತ್ಪಾದಕ ಕೃತ್ಯ ನಡೆಯಲಿ, ಆ ಕೃತ್ಯದ ಹಿಂದೆ ಮುಸಲ್ಮಾನರ ಕೈವಾಡ ಇದ್ದೇ ಇರುತ್ತದೆ ಎಂಬ ತರ್ಕಕ್ಕೆ ಎಲ್ಲರೂ ಬೀಳುತ್ತಾರೆ. ಅದರಲ್ಲೂ ರಾಜಕಾರಣಿಗಳು, ಪೊಲೀಸರು ಮತ್ತು ಪತ್ರಕರ್ತರಂತೂ ಇದರ ಹಿಂದೆ ಸಿಮಿ ಇದೆ, ಹುಜಿ ಇದೆ, ಲಷ್ಕರ್-ಇ-ತೋಯಿಬಾ ಇದೆ, ತಾಲಿಬಾನ್ ಇದೆ ಎಂದೆಲ್ಲ ಕಿಂಚಿತ್ತೂ ಯೋಚಿಸದೆ ಆರೋಪಿಸುತ್ತಾರೆ.

ಅಂತಹ ಭಯೋತ್ಪಾದಕ ಕೃತ್ಯಗಳು ಮುಸಲ್ಮಾನರೇ ಹೆಚ್ಚಾಗಿ ಇರುವ ಜಾಗಗಳಲ್ಲಿ, ಅವರ ಪ್ರಾರ್ಥನಾ ಮಂದಿರಗಳಲ್ಲಿ ಸಂಭವಿಸಿದಾಗಲೂ 'ಮುಸಲ್ಮಾನರ' ಕೈವಾಡ ಎಂದೇ ಎಲ್ಲರೂ ನಂಬುತ್ತಾರೆ. ಆದರೆ ಕೆಲವೇ ಕೆಲವರು ಮಾತ್ರ ಮುಸಲ್ಮಾನರು ಯಾಕೆ ಮುಸಲ್ಮಾನರನ್ನೇ ಕೊಲ್ಲುತ್ತಾರೆ? ಯಾಕೆ ಮಸೀದಿಗಳಲ್ಲಿ ಬಾಂಬ್ ಸ್ಫೋಟಿಸುತ್ತಾರೆ? ಇದರ ಹಿಂದೆ ಮುಸಲ್ಮಾನೇತರರ ಕೈವಾಡ ಇರಬಹುದೇ? ಎಂದೆಲ್ಲ ಪ್ರಶ್ನಿಸಿದ್ದರು. ಅವುಗಳಲ್ಲಿ ನಮ್ಮ ಪತ್ರಿಕೆಯೂ ಒಂದು.

ಈ ಪ್ರಶ್ನೆಗಳಿಗೆ ಕಾರಣಗಳೂ ಇದ್ದವು. ಮಹಾರಾಷ್ಟ್ರದ ನಾಂದೇಡ್ ಎಂಬಲ್ಲಿ ಆರೆಸ್ಸೆಸ್ ನಾಯಕನೊಬ್ಬನ ಮನೆಯಲ್ಲಿ ಬಾಂಬ್ ಸ್ಫೋಟಗೊಂಡು ಒಂದಿಬ್ಬರು ಭಜರಂಗದಳದವರು ಸತ್ತಿದ್ದರು. ಆಗ ನಡೆದ ತನಿಖೆಯಲ್ಲಿ ಗೊತ್ತಾಗಿದ್ದೇನೆಂದರೆ ಆರೆಸ್ಸೆಸ್‌ನ ಹುಡುಗರು ಅಲ್ಲಿ ಬಾಂಬ್‌ಗಳನ್ನು ತಯಾರಿಸುತ್ತಿದ್ದು, ಅವುಗಳನ್ನು ಮುಸಲ್ಮಾನರಿರುವ ಜಾಗಗಳಲ್ಲಿ ಇಡಲು ನಕಲಿ ಗಡ್ಡಗಳನ್ನು ಮತ್ತು ಟೋಪಿಗಳನ್ನು ಖರೀದಿಸಿ ಇಟ್ಟುಕೊಂಡಿದ್ದರೆಂದರು.

ಹೀಗೆಯೇ ಇತರ ಕಡೆಗಳಲ್ಲೂ ಇಂತಹದ್ದೇ ಬಾಂಬ್ ಸ್ಫೋಟಗಳು ಸಂಭವಿಸಿದಾಗ ಅವುಗಳ ಹಿಂದೆ ಮುಸಲ್ಮಾನ ಭಯೋತ್ಪಾದಕರ ಪಾತ್ರದ ಬದಲಾಗಿ ಹಿಂದೂ ಭಯೋತ್ಪಾದಕರ ಕೈವಾಡವೇ ಕಾಣಿಸಿಕೊಂಡಿತ್ತು. ಆಗ ಮಹಾರಾಷ್ಟ್ರದ ಸರ್ಕಾರ ಹೇಮಂತ್ ಕರ್ಕರೆ ಎಂಬ ಧೀಮಂತ ಪೊಲೀಸ್ ಅಧಿಕಾರಿಯ ನೇತೃತ್ವದಲ್ಲಿ ತಂಡವೊಂದನ್ನು ರಚಿಸಿ ಇಂತಹ ಪ್ರಕರಣಗಳ ತನಿಖೆಯನ್ನು ಪ್ರಾರಂಭಿಸಿತು. ಕರ್ಕರೆ ಅವರು ಮುಸಲ್ಮಾನರ ಬಗ್ಗೆ ಪೂರ್ವಾಗ್ರಹಪೀಡಿತರಾಗದೆ ನಿಷ್ಠುರವಾಗಿ ತನಿಖೆ ನಡೆಸಿದ್ದರ ಪರಿಣಾಮ ಪ್ರಜ್ಞಾ ಸಿಂಗ್ ಎಂಬ ಢೋಂಗಿ ಸನ್ಯಾಸಿ, ಶ್ರೀಕಾಂತ ಪುರೋಹಿತ್ ಎಂಬ ಕಳ್ಳ ಸೈನ್ಯಾಧಿಕಾರಿ ಹಾಗು ಇತರೆ ಹಿಂದೂತ್ವವಾದಿಗಳು ಬಂಧನಕ್ಕೊಳಗಾದರು. ದುರದೃಷ್ಟವಶಾತ್ ಹಿಂದೂ ಭಯೋತ್ಪಾದಕರ ಜಾಡನ್ನು ಹಿಡಿದು ಹೊರಟಿದ್ದ ಕರ್ಕರೆ ಅವರು ಮುಂಬೈ ಮೇಲಿನ ದಾಳಿಯ ಸಂದರ್ಭದಲ್ಲಿ ಪಾಕಿಸ್ತಾನದ ಮುಸಲ್ಮಾನ ಭಯೋತ್ಪಾದಕರಿಗೆ ಬಲಿಯಾದರು.

ಆದರೆ ಕಳೆದ ವರ್ಷ ಸ್ವಾಮಿ ಅಸೀಮಾನಂದ ಎಂಬ ಆರೆಸ್ಸೆಸ್‌ನ ಹಿರಿಯ ಸದಸ್ಯ ತಾನೂ ಸೇರಿದಂತೆ ಇತರೆ ಆರೆಸ್ಸೆಸ್ ಕಾರ್ಯಕರ್ತರೇ ಹಲವಾರು ಭಯೋತ್ಪಾದಕ ಕೃತ್ಯಗಳ ಹಿಂದಿದ್ದದ್ದು ಎಂಬುದನ್ನು ನ್ಯಾಯಾಲಯದ ಮುಂದೆ ಒಪ್ಪಿಕೊಳ್ಳುವ ಮೂಲಕ ಆರೆಸ್ಸೆಸ್‌ನ ಭಯೋತ್ಪಾದಕ ಮುಖವನ್ನು ಹೊರಗೆಡವಿದ್ದ.

ಮಹಾರಾಷ್ಟ್ರದ ಮಾಲೆಗಾಂವ್‌ನಲ್ಲಿ 2006 ಮತ್ತು 2007 ರಲ್ಲಿ ಸ್ಫೋಟಗೊಂಡ ಬಾಂಬ್‌ಗಳು, 2007 ರಲ್ಲಿ ಸಮ್ಜೋತಾ ಎಕ್ಸ್‌ಪ್ರೆಸ್‌ನಲ್ಲಿನ ಬಾಂಬ್ ಬ್ಲಾಸ್ಟ್, 2007 ರಲ್ಲಿ ಆಜ್ಮೇರ್ ಶರೀಫ್ ದರ್ಗಾದಲ್ಲಿ ನಡೆದ ಸ್ಫೋಟ ಮತ್ತು 2007 ರಲ್ಲಿ ಹೈದರಾಬಾದಿನ ಮೆಕ್ಕಾ ಮಸೀದಿಯಲ್ಲಿನ ಬಾಂಬ್ ಬ್ಲಾಸ್ಟ್‌ಗಳ ಹಿಂದೆ ಇದ್ದದ್ದು ಯಾವುದೇ ಮುಸಲ್ಮಾನರ ಸಂಘಟನೆ ಅಲ್ಲ, ಬದಲಾಗಿ ಆರೆಸ್ಸೆಸ್‌ನ ವಿವಿಧ ಹಿಂದೂತ್ವವಾದಿ ಗುಂಪುಗಳು ಎಂದು ಅಸೀಮಾನಂದ ನ್ಯಾಯಾಲಯಕ್ಕೆ ಲಿಖಿತ ಹೇಳಿಕೆ ಕೊಟ್ಟಿದ್ದ.



ಮಾಲೆಗಾಂವ್ ಬಾಂಬ್ ಸ್ಫೋಟಗಳಲ್ಲಿ 31 ಮುಸಲ್ಮಾನರು ಸತ್ತಿದ್ದರು. ಸಂಜೋತಾ ಎಕ್ಸ್‌ಪ್ರೆಸ್ ಟ್ರೈನ್‌ನಲ್ಲಿ ಎರಡು ಬಲಿಷ್ಠ ಬಾಂಬ್‌ಗಳು ಸ್ಫೋಟಗೊಂಡು, ಅರವತ್ತು ಜನ (ಅವರಲ್ಲಿ ಹೆಚ್ಚಿನವರು ಪಾಕಿಸ್ತಾನದವರು) ಸಾವನ್ನಪ್ಪಿದ್ದರು. ಹೈದರಾಬಾದಿನ ಮೆಕ್ಕಾ ಮಸೀದಿಯಲ್ಲಿ 4000 ಜನ ಪ್ರಾರ್ಥನೆಗೆಂದು ಸೇರಿದ್ದಾಗ ಬಾಂಬ್ ಸ್ಫೋಟಗೊಂಡು 24 ಜನ ಮುಸಲ್ಮಾನರು ಸತ್ತರು. ಅಜ್ಮೇರ್‌ನ ದರ್ಗಾದಲ್ಲಿ ಬಾಂಬ್ ಸ್ಫೋಟಗೊಂಡು ಮೂವರು ಅಸುನೀಗಿದ್ದರು. ಮಾಲೆಗಾಂವ್‌ನಲ್ಲಿ ಮತ್ತೊಂದು ಬಾಂಬ್ ಸ್ಫೋಟಗೊಂಡು ಮತ್ತಷ್ಟು ಜನ ಜೀವ ತೆತ್ತಿದ್ದರು.

ಈ ಎಲ್ಲಾ ಜನರ ಸಾವಿಗೆ ಸಂಘಪರಿವಾರದ ದ್ವೇಷಪೂರಿತ ಸಿದ್ಧಾಂತವೇ ಕಾರಣ.

ತಮ್ಮದು ಸಾಂಸ್ಕೃತಿಕ ಸಂಘಟನೆ, ದೇಶಭಕ್ತರ ಕೂಟ ಎಂದೆಲ್ಲ ಹೇಳಿಕೊಳ್ಳುವ ಆರೆಸ್ಸೆಸ್ ಮತ್ತು ಅದರ ವಿವಿಧ ಅಂಗಗಳ ಹತ್ತಾರು ಭಯೋತ್ಪಾದಕ ಕೃತ್ಯಗಳನ್ನು ತೆರೆದಿಡುವ ಪುಸ್ತಕವೇ 'ಕೇಸರಿ ಭಯೋತ್ಪಾದನೆ'.

ಇದನ್ನು ಹಿರಿಯ ಮಾನವ ಹಕ್ಕು ಕಾರ್ಯಕರ್ತರು, ಲೇಖಕರು ಆದ ಸುರೇಶ್ ಭಟ್ ಬಾಕ್ರಬೈಲು ಬರೆದಿದ್ದಾರೆ. ನಮ್ಮ 'ಲಂಕೇಶ್ ಪ್ರಕಾಶನ' ಇದನ್ನು ಪ್ರಕಟಿಸಿದೆ.

ಮಾನವ ಹಕ್ಕು ಸಂಘಟನೆಗಳ ಒಕ್ಕೂಟ ಜನವರಿ 27 ರಂದು ಮಂಗಳೂರಿನಲ್ಲಿ ಆಯೋಜಿಸಿರುವ ಸಾರ್ವಜನಿಕ ಸಭೆಯಲ್ಲಿ ಈ ಪುಸ್ತಕವನ್ನು ಬಿಡುಗಡೆ ಮಾಡಲಾಗುತ್ತಿದೆ.

ಸ್ವಾಮಿ ವಿವೇಕಾನಂದರ ಕುರಿತಂತೆ ಪ್ರಜಾವಾಣಿಯಲ್ಲಿ ದಿನೇಶ್ ಅಮಿನ್ ಮಟ್ಟುರವರು ಬರೆದಿರುವ ಲೇಖನದ ಬಗ್ಗೆ ವಿವಾದವೆದ್ದಿದೆ. ಶಿವಮೊಗ್ಗೆಯಲ್ಲಿ ಹಿಂದೂ ಪುರೋಹಿತರ ಗುಂಪು ಪ್ರಜಾವಾಣಿ ಕಚೇರಿಗೆ ನುಗ್ಗಿ ದಾಂಧಲೆ ನಡೆಸಿದೆ. ಈ ವಿದ್ಯಮಾನಗಳ ಬಗ್ಗೆ ಶಿವಸುಂದರ್ ಬರೆದಿರುವ ಲೇಖನವನ್ನು ಪ್ರಕಟಿಸಲಾಗಿದೆ. ವಿವೇಕಾನಂದರ ಧೂಮಪಾನದ ಹವ್ಯಾಸ, ಮಾಂಸಾಹಾರ ಹಾಗೂ ಅವರಿಗಿದ್ದ ಡಯಾಬಿಟಿಸ್ ಅನ್ನು ದಿನೇಶ್ ಮಟ್ಟು ಪ್ರಸ್ತಾಪಿಸಿರುವುದು ಅನೇಕರಿಗೆ ಕಿರಿಕಿರಿ ಮತ್ತು ಶಾಕ್ ನೀಡಿರಬಹುದು. ಇದಕ್ಕೆ ಪೂರಕವಾಗಿ ವಿವೇಕಾನಂದರ ಒಡನಾಡಿಗಳೂ ಕೆಲ ಅನುಭವಗಳನ್ನು ಬರೆದು ದಾಖಲಿಸಿದ್ದಾರೆ. ಮೈಸೂರಿನ ರಾಮಕೃಷ್ಣ ಆಶ್ರಮದವರು 2010ರಲ್ಲಿ ಪ್ರಕಟಿಸಿರುವ 'ಸ್ವಾಮಿ ವಿವೇಕಾನಂದ ದಿವ್ಯಸ್ಮೃತಿ' ಪುಸ್ತಕದಿಂದ ಇವನ್ನು ಆರಿಸಲಾಗಿದೆ. ಅವನ್ನಿಲ್ಲಿ ಆರಿಸಿ(ಪುಟ 5ರಲ್ಲಿ) ಪ್ರಕಟಿಸಲಾಗಿದೆ. ಇದು ಖಂಡಿತಾ ವಿವೇಕಾನಂದರ ವ್ಯಕ್ತಿತ್ವವನ್ನು ಗೌಣಗೊಳಿಸುವ ಪ್ರಯತ್ನವಲ್ಲ. ಅದರ ಬದಲಾಗಿ ವಿವೇಕಾನಂದ ಕೂಡ ಸಾಮಾನ್ಯರಂತೆಯೇ ಜನಿಸಿ ತಮ್ಮ ಸ್ವಪ್ರಯತ್ನ, ಪ್ರತಿಭೆ ಹಾಗೂ ಸಂದರ್ಭಗಳಿಂದ ಆ ಎತ್ತರಕ್ಕೆ ಬೆಳೆದವರೆಂಬುದನ್ನು ಅರಿಯುವ ಮಾತಷ್ಟೇ ಆಗಿದೆ.

• ಸಂ

ವಿವೇಕವಿದ್ದರೆ ಆನಂದ



ಮೊನ್ನೆ ಪ್ರಜಾವಾಣಿಯಲ್ಲಿ ದಿನೇಶ್ ಅಮಿನ್ ಮಟ್ಟುರವರು ತಮ್ಮ ಅಂಕಣದಲ್ಲಿ ವಿವೇಕಾನಂದರ ಬಗ್ಗೆ ಬರೆದ "ಸ್ವಾಮಿ ವಿವೇಕಾನಂದ ಎಂಬ ಮನುಷ್ಯ ಹೀಗಿದ್ದರು" ಎಂಬ ಲೇಖನದ ಬಗ್ಗೆ ವ್ಯಕ್ತವಾಗುತ್ತಿರುವ ಅಭಿಪ್ರಾಯಗಳನ್ನು ನೋಡಿದರೆ ನಮಗೆ ಮನುಷ್ಯರ ಜೊತೆಗೆ ಬದುಕುವುದು ಗೊತ್ತಿಲ್ಲ ಎಂಬುದು ಸಾಬೀತಾಗುತ್ತಿದೆ. ಮನುಷ್ಯರಿದ್ದ ಕಡೆ ಮನುಷ್ಯರ ಬಗ್ಗೆ ಅಭಿಪ್ರಾಯ ಮತ್ತು ಭಿನ್ನಾಭಿಪ್ರಾಯಗಳಿರುತ್ತವೆ. ವಿವೇಕ ಹುಟ್ಟುವುದು ಅವುಗಳ ನಡುವಿನ ಮಂಥನದಲ್ಲಿ. ಅಂತಿಮದಲ್ಲಿ ಆ ವಿವೇಕದ ಬದುಕೇ ಆನಂದವನ್ನು ನೀಡುತ್ತದೆ. ಮನುಷ್ಯರಿಲ್ಲದ ಕೇವಲ ದೇವರು ಮತ್ತು ದೆವ್ವಗಳಿರುವ ಸಮಾಜದಲ್ಲಿ ಭಕ್ತಿ ಅಥವಾ ಭೀತಿ ಮಾತ್ರ ಇರಲು ಸಾಧ್ಯ. ಅಂಥ ಕಡೆ ಮನುಷ್ಯನ ಕ್ರಿಯಾಶೀಲತೆ ಮತ್ತು ಸೃಜನಶೀಲತೆ ಹೆಣವಾಗಿರುತ್ತದೆ. ಮತ್ತಲ್ಲಿ ಪ್ರಜಾತಂತ್ರವೂ ಉಳಿಯುವುದಿಲ್ಲ. ಆದರೆ ಇಂದು ಅಸಹನೆ, ಅಸಹಿಷ್ಣುತೆ ಮತ್ತು ದ್ವೇಷಗಳೇ ಸಮಾಜದ ಮುಖ್ಯ ಧಾರೆಯನ್ನು ಆವರಿಸಿಕೊಂಡಿದೆ. ವಿವೇಕದ ಆನಂದಕ್ಕಿಂತ ಅವಿವೇಕದ ಆವೇಶವೇ ವರ್ತಮಾನವನ್ನು ಮತ್ತು ಗತವನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದೆ. ಆ ಅವಿವೇಕಾನಂದಿಗಳೇ ಮಟ್ಟುರವರ ಲೇಖನವನ್ನು ಮತ್ತು ವಿವೇಕಾನಂದರ ದರ್ಶನವನ್ನೂ ತಿರುಚಲು ಪ್ರಯತ್ನಿಸುತ್ತಿದ್ದಾರೆ.

ಮಟ್ಟುರವರು ತಮ್ಮ ಲೇಖನದಲ್ಲಿ ಪ್ರಧಾನವಾಗಿ, ನಮ್ಮಂತೆ ಸಾಮಾನ್ಯ ಮನುಷ್ಯರಾದ ನರೇಂದ್ರನಾಥ ಅಪಾರ ಪರಿಶ್ರಮ ಮತ್ತು ತುಳಿತಕ್ಕೊಳಗಾದ ಜನರ ಬಗೆಗಿನ ಅಪಾರ ಅನುಕಂಪ ಮತ್ತು ಬದ್ಧತೆಯಿಂದ ನಡೆಸಿದ ಅಧ್ಯಯನದಿಂದ ಹೇಗೆ ವಿವೇಕಾನಂದರಾದರು ಎಂಬುದನ್ನಷ್ಟೆ ಹೇಳಿದ್ದಾರೆ. ಆದರ್ಶಗಳನ್ನು ಮತ್ತು ಆದರ್ಶ ಜೀವನ ನಡೆಸಿದವರನ್ನು ಬಣ್ಣಿಸುವಾಗ ಆ ಆದರ್ಶಗಳು ಅಸಾಮಾನ್ಯರಿಂದ ಮಾತ್ರ ಸಾಧ್ಯ ಎಂಬ ಧ್ವನಿ ಹೊರಡುತ್ತದೆ ಮತ್ತು ಅತಿ ಸಹಜವಾಗಿ ಸಾಧ್ಯವಾಗಬಹುದಾದ ಸಾಧಿಸಬಹುದಾದ ಗುಣಗಳನ್ನೂ ಅಸಾಧ್ಯವೆಂದೂ, ಅಸಹಜವೆಂದೂ ಮಾಡಿಬಿಡುವುದು ಇದರ ಇನ್ನೊಂದು ಮುಖ. ಆದರೆ ವಿವೇಕಾನಂದರ ಬದುಕು ಸಾಮಾನ್ಯರೂ ಸಹ ಆದರ್ಶ ಬದುಕಿನ ಆನಂದ ಪಡೆದುಕೊಳ್ಳಬಹುದು ಎಂಬುದನ್ನು ತಿಳಿಸುತ್ತದೆ ಎಂಬ ಮಟ್ಟು ಅವರ ಲೇಖನದ ಧ್ವನಿ ಆರೋಗ್ಯಪೂರ್ಣವಾದದ್ದು.


ಇದಲ್ಲದೆ ವಿವೇಕಾನಂದರ ಬದುಕನ್ನು ಮತ್ತು ಅವರ ವಿವೇಕದ ಸಾರಾಂಶವನ್ನು ವಿವರಿಸುವಾಗ ಮಟ್ಟುರವರು ಹೇಗೆ ವಿವೇಕಾನಂದರ ವಿವೇಕ ಮತ್ತು ಆನಂದದ ಮೂಲ ಈಗ ಸಂಘಪರಿವಾರ ಬಣ್ಣಿಸುತ್ತಿರುವ ಆದರ್ಶ, ವಿವೇಕ, ಮತ್ತು ಆನಂದಗಳಿಗಿಂತ ಭಿನ್ನವಾಗಿತ್ತು ಎಂದು ವಿವರಿಸುತ್ತಾರೆ. ಇದು ಅತಿಮುಖ್ಯ ಮತ್ತು ಅವಿವೇಕಾನಂದಿಗಳ ಕುತರ್ಕದ ಮೂಲ.

ಅದರಲ್ಲಿ ಅತಿ ಮುಖ್ಯವಾದದ್ದು ಹೇಗೆ ವಿವೇಕಾನಂದರ ಧರ್ಮದರ್ಶನ ಮತ್ತು ಜೀವನ ದರ್ಶನ ಪುರೋಹಿತಶಾಹಿ ವಿರೋಧಿಯಾಗಿತ್ತು ಎಂಬುದು. ವಾಸ್ತವವಾಗಿ ಮಟ್ಟುರವರು ಪದಮಿತಿಯಿಂದ ಉದ್ಧರಿಸಲಾಗದ ವಿವೇಕಾನಂದರ ಹಲವು ವ್ಯಾಖ್ಯಾನಗಳು ವಿವೇಕಾನಂದರ ಆಧ್ಯಾತ್ಮ ಮತ್ತು ಧರ್ಮ, ಸಂಘಪರಿವಾರದ ಹಿಂದೂತ್ವಕ್ಕಿಂತ ಹೇಗೆ ಭಿನ್ನವಾಗಿತ್ತು ಎಂಬುದನ್ನು ಸಾಬೀತು ಪಡಿಸುತ್ತದೆ.

ಉದಾಹರಣೆಗೆ ರಾಮಕೃಷ್ಣ ಮಿಷನ್ನೇ ಪ್ರಕಟಪಡಿಸಿರುವ "ವಿವೇಕಾನಂದರ ಸಮಗ್ರ ಬರಹಗಳ" ಆರನೇ ಸಂಪುಟದಲ್ಲಿ ವಿವೇಕಾನಂದರು ಆಧ್ಯಾತ್ಮದ ಬಗ್ಗೆ ಮಾಡಿರುವ ಭಾಷಣವಿದೆ. ಅದರಲ್ಲಿ ಅವರು ಆಧ್ಯಾತ್ಮವೆಂಬುದು ಮನುಷ್ಯರೆಲ್ಲ ಒಂದೇ ಎಂಬ ಸತ್ಯವನ್ನು ಪ್ರತಿಪಾದಿಸುತ್ತದೆ. ಆ ತಿಳಿವಳಿಕೆಯನ್ನು ಸಾಧಿಸಲು ಕ್ರೈಸ್ತ ಧರ್ಮ, ಇಸ್ಲಾಂ, ಬೌದ್ಧ ಹಾಗೂ ಹಿಂದೂ ಧರ್ಮಗಳೆಂಬ ಮಾರ್ಗಗಳಿವೆಯಷ್ಟೆ. ಎನ್ನುತ್ತಾರೆ. ಹಿಮಾಲಯದ ಅಲ್ಮೊರದ ಅದ್ವೈತ ಆಶ್ರಮ ಹೊರತಂದಿರುವ "ವಿವೇಕಾನಂದರ ಸಮಗ್ರ ಪತ್ರಗಳ" ಸಂಪುಟದಲ್ಲಿ ವಾಸ್ತವವಾಗಿ "ಮನುಕುಲವನ್ನು ವೇದಗಳು, ಕುರಾನ್ ಮತ್ತು ಬೈಬಲ್‌ಗಳಿಲ್ಲದ ಸ್ಥಿತಿಗೆ ಕೊಂಡೊಯ್ಯಬೇಕು. ಆದರೆ ಅದರ ಪ್ರಥಮ ಹೆಜ್ಜೆ, ವೇದ, ಕುರಾನ್ ಮತ್ತು ಬೈಬಲ್‌ಗಳ ತತ್ವಾದರ್ಶಗಳ ಸಮನ್ವಯ

ಪ್ರಜಾ ವಾಣಿ

ಮಾಡುವುದು" ಎಂದು ಹೇಳುತ್ತಾರೆ. ಈ ಹೇಳಿಕೆಯಲ್ಲಿ ಅಸಾಧ್ಯವಾದ ಹಲವು ಅಂಶಗಳಿರಬಹುದಾದರೂ ವಿವೇಕಾನಂದರ ವಿಚಾರಸರಣಿ ಹಾಗಿತ್ತು. ಉದಾಹರಣೆಗೆ ಹಿಂದೂ ಧರ್ಮ ಎಂದಾಗ ಅಬ್ರಾಹ್ಮಣ ಆಚರಣೆಗಳು ಪ್ರಧಾನ ಧಾರೆ ಹಿಂದೂವಾಹಿನಿಯಲ್ಲಿ ಪರಿಗಣಿಸಲ್ಪಡುವುದೇ ಇಲ್ಲ. ಈಗಂತೂ ದಲಿತರು ಮತ್ತು ಪ್ರಜ್ಞಾವಂತ ಶೂದ್ರರು, ಲಿಂಗಾಯತರು ತಮ್ಮನ್ನು ಹಿಂದೂ ಎಂದು ಕರೆಸಿಕೊಳ್ಳಲು ನಿರಾಕರಿಸುತ್ತಾರೆ. ಆದರೆ ಆ ಕಾಲಘಟ್ಟದಲ್ಲಿ ಬ್ರಿಟಿಷ್ ಆಳ್ವಿಕೆಯ ವಿರುದ್ಧ ಭಾರತೀಯತೆಯ ಸಾಂಸ್ಕೃತಿಕ ಅಸ್ಮಿತೆಯನ್ನು ಕಟ್ಟಿಕೊಳ್ಳುವ ಭಾಗವಾಗಿ ಹಿಂದೂ ಎಂಬುದನ್ನು ಒಂದು ಅಖಂಡ ಅಸ್ಮಿತೆಯನ್ನಾಗಿ ಕಟ್ಟಿಕೊಳ್ಳುವ ಪ್ರಯತ್ನವನ್ನು ಅಂಬೇಡ್ಕರ್ ಅವರನ್ನು ಬಿಟ್ಟು ಮಿಕ್ಕ ಎಲ್ಲರೂ ಮಾಡಿದ್ದರು. ಆದರೆ ಇತರ ಕಾಂಗ್ರೆಸ್ ಅಥವಾ ಆರೆಸ್ಸೆಸ್ ನಾಯಕರಂತೆ ಹಿಂದೂ ಧರ್ಮದ ಸುಧಾರಿತ ಅಖಂಡತ್ವವನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ.



ದಿನೇಶ್ ಅಮಿನ್ ಮಟ್ಟು

ಆಹಾರ, ಉಡುಪು, ಧರ್ಮಾಚರಣೆಗಳಲ್ಲಿದ್ದ ಬ್ರಾಹ್ಮಣೀಯ ಶ್ರೇಣೀಕರಣವನ್ನು ಖಂಡತುಂಡವಾಗಿ ಖಂಡಿಸುತ್ತಿದ್ದ ವಿವೇಕಾನಂದರು ಭಾರತದಲ್ಲಿ ಇನ್ನೂ ಬದಲಾವಣೆಯ ಬಿರುಗಾಳಿ ಶೂದ್ರ ಸಂವೇದನೆಗಳಿಂದಲೇ ಬರಬೇಕೆಂದು ಪ್ರತಿಪಾದಿಸಿದ್ದರು. ಎಲ್ಲಾ ನಾಗರಿಕತೆಗಳಲ್ಲೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರ ವಿಭಜನೆಗಳಿರುತ್ತವೆ. ಈವರೆಗಿನ ಎಲ್ಲಾ ನಾಗರಿಕತೆಗಳಲ್ಲೂ ಬ್ರಾಹ್ಮಣ, ವೈಶ್ಯ ಕ್ಷತ್ರಿಯರು ಆಳಿದ್ದಾಗಿದೆ. ಇನ್ನು ಎಲ್ಲೆಡೆ ಶೂದ್ರರ ಕಾಲ ಎಂಬ ತಾರ್ಕಿಕ ಮತ್ತು ತಾತ್ವಿಕ ವಾದವನ್ನು ಪ್ರತಿಪಾದಿಸುತ್ತಿದ್ದರು. ವಿಗ್ರಹಾರಾಧನೆ, ಪುರೋಹಿತಶಾಹಿಯ ಶೋಷಣೆ, ವರ್ಣಾಶ್ರಮ, ಬ್ರಾಹ್ಮಣ್ಯ ಇವುಗಳ ಬಗ್ಗೆ ಅವರಿಗೆ ಅತ್ಯಂತ ಆಕ್ರೋಶದ ಪ್ರತಿರೋಧವಿತ್ತು. ಹೀಗೆ ವಿವೇಕಾನಂದರ ವಿವೇಕ ಮತ್ತು ಆನಂದ ಹಾಗೂ ಆದರ್ಶಗಳ್ಯಾವುವೂ ಸಂಘಪರಿವಾರದ ಪ್ರತಿಗಾಮಿ ತತ್ವಗಳಿಗೆ ಪೂರಕವಾಗಿಲ್ಲ. ವಾಸ್ತವವಾಗಿ ವಿವೇಕಾನಂದರ ಜೀವನ ಮತ್ತು ಧರ್ಮ ದರ್ಶನದಲ್ಲಿದ್ದ ಈ ಬ್ರಾಹ್ಮಣ್ಯ ವಿರೋಧಿ ಅಂಶಗಳನ್ನು ಮರೆಮಾಚಿಯೇ ಅವರನ್ನು ಸಂಘಪರಿವಾರ ಹಿಂದೂತ್ವದ ವಕ್ತಾರನನ್ನಾಗಿ ಮಾಡಲು ಪ್ರಯತ್ನ ನಡೆದಿದೆ.

ಇನ್ನೂ ಮಟ್ಟು ಅವರ ಲೇಖನದಲ್ಲಿ ಆದರ್ಶಮಯ ವ್ಯಕ್ತಿಯೊಬ್ಬನ ಬದುಕನ್ನ ಹೀಗೆಳೆಯಲಾಗಿದೆ ಎಂಬ ತಪ್ಪು ಆರೋಪವನ್ನು ಇನ್ನಿತರರು ಮಾಡುತ್ತಿದ್ದಾರೆ. ವಾಸ್ತವದಲ್ಲಿ ಈ ಆರೋಪದ ಹಿಂದೆ "ಕುಡಿಯದ, ಮಾಂಸಾಹಾರ ಮಾಡದ, ಪೂರ್ವಜರ ಬಗ್ಗೆ ಅವಿಮರ್ಶಾತ್ಮಕ ಆರಾಧನೆ" ಇರುವ ಮೌಲ್ಯಗಳೇ ನಿಜವಾದ ಆದರ್ಶವೆಂಬ ಒಂದು "ಕುಲೀನ ತಿಳವಳಿಕೆ" ಇದೆ. ವಿವೇಕಾನಂದರು ಮತ್ತು ಮಟ್ಟು ಅವರ ಮೊದಲ ಲೇಖನ ಸಾರಾಂಶದಲ್ಲಿ ಈ "ಆದರ್ಶ"ಗಳ ನೆಲೆಗಟ್ಟನ್ನೇ ಪ್ರಶ್ನಿಸುತ್ತದೆ. ಅದರ ಹಿಂದಿರುವ ಬ್ರಾಹ್ಮಣೀಯ ಶ್ರೇಣೀಕರಣದ ತಿಳಿವಳಿಕೆಯನ್ನು, ಜನಸಾಮಾನ್ಯರ ಬದುಕಿನ ದರ್ಶನವನ್ನೂ ಅಮೌಲ್ಯಗೊಳಿಸುವ ಪುರೋಹಿತಶಾಹಿ ಹುನ್ನಾರವನ್ನು ಪ್ರತಿರೋಧಿಸುತ್ತದೆ. ವಿವೇಕಾನಂದರ ಬದುಕು ಈ ಹುಸಿ ಮತ್ತು ಜೀವವಿರೋಧಿ ಆದರ್ಶಗಳ ಬದಲಿಗೆ ಪರ್ಯಾಯ ಜೀವನ ಮೌಲ್ಯ ಮತ್ತು ಆದರ್ಶಗಳನ್ನು ಕಟ್ಟುತ್ತದೆ. ಆದರಲ್ಲಿ ಶೂದ್ರ ಬದುಕಿನ ಮಾಂಸಾಹಾರ, ಶ್ರಮ ಸಹಕಾರ, ಸಹಜೀವನ ಎಲ್ಲವೂ ಪರ್ಯಾಯ ಆದರ್ಶಗಳಾಗುತ್ತವೆ. ವಿವೇಕಾನಂದರ ಖಾಸಗಿ ಬದುಕು ಮತ್ತು ಸಾರ್ವಜನಿಕ ಪ್ರತಿಪಾದನೆ ಯಾವುದರಲ್ಲೂ ಅವರು ಮಾಂಸಾಹಾರ, ಆರಾಧನೆಗಳ ಬಗ್ಗೆ ಶೂದ್ರ ಆಚರಣೆಗಳಿಗೂ ಮೌಲ್ಯವನ್ನು ತಂದುಕೊಟ್ಟರು. ಹೀಗಾಗಿ ಮಟ್ಟುರವರು ತಮ್ಮ ಲೇಖನದಲ್ಲಿ ಆದರ್ಶ ವಿವೇಕಾನಂದರ ಮೇಲೆ ಧೂಳೆರಚಿಲ್ಲ ಬದಲಿಗೆ ಪರ್ಯಾಯ ಆದರ್ಶಗಳನ್ನು ಹೇಗೆ ಕಟ್ಟಿದರು ಎಂದು ವಿವರಿಸಿದ್ದಾರೆ.

ಇದರಷ್ಟೇ ಮುಖ್ಯವಾದದ್ದು ಭಾರತಕ್ಕೆ ಇಂದು "ಮುಸ್ಲಿಂ ದೇಹ ಮತ್ತು ವೇದಾಂತದ ಮೆದುಳು" ಬೇಕೆಂಬ ಅವರ ತಿಳಿವಳಿಕೆ. ಅವರ ಪ್ರಕಾರ ವೇದಾಂತವೆಂದರೆ ಇಂದು ಪ್ರಚುರವಾಗಿರುವಂತೆ ಹಿಂದೂ ಧರ್ಮವಲ್ಲ, ಅದು ಎಲ್ಲಾ ಮನುಷ್ಯರಲ್ಲೂ ದೈವತ್ವವಿದೆ ಎಂದು ಅರ್ಥಮಾಡಿಕೊಳ್ಳುವ ಅರಿವು. ಅದೇ ಧರ್ಮಸಾರ. ಅವರ ಪ್ರಕಾರ ಸಕಲ ಧರ್ಮ ಸಾರ. ಇದನ್ನು ಪ್ರತಿಯೊಬ್ಬರೂ ತಮ್ಮದೇ ಆದ ಮಾರ್ಗದಲ್ಲಿ ಅರಿತುಕೊಳ್ಳಬೇಕು. ಒಂದು ಗುರಿಯನ್ನು ತಲುಪಲು ಹಲವು ಮಾರ್ಗಗಳಂತೆ ಈ ವೇದಾಂತ ಜ್ಞಾನವನ್ನು ಪಡೆದುಕೊಳ್ಳಲು ಹಿಂದೂ ಧರ್ಮವನ್ನು ಒಳಗೊಂಡಂತೆ ಇಸ್ಲಾಂ, ಕ್ರೈಸ್ತ ಧರ್ಮ ಹಲವು ಮಾರ್ಗಗಳಿವೆ. ಅದರಲ್ಲ ಹಿಂದೂ ಧರ್ಮವೂ ಒಂದು ಮಾರ್ಗವಷ್ಟೆ ಎಂದು ವಿವೇಕಾನಂದರು ಭಾವಿಸಿದ್ದರು. ಆದರೆ ಹಿಂದೂ ಧರ್ಮ ತನ್ನ ಆಚರಣೆಯಲ್ಲಿ ಪಡೆದುಕೊಂಡಿರುವ ವಿಕೃತಿಯನ್ನು, ವರ್ಣಾಶ್ರಮದ ತಾರತಮ್ಯವನ್ನೂ, ಪುರೋಹಿತಶಾಹಿ ಪ್ರಾಧಾನ್ಯವನ್ನೂ ಕಂಡು "ಭಾರತಕ್ಕೆ ವೇದಾಂತದ ಮೆದುಳು ಮತ್ತು ಇಸ್ಲಾಮಿನ ದೇಹ" ಬೇಕೆಂದು ಹೇಳಿದ್ದರು. ಅಂದರೆ ವೇದಾಂತದ ತಿಳಿವಳಿಕೆಯನ್ನು ಪಡೆಯಲು ಭಾರತಕ್ಕೆ ಇಸ್ಲಾಮಿಕ್ ಮಾರ್ಗ ಬೇಕೆಂಬುದು ಅವರ ತಾತ್ಪರ್ಯ. "ವೇದಾಂತದ ತಿಳವಳಿಕೆ ಅದು ಎಷ್ಟೇ ಉತ್ತಮವಿರಲಿ ಅದು ಪ್ರಾಯೋಗಿಕ ಇಸ್ಲಾಮಿನೊಡನೆ ಬೆರೆಯದಿದ್ದರೆ ಈ ದೇಶದ ಪುನರುತ್ಥಾನ ಸಾಧ್ಯವಿಲ್ಲ ಎಂಬುದನ್ನು ಅವರು ಯಾವುದೇ ಮಾತನ್ನು ಬೆರೆಸದೆ ಸ್ಪಷ್ಟಪಡಿಸುತ್ತಿದ್ದರು. ಇದು ಸಂಘಪರಿವಾರದ ಹಿಂದೂತ್ವವಾದದ ಸಂಪೂರ್ಣ ಧಾರ್ಮಿಕ ಮತ್ತು ನೈತಿಕ ತಿರಸ್ಕಾರವಲ್ಲದೆ ಮತ್ತೇನು?

ಅವೆಲ್ಲ ಏನೇ ಇರಲಿ, ವೀವೇಕಾನಂದ, ಅಂಬೇಡ್ಕರ್, ಭಗತ್‌ಸಿಂಗ್ ಇನ್ನಿತರ ದಮನಿತ ಜನರ ತತ್ವಾದರ್ಶಗಳನ್ನು ಬದುಕನ್ನು ತಿರುಚಿ ತಮ್ಮ ಜನವಿರೋಧಿ ರಾಜಕಾರಣದ ವಕ್ತಾರರನ್ನಾಗಿ ಮಾಡಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಮಟ್ಟುರವರ ಲೇಖನ ಅತ್ಯಂತ ಸಮಯೋಚಿತವಾಗಿತ್ತು. ಇದನ್ನು ಪ್ರಕಟಿಸುವ ಧೈರ್ಯ ಮಾಡಿದ ಪ್ರಜಾವಾಣಿಗೆ ಅಭಿನಂದನೆಗಳನ್ನು ಹೇಳಬೇಕು ಮತ್ತು ಈ ಚರ್ಚೆ ಇನ್ನಷ್ಟು ಮುಂದುವರೆಯಬೇಕು ಎಂಬುದು ಪ್ರಜ್ಞಾವಂತರ ಕೋರಿಕೆ.

ಆದರೂ ನಂತರದಲ್ಲಿ ಮಟ್ಟು ಅವರು ಕೊ[illegible] ಸಮಜಾಯಿಷಿ ಲೇಖನ ಸಮಾಧಾನದ ಬದಲು ಹಲ[illegible] ಪ್ರಶ್ನೆಗಳನ್ನು ಹುಟ್ಟಿಸುವಂತಿದೆ ಎಂದು ಹೇಳಲೇಬೇಕ[illegible] ಸಮಾಜದ ಮತ್ತು ದಮನಿತರ ವಿಮೋಚನೆಯ ಬ[illegible] ವಿವೇಕಾನಂದರಿಗಿಂತ ಸಾಕಷ್ಟು ಕ್ರಾಂತಿಕಾರಿ ಮಾರ್ಗಗಳನ್ನ[illegible] ಅನ್ವೇಷಿಸಿದ ಅಂಬೇಡ್ಕರ್ ಜೊತೆಗೆ ಭಿನ್ನಾಭಿಪ್ರಾಯವಿ[illegible] ಎಂದು ಹೇಳುವ ಮಟ್ಟುರವರು ವಿವೇಕಾನಂದರ ಜೊತೆ[illegible] ಮಾತ್ರ ಸಂಪೂರ್ಣ ಸಹಮತ ವ್ಯಕ್ತಪಡಿಸುವುದು ನನ[illegible] ಆಶ್ಚರ್ಯ ತಂದಿದೆ. ಆದರಲ್ಲೂ ಸುಧಾರಿತ ಹಿಂದ[illegible] ಧರ್ಮವನ್ನು ಜಗತ್ತಿನ ಧರ್ಮವನ್ನು ಮಾಡು[illegible] ವಿವೇಕಾನಂದರ ಅಜೆಂಡಾವನ್ನು ಹೇಗೆ ಒಪ್ಪಿಕೊಳ್ಳಲು ಸಾಧ[illegible] ಧರ್ಮ ಮಾತ್ರದಿಂದಲೇ ದಮನಿತರ ಲೌಕಿಕ ಕಷ್ಟಗಳು, ಅದ[illegible] ಸುಧಾರಿತ ಹಿಂದೂ ಧರ್ಮವೇ ಆಗ[illegible] ಬಗೆಹರಿಯುವುದಿಲ್ಲ. ಮಟ್ಟುರವರು ತಮ್ಮ ಮೂ[illegible] ಲೇಖನದ ನಿಲುವಿನಿಂದ ಹಿಂದೆ ಸರಿಯುವ ಅಗತ್ಯವಿರಲಿ[illegible]

• ಶಿವಸುಂದರ[illegible]

ವಿವೇಕಾನಂದ ಚಿಂತನೆ ಹಾಗೂ ವ್ಯಕ್ತಿತ್ವ ಕುರಿತಂತೆ ಅವರ ಒಡನಾಡಿಗಳ ಅಭಿಪ್ರಾಯಗಳು ಇಲ್ಲಿವೆ...

ಹೀಗಿದ್ದರು ವಿವೇಕಾನಂದ...!

ಶಾರೀರಿಕ ದೌರ್ಬಲ್ಯ

ನಮ್ಮ ಉಪನಿಷತ್ತು ಎಷ್ಟು ಅಮೋಘವಾಗಿದ್ದರೂ, ನಾವು ಪುರಾತನ ಆರ್ಯಮಹರ್ಷಿಗಳ ಸಂಭೂತರೆಂದು ಎಷ್ಟು ಹೆಮ್ಮೆ ಕೊಚ್ಚಿಕೊಂಡರೂ, ನಮ್ಮನ್ನು ಇತರ ಜನಾಂಗಗಳೊಂದಿಗೆ ಹೋಲಿಸಿ ನೋಡಿದರೆ ನಾವು ತುಂಬಾ ದುರ್ಬಲರಾಗಿರುವೆವು ಎಂಬುದನ್ನು ನಿಮಗೆ ಹೇಳಬೇಕಾಗಿದೆ. ಮೊದಲನೆಯ ಕಾರಣವೇ ಶಾರೀರಿಕ ದೌರ್ಬಲ್ಯವಾಗಿದೆ.



ನಮ್ಮ ಯುವಕರು ಬಲಶಾಲಿಗಳಾಗಬೇಕು. ಧರ್ಮ ಆನಂತರ ಬರುವುದು. ನನ್ನ ಯುವಕರೇ, ಬಲಾಢ್ಯರಾಗಿ. ಅದೇ ನಾನು ನಿಮಗೆ ಕೊಡುವ ಸಲಹೆ. ನೀವು ಚೆಂಡಾಟವಾಡುವುದರಿಂದ ಗೀತೆಯನ್ನು ಓದುವುದಕ್ಕಿಂತ ಹೆಚ್ಚಾಗಿ ಮುಕ್ತಿಗೆ ಸಮೀಪಿಸುವಿರಿ.

ಪುನರುದ್ಧಾರಕ್ಕೆ ಮುಖ್ಯವಾದ ಸಾಧನೆಗಳು

ಶಾಸನ, ಸರ್ಕಾರ, ರಾಜಕೀಯ ಇವುಗಳೆಲ್ಲ ಒಂದು ಮಾರ್ಗವೇ ಹೊರತು ಇವೇ ಗುರಿಯಲ್ಲ, ಇವುಗಳಾಚೆ ಗುರಿ ಇರುವುದು. ಅಲ್ಲಿ ಯಾವ ಶಾಸನವೂ ಬೇಕಿಲ್ಲ, ತಳಹದಿ ಶಾಸನವಲ್ಲ, ನೀತಿ ಮತ್ತು ಹೃದಯ ಪರಿಶುದ್ಧಿ ಎಂಬುದನ್ನು ಕ್ರಿಸ್ತ ಮನಗಂಡ. ಯಾವ ಪಾರ್ಲಿಮೆಂಟಿನ ಶಾಸನವೂ ಮನುಷ್ಯರನ್ನು ನೀತಿವಂತರನ್ನಾಗಿ ಮಾಡಲಾರದು. ಇದು ಸಮಸ್ಯೆಯ ಮೂಲಕ್ಕೆ ಹೋಗಿ ಅವರ ಚಾರಿತ್ರ್ಯವನ್ನು ರೂಢಿಸುವ ಪ್ರಯತ್ನ ಮಾಡಬೇಕು.

ವರ್ಣದ ಸಮಸ್ಯೆ

ಹಿಂದೂಗಳು ಸಹಾನುಭೂತಿ ತೋರದೆ ಇದ್ದುದರಿಂದ ಸಾವಿರಾರು ಜನ ಪರೆಯರು ಮದ್ರಾಸಿನಲ್ಲಿ ಕ್ರೈಸ್ತ ಧರ್ಮಕ್ಕೆ ಸೇರಿದರು. ಇದು ಬರೀ ಹಸಿವಿಗಾಗಿ ಮಾಡಿದ್ದು ಎಂದು ಭಾವಿಸಬೇಡಿ. ಅವರಿಗೆ ನಮ್ಮಿಂದ ಯಾವ ಸಹಾನುಭೂತಿಯೂ ದೊರಕುತ್ತಿಲ್ಲ, ಹಗಲು ರಾತ್ರಿ ನಾವು ಅವರಿಗೆ "ನಮ್ಮನ್ನು ಮುಟ್ಟಬೇಡಿ, ನಮ್ಮನ್ನು ಮುಟ್ಟಬೇಡಿ' ಎಂದು ಅರಚಿಕೊಳ್ಳುತ್ತಿರುವೆವು. ಈ ದೇಶದಲ್ಲಿ ಏನಾದರೂ ದಯೆ ಮತ್ತು ಮರುಕ ಎಂಬುದು ಉಳಿದಿರುವುದೇ? ನಾವೆಲ್ಲ "ಮುಟ್ಟಬೇಡಿ" ಎಂಬುವವರ ಗುಂಪಿಗೆ ಸೇರಿದವರು. ಇಂತಹ ಆಚಾರವನ್ನು ಕಿತ್ತು ಹಾಕಿ. ಈ 'ಮುಟ್ಟ ಬೇಡಿ' ಎಂಬ ಗೋಡೆಯನ್ನು ಒಡೆದುಹಾಕಿ.

ಜನಸಾಧಾರಣರನ್ನು ಮೇಲೆತ್ತುವುದು

ಹಿಂದೂಗಳಷ್ಟು ಕ್ರೂರವಾಗಿ ದೀನದಲಿತರನ್ನು ಪೀಡಿಸುವಷ್ಟು ಮತ್ತೊಂದು ಜನಾಂಗವಿಲ್ಲ. ಇದಕ್ಕೆಲ್ಲ ಧರ್ಮ ಕಾರಣವಲ್ಲ ಎಂಬುದನ್ನು ದೇವರು ನನಗೆ ತೋರಿರುವನು. ನಮ್ಮ ಹಿಂದೂ ಧರ್ಮದಲ್ಲಿರುವ ಕಪಟಿಗಳು, ವಂಚಕರೇ ಇದಕ್ಕೆಲ್ಲ ಕಾರಣ. ಜನರನ್ನು ಸುಲಿಯುವುದಕ್ಕೆ ಎಲ್ಲಾ ವಿಧವಾದ ಉಪಾಯಗಳನ್ನು ಅವರು ಕಂಡುಹಿಡಿದಿರುವರು. ಪರೆಯರನ್ನು ಮತ್ತು ಜಾಡಮಾಲಿಗಳನ್ನು ಯಾರು ಈ ದುಃಸ್ಥಿತಿಗೆ ತಂದವರು? ನಾವು ದೊಡ್ಡ ವೇದಾಂತವನ್ನು ಬೋಧಿಸುತ್ತಿದ್ದರೂ ಹೃದಯ ನಿರ್ದಯವಾಗಿದೆ. ಇದು ಗಾಯದ ಮೇಲೆ ಉಪ್ಪುನೀರು ಎರಚಿದಂತೆ. ಪ್ರಪಂಚದಲ್ಲೆಲ್ಲ ಶ್ರೇಷ್ಠತಮವಾದ ಧರ್ಮ ನಿಮ್ಮಲ್ಲಿದೆ. ಆದರೆ ನೀವು ಜನಸಾಧಾರಣರಿಗೆ ಕೆಲಸಕ್ಕೆ ಬಾರದ ವಸ್ತುವನ್ನು ಧರ್ಮದ ಹೆಸರಲ್ಲಿ ಕೊಡುತ್ತೀರಿ. ನಿಮ್ಮಲ್ಲಿ ಎಂದಿಗೂ ಬತ್ತದ ಅಮೃತ ಪ್ರವಾಹ ಹರಿಯುತ್ತಿದೆ. ಆದರೆ ನೀವು ಅವರಿಗೆ ಕೊಡುವುದು ಬಚ್ಚಲನೀರು.

ನಾಗೇಂದ್ರನಾಥ ಗುಪ್ತ (ಜೊತೆಗಾರ)

ರಾಮಕೃಷ್ಣ ಪರಮಹಂಸರ ಮೋಹಕ ವ್ಯಕ್ತಿತ್ವಕ್ಕೆ ಆಕರ್ಷಿತರಾದ ಯುವಕರಲ್ಲಿ ನರೇಂದ್ರನಾಥದತ್ತ ಒಬ್ಬ. ಇವನೆ ಮುಂದೆ ಸ್ವಾಮಿ ವಿವೇಕಾನಂದರಾದುದು. ಆಗ ಅವನೆಲ್ಲಿ ರಾಮಕೃಷ್ಣರೆಡೆಗೆ ಬರುತ್ತಿದ್ದ ಇತರ ಯುವಕರಿಂದ ಅವನನ್ನು ಪ್ರತ್ಯೇಕಿಸುವಂತಹ ವಿಶೇಷ ಗುಣಗಳೇನೂ ಕಂಡುಬರುತ್ತಿರಲಿಲ್ಲ. ಅವನೇನೂ ಪ್ರತಿಭಾನ್ವಿತ ವಿದ್ಯಾರ್ಥಿಯೂ ಆಗಿರಲಿಲ್ಲ. ಏಕೆಂದರೆ ಯಾವುದೊ ದೊಡ್ಡ ಹುದ್ದೆಯನ್ನು ಪಡೆಯಲು ಅವನು ಬಂದಿರಲಿಲ್ಲ.

-ಸ್ವಾಮಿ ವಿವೇಕಾನಂದರು ಮತ್ತು ನಾನು ಆಹ್ವಾನಿತರಾಗಿ ಒಬ್ಬ ಪಂಜಾಬಿಯ ಮನೆಗೆ ಊಟಕ್ಕೆ ಹೋಗಿದ್ದೆವು. ಅವರು ವಿವೇಕಾನಂದರಿಗೆ ಒಂದು ಒಳ್ಳೆಯ ಹುಕ್ಕಾವನ್ನು ಧೂಮಪಾನಕ್ಕೆ ಕೊಟ್ಟರು. ತೆಗೆದುಕೊಳ್ಳುವಾಗ 'ನೀನು ಜಾತೀಯ ಮನೋಭಾವದವನಾದರೆ ನಿನ್ನ ಹುಕ್ಕವನ್ನು ನನಗೆ ಕೊಡಬಾರದು. ಏಕೆಂದರೆ ನಾಳೆ ಒಬ್ಬ ಜಾಡಮಾಲಿ ನನಗೆ ತನ್ನ ಹುಕ್ಕವನ್ನು ಕೊಟ್ಟರೂ ಸಂತೋಷದಿಂದ ಅದನ್ನು ಸೇದುತ್ತೇನೆ. ನನಗೆ ಜಾತಿಯ ಬಂಧಗಳಿಲ್ಲ. ಸ್ವಾಮೀಜಿ ತನ್ನ ಹುಕ್ಕವನ್ನು ಸೇದಿದರೆ ಅದು ತನ್ನ ಭಾಗ್ಯವೆಂದೆಣಿಸುತ್ತೇನೆ' ಎಂದನು ಆ ಪಂಜಾಬಿ ಗೃಹಸ್ಥ. ಸ್ವಾಮೀಜಿಯವರ ಪಾಲಿಗೆ ಅಸ್ಪೃಶ್ಯತಾ ಸಮಸ್ಯೆ ಇರಲಿಲ್ಲ.

ಹರಿಪದ ಮಿತ್ರ

ಬೆಳಗಾಂ, ಮಂಗಳವಾರ, ಅಕ್ಟೋಬರ್ 18,1892: ಸಂಜೆಯ ವೇಳೆ ದೃಢಕಾಯದ ಪ್ರಸನ್ನ ಮುಖಮುದ್ರೆಯ ಯುವಕ ಸಂನ್ಯಾಸಿಯೊಬ್ಬರು ನನ್ನ ಮನೆಯ ಮುಂದೆ ಬಂದರು. ನನ್ನ ವಕೀಲ ಮಿತ್ರರೊಬ್ಬರು ಅವರ ಜತೆ ಇದ್ದರು. ಸ್ನೇಹಿತರು ಅವರ ಪರಿಚಯ ಮಾಡಿಸಿದರು. 'ಇವರು ಬಂಗಾಳಿ ಸಂನ್ಯಾಸಿಗಳು. ನಿಮ್ಮನ್ನು ನೋಡಲು ಬಂದಿರುವರು.' ನಾನವರನ್ನು ದಿಟ್ಟಿಸಿ ನೋಡಿದೆ-ಪ್ರಸನ್ನ ಮುಖ, ಮಿಂಚುವ ಕಣ್ಣುಗಳು, ನನ್ನನ್ನು ಆಕರ್ಷಿಸಿತು. ಆಗ ನನಗೆ ಏಕೆ ಹಾಗೆಂದು ತಿಳಿಯದಾಯಿತು. ಸ್ವಲ್ಪ ಹೊತ್ತಿನ ನಂತರ ನಾನು ಅವರಿಗೆ ನಮಸ್ಕರಿಸಿ ಹೇಳಿದೆ, 'ನೀವು ಧೂಮಪಾನ ಮಾಡುತ್ತಿರಾ? ನಾನು ಕಾಯಸ್ಥ ನನ್ನಲ್ಲಿರುವುದು ಒಂದೇ ಹುಕ್ಕ. ಅದರಲ್ಲಿ ಸೇದಲು ನಿಮಗೆ ಯಾವ ಅಭ್ಯಂತರವೂ ಇಲ್ಲದಿದ್ದರೆ ತಂದು ಕೊಡುತ್ತೇನೆ.' ಅವರೆಂದರು, 'ನಾನು ಹುಕ್ಕದಲ್ಲಾದರೂ ಸೇದುತ್ತೇನೆ, ಸಿಗರೇಟನ್ನಾದರೂ ಸೇದುತ್ತೇನೆ. ಮತ್ತೆ ನಿಮ್ಮ ಹುಕ್ಕಾದಲ್ಲಿ ಸೇದಲು ನನಗಾವ ಅಭ್ಯಂತರವೂ ಇಲ್ಲ.' ನಾನು ಹೊಗೆಸೊಪ್ಪು ತರಲು ಕಳಿಸಿದೆ. ಕೆಲವು ಐರೋಪ್ಯರಿದ್ದರು. ಮಾತಿನ ಸಂದರ್ಭದಲ್ಲಿ ನಾನು ಹೇಳಿದೆ, ಹುಕ್ಕಾದ ಮೂಲಕ ಹೊಗೆಸೊಪ್ಪು ಸೇದುವುದಕ್ಕೆ ಬಹಳ ಚೆನ್ನಾಗಿರುತ್ತೆ ಹಾಗೂ ಹೊಗೆಸೊಪ್ಪಿಗೆ ಬೇರೆ ಮಸಾಲೆಗಳನ್ನು ಬೆರೆಸಿದರೆ ಇನ್ನೂ ರುಚಿಯಾಗುವುದು ಎಂದು ನನ್ನಲ್ಲಿ ಆ ರೀತಿಯ ಹೊಗೆಸೊಪ್ಪು ಸ್ವಲ್ಪ ಇತ್ತು, ನಾನದನ್ನು ಅವರಿಗೆ ತೋರಿಸಿದೆ. ಅವರದನ್ನು ಮೂಸಿ "ಎಂಥ ಕೆಟ್ಟ ವಾಸನೆ ಇದು! ಇದನ್ನು ನೀವು ಪರಿಮಳ ಎನ್ನುತ್ತೀರಲ್ಲ!" ಎಂದರು. ಹೀಗೆ ಒಬ್ಬೊಬ್ಬರಿಗೆ ಒಂದೊಂದು ರುಚಿ. ದೇಶ, ಕಾಲ ಮತ್ತು ಸಾಮಾಜಿಕ ಪರಿಸ್ಥಿತಿಗಳಿಗನುಗುಣವಾಗಿ ಸೌಂದರ್ಯ, ರುಚಿ, ವಾಸನೆ ಇವೆಲ್ಲ ಬದಲಾಗುತ್ತವೆ.

ಜಿ.ಎಸ್.ಭಾಟೆ (ಪರಿಚಿತ)

ಸ್ವಾಮಿಗಳು ಬಂದ ಮೊದಲನೆಯ ದಿನವೇ ತಾಂಬೂಲ ಬೇಕೆಂದು ಕೇಳಿದರು. ಅನಂತರ ಅದೇ ದಿನವೊ ಅಥವಾ ಮರುದಿನವೊ ಹೊಗೆಸೊಪ್ಪನ್ನು ಕೇಳಿದರು. ಸಾಮಾನ್ಯವಾಗಿ ಸಂನ್ಯಾಸಿಗಳೆಂದ ಮೇಲೆ ಅವರು ಈ ರೀತಿಯ ಅಲ್ಪ ಆಶೆಗಳನ್ನು ಮೀರಿ ಹೋಗಿರಬೇಕು. ಆದರೆ ಇವರು ಈ ರೀತಿ ಕೇಳುತ್ತಿರುವುದು ನಮಗೆ ಎಂತಹ ದಿಗ್ಭ್ರಮೆಯನ್ನುಂಟುಮಾಡಿರಬಹುದೆಂಬುದನ್ನು ಊಹಿಸಬಹುದು.

ತಾವು ಸ್ವೀಕರಿಸುವುದು ಸಸ್ಯಾಹಾರವೋ ಅಥವಾ ಮಾಂಸಾಹಾರವೊ ಎಂದು ಕೇಳಿದಾಗ, ತಾವು ಸಾಮಾನ್ಯ ಸಂನ್ಯಾಸಿಗಳ ಗುಂಪಿಗೆ ಸೇರದೆ ಪರಮಹಂಸರಾದುದರಿಂದ ಆಹಾರದಲ್ಲಿ ಯಾವ ನಿಯಮವೂ ಇಲ್ಲ ಎಂದರು. ಪರಮಹಂಸರು ಕೊಟ್ಟದ್ದನ್ನು ತಿನ್ನಬೇಕು, ಏನೂ ಸಿಗದಿದ್ದರೆ ಉಪವಾಸವಿರಬೇಕು ಮತ್ತು ಪರಮಹಂಸರು ಯಾರಿಂದಲಾದರೂ, ಜಾತಿ ಧರ್ಮಗಳ ನಿರ್ಬಂಧವಿಲ್ಲದೆ, ಆಹಾರವನ್ನು ಸ್ವೀಕರಿಸಬಹುದು. ಹಿಂದೂಗಳಲ್ಲದವರಿಂದಲೂ ಆಹಾರ ಸ್ವೀಕರಿಸುವಿರಾ ಎಂದು ಕೇಳಿದಾಗ ತಾವು ಅನೇಕ ಬಾರಿ ಮುಸ್ಲಿಮರಿಂದ ಊಟ ಸ್ವೀಕರಿಸಿರುವುದಾಗಿ ಹೇಳಿದರು.

ದಕ್ಷಿಣ ಭಾರತದ ಬ್ರಾಹ್ಮಣರು ಮೀನು-ಮಾಂಸ ತಿನ್ನುವುದಿಲ್ಲ; ಆದ್ದರಿಂದ ತಾವು ಮೀನಿನ ಆಹಾರ ತಿನ್ನದೆ ಬಹಳ ಕಾಲವಾಯಿತೆಂದೂ ಹೇಳಿದರು. ನಾನು ಪಕ್ಷಿ-ಮೀನು-ಮಾಂಸಾಹಾರಕ್ಕೆ ನನ್ನ ತಿರಸ್ಕಾರವನ್ನು ವ್ಯಕ್ತಪಡಿಸಿದೆ. ಇದಕ್ಕುತ್ತರವಾಗಿ ಸ್ವಾಮೀಜಿ ಹೇಳಿದರು: ಪುರಾತನ ಕಾಲದಲ್ಲಿ ಬ್ರಾಹ್ಮಣರು ಮಾಂಸವನ್ನು -ದನದ ಮಾಂಸವನ್ನೂ ಕೂಡ-ತಿನ್ನುತ್ತಿದ್ದರು; ಯಜ್ಞಕ್ಕಾಗಿ ಮತ್ತು ಅತಿಥಿಗಳಿಗೆ ಮಧುಪರ್ಕ ಕೊಡಲು ಹಸುಗಳನ್ನೂ ಮತ್ತು ಇತರ ಪ್ರಾಣಿಗಳನ್ನೂ ಕೊಲ್ಲುತ್ತಿದ್ದರು. ಬೌದ್ಧಧರ್ಮ ಹರಡಿದ ಮೇಲೆ ಈ ಮಾಂಸಾಹಾರಕ್ಕೆ ತಡೆಯುಂಟಾಯಿತು. ಮಾಂಸಾಹಾರ ಕಡಿಮೆಯಾದ ಮೇಲೆ ಕ್ರಮೇಣ ರಾಷ್ಟ್ರಶಕ್ತಿ ಕುಂದಿತು ಹಾಗೂ ಕೊನೆಗೆ ದೇಶ ತನ್ನ ಸ್ವಾತಂತ್ರ್ಯವನ್ನೇ ಕಳೆದುಕೊಂಡಿತು. ಇತ್ತೀಚೆಗೆ ಬಂಗಾಳಿಗಳು ಮಾಂಸಾಹಾರವನ್ನು ಯಥೇಚ್ಛ ಬಳಸಲು ಶುರುಮಾಡಿರುವರೆಂದು ಅವರು ತಿಳಿಸಿದರು. ಒಬ್ಬ ಬ್ರಾಹ್ಮಣನನ್ನು ಕರೆಸುತ್ತಾರೆ. ಅವನು ಬಂದು ಮಂತ್ರವನ್ನು ಉಚ್ಚರಿಸುತ್ತ ಕುರಿಮಂದೆಯ ಮೇಲೆ ನೀರನ್ನು ಚುಮುಕಿಸುತ್ತಾನೆ, ಆನಂತರ ನಿರ್ದಾಕ್ಷಿಣ್ಯವಾಗಿ ಆ ಕುರಿಗಳ ಇಹಲೋಕ ವ್ಯಾಪಾರವನ್ನು ಮುಗಿಸುತ್ತಾರೆ-ಎಂದೂ ಅವರು ತಿಳಿಸಿದರು. ನನ್ನೊಡನೆ ಸಂಭಾಷಣೆಯಲ್ಲಿ ವ್ಯಕ್ತವಾದಂತೆ ಸ್ವಾಮೀಜಿಯವರ ಅಭಿಮತವಿದು: ಭಾರತ ಜಗತ್ತಿನ ಇತರ ರಾಷ್ಟ್ರಗಳೊಡನೆ ಶಕ್ತಿ ಸಾಮರ್ಥ್ಯದಲ್ಲಿ ಸರಿಸಮವಾಗಿ ನಿಲ್ಲಬೇಕಾದರೆ ಹಿಂದೂಗಳು ಮಾಂಸಾಹಾರವನ್ನು ಮುಚ್ಚುಮರೆಯಿಲ್ಲದೆ ಸ್ವೀಕರಿಸಬೇಕು.

ಈ ವಿಷಯದಲ್ಲಿ ಸ್ವಾಮೀಜಿಯವರ ಅಭಿಪ್ರಾಯ ನನಗೆ ಚೆನ್ನಾಗಿ ತಿಳಿದಿದ್ದರಿಂದ ಮುಂದೆ ಅವರು ಅಮೆರಿಕಾದಲ್ಲಿದ್ದಾಗ ಮಾಂಸಾಹಾರ ಸ್ವೀಕರಿಸುತ್ತಿದ್ದರೆಂದು ತಿಳಿದಾಗ ನನಗೇನೂ ಆಶ್ಚರ್ಯವಾಗಲಿಲ್ಲ.

ಮರುದಿನ ಶನಿವಾರ ಹದಿಮೂರನೆಯ ದಿನಾಂಕ ಪಾಚಿಯಪ್ಪ ಹಾಲಿನಲ್ಲಿ ಸ್ವಾಮೀಜಿ 'ಭಾರತೀಯ ಜೀವನದಲ್ಲಿ ವೇದಾಂತ' ಎಂಬ ವಿಷಯದ ಮೇಲೆ ಮಾತನಾಡಿದರು. ಹಾಲ್ ಸಂಪೂರ್ಣ ತುಂಬಿಹೋಗಿತ್ತು. ನಾನು ವೇದಿಕೆಯ ಮೇಲಿದ್ದೆ. ನನ್ನ ಪಕ್ಕದಲ್ಲೇ ಮಿ|| ಜಿ. ಸುಬ್ರಹ್ಮಣ್ಯ ಅಯ್ಯರ್ ('ದಿ ಹಿಂದೂ' ಪತ್ರಿಕೆಯ ಸಂಪಾದಕ) ಕುಳಿತಿದ್ದರು. ತಮ್ಮ ಉಪವಾಸದ ನಡುವೆ ಸ್ವಾಮೀಜಿ ತಮ್ಮ ಮುಂದಿದ್ದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹೀಗೆಂದರು: 'ಸುಮ್ಮನೆ ಗೀತೆ ಗೀತೆ ಗೀತೆ ಎಂದು ಕೂಗಬೇಡಿ. ನಿಮ್ಮಂಥ ದುರ್ಬಲರಿಗೆ ಗೀತೆಯ ಉಪದೇಶ ಸ್ವಲ್ಪವೂ ಅರ್ಥವಾಗುವುದಿಲ್ಲ. ಮೊದಲು ಹೋಗಿ ಫುಟ್‌ಬಾಲ್ ಆಡಿ, ವ್ಯಾಯಾಮ ಮಾಡಿ. ನಿಮ್ಮ ಮಾಂಸ ಬೆಳೆಯಲಿ: ಆಗ ನಿಮಗೆ ಗೀತೆಯ ಉಪದೇಶ ಅರ್ಥವಾಗುವುದು.'



ಎ. ಶ್ರೀನಿವಾಸ ಪೈ

ಆಗ (1893) ಅವರು ಭಟ್ಟಾಚಾರ್ಯರ ಮನೆಯಲ್ಲಿ ತಂಗಿದ್ದರು. ನಾನು ನನ್ನ ಸಹ ವಿದ್ಯಾರ್ಥಿಗಳೊಡನೆ, ಆ ಮನೆಗೆ ಸ್ವಾಮೀಜಿಯವರ ಮಾತು ಕೇಳಲು ಸಂಜೆ ಹೋಗುತ್ತಿದ್ದೆ. ನಾವು ಅವರ ಮುಂದೆ ಸಾಂಪ್ರದಾಯಿಕ ರೀತಿಯಲ್ಲಿ ನೆಲದ ಮೇಲೆ ಕುಳಿತುಕೊಳ್ಳುತ್ತಿದ್ದೆವು. ವಿವೇಕಾನಂದರು ಮಾತನಾಡುವಾಗ ಧೂಮಪಾನ ಮಾಡುತ್ತಿದ್ದರು. ಅವರ ಮಾತಿನಲ್ಲಿ ಅನೇಕ ವಿಷಯಗಳು ಬರುತ್ತಿದ್ದವು. ಅವರ ಮಾತನ್ನು ಕೇಳುವುದೊಂದು ಮಹದಾನಂದ.

ಲೋಕಾಭಿರಾಮವಾಗಿ ಬಹಳ ಮಾತನಾಡಿದರು. ತಮ್ಮ ಕಾಲೇಜು ದಿನಗಳ ಅನುಭವಗಳನ್ನು ಹೇಳಿದರು. ತಾವು ಮತ್ತು ತಮ್ಮ ಸ್ನೇಹಿತರು ಪ್ರೊಫೆಸರ್‌ಗಳಿಗೆ ಹೇಗೆ ಕಿರುಕುಳ ಕೊಡುತ್ತಿದ್ದರೆಂಬುದನ್ನೂ, ಒಮ್ಮೆ ಕೆಲಸಕ್ಕೆ ಮುಷ್ಕರ ಹೂಡಿ ಎಲ್ಲಿಯೋ ಹೋಗಿ ಸಿಗರೇಟ್ ಸೇದಿದ್ದನ್ನೂ ಹೇಳಿದರು.

ಕಾರ್ನೀಲಿಯಾ ಕಾಂಗರ್ (ಅಮೆರಿಕನ್ ಮಹಿಳೆ)

ಅಮೆರಿಕಾದ ಆಹಾರ ಅವರಿಗೆ ತುಂಬಾ ಸಪ್ಪೆಯೆನಿಸಬಹುದೇನೋ ಎಂದು ನನ್ನ ಅಜ್ಜಿ ಭಾವಿಸಿದ್ದಳು. ಅವರು ಬಂದಕೂಡಲೆ ಹೇಳಿದರು ಆತಿಥೇಯರ ಆಹಾರ ಪದ್ಧತಿಗಳಿಗೆ ಹೊಂದಿಕೊಂಡಿರಬೇಕೆಂದು ನಮಗೆ ನಿರ್ದೇಶನವಿದೆಯೆಂದು. ಆದ್ದರಿಂದ ನಮ್ಮಂತೆಯೇ ಊಟ ಮಾಡಿದರು. ಅಜ್ಜಿ ಒಂದು ಬಗೆಯ ಖಾರದ ಗೊಜ್ಜನ್ನು ಸೇರಿಸಿ ಪಚಡಿ ಮಾಡುತ್ತಿದ್ದಳು. ಒಂದು ದಿನ ಆ ಗೊಜ್ಜಿನ ಸೀಸೆಯನ್ನು ಸ್ವಾಮೀಜಿಯವರಿಗೆ ಕೊಟ್ಟು 'ಸ್ವಾಮೀ, ನೀವು ಮಾಂಸದೊಡನೆ ಒಂದೆರಡು ತೊಟ್ಟು ಇದನ್ನು ಬೆರೆಸಿಕೊಳ್ಳಬಹುದು' ಎಂದಳು. ಅವರು ಧಾರಾಳವಾಗಿ ಅದನ್ನು ಸುರಿದುಕೊಳ್ಳುವುದನ್ನು ನೋಡಿ ನಾವು ಗಾಬರಿಯಿಂದ 'ಅಯ್ಯೋ! ಆ ರೀತಿ ಹಾಕಿಕೊಳ್ಳಬೇಡಿ, ಅದು ಭಯಂಕರ ಖಾರ' ಎಂದೆವು. ಅವರು ನಕ್ಕು ಆನಂದದಿಂದ ತಿನ್ನತೊಡಗಿದರು. ಅನಂತರ ಒಂದು ಸೀಶೆ ಗೊಜ್ಜು ಊಟದ ಸಮಯದಲ್ಲಿ ಯಾವಾಗಲು ಅವರ ಮುಂದಿರುತ್ತಿತ್ತು.

ಸಿಸ್ಟರ್ ಕ್ರಿಸ್ಟೈನ್ (ಅಮೆರಿಕನ್)

ನಾವು ಸಾಂಪ್ರದಾಯಿಕರು, ನಡೆನುಡಿಗಳಲ್ಲಿ ಹೆಚ್ಚು ನಿಯಮಬದ್ಧರು. ಪುರುಷರು ಮಹಿಳೆಯರ ಮುಂದೆ ಹೆಚ್ಚು ಧೂಮಪಾನ ಮಾಡದೆ ಇರುತ್ತಿದ್ದ ಸಮಯದಲ್ಲಿ ಸ್ವಾಮೀಜಿ ಬೇಕೆಂತಲೇ ಸಿಗರೇಟಿನ ಹೊಗೆಯನ್ನು ಮಹಿಳೆಯ ಮುಖಕ್ಕೆ ಉಗುಳುತ್ತಿದ್ದರು. ಇನ್ಯಾರಾದರೂ ಆಗಿದ್ದರೆ ನಾನು ಹೊರಟೇ ಹೋಗುತ್ತಿದ್ದೆ, ಮತ್ತೆ ತಿರುಗಿಯೂ ನೋಡುತ್ತಿರಲಿಲ್ಲ. ಆದರೂ ನನಗೆ ಕ್ಷಣಕಾಲ ಜಿಗುಪ್ಸೆಯುಂಟಾಯಿತು.

ಟಿ.ಜೆ. ದೇಸಾಯಿ

ಅದೇ ವರ್ಷದ ಕೊನೆಯಲ್ಲಿ ನಾನು ಓವೆನ್ಸ್‌ರೊಡನೆ ವಾಸಿಸುತ್ತಿದ್ದಾಗ ಸ್ವಾಮಿ ವಿವೇಕಾನಂದರು ಆಹ್ವಾನಿತರಾಗಿ ನಮ್ಮ ಮನೆಯ ಊಟಕ್ಕೆ ಬಂದಿದ್ದರು. ಅವರೊಡನೆ ಇನ್ನೋರ್ವ ಸ್ವಾಮಿಗಳೂ ಇದ್ದರು. ಅವರು ಮಾಂಸಾಹಾರ ಸೇವನೆಗೆ ಯಾವ ಆಕ್ಷೇಪಣೆಯನ್ನೂ ವ್ಯಕ್ತಪಡಿಸಲಿಲ್ಲ. ಆದರೂ ಅಂದು ಸಸ್ಯಾಹಾರದ ಊಟವೇ. ಅವರಿಗೆ ಧೂಮಪಾನದ ಅಭ್ಯಾಸವಿತ್ತು, ಓವೆನ್ಸ್ ಸ್ವಾಮೀಜಿಯವರ ಭೇಟಿಯಿಂದ ಸಂತೃಪ್ತರಾದರು. ಅವರ ವ್ಯಕ್ತಿತ್ವ ಮತ್ತು ವಾಕ್ ಸಾಮರ್ಥ್ಯಕ್ಕೆ ಅವರು ತಲೆದೂಗಿದರು.

ಸ್ವಾಮಿ ಶುದ್ಧಾನಂದ

ಅವರು ಇದ್ದಕ್ಕಿದ್ದಂತೆ, ಏಕೊ ಏನೊ, 'ನೀನು ಧೂಮಪಾನ ಮಾಡುತ್ತೀಯಾ?' ಎಂದು ಕೇಳಿದರು. ನಾನು ಇಲ್ಲವೆಂದಾಗ ಅವರೆಂದರು: 'ಬಹಳ ಒಳ್ಳೆಯದು. ಧೂಮಪಾನ ಒಳ್ಳೆಯದಲ್ಲ, ನಾನೂ ಅದನ್ನು ಬಿಟ್ಟುಬಿಡಲು ಪ್ರಯತ್ನಿಸುತ್ತಿದ್ದೇನೆ.'

ಸ್ವಾಮಿ ಶುದ್ಧಾನಂದ (ಒಂದು ಚರ್ಚಾ ಸನ್ನಿವೇಶದಲ್ಲಿ)

ಚಂಡಿಬಾಬು: 'ಸ್ವಾಮೀಜಿ ಕೌಪೀನಧಾರಣೆ ಕಾಮವನ್ನು ಜಯಿಸಲು ಯಾವ ರೀತಿಯಲ್ಲಾದರೂ ಸಹಾಯಕವಾಗುವುದೆ?'

ಸ್ವಾಮೀಜಿ:''ಸ್ವಲ್ಪ ಸಹಾಯವಾಗಬಹುದಷ್ಟೇ. ಆದರೆ ಕಾಮವು ಉದ್ರೇಕಗೊಂಡಾಗ ಅದನ್ನು ಕೌಪೀನದಿಂದ ನಿಗ್ರಹಿಸಲು ಸಾಧ್ಯವೇನಪ್ಪ? ಮನಸ್ಸನ್ನು ಸಂಪೂರ್ಣ ಭಗವಂತನಿಗೆ ನೀಡದ ಹೊರತು ಈ ಬಾಹ್ಯ ಉಪಾಯಗಳಿಂದ ಕಾಮವನ್ನು ಸಂಪೂರ್ಣ ಅಳಿಸಲಾಗುವುದಿಲ್ಲ. ಆದರೆ ಮನಸ್ಸು ಇನ್ನೂ ಆ ಮಟ್ಟವನ್ನು ಮುಟ್ಟದಿರುವಾಗ ಅದು ಬಾಹ್ಯ ಉಪಾಯಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುವುದು. ನನ್ನಲ್ಲಿ ಒಮ್ಮೆ ಕಾಮ ಜಾಗ್ರತವಾಯಿತು. ನನ್ನ ಬಗ್ಗೆ ನನಗೆ ಅಷ್ಟೊಂದು ಅಸಹ್ಯವಾಗಿ, ಉರಿಯುವ ಕೆಂಡದ ಮೇಲೆ ಹೋಗಿ ಕುಳಿತುಬಿಟ್ಟೆ. ಆ ಗಾಯ ವಾಸಿಯಾಗಲು ಬಹಳ ಕಾಲ ಹಿಡಿಯಿತು.'

ಇಡಾ ಅನ್ಸೆಲ್ (ಅಮೆರಿಕನ್)

ಊಟದ ಮನೆಯಲ್ಲಿ ಲೋಕಾಭಿರಾಮವಾಗಿ ಅವರೊಡನೆ ಮಾತನಾಡಬಹುದಿತ್ತು, ನಮ್ಮ ಅತ್ಯಂತ ಗಡಿಬಿಡಿಯ ಜೀವನವನ್ನು ಅವರು ಹಾಸ್ಯ ಮಾಡುತ್ತಿದ್ದರು. ಅವರಲ್ಲಿ ಆತುರತೆಯೇ ಇರಲಿಲ್ಲ, ಆ ಶಾಂತ ರಾಜಗಾಂಭೀರ್ಯ ಅವರನ್ನೆಂದೂ ಬಿಟ್ಟಿರುತ್ತಿರಲಿಲ್ಲ. ಟ್ಯಾಕ್ಸಿಗಾಗಿ ಓಡುವವರನ್ನು ನೋಡಿ ಅವರು ನಕ್ಕು 'ಇನ್ನೊಂದು ಟ್ಯಾಕ್ಸಿ ಸಿಗುವುದಿಲ್ಲವೇ?' ಎಂದು ಕೇಳುತ್ತಿದ್ದರು. ತಮ್ಮ ಕ್ಲಾಸು ಅಥವಾ ಉಪನ್ಯಾಸ ಪ್ರಾರಂಭಿಸುವುದು ತಡವಾದರೆ ಅವರಿಗೆ ಏನೂ ಅನಿಸುತ್ತಿರಲಿಲ್ಲ, ಹಾಗೆಯೇ ನಿರ್ದಿಷ್ಟ ಸಮಯಕ್ಕೆ ಮುಗಿಸುತ್ತಿರಲಿಲ್ಲ, ಕೆಲವೊಮ್ಮೆ ನಿರ್ದಿಷ್ಟ ವೇಳೆಯ ಎರಡರಷ್ಟು ಸಮಯ ತೆಗೆದುಕೊಳ್ಳುತ್ತಿದ್ದರು. ಬೆಳಿಗ್ಗೆ ಕ್ಲಾಸಿನ ಮೊದಲಿನ ಈ ಭೇಟಿ ಅನೌಪಚಾರಿಕವಾಗಿರುತ್ತಿತ್ತು, ಸ್ವಾಮೀಜಿ ಬೂದು ಬಣ್ಣದ ಉಡುಪು ಧರಿಸಿ ಆರಾಮ ಕುರ್ಚಿಯಲ್ಲಿ ಧೂಮಪಾನ ಮಾಡುತ್ತಾ ಕುಳಿತಿರುತ್ತಿದ್ದರು: ಕೇಳಿದ ಪ್ರಶ್ನೆಗಳಿಗೆಲ್ಲಾ ಉತ್ತರಿಸುತ್ತಿದ್ದರು, ಮಧ್ಯೆ ಮಧ್ಯೆ ಹಾಸ್ಯದ ಚಟಾಕಿ ಹಾರಿಸುತ್ತಿದ್ದರು. ಕ್ಲಾಸಿನ ಸಮಯಕ್ಕೆ ಕಾವಿ ಬಟ್ಟೆ ಧರಿಸಿ ಬರುತ್ತಿದ್ದರು. ಧೂಮಪಾನವಿಲ್ಲ, ಆದರೆ ಹಾಸ್ಯ ಮುಂದುವರಿದಿರುತ್ತಿತ್ತು.

ಕ್ಯಾಂಪ್ ಇರ್ವಿಂಗ್‌ನಲ್ಲಿ ಒಮ್ಮೆ ಮಾತಿನ ಸಂದರ್ಭದಲ್ಲಿ ಮಿಸ್ ಬೆಲ್ ಹೇಳಿದಳು, ಈ ಪ್ರಪಂಚ ಒಂದು ಪಾಠಶಾಲೆ, ಇಲ್ಲಿಗೆ ನಾವು ಕಲಿಯಲು ಬರುತ್ತೇವೆ ಎಂದು. 'ಇದು ಪಾಠಶಾಲೆಯೆಂದು ಯಾರು ಹೇಳಿದರು?' ಎಂದು ಸ್ವಾಮೀಜಿ ಕೇಳಿದರು. ಮಿಸ್ ಬೆಲ್ ಸುಮ್ಮನಿದ್ದಳು. ಸ್ವಾಮೀಜಿ ಮುಂದುವರಿಸಿದರು: 'ಈ ಜಗತ್ತು ಒಂದು ಸರ್ಕಸ್ಸು, ನಾವೆಲ್ಲ ಅದರಲ್ಲಿ ಕೋಡಂಗಿಗಳು, ಎಡವಲು ಬಂದಿದ್ದೇವೆ.' 'ನಾವೇಕೆ ಎಡವುತ್ತೇವೆ?' ಎಂದು ಕೇಳಿದಳು ಮಿಸ್ ಬೆಲ್. 'ಏಕೆಂದರೆ ನಮಗದೇ ಇಷ್ಟ. ಎಡವಿ ಎಡವಿ ಸುಸ್ತಾದಾಗ ಸುಮ್ಮನಾಗುತ್ತೇವೆ' ಎಂದರು ಸ್ವಾಮೀಜಿ.

ರಿವೀಸ್ ಚಾಕಿನ್ಸ್ (ಅಮೆರಿಕನ್)

ಹಡಗು ಮುಂಬಯಿ ತಲುಪುವುದಕ್ಕೆ ಮುಂಚಿನ ಕೊನೆಯ ರಾತ್ರಿ ನಾವಿಬ್ಬರೂ ಡೆಕ್ ಮೇಲೆ ನಿಂತಿದ್ದೆವು. ಸ್ವಾಮೀಜಿ ಧೂಮಪಾನ ಮಾಡುತ್ತಿದ್ದರು. ನಾಳಿನ ಅಪರಿಚಿತ ಜೀವನ ನನ್ನನ್ನು ಮೌನಗೊಳಿಸಿತ್ತು.

ನಾನು ಹೇಳಿದೆ: 'ಸ್ವಾಮೀಜಿ, ಇದನ್ನು ನಿಮಗೆ ನೀವೇ ಹೇಳಿಕೊಳ್ಳಬೇಕು. ನನಗಲ್ಲ ನೀವು ಹೇಳುವ ಆ ವಿಶ್ವಾತ್ಮ ನಿರ್ಗುಣ, ಆದ್ದರಿಂದ ತಿಳಿಯಲು ಅಸಾಧ್ಯ - ನಾವೆಲ್ಲ ಅದರಲ್ಲೇ ಅಡಕವಾಗಿದ್ದೇವೆ ನಿಜ. ಆದರೆ ನಾನು ತಿಳಿದಿರುವ, ನಾನು ಪ್ರೀತಿಸುವ ದೇವರು ಸಗುಣ, ಮತ್ತು ಅತ್ಯಂತ ಸತ್ಯ. ಅವನಲ್ಲಿ ಎಲ್ಲ ಪೂರ್ಣತೆಯೂ ಇದೆ.'

ವಿವೇಕಾನಂದರು ಧೂಮಪಾನ ಮಾಡುತ್ತಾ ಇದ್ದಂತೆ ಅವರ ಮನಸ್ಸು ಎಲ್ಲೋ ಬಹು ದೂರ ಹೋಯಿತು. ಅವರು ಈ ಪ್ರಪಂಚದಲ್ಲಿದ್ದಂತೆ ಕಾಣುತ್ತಿರಲಿಲ್ಲ.


ಮಗಳ ದುರಂತಕ್ಕೆ ಯಾರಾದ್ರೆ ನಂಗೇನು?

'ಯಾರಾದ್ರ ನಂಗೇನು' ಎಂಬ ಚಿತ್ರದ ಜಾಹೀರಾತಿನ ವಿರುದ್ಧ ಮೊನ್ನೆಯಷ್ಟೇ ಮಹಿಳಾ ಸಂಘಟನೆಯೊಂದು ಬೀದಿಗಿಳಿದು ಪ್ರತಿಭಟಿಸಿತ್ತಲ್ಲವೇ?



ಹಾಗೆ ಮಹಿಳಾಮಣಿಗಳ ಕೆಂಗಣ್ಣಿಗೆ ತುತ್ತಾಗಿದ್ದು ಬಾಬು ಮಗಳು ರಿಷಿಕಾ ಸಿಂಗ್ ನೀಡಿದ ಅರೆಬೆತ್ತಲೆ ಪೋಜು. ಪ್ರಚಾರಕ್ಕೋ, ದುಡುಕಿಗೋ ಬಿದ್ದು ಮಹಿಳಾ ಮಣಿಗಳು 'ಯಾರಾದ್ರ ನಂಗೇನು' ವಿರುದ್ಧ ಬೀದಿಗಿಳಿದರೆಂದೇ ಇಟ್ಟುಕೊಂಡರೂ ಬಾಬು ಹಿನ್ನೆಲೆ ಮತ್ತು ವ್ಯಕ್ತಿತ್ವಕ್ಕದು ತಕ್ಕುದಾಗಿರಲಿಲ್ಲ. ಅಷ್ಟಕ್ಕೂ ರಿಷಿಕಾ ಸಿಂಗ್ ಹೀರೋಯಿನ್ನಾಗಿರುವುದು ಕನ್ನಡದ ಯಾವ ಸ್ಟಾರ್ ಎದುರೂ ಅಲ್ಲ. ನಟನೇ ಅಲ್ಲದ, ಸಿನಿಮಾ ಗೊತ್ತಿಲ್ಲದ, ಹೀರೋ ಅನ್ನಿಸಿಕೊಳ್ಳುವ ಕನಿಷ್ಠ ಯೋಗ್ಯತೆಯೂ ಇಲ್ಲದ ಹೈದರಾಬಾದಿನ ಬಷೀದ್ ಎಂಬ ಶೋಕಿಲಾಲನ ಜೊತೆ ರಿಷಿಕಾ ನಟಿಸುತ್ತಾಳೆಂಬುದೇ ಅಸಹ್ಯ!

ರಿಷಿಕಾಳ ಹುಟ್ಟು ಹೆಸರು ರೋಹಿಣಿ. ಪ್ರತಿಷ್ಠಿತ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಓದಿದ ಹುಡುಗಿ. ತಂದೆ ಪ್ರತಿಭಾವಂತ ನಿರ್ದೇಶಕ. ಹೀಗಿದ್ದೂ ರೋಹಿಣಿಯನ್ನು ಹೀರೋಯಿನ್ ಮಾಡಬೇಕೆಂದಿದ್ದರೆ ಸುದೀಪ್, ದರ್ಶನ್, ವಿಜಯ್, ಪ್ರೇಮ್... ಯಾರ ಜೊತೆಗಾದರೂ ಹಾಕಿ ಸಿನಿಮಾ ಮಾಡಬಹುದಿತ್ತು. ಬಾಬು ಕಾಲ್‌ಶೀಟ್ ಕೇಳಿದರೆ ಯಾವ ಹೀರೋ ಕೂಡಾ ನಿರಾಕರಿಸುತ್ತಿರಲಿಲ್ಲ. ಹೈರಾಣಾದ ಬಾಬುಗೆ ತನ್ನ ಸಾಲ, ಕೈಬಿಟ್ಟ ಮನೆ, ಜಂಜಾಟ ಮತ್ತು ಅಪೂರ್ಣವಾಗುಳಿದ ಚಿತ್ರಗಳ ತಲೆಬಿಸಿಯೇ ವಿಪರೀತವಾಗಿ ಹೋಯಿತು. ಸರಿದಾರಿಯಲ್ಲಿ ಮಗಳನ್ನು ಮುನ್ನಡೆಸುವುದಕ್ಕೆ ಟೈಮಾದರೂ ಎಲ್ಲಿತ್ತು?



ಇಂಥ ಅತಂತ್ರ ಸ್ಥಿತಿಯಲ್ಲಿ ರಿಷಿಕಾಳಿಗೆ ಗಂಟು ಬಿದ್ದವನು ಹೈದರಾವಾದ್‌ನ ಬಷೀದ್. ಈಗಾಗಲೇ ಮದುವೆಯಾಗಿದೆ. ಮೊದಲ ಪತ್ನಿಗೆ ಕೈಕೊಟ್ಟು ಇನ್ನೊಬ್ಬ ಯುವತಿಯನ್ನು ವಂಚಿಸಿದ ಪೊಲೀಸ್ ಕೇಸೂ ಇದೆ. ಆದರೆ ರೊಕ್ಕಸ್ಥ ಜೊತೆಗೆ ಕ್ರಿಮಿನಲ್ ಹಿನ್ನೆಲೆ ಬೇರೆ. ಈತನ ಅಣ್ಣ ಗುಂಟೂರಿನಲ್ಲಿ ತೆಲುಗು ದೇಶಂ ಪಕ್ಷದಿಂದ ಗೆದ್ದು ಎಮ್ಮೆಲ್ಲೆಯಾಗಿದ್ದನಂತೆ. ಕೆಲವರ ಪ್ರಕಾರ ಆಂಧ್ರದ ಗುಂಟೂರು ಪೊಲೀಸ್ ಠಾಣೆಯಲ್ಲಿ ಈತನ ವಿರುದ್ಧ ರೌಡಿಷೀಟ್ ಕೂಡಾ ಇದೆ. ಅಣ್ಣಂದಿರ ನೂರಾರು ಕೋಟಿಯ ರಿಯಲ್ ಎಸ್ಟೇಟ್ ದಂಧೆ ನೋಡಿಕೊಳ್ಳಲೆಂದೇ ಆಗಾಗ ಬೆಂಗಳೂರಿಗೆ ಬರುತ್ತಿದ್ದ ಬಷೀದ್ ಭಯಂಕರ ಶೋಕಿಲಾಲ. ಸಿನಿಮಾ ನಟಿಯರೆಂದರೆ ಜೊಲ್ಲು ಸುರಿಸುತ್ತಾನೆ. ಶೋಕಿಗೋ, ಚಪಲಕ್ಕೋ ಗೊತ್ತಿಲ್ಲ, ಮೊದಲು 'ಬೆಂಕಿಬಿರುಗಾಳಿ' ಎಂಬ ಚಿತ್ರ ನಿರ್ಮಿಸುತ್ತೇನೆಂದು ಅದಕ್ಕೆ ರಿಷಿಕಾ ಜೊತೆ ಸೆಕ್ಸಿಕ್ವೀನ್ ನವಿಂತಾ, ಮತ್ತೊಬ್ಬ ಹೀರೋಯಿನ್ ಕಿರಣ್ ರಾಥೋಡ್‌ರನ್ನು ಹಾಕಿಕೊಂಡ.

ಇಂಥ ಹೀರೋಯಿನ್‌ಗಳೆದುರು ತಾನೇ ಹೀರೋ ಆಗುತ್ತೇನೆಂದು ಜಾಹೀರಾತು ಕೊಟ್ಟ. ನೋಡಲು ಚಿಂಪಾಂಜಿಯಂತೆ ಕಾಣುವ, ನಾಲ್ಕಡಿ ಕೂಡಾ ಎತ್ತರವಿಲ್ಲದ, ಇಂಗ್ಲಿಷ್ ಹಾಳಾಗಲಿ, ಕನ್ನಡ ಕೂಡಾ ಬಾರದ ನರಪೇತಲ ಬಷೀದ್‌ಗೆ ರಿಷಿಕಾ ಹೀರೋಯಿನ್ ಆಗುತ್ತಾಳೆಂದರೆ ಅದು ಬಾಬು ದುರಂತವಲ್ಲದೇ ಮತ್ತೇನಲ್ಲ. ತಮಾಷೆಯೆಂದರೆ 'ಬೆಂಕಿಬಿರುಗಾಳಿ' ಮುಗಿಯುವ ಮೊದಲೇ 'ಯಾರಾದ್ರೆ ನಂಗೇನು' ಎಂಬ ಎರಡನೇ ಚಿತ್ರವನ್ನು ಬಷೀದ್ ಘೋಷಿಸಿದ. ಇದಕ್ಕೂ ರಿಷಿಕಾ ಹೀರೋಯಿನ್. ಆಕೆಯನ್ನು ಅರೆಬೆತ್ತಲೆ ಮಾಡಿ ತಾನು ತಬ್ಬಿಕೊಂಡ ಫೋಟೋಗಳನ್ನೇ ಪತ್ರಿಕೆಗಳಿಗೆ ಜಾಹೀರಾತು ಕೊಟ್ಟಿದ್ದು ಇಡೀ ಗಾಂಧಿನಗರದಲ್ಲಿ ದೊಡ್ಡ ಜೋಕಾಯಿತು. ಇನ್ನೂ ವಿಚಿತ್ರವೆಂದರೆ 'ಯಾರಾದ್ರೆ ನಂಗೇನು' ಚಿತ್ರಕ್ಕೆ ರಿಷಿಕಾ ಜೊತೆ ನಿಶಾ ಕೊಠಾರಿ, ಆಯೇಷಾ ಮತ್ತು ಹಿಂದಿಯ ಮಲ್ಲಿಕಾ ಶೆರಾವತ್ ಕೂಡ ಕಾಲ್‌ಶೀಟ್ ಕೊಟ್ಟಿದ್ದಾರೆಂದು ಬಷೀದ್ ಜಾಹೀರಾತು ಕೊಟ್ಟ.


ಈ ಚಿತ್ರಗಳ ದುರ್ಗತಿ ಎಂಥಾದ್ದೆಂದರೆ ಕತೆ, ಚಿತ್ರಕತೆ, ಸಂಭಾಷಣೆ, ನಿರ್ದೇಶಕ, ನಿರ್ಮಾಪಕ ಎಲ್ಲವೂ ಬಷೀದನದೇ!

ಸದ್ಯ ಪ್ರೇಕ್ಷಕ ಕೂಡಾ ತಾನೇ ಎಂದು ಹಾಕಿಕೊಳ್ಳಲಿಲ್ಲವಲ್ಲ ಎಂದು ಗಾಂಧಿನಗರ ಹಣೆಚಚ್ಚಿಕೊಂಡಿತು. ರಿಷಿಕಾಳಿಗಾಗೇ ತಾನು ಹನ್ನೆರಡು ಕೋಟಿ ಸುರಿದು ಒಂದಲ್ಲ, ಎರಡು ಸಿನಿಮಾ ಮಾಡ್ತಿದ್ದೀನಿ ಎಂದು ಬಷೀದ್ ಜಂಬಕೊಚ್ಚಿದ. 'ಯಾರಾದ್ರೆ ನಂಗೇನು' ಚಿತ್ರದ ಅರೆಬೆತ್ತಲೆ ಜಾಹೀರಾತೇ ಈ ಪಾಟಿ ವಿವಾದಕ್ಕೆಡೆಯಾಯಿತೆಂದರೆ ಇನ್ನು ಸಿನಿಮಾ ಗತಿ ಏನಾಗಬೇಡ? ಈ ದುರುಪಾರ್ಥಕ್ಕೆ ಬಾಬು ಮಗಳು ಬಣ್ಣ ಹಚ್ಚಬೇಕಿತ್ತೇ? ಹೀರೋಯಿನ್ನಾಗಲು ಈ ಮಟ್ಟಕ್ಕಿಳಿಯಬೇಕೆ? ಇದಕ್ಕಿಂತ ಗೌರವವಾಗಿ ನಟಿ ಅನ್ನಿಸಿಕೊಳ್ಳುವುದು ಸಾಧ್ಯವಿತ್ತಲ್ಲವೇ?

ಬಷೀದ್‌ನಂಥ ರೊಕ್ಕಸ್ಥ ಕೋಡಂಗಿಯೆದುರು ಹೀರೋಯಿನ್ನಾಗುವ ಬದಲು ಸುಮ್ಮನಿದ್ದರೇನೇ ಮರ್ಯಾದೆಯಲ್ಲವೇ? ದುರಂತವೆಂಬುದು ಬಾಬು ಪಾಲಿಗೆ ಮಗಳ ರೂಪದಲ್ಲೇ ಬರಬೇಕೆ?

ಸಿನಿಮಾ ಮಾಯೆಗೆ ಮತ್ತೊಂದು ಬಲಿ
ಸಿಂಗ್ ಬಾಬು ದುರಂತ

ಕೇಡುಕೋ, ಅಪಶಕುನವೋ ಗೊತ್ತಿಲ್ಲ, ನಿರ್ದೇಶಕ ದೈತ್ಯ ಸಿಂಗ್ ಬಾಬು ಅಲಿಯಾಸ್ ಎಸ್.ವಿ. ರಾಜೇಂದ್ರ ಸಿಂಗ್ ತಮ್ಮ ಆರ್.ಟಿ. ನಗರದ ಮನೆ ತೊರೆದು ಸಂಜಯ್‌ನಗರದ ಯಾವುದೋ ಅಪಾರ್ಟ್‌ಮೆಂಟಿಗೆ ಬಾಡಿಗೆಗೆ ಬಂದಿದ್ದಾರೆಂಬ ಸುದ್ದಿ ಸೂತಕದ ಛಾಯೆಯಂತೆ ಗಾಂಧಿನಗರದ ಗಲ್ಲಿಗಳಲ್ಲಿ ಹರಿದಾಡುತ್ತಿದೆ. ದಿವಾಳಿಯೆದ್ದ ಘಟಾನುಘಟಿ ಪ್ರೊಡ್ಯೂಸರ್‌ಗಳು, ಸೋತು ಬಸವಳಿದ ಡೈರೆಕ್ಟರ್‌ಗಳು, ತೋಪಾಗುತ್ತಿರುವ ಕೋಟಿ ಬಜೆಟ್ಟಿನ ಚಿತ್ರಗಳು, ಖಾಲಿಬಿದ್ದ ಚಿತ್ರಮಂದಿರಗಳು– ಹೀಗೇ ಸಾಗುವ ಅವನತಿಯ ಸರಮಾಲೆಗೆ ಈಗ ಸೇರ್ಪಡೆಯಾಗುತ್ತಿರುವ ಮತ್ತೊಂದು ಶಬ್ದವೇ ಸಿಂಗ್ ಬಾಬು.




ಕೈ ಹಾಕಿದ್ದೆಲ್ಲಾ ನಾಶ. ಅನುವಂಶಿಕ ಕರ್ಮದಂತೆ ಮೈಗಂಟಿದ ಮುಂಗೋಪ ಮಗ ಆದಿತ್ಯನ ಸಾಲುಸಾಲು ವೈಫಲ್ಯ. ಶುರುವಿಟ್ಟ ಅರ್ಧ ಡಜನ್ ಚಿತ್ರಗಳ್ಯಾವುದೂ ಬರಕತ್ತಾಗದ ದಾರಿದ್ರ್ಯ. ಜನ್ಮಾಪಿ ಹೆಣಗಾಡಿದರೂ ತೀರದ ಬ್ಯಾಂಕ್ ಸಾಲ. ಅಂತಿಮವಾಗಿ ಮುದ್ದಿನ ಮಗಳನ್ನೂ ನುಂಗಿಹಾಕಿದ ಸಿನಿಮಾ ಪ್ರಾರಬ್ಧ. ಸಿಂಗ್ ಬಾಬು ಯಾನೇ ಎಸ್.ವಿ. ರಾಜೇಂದ್ರ ಸಿಂಗ್ ಸದ್ಯ ಗಾಂಧಿನಗರದ ದುರಂತ ಪಾತ್ರ ಮಾತ್ರ.

ಮೊನ್ನೆ ಸಂಕ್ರಾಂತಿ ಪ್ರಯುಕ್ತ ಘೋಷಿಸಲ್ಪಟ್ಟ 'ರೆಬೆಲ್' ಎಂಬ ಮಗನನ್ನೇ ಹೀರೋ ಮಾಡಿದ ಹೊಸ ಚಿತ್ರವೂ ಸೇರಿದಂತೆ ಸದ್ಯ ನೆನೆಗುದಿಗೆ ಬಿದ್ದ ಬಾಬು ಚಿತ್ರಗಳ ಒಟ್ಟು ಸಂಖ್ಯೆ ಅರ್ಧ ಡಜನ್ನು. ಮೊದಲು 'ಕೃಷ್ಣೇಗೌಡನ ಆನೆ' ನಿರ್ಮಿಸುತ್ತೇನೆಂದು ಹೊರಟ ಬಾಬು ಅದನ್ನು ಅರ್ಧಕ್ಕೇ ಕೈಬಿಟ್ಟು 'ರಕ್ತಾಕ್ಷ' ಎಂಬ ಮತ್ತೊಂದು ಚಿತ್ರಕ್ಕೆ ಕೈಯಿಟ್ಟರು. ಇದು ಒಂದು ಹಂತಕ್ಕೆ ಬರುವ ಮೊದಲೇ 'ಭಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಎಂಬ ವಿಚಿತ್ರ ಹೆಸರಿನ ಮಗದೊಂದು ಚಿತ್ರಕ್ಕೆ ಕೈಯಿಟ್ಟರು. ಇನ್ನೇನು 'ಬ್ಯಾಂಗ್ ಬ್ಯಾಂಗ್....!' ಪೂರ್ಣಗೊಂಡಿತು ಎನ್ನುವಾಗಲೇ ಯಾವುದೋ ಶಾಪಕ್ಕೆ ತುತ್ತಾದಂತೆ ಅದನ್ನೂ ಬದಿಗಿಟ್ಟು 'ಒಂದು ಕ್ಷಣ' ಎಂಬ ಇನ್ನೊಂದು ಚಿತ್ರಕ್ಕೆ ಬಾಮೈದ ಜೈಜಗದೀಶ್ ಮೂಲಕ ಕೈಹಾಕಿ ಅದಕ್ಕೂ ಇದೇ ಗತಿ ಕಾಣಿಸಿದರು. ಈಗ 'ರೆಬೆಲ್' ಎಂಬ ಹೊಸ ಚಿತ್ರಕ್ಕೆ ಕೈಹಾಕಿದ್ದಾರೆ. ಜೊತೆಗೇ ತಂಗಿ ವಿಜಯಲಕ್ಷ್ಮಿ ಸಿಂಗ್‌ಳನ್ನು ಮುಂದೆ ಬಿಟ್ಟು ಮಗನನ್ನು ಹೀರೋ ಮಾಡಿ 'ರ್‍ಯಾಸ್ಕಲ್' ಹೆಸರಿನ ಆರನೇ ಚಿತ್ರಕ್ಕೆ ಚಾಲನೆ ಕೊಟ್ಟ ಬಾಬು ಈ ಪೈಕಿ ಯಾವುದನ್ನು ಮುಗಿಸುತ್ತಾರೆ? ಯಾವುದರ ನಂತರ ಯಾವುದು ಬಿಡುಗಡೆಯಾಗುತ್ತದೆ? ಮೊದಲು ತೆರೆ ಕಾಣುವ ಸಿನಿಮಾ ಯಾವುದು? ಇದೆಲ್ಲದರ ಮಧ್ಯೆ ಮಗಳು ರಿಷಿಕಾ ಸಿಂಗ್‌ಳನ್ನು ಹೀರೋಯಿನ್ ಮಾಡಿ ಯಾವ ಸಿನಿಮಾ ಘೋಷಿಸುತ್ತಾರೆ? ಈ ಎಲ್ಲಾ ಚಿತ್ರಗಳಿಗೆ ದುಡ್ಡು ಎಲ್ಲಿಂದ ತರುತ್ತಾರೆ? ಇತ್ಯಾದಿ ಗೋಜು, ಗೊಂದಲ, ಕ್ಷೋಭೆಗಳ ಗೂಡಾಗಿ ಹೋಗಿರುವ ಬಾಬು ಏಕೆ ಮೇಲಿಂದ ಮೇಲೆ ಎಡವಟ್ಟಿಗೆ ಬಿದ್ದು ನಗೆಪಾಟಲಾಗುತ್ತಿದ್ದಾರೆ?

ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಪುಟ್ಟಣ್ಣ ಕಣಗಾಲ್ ನಂತರದ ಅತೀ ದೊಡ್ಡ ಹೆಸರೇ ಬಾಬು. ಅದು ಅನುವಂಶಿಕವಾಗಿ ಬಂದ ಸಿನಿಮಾ ಗೀಳು ಕೂಡ. ಅವರ ತಂದೆ ಶಂಕರ್ ಸಿಂಗ್ ಆ ಕಾಲಕ್ಕೇ ಮೈಸೂರಿನಲ್ಲಿ ಮಹಾತ್ಮ ಪಿಕ್ಚರ್ಸ್ ಎಂಬ ಸಿನಿಮಾ ಕಂಪೆನಿ ತೆರೆದರು. ಅವರು ನಿರ್ಮಿಸಿದ ಜಗನ್ಮೋಹಿನಿ, 'ಕನ್ಯಾದಾನ', 'ಲಕ್ಷಾಧಿಕಾರಿ' ಇತ್ಯಾದಿ ಚಿತ್ರಗಳು ಕಪ್ಪುಬಿಳುಪಿನ ಯುಗದ ಶ್ರೇಷ್ಠ ಕನ್ನಡ ಚಿತ್ರಗಳೆನಿಸಿದವು. ತಾಯಿ ಪ್ರತಿಮಾದೇವಿ ಸಿಂಗ್ ಕೂಡ ಆ ಕಾಲದ ಖ್ಯಾತ ನಟಿಯೆ. ಇಂಥಾ ಹಿನ್ನೆಲೆಯ ಬಾಬು ಮುಟ್ಟಿದ್ದೆಲ್ಲಾ ಚಿನ್ನ ಎನ್ನುವ ಕಾಲವೊಂದಿತ್ತು. 'ನಾಗರಹೊಳೆ' ಈಸ್ಟ್‌ಮನ್ ಕಲರ್ ಯುಗದ ಮೊದಲ ಹಿಟ್ ಚಿತ್ರವಾದರೆ ನಂತರ ಬಂದ 'ಸಿಂಹದ ಮರಿ ಸೈನ್ಯ', ಕೇವಲ ಮಕ್ಕಳನ್ನಿಟ್ಟುಕೊಂಡೇ ನಿರ್ಮಿಸಿದ ಮೊದಲ ಅದ್ದೂರಿಯ ಹಿಟ್ಟಾಗಿತ್ತು. ಇದೆಲ್ಲಕ್ಕಿಂತಲೂ ಬಾಬು ಪ್ರತಿಭೆಯನ್ನು ಮೆರೆಸಿದ್ದು 'ಅಂತ'. ಅದು ಅಂಬಿಗೊಂದು ಹೊಸ ಇಮೇಜ್ ಸೃಷ್ಟಿಸಿ ಕೊಟ್ಟದ್ದಷ್ಟೇ ಅಲ್ಲ ರಾಜಕೀಯವಾಗಿ ವಿವಾದದ ಬಿರುಗಾಳಿಯನ್ನೇ ಎಬ್ಬಿಸಿದ ವಿಶಿಷ್ಟ ಚಿತ್ರ.

ಬಾಬು ಚಿತ್ರವೆಂದರೇನೇ ಅದ್ದೂರಿ ಮತ್ತು ಸೂಪರ್‌ಹಿಟ್ ಎಂಬುದು ಇನ್ನಿಲ್ಲದಂತೆ ಸಾಬೀತುಮಾಡಿದ್ದು 'ಬಂಧನ' ಕ್ಯಾಬರೆ, ಫೈಟಿಂಗ್, ಸೆಕ್ಸ್ ಯಾವುದೂ ಇಲ್ಲದೆ ಸರಳ ಪ್ರೇಮ ಕಥಾನಕವೊಂದನ್ನು ಕೇವಲ ನಿರೂಪಣೆಯೊಂದರಿಂದಲೇ ಕನ್ನಡ ಚಿತ್ರರಂಗದ ಮೈಲಿಗಲ್ಲನ್ನಾಗಿ ಮಾಡಿದ್ದು ಬಾಬು ಪ್ರತಿಭೆಯ ಮಾರ್ಗದರ್ಶನವಾಗಿತ್ತು. ಅದಾದನಂತರ ಮುತ್ತಿನ ಹಾರ, ಬಣ್ಣದ ಗೆಜ್ಜೆ ಇತ್ಯಾದಿ ಚಿತ್ರಗಳು ಒಂದರ ಮೇಲೊಂದರಂತೆ ಹಿಟ್ಟಾದವು. ಅದು ಕನ್ನಡ ಸಿನಿಮಾರಂಗದ ಮಟ್ಟಿಗಷ್ಟೇ ಅಲ್ಲ ಬಾಬು ಪಾಲಿಗೂ ಸುವರ್ಣ ಯುಗ. ಪುಟ್ಟಣ್ಣರಿಗೆ ಹೋಲಿಸಿದರೆ ಬಾಬು ನಿಜಕ್ಕೂ ಭಿನ್ನವಿಭಿನ್ನ ಆಯಾಮದ ನಿರ್ದೇಶಕ.



ಪುಟ್ಟಣ್ಣ ಒಂದೇ ಧಾಟಿಯ ಭಾವಾತಿರೇಕದ ಸಿನಿಮಾಗಳನ್ನು ಕೊಟ್ಟರೆ ಬಾಬು ವೆರೈಟಿಯ ಡೈರೆಕ್ಟರ್. 'ಸಿಂಹದ ಮರಿಸೈನ್ಯ' ಶುದ್ಧ ಮಕ್ಕಳ ಕಾಮಿಕ್‌ನಂತಿದ್ದರೆ 'ಅಂತ' ಅದಕ್ಕೆ ತೀರ ವ್ಯತಿರಿಕ್ತವಾದ ರಾಜಕೀಯ ಬಂಡಾಯ ಚಿತ್ರ. 'ಬಂಧನ'ಕ್ಕೂ 'ಮುತ್ತಿನಹಾರ'ಕ್ಕೂ ಅಜಗಜಾಂತರ ವ್ಯತ್ಯಾಸವಿದೆ. 'ನಾಗರಹೊಳೆ' ಶುದ್ಧ ಮನರಂಜನೆಯ ಕೃತಿಯಾದರೆ ಬಾಬು ಒಂದರ ಮೇಲೊಂದರಂತೆ ಹಿಟ್ ಮಾಡಿದ 'ಕುರಿಗಳು ಸಾರ್ ಕುರಿಗಳು', 'ಕೋತಿಗಳು ಸಾರ್ ಕೋತಿಗಳು' ಕೇವಲ ಹಾಸ್ಯ ಮಾತ್ರಕ್ಕೇ ಶತದಿನೋತ್ಸವ ಕಂಡವು. ಇದೇ ಸಾಲಿಗೆ ಬಂದ 'ಕತ್ತೆಗಳು ಸಾರ್'........ ಹಿಟ್ಟಾಗದೆ ಹೋದರೂ ಲಾಭಕ್ಕೆ ಮೋಸವಾಗಲಿಲ್ಲ.

2003 ರ ಹೊತ್ತಿಗೆ ಬಾಬು ಮನರಂಜನೆಯ ಎಲ್ಲಾ ಪ್ರಾಕಾರಗಳನ್ನು ಸಿದ್ಧಿಸಿಕೊಂಡ ಕನ್ನಡದ ಏಕೈಕ ಯಶಸ್ವಿ ಡೈರೆಕ್ಟರ್ ಖ್ಯಾತಿಗೆ ಬಂದಾಗಿತ್ತು. ಕೇವಲ ಪುಟ್ಟಣ್ಣ ಮಾತ್ರವಲ್ಲ ಸಿದ್ಧಲಿಂಗಯ್ಯ, ಸೋಮಶೇಖರ್, ಸುನೀಲ್ ಕುಮಾರ್ ದೇಸಾಯಿ ಮುಂತಾದ ನಿರ್ದೇಶಕರಿಗಿಂತಲೂ ಬಾಬು ಆಲ್‌ರೌಂಡರ್ ಎಂಬುದು ಸಾಬೀತಾಗಿ ಹೋಯಿತು. ಯಶಸ್ಸೆಂಬುದು ನೆತ್ತಿಗೇರಿದ ಪಿತ್ಥವಾದರೆ ಅದೊಂಥರದ ಕುರುಡು ಕವಿಯುತ್ತದೆಯಂತೆ. ಬಾಬು ಮುಂಗೋಪಿ. ವಿಪರೀತ ಸಿಡುಕು ಬುದ್ಧಿ. ಯಾವತ್ತಿಗೂ ರಾಜಿಮಾಡಿಕೊಳ್ಳುವ ಜಾಯಮಾನವಲ್ಲ. ವ್ಯಾವಹಾರಿಕವಾಗೂ ಧಾರಾಳಿ. ಯಾವತ್ತಿಗೂ ಕೈಚಾಚಿದವರಲ್ಲ. ಕನಸು ಕಟ್ಟಿಕೊಂಡೇ ಆರ್.ಟಿ. ನಗರದ ತೆರಳಬಾಳು ಮಠದ ಪಕ್ಕ ಕೋಟಿ ಸುರಿದು ಬಂಗಲೆ ಕಟ್ಟಿಸಿಕೊಂಡರು. ಮಗಳು ರೋಹಿಣಿಯನ್ನು ಪ್ರತಿಷ್ಠಿತ ಮೌಂಟ್ ಕಾರ್ಮೆಲ್ ಕಾಲೇಜಿಗೆ ಸೇರಿಸಿದರು. ತಂಗಿ ವಿಜಯಲಕ್ಷ್ಮಿ ಸಿಂಗ್ ನಟಿಯಾಗಿ ಬೇಡಿಕೆ ಕುಂದಿದ್ದು ಗೊತ್ತಾಗೇ ಆಕೆಯನ್ನು ನಿರ್ಮಾಪಕಿಯಾಗಿ ಮೇಲೆತ್ತಲು ಹೋದದ್ದು, ಬಾಮೈದ ಜೈಜಗದೀಶ್‌ರನ್ನು ಹಿಂದಿಟ್ಟುಕೊಂಡು ಒಂದರಮೇಲೊಂದು ಸಿನಿಮಾಕ್ಕೆ ಕೈಹಾಕಿದ್ದು, ವಿಷ್ಣು ಜೊತೆ ಮುನಿಸಿಕೊಂಡು ಪಾರ್ವತಮ್ಮ ಕ್ಯಾಂಪಿನಲ್ಲಿ ಗುರುತಿಸಿಕೊಂಡಿದ್ದು, ಚಲನಚಿತ್ರ ಅಕಾಡೆಮಿಗೆ ಅಧ್ಯಕ್ಷನಾಗಲು ಲಾಬಿ ನಡೆಸಿ ವಿಫಲರಾದದ್ದು, ನಿರ್ದೇಶಕ ಸಂಘದ ಅಧ್ಯಕ್ಷರಾಗಿ ಹೊಸ ಪ್ರಯೋಗಕ್ಕೆ ಕೈಹಾಕಿದ್ದು ಎಲ್ಲವೂ ಬಾಬು ಮಹತ್ವಾಕಾಂಕ್ಷೆ ಮತ್ತು ಚಾಣಾಕ್ಷತೆಗೆ ತಕ್ಕಂತೆಯೇ ಇತ್ತು.

ಅತಿಯಾದ ಆತ್ಮವಿಶ್ವಾಸವೇ ಅಸಡ್ಡೆಯ ತಾಯಿ. ಇದಕ್ಕೆ ಅತಿಯಾದ ಪುತ್ರ ವ್ಯಾಮೋಹವೂ ಸೇರಿತೆಂದರೆ ವಿನಾಶವೆಂಬುದು ತಾನಾಗಿಯೇ ಬೆನ್ನಟ್ಟಿ ಬರುತ್ತದೆ. ಅದು 2004 ರ ಶುರುವಾತು. ಮಗ ದುಷ್ಯಂತ್ ಸಿಂಗ್‌ನನ್ನು ಶತಗತಾಯ ಕನ್ನಡದ ಹೀರೋ ಮಾಡಿಯೇ ತೀರುತ್ತೇನೆಂದು ಬಾಬು ಶಪಥಗೈದರು. ಅದಕ್ಕೆಂದೇ ಮಗನಿಗೆ ಆದಿತ್ಯ ಎಂದು ಪುನರ್ ನಾಮಕರಣ ಮಾಡಿದರು. ಆದಿತ್ಯ ಹೇಳಿಕೊಳ್ಳುವಂಥ ಚಾಲಾಕಿಯಲ್ಲ, ರೂಪ ಅಷ್ಟಕ್ಕಷ್ಟೇ. ಪುನೀತ್‌ನಂತೆ ತನ್ನ ನಟನೆಯಿಂದಷ್ಟೇ ಗೆಲ್ಲಬೇಕೇ ಹೊರತು ಶಾರೀರಿಕವಾಗಿ ಅಪರೂಪದ ಯಾವ ಲಕ್ಷಣಗಳೂ ಇದ್ದವನಲ್ಲ. ಹಾಗಿದ್ದೂ ಬಾಬು ಮಗನ ಮೇಲೆ ಕನಸು ಕಟ್ಟಿದರು.



ಅದೂ ಕೈಗೆಟುಕದ ದುರಾಶೆ. ಕನ್ನಡ ಚಿತ್ರರಂಗದ ಮಿತಿ, ಮಾರುಕಟ್ಟೆ, ವರ್ಚಸ್ಸನ್ನೂ ಮೀರಿ ಹಿಂದಿ, ತಮಿಳು, ತೆಲುಗು ಚಿತ್ರರಂಗಗಳ ಕದ ತಟ್ಟುವ ತಮ್ಮ ಮಹತ್ವಾಕಾಂಕ್ಷೆಗೆ ಬಾಬು ಆಶ್ರಯಿಸಿದ್ದು ತಮ್ಮ ಪ್ರತಿಭೆ ಮತ್ತು ಮಗನನ್ನು!

ಮಗನ ಅರಂಗೇಟ್ರಂಗೆಂದೇ ಐದು ಕೋಟಿಯ 'ಲವ್' ಚಿತ್ರಕ್ಕೆ ಬಾಬು ಕೈಯಿಟ್ಟರು. ಅದಕ್ಕೆಂದು ತಮ್ಮ ಆರ್.ಟಿ. ನಗರದ ಬಂಗಲೆಯನ್ನೇ ಬ್ಯಾಂಕಿಗೆ ಒತ್ತೆಯಿಟ್ಟರು. ಮುಂದೊಮ್ಮೆ ಹಿಂದಿಯಲ್ಲೋ, ತೆಲುಗಿನಲ್ಲೋ ಮಗ ಸ್ಟಾರ್ ಆಗುತ್ತಾನೆಂದು ಲೆಕ್ಕಹಾಕಿ 'ಲವ್' ಅನ್ನು ಇನ್ನಿಲ್ಲದ ಅದ್ದೂರಿ ಚಿತ್ರವಾಗಿಸಲು ಮಲೆಯಾಳಂ ಸೂಪರ್‌ಸ್ಟಾರ್ ಮೋಹನ್‌ಲಾಲ್‌ನನ್ನು ಹಾಕಿಕೊಂಡರು. ಆಗ ನಂಬರ್ ಒನ್ ಹೀರೋಯಿನ್ ಆಗಿದ್ದ ರಕ್ಷಿತಾಳನ್ನೇ ಮಗನೆದುರು ನಾಯಕಿಯಾಗಿಸಿದರು. ತೆಲುಗಿನ ಖ್ಯಾತ ಪೋಷಕ ನಟ ಕೋಟಾ ಶ್ರೀನಿವಾಸ್‌ರನ್ನು ಕರೆಸಿದರು. ಹಿಂದಿಯ ಅಮರೀಷ್ ಪುರಿಯನ್ನೂ 'ಲವ್'ನಲ್ಲಿ ನಟಿಸುವಂತೆ ಮಾಡಿದರು. ಜೊತೆಗೆ ಹಿಂದಿಯ ಖ್ಯಾತ ಸಂಗೀತ ನಿರ್ದೇಶಕ ಅನುಮಲಿಕ್ ಮೂಲಕ 'ಲವ್'ಗೆ ಮ್ಯೂಜಿಕ್ ಮಾಡಿಸಿದರು. ದುಬೈ, ವಾರಣಾಸಿ ಮತ್ತು ಥಾರ್ ಮರುಭೂಮಿಯಲ್ಲಿ ಶೂಟಿಂಗ್ ಮಾಡಿ ದೇಶದ ಹೆಸರಾಂತ ಕಲಾವಿದರನ್ನೆಲ್ಲ ಹಾಕಿ ತಾವೇ ನಿರ್ದೇಶನ ಮಾಡಿ, ಐದು ಕೋಟಿಯಷ್ಟು ಸುರಿದು ನಿರ್ಮಿಸಿದ 'ಲವ್' ಮಗ ಆದಿತ್ಯನನ್ನು ಹಿಂದಿಯ ಮಟ್ಟಕಲ್ಲದಿದ್ದರೂ ದಕ್ಷಿಣ ಭಾರತದ ಮಟ್ಟಿಗೆ ಓರ್ವ ಹೀರೋನನ್ನಾಗಿ ಮಾಡೇ ಮಾಡುತ್ತದೆಯೆಂಬುದು ಬಾಬು ನಿರೀಕ್ಷೆಯಾಗಿತ್ತು.


ಬೇರೆ ಏನಕ್ಕಲ್ಲದೆ ಹೋದರೂ ತನ್ನ ಪ್ರತಿಭೆಯ ಕಾರಣಕ್ಕಾದರೂ 'ಲವ್' ಗೆದ್ದೇ ಗೆಲ್ಲುತ್ತದೆಯೆಂಬುದು ಬಾಬು ಲೆಕ್ಕಾಚಾರವಾಗಿತ್ತು. ಆದರೆ ಬಿಡುಗಡೆಯಾದ ಒಂದೇ ವಾರಕ್ಕೆ 'ಲವ್'ನ ಹಣೆಬರಹದ ನಿರ್ಧಾರವಾಗಿತ್ತು. ರಕ್ಷಿತಾ, ಮೋಹನ್ ಲಾಲ್, ಅಮರೀಷ್ ಪುರಿ, ಅನುಮಲ್ಲಿಕ್ ಸಂಗೀತ, ವಿದೇಶಿ ಶೂಟಿಂಗ್, ಅಪಾಟಿ ದುಡ್ಡು ಯಾವುದೂ ಪ್ರಯೋಜನಕ್ಕೆ ಬರಲಿಲ್ಲ. ಮಗನನ್ನು ವಿಜೃಂಭಿಸುವ ಭರದಲ್ಲಿ ಬಾಬು ತಮ್ಮ ಕ್ರಿಯೇಟಿವಿಟಿಯನ್ನೇ ಮರೆತಿದ್ದರು. ಸಾಧಾರಣದ ಕತೆ, ಮಗನ ನಿರ್ಜೀವ ನಟನೆ, ಅನಗತ್ಯ ಅದ್ದೂರಿತನ, ಸತ್ವಹೀನ ಸಂಭಾಷಣೆಯಿಂದಾಗಿ 'ಲವ್' ತೋಪಾಗಿತ್ತು. ಇನ್ನು ತೆಲುಗು




ಹಿಂದಿಗಳಿಂದ ಮಗನಿಗೆ ಆಫರ್ ಬರುವುದುಂಟೆ. ಕನ್ನಡ ಚಿತ್ರರಂಗದ ಮಿತಿಗೆ ಇಷ್ಟೆಲ್ಲಾ ಹೆಣಗಾಡಿದ ಬಾಬು ಯತ್ನವೇ ಅಜೀರ್ಣವಾಗಿತ್ತು. ಹಾಕಿದ ಐದು ಕೋಟಿ ದುಡ್ಡು ಅಂತಿಮವಾಗಿ ಬಾಬು ಅವರ ಆರ್.ಟಿ. ನಗರದ ಬಂಗಲೆಯನ್ನೇ ನುಂಗಿ ಹಾಕಿತು.

ಇದರ ಲುಕ್ಸಾನು ಭರಿಸಲೆಂದು ಬಾಬು 'ಕೃಷ್ಣೇಗೌಡನ ಆನೆ' ಚಿತ್ರ ನಿರ್ಮಿಸುತ್ತೇನೆಂದು ಘೋಷಿಸಿದರು. ಯಾಕೋ ಅದನ್ನು ಅರ್ಧಕ್ಕೇ ಕೈಬಿಟ್ಟು ಮಗನನ್ನು ಹೀರೋ ಮಾಡಿ 'ರಕ್ಷಾ' ಚಿತ್ರ ಮಾಡುತ್ತೇನೆಂದರು. ಮೊದಲು ಚಿತ್ರವೇ ಫ್ಲಾಪ್ ಆದಮೇಲೆ ಯಾರು ತಾನೇ ಧೈರ್ಯ ಮಾಡುತ್ತಾರೆ. ಕಲಾಸಿಪಾಳ್ಯದ ಫೈನಾನ್ಶಿಯರ್ ಮೋಹನ್ 'ರಕ್ಷಾ'ಕ್ಕೆ ನೀಡಿದ್ದ ಭರವಸೆಯನ್ನೇ ಮರೆತುಬಿಟ್ಟ. ಬಾಬುನಂಬಿದ್ದೇ ಮೋಹನನನ್ನು. ಇದಾದ ಮೇಲೆ ಉಪೇಂದ್ರ ಮತ್ತು ರಮ್ಯರ ಕಾಲ್‌ಶೀಟ್ ಗಿಟ್ಟಿಸಿದ ಬಾಬು ಕೈಯಿಟ್ಟಿದ್ದು 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಎಂಬ ವಿಚಿತ್ರ ಹೆಸರಿನ ಚಿತ್ರಕ್ಕೆ. ಅದಕ್ಕೆಂದು ಐಡಿಬಿಐ ಬ್ಯಾಂಕಿನಿಂದ 4 ಕೋಟಿ ಸಾಲ ಎತ್ತಿದ್ದಾಯ್ತು. ಆದರೆ ಬಾಬು ಅಸಡ್ಡೆ ಮತ್ತು ಅತೀ ಅದ್ದೂರಿತನದಿಂದಾಗಿ ಅದೂ ಡಬ್ಬಾದಲ್ಲೇ ಉಳಿಯಿತು. ಈ ಮಧ್ಯೆ ಮಗನನ್ನು ಜೈಜಗದೀಶ್ ಮೂಲಕ 'ಆದಿ' ಎಂಬ ಚಿತ್ರಕ್ಕೆ ಹೀರೋ ಮಾಡಿದರೆ ಅದೂ ಬರಕತ್ತಾಗಲಿಲ್ಲ. ಆನಂತರ ಇದೇ ಜೈಜಗದೀಶ್ ನಿರ್ಮಾಪಕರಾಗಿ ಮತ್ತದೇ ಆದಿತ್ಯನನ್ನು ಹೀರೋ ಮಾಡಿದ ತಮಿಳು ರಿಮೇಕ್ 'ಮದನ' ಕೂಡ ತೋಪಾಯಿತು. 'ಡೆಡ್ಲಿ ಸೋಮ'ದಂಥ ಸಾಧಾರಣ ಚಿತ್ರ ಅಷ್ಟಿಷ್ಟು ಹಿಟ್ಟಾಗಿದ್ದು ಬಿಟ್ಟರೆ ಆದಿತ್ಯನ ಸಕ್ಸಸ್ ಗ್ರಾಫ್ ಏರಲೇ ಇಲ್ಲ.

ದರ್ಶನ್ ಜೊತೆ 'ಸ್ನೇಹನಾ ಪ್ರೀತಿನಾ' ಚಿತ್ರದಲ್ಲಿ ಆದಿತ್ಯ ನಟಿಸಿದ್ದೂ ವ್ಯರ್ಥವಾಯಿತು. ಭೀಮೂಸ್ ಬ್ಯಾಂಗ್ ಬ್ಯಾಂಗ್‌ನ ಹಿನ್ನಡೆಯನ್ನು ಮುಚ್ಚಿಕೊಳ್ಳಲು ಜೈಜಗದೀಶ್ ನಿರ್ಮಾಣದ 'ತಿಪ್ಪಾರಳ್ಳಿ ತರ್ಲೆ'ಗಳು ಚಿತ್ರ ನಿರ್ದೇಶಿಸಲು ಹೋಗಿ ಮತ್ತೆ ಬಾಬು ಕೈಸುಟ್ಟುಕೊಂಡರು. ಕನಿಷ್ಠ ಸಣ್ಣ ಸಕ್ಸಸ್ ಆದರೂ ಸಿಗಲೆಂದು ಮತ್ತೆ ಶಿವರಾಜ್‌ಕುಮಾರ್ ಕಾಲ್‌ಶೀಟ್ ಪಡೆದು 'ಕಾಂಚನಗಂಗಾ' ಚಿತ್ರಕ್ಕೆ ಕೈಯಿಟ್ಟರೆ ಅದೂ ನೆಲಕಚ್ಚಿತು. ಇದೇ ಹೊತ್ತಿಗೆ ಜೈಜಗದೀಶ್ ನಿರ್ಮಿಸಿದ 'ಈ ಬಂಧನ', 'ಮುಂಗಾರಿನ ಮಿಂಚು' ಚಿತ್ರಗಳಿಗೂ ಬಾಬು ಕಾರಣಕರ್ತರಾದರೆ ಇಲ್ಲೂ ಸೋಲೇ ಕಾದಿತ್ತು. ಕೈಯಿಟ್ಟಿದ್ದೆಲ್ಲಾ ನಾಶ. ಜೊತೆಗೆ ತಂಗಿ ವಿಜಯಲಕ್ಷ್ಮಿ ಸಿಂಗ್ ಮತ್ತು ಆಕೆಯ ಪತಿ ಜೈಜಗದೀಶ್‌ಗೂ ಇದೇ ಶನಿಕಾಟ. ಮಗನಿಗೆ ಲತ್ತೆ ನಟನೆಂಬ ಪಟ್ಟ. 'ತಿಪ್ಪಾರಳ್ಳಿ ತರ್ಲೆ'ಗಳು ಚಿತ್ರಕ್ಕೆ ಐಡಿಬಿಐ ನೀಡಿದ ಒಂದೂವರೆ ಕೋಟಿ ಮತ್ತು





'ಭೀಮೂಸ್ ಬ್ಯಾಂಗ್'.... ಇದೇ ಐಡಿಬಿಐನಿಂದ ಎತ್ತಿದ ನಾಲ್ಕು ಕೋಟಿ ಎಲ್ಲಕ್ಕೂ ಬಾಬುವೇ ತಲೆ ಕೊಡಬೇಕಾಗಿ ಬಂತು.

2010 ರ ಹೊತ್ತಿಗೆ ಬಾಬು exhaust ಆಗಿಹೋಗಿದ್ದರು. ಒಂದೆಡೆ ಮೈತುಂಬಾ ಸಾಲ ಮತ್ತೊಂದೆಡೆ ತೋಪಾದ ಸಾಲುಸಾಲು ಸಿನಿಮಾಗಳು. ಇನ್ನೊಂದೆಡೆ ವ್ಯರ್ಥ ಡಬ್ಬಾದಲ್ಲೇ ನೆನೆಗುದಿಗೆ ಬಿದ್ದ ಚಿತ್ರಗಳು. ಮಗದೊಂದೆಡೆ ಯೋಗರಾಜ್ ಭಟ್, ಸೂರಿ, ಪ್ರೇಮ್, ಗುರುಪ್ರಸಾದ್‌ರಂಥ ಹೊಸ ಪ್ರತಿಭೆಗಳ ಪೈಪೋಟಿ. ಸಾಲದ್ದಕ್ಕೆ ಕನ್ನಡ ಚಿತ್ರಗಳೆಂದರೇನೇ ಬೆನ್ನು ತಿರುಗಿಸುತ್ತಿದ್ದ ಪ್ರೇಕ್ಷಕ. ಬಾಬು ಪಾಲಿನ ಅದೃಷ್ಟದ ಅಕೌಂಟೇ ಬರಿದಾಗಿಹೋಗಿತ್ತು. ಹಾಗಂತ ಸಾಲ ಕೊಟ್ಟವರು ಬಿಡಬೇಕಲ್ಲ. ಮಗನ 'ಲವ್'ಗೆಂದು ಎತ್ತಿದ ಐದು ಕೋಟಿಗೆ ಮನೆಯನ್ನು ಅಡವಿಟ್ಟದ್ದು ಬಾಬು ಪಾಲಿಗೆ ದೊಡ್ಡ ವಿಪತ್ತಾಗಿ ಪರಿಣಮಿಸಿತು. ಬಡ್ಡಿ ಚಕ್ರಬಡ್ಡಿ ಬೆಳೆದು ಮನೆಯೇ ಹರಾಜಿಗೆ ಬರುವ ಹಂತ ಮುಟ್ಟಿತು. ಇಂಥಾ ದೈನೇಸಿ ಸ್ಥಿತಿಯಲ್ಲೇ ಬಾಬು ಶರಣಾಗಿದ್ದು ನೈಸ್ ಖದೀಮ ಖೇಣಿಗೆ!

ಹೇಗಾದರೂ ತನ್ನ ಮನೆ ಉಳಿಸಿಕೊಡಿ ಎಂದು ಕಾಲಿಗೆ ಬಿದ್ದರೆ ಖೇಣಿ ಮನೆಯನ್ನು ತಾನೇ ಬರೆಸಿಕೊಂಡು ಬ್ಯಾಂಕ್ ಸಾಲ ತೀರಿಸಿದನಾದರೂ ಮನೆ ಮಾತ್ರ ದಕ್ಕಲೇ ಇಲ್ಲ. ಖೇಣಿ ಮಾಡಿದ ಒಂದೇ ಉಪಕಾರವೆಂದರೆ ಒಂದು ವರ್ಷ ಕಾಲ ಅದೇ ಮನೆಯಲ್ಲಿ ಇರಲು ಬಿಟ್ಟಿದ್ದು ಮಾತ್ರ!

ಸದ್ಯ ಬಾಬು ತಮ್ಮ ಆರ್.ಟಿ. ನಗರದ ಮನೆ ತೊರೆದು ಸಂಜಯ್‌ನಗರದ ಐಡಿಬಿಎಸ್ ಗ್ಯಾಲರಿ ಎಂಬ ಅಪಾರ್ಟ್‌ಮೆಂಟಿಗೆ ಬಾಡಿಗೆಗೆ ಬಂದಿದ್ದಾರೆ. ಕೈಯಿಟ್ಟ ಅರ್ಧ ಡಜನ್ ಚಿತ್ರಗಳಿನ್ನೂ ಡಬ್ಬಾದಲ್ಲೇ ಕೊಳೆಯುತ್ತಿರುವಾಗ ಮಗನನ್ನು ಹಾಕಿಕೊಂಡು 'ರೆಬೆಲ್' ಹೆಸರಿನ ಮತ್ತೊಂದು ಚಿತ್ರ ಘೋಷಿಸಿದ್ದು ಗಾಂಧಿನಗರದ ಪಾಲಿಗೆ ಹಾಸ್ಯವಾಗಿ ಕಾಣುತ್ತಿದೆ. ಮತ್ತೊಂದು ಹಿಟ್ ಕೊಡುವುದು ಮರೀಚಿಕೆಯೆ. ಮನೆ ಮಾರಿದ ನಂತರವೂ ಮುಗಿಯದ ಸಾಲಬಾಧೆ ಬೇರೆ. ಇದೆಲ್ಲದರಿಂದ ಬಾಬು ಬಚಾವಾಗಬೇಕೆಂದರೆ ಪವಾಡ ನಡೆಯಬೇಕಷ್ಟೇ. ಅಪ್ಪ ಶಂಕರ್ ಸಿಂಗ್ ಹುಟ್ಟುಹಾಕಿದ ಮಹಾತ್ಮಾ ಪಿಕ್ಚರ್ಸ್ ಮತ್ತು ನಿರ್ಮಿಸಿದ ಯಶಸ್ವಿ ಚಿತ್ರಗಳ ಯಶೋಗಾಥೆಯ ದುರಂತ ಅಂತ್ಯವೆಂಬಂತೆ ಬಾಬು ಹೈರಾಣಾಗಿದ್ದಾರೆ.


ಸಿನಿಮಾ ಎಂಬುದು ಮಾಯೆಯಿದ್ದಂತೆ. ರಂಗುರಂಗಿನ ಖ್ಯಾತಿಯ ಮರೆಯಲ್ಲಿ ಅಡಿಕುಕೂತ ದುಃಖ ಮಾತ್ರ ಕಾಣಿಸುವುದಿಲ್ಲ. ಅಷ್ಟೆಲ್ಲಾ ಹಿಟ್ ಸಿನಿಮಾಗಳನ್ನು ಕೊಟ್ಟು, ವಿಷ್ಣು, ಅಂಬರೀಶ್ ತರಹದ ಸ್ಟಾರ್‌ಗಳನ್ನು ಹುಟ್ಟುಹಾಕಿ, ಪುಟ್ಟಣ್ಣನ ನಂತರ ಮೂರು ದಶಕಗಳ ಕಾಲ ಕನ್ನಡದ ಕಾಯಕ ಮಾಡಿದ ಬಾಬು ದುರ್ಗತಿಗೆ ಮರುಗುವವರ್‍ಯಾರು? ಸಲ್ಲಿಸಿದ ಸೇವೆಗೆ ಯಾರೂ ಋಣಿಯಲ್ಲ. ಪ್ರತಿಭೆ, ಸಾಧನೆಯ ಕಾರಣಕ್ಕೆ ಸರ್ಕಾರವೂ ಕೈಹಿಡಿಯುವುದಿಲ್ಲ. ಜನಕ್ಕೆ ಬಾಬು ಕಷ್ಟ-ಕಾರ್ಪಣ್ಯಗಳು ಬೇಕಿಲ್ಲ. ಗೆಲುವಿಗೆ ಹಲವಾರು ಕೈಗಳಾದರೆ ಸೋಲಿಗೆ ಯಾರೂ ಇಲ್ಲ.

ನಿರ್ದಯಿ ಗಾಂಧಿನಗರದಲ್ಲಿ ಸದ್ಯ ಬಾಬು ಏಕಾಂಗಿ ದುರಂತ ನಾಯಕ.

• ರಾ. ಸೋಮನಾಥ್


ಕೊಲೆಗಾರನ ರಕ್ಷಣೆಗೆ ಸಿಐಡಿ ತನಿಖೆ

ಯಾವುದಾದರೂ ಒಂದು ಕೇಸಿನ ಬಗ್ಗೆ ಸಿಐಡಿ ತನಿಖೆ ನಡೆಸುವಂತೆ ಆದೇಶ ಹೊರಬಿದ್ದರೆ ಏನಾಗುತ್ತದೆ? ತನಿಖೆ ಮತ್ತಷ್ಟು ನಿಷ್ಪಕ್ಷಪಾತವಾಗಿ, ಸಮಗ್ರವಾಗಿ ನಡೆದು ಅಪರಾಧಿಗಳಿಗೆ ಸೂಕ್ತ ಶಿಕ್ಷೆಯಾಗುತ್ತದೆ ಎಂದು ಶಾಲಾ ಬಾಲಕರೂ ಹೇಳುತ್ತಾರೆ. ಆದರೆ ಹತ್ತಾರು ಜನರ ಮುಂದುಗಡೆಯೇ ಅಮಾಯಕ ಯುವಕನೊಬ್ಬನನ್ನು ಗುಂಡಿಟ್ಟು ಕೊಂದ ಅಪರಾಧಿಯನ್ನು 'ರಕ್ಷಿಸಲಿಕ್ಕಾಗಿ' ಸಿಐಡಿ ತನಿಖೆಗೆ ಪೊಲೀಸ್ ಮಹಾ ನಿರ್ದೇಶಕರು ಆದೇಶಿಸುತ್ತಾರೆಂದರೆ? 'ಸಾಕು ನಿಲ್ಲಿಸ್ರೀ.... ನಿಮ್ಮ ಕಟ್ಟುಕತೆನಾ!!' ಅನ್ನುತ್ತೀರಾ ತಾನೆ? ಆದರೆ ಸ್ವಲ್ಪ ತಾಳ್ಮೆಯಿಂದ ಈ ಲೇಖನದ ವಿವರಗಳನ್ನು ಓದಿ ನೋಡಿ. ಕರ್ನಾಟಕವೆಂಬ ಈ ಪುಣ್ಯ ಭೂಮಿಯಲ್ಲಿ ಅಸಾಧ್ಯವಾದುದು ಯಾವುದೂ ಇಲ್ಲವೆಂಬ ಸತ್ಯವು ನಿಮಗೆ ಮನವರಿಕೆಯಾಗುತ್ತದೆ.




ಕೊಲೆಗೆ ಬಳಸಿದ ಪಿಸ್ತೂಲನ್ನು ಪ್ರದರ್ಶಿಸುತ್ತಿರುವ ಬಿದರಿ

ಇಲ್ಲಿಗೆ ಎರಡೂವರೆ ವರ್ಷಗಳ ಹಿಂದೆ, 2008ರ ಅಕ್ಟೋಬರ್ 6ರಂದು ವಿನೋದ್‌ಕುಮಾರ್ ಎಂಬ ಉದಯೋನ್ಮುಖ ನಟನ ಕೊಲೆಯಾಗಿದ್ದು ಯಾರೂ ಮರೆತಿಲ್ಲ. ಈ ನತದೃಷ್ಟ 'ಗುಲಾಮ' ಎಂಬ ಸಿನಿಮಾದಲ್ಲಿ ಎರಡನೇ ನಾಯಕ ನಟನಾಗಿದ್ದ. ಈತನನ್ನು ಗೋವರ್ಧನ ಮೂರ್ತಿಯೆಂಬ ಹಣದ ಮದವೇರಿದ ರಿಯಲ್‌ಎಸ್ಟೇಟ್ ಖಾಖಂಡಿ ದೇವನಹಳ್ಳಿಯ ಸಮೀಪದ ತನ್ನ ಫಾರ್ಮ್‌ಹೌಸ್‌ನಲ್ಲಿ ಹತ್ತಾರು ಜನರ ಸಮ್ಮುಖದಲ್ಲೇ ಗುಂಡುಹಾರಿಸಿ ಕೊಲೆ ಮಾಡಿದ್ದ. ರಿಯಲ್ ಎಸ್ಟೇಟ್‌ನಲ್ಲಿ ಕಂಡಾಪಟ್ಟೆ ಹಣ ಬಂದರೆ ಸಿನಿಮಾ ತೆಗೆಯೋಕೆ ಹೋಗೋದು ಕೆಲವರ ಖಯ್ಯಾಲಿ. ಅದೇನೋ ಹೇಳ್ತಾರಲ್ಲಾ... 'ಮುತ್ತು ಹೆಚ್ಚಾದರೆ ಎತ್ತೆತ್ತೋ ಪೋಣಿಸಿಕೊಂಡ್ರು' ಅಂತಾ. ಹಾಗೆ ಈ ಗೋವರ್ಧನ ಕೂಡಾ ಕೆಲವು ಸಿನೆಮಾಗಳ ನಿರ್ಮಾಣ ಮಾಡಿದ್ದ. ಅದರ ಜೊತೆಗೆ ತಾನೊಬ್ಬ ಡಾನ್ ಅನಿಸಿಕೊಳ್ಳಬೇಕು ಎಂಬ ವಿಕೃತ ಬಯಕೆಯೂ ಅವನಿಗಿತ್ತೆಂದು ಆತನನ್ನು ಹತ್ತಿರದಿಂದ ಬಲ್ಲವರು ಹೇಳುತ್ತಾರೆ. ಆತನ ಎಲ್ಲ ಅವಗುಣಗಳು ವೋಳೈಸಿ ಒಬ್ಬ ಸಂಭಾವಿತ ಯುವ ನಟನೊಬ್ಬನ ಸಾವಿನಲ್ಲಿ ಪರ್ಯಾವಸಾನ ಕಂಡಿದ್ದು ಮಾತ್ರ ದುರಂತವೇ ಸರಿ. ರಾಜ್ಯಾದ್ಯಂತ ಸಂಚಲನ ಸೃಷ್ಟಿಸಿದ್ದ ಈ ಕೊಲೆಯಿಂದ ಕಾರ್ಯಪ್ರವೃತ್ತರಾದ ನಗರ ಪೊಲೀಸರು ಒಂದೇ ವಾರದಲ್ಲಿ ಕೇರಳದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಿದ್ದರು. ಅಂದಿನಿಂದಲೂ ಈ ದುಷ್ಟಜಂತು ಜೈಲಿನಲ್ಲೇ ಕೊಳೆಯುತ್ತಿರುವುದು ಕಾನೂನು ಆಡಳಿತದಲ್ಲಿ ನಂಬಿಕೆಯಿರಿಸಿರುವವರಿಗೆ ಸಮಾಧಾನ ತರುವ ಸಂಗತಿ.



ಗೋವರ್ಧನ ಮೂರ್ತಿ

ಇದೆಲ್ಲಾ ಈಗ ತೀರಾ ಹಳೆಯ ಸುದ್ದಿ. ಆದ್ದರಿಂದ ಅದರಲ್ಲಿ ಯಾವ ಸ್ವಾರಸ್ಯವೂ ಇಲ್ಲ ಬಿಡಿ. ಆದರೆ ಈ ಕೇಸು ಈಗ ಒಂದು ಸ್ವಾರಸ್ಯಕರ ತಿರುವು ಪಡೆದುಕೊಂಡಿದೆ. ಈಗ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾಗಿ ಅಧಿಕಾರಸ್ಥರಾಗಿರುವ ಶಂಕರ್ ಬಿದರಿಯವರು ಈ ಕೇಸನ್ನು ಸಿಐಡಿಗೆ ಅಧಿಕೃತವಾಗಿ ವರ್ಗಾಯಿಸಿ ಮತ್ತಷ್ಟು ತನಿಖೆ ನಡೆಸುವಂತೆ ಆದೇಶ ಹೊರಡಿಸಿದ್ದಾರೆ. ಇದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಈ ಆದೇಶದ ವಿರುದ್ಧ ಕೊಲೆಯಾದ ವಿನೋದ್‌ನ ಅಣ್ಣ ಹೈಕೋರ್ಟ್‌ನ ಮೊರೆ ಹೋಗಿದ್ದಾರೆ. ಹೈಕೋರ್ಟ್‌ಗೆ ಸಲ್ಲಿಸಿರುವ ಪೆಟಿಷನ್‌ನಲ್ಲಿ "ಮುಕ್ತಾಯ ಹಂತದಲ್ಲಿರುವ ವಿಚಾರಣೆಯನ್ನು ದಿಕ್ಕು ತಪ್ಪಿಸಲು ಆಪಾದಿತನ ಪರವಾಗಿ ನಿಂತು ಶಂಕರ್ ಬಿದರಿಯವರು ತಮ್ಮ ಕೈಯಲ್ಲಿರುವ ಅಧಿಕಾರವನ್ನು ಬಳಸಿ ಈ ಅನಗತ್ಯ ಆದೇಶವನ್ನು ಹೊರಡಿಸಿದ್ದಾರೆ" ಎಂದು ಗಂಭೀರ ಆರೋಪ ಮಾಡಿದ್ದಾರೆ. ಈ ಅಹವಾಲಿನ ವಿಚಾರಣೆ ನಡೆಸಿದ ನ್ಯಾಯಾಲಯ ಶಂಕರ್ ಬಿದರಿಯವರ ಆದೇಶಕ್ಕೆ ತಡೆಯಾಜ್ಞೆ ನೀಡಿದೆ.



ಸಿ.ವಿ.ನಾಗೇಶ್

ಇಷ್ಟಕ್ಕೂ ಈ ದುಷ್ಕೃತ್ಯ ನಡೆದ ಸಂದರ್ಭದಲ್ಲಿ ಶಂಕರ್ ಬಿದರಿಯವರೇ ನಗರದ ಪೊಲೀಸ್ ಕಮಿಷನರ್ ಆಗಿದ್ದರು. ಆ ಕಾರಣದಿಂದ ಅವರು ಕೇಸಿನಲ್ಲಿ ವಿಶೇಷ ಆಸಕ್ತಿ ವಹಿಸಿ ಆರೋಪಿಯನ್ನು ಬಂಧಿಸಲು ಕಾರಣವಾಗಿದ್ದರು. 2009ರ ಜನವರಿಯಲ್ಲಿ ಸಲ್ಲಿಸಿದ ಕರಾರುವಾಕ್ಕಾದ ಚಾರ್ಜ್‌ಶೀಟ್‌ಅನ್ನು ಖುದ್ದಾಗಿ ಕಮಿಷನರ್ ಶಂಕರ್ ಬಿದರಿ ಹಾಗೂ ಎಸಿಪಿ ಪೂಜಾರ್ ಪರಿಶೀಲಿಸಿ ಅನುಮೋದನೆ ನೀಡಿದ್ದರು. ಒಟ್ಟು ೩೬೨ ಪುಟಗಳ ಚಾರ್ಜ್‌ಶೀಟ್‌ನಲ್ಲಿ 103 ಸಾಕ್ಷಿಗಳನ್ನು ಪರಿಶೀಲಿಸಲಾಗಿತ್ತು. 142 ಅಡಕ ದಾಖಲಾತಿಗಳನ್ನು ಹೊಂದಿಸಲಾಗಿತ್ತು. ಘಟನೆಯ ಪ್ರತ್ಯಕ್ಷ ಸಾಕ್ಷಿಗಳಾಗಿದ್ದ 5 ಜನರ ಹೇಳಿಕೆಗಳನ್ನು ದಾಖಲಿಸಲಾಗಿತ್ತು. ಪೊಲೀಸರು ಕೈಗೊಂಡ ಈ ಸಮಗ್ರ ತನಿಖೆಯ ಬೆಂಬಲವಾಗಿ ನಿವೃತ್ತ ನ್ಯಾಯಾಧೀಶರು, ಹಿರಿಯ ಅಧಿಕಾರಿಗಳು ಕೈಜೋಡಿಸಿದ್ದರು.

ಎಲ್ಲಕ್ಕಿಂತ ಮುಖ್ಯವಾಗಿ ಈ ಕೇಸಿನಲ್ಲಿ ವಿಶೇಷ ಪ್ರಾಸಿಕ್ಯೂಟರ್ ಆಗಿರುವ ಪ್ರಸಿದ್ಧ ಕ್ರಿಮಿನಲ್ ಲಾಯರ್ ಸಿ.ವಿ.ನಾಗೇಶ್‌ರ ಪಾತ್ರವಿದೆ. ಸಾಮಾನ್ಯವಾಗಿ ಫಿರ್ಯಾದುದಾರರ ಪರವಾಗಿ ವಾದ ಮಂಡಿಸಲು ಸರ್ಕಾರದಿಂದ ಅಧಿಕೃತವಾಗಿ ನೇಮಿಸಲ್ಪಟ್ಟ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು ಇರುತ್ತಾರೆ. ಆದರೆ ಈ ಕೇಸಿನಲ್ಲಿ ವಿನೋದ್‌ನ ಕುಟುಂಬದವರು ಕೋರ್ಟಿನಿಂದ ವಿಶೇಷ ಅನುಮತಿ ಪಡೆದು ಸಿ.ವಿ. ನಾಗೇಶ್‌ರನ್ನು ವಿಶೇಷ ಪ್ರಾಸಿಕ್ಯೂಟರ್ ಆಗಿ ನೇಮಿಸಿಕೊಂಡಿದ್ದಾರೆ.

ಈಗ ನ್ಯಾಯಾಲಯದಲ್ಲಿ ಕೇಸು ಮುಕ್ತಾಯ ಹಂತ ತಲುಪಿದೆ. ಆರೋಪಿಯ ವಿಚಾರಣೆ ಮುಗಿದಿದ್ದು ಆತನ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ. ಈ ಎರಡೂವರೆ ವರ್ಷದಲ್ಲಿ ಬರೋಬ್ಬರಿ 23 ಮಂದಿ ಸಾಕ್ಷಿಗಳು ನ್ಯಾಯಾಲಯಕ್ಕೆ ಹಾಜರಾಗಿದ್ದಾರೆ. ಹೆಚ್ಚುಕಡಿಮೆ ಎಲ್ಲವೂ ಸರಿಯಾದ ದಿಕ್ಕಿನಲ್ಲಿ ನಡೆಯುತ್ತಿದೆಯೆಂದು ಎಲ್ಲರೂ ಭಾವಿಸಿದ್ದಾರೆ. ಈ ಪ್ರಕ್ರಿಯೆ ಹೀಗೇ ಮುಂದುವರೆದರೆ ಆರೋಪಿಗೆ ಶಿಕ್ಷೆಯಾಗುವುದು ಗ್ಯಾರಂಟಿ. ಹೀಗಿರುವಾಗ ಶಂಕರ್ ಬಿದರಿ ಸಾಹೇಬರು ಸಿಐಡಿ ತನಿಖೆಗೆ ಆದೇಶಿಸಿದ್ದಾರೆ.

ಈ ಬಗ್ಗೆ ಕೆಲ ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಬಿದರಿಯವರು ಹೇಳಿದ್ದೇನು ಗೊತ್ತೆ? "ನನಗೆ ಈ ವಿಷಯ ಈಗಷ್ಟೆ ಗೊತ್ತಾಗಿದೆ. ನಾನು ದಿನವೂ ನೂರಾರು ಫೈಲುಗಳಿಗೆ ಸಹಿ ಹಾಕುತ್ತಿರುತ್ತೇನೆ. ಈ ಆದೇಶ ಹೇಗೆ ಹೊರಬಂತು ಎಂದು ನನಗೂ ಅರ್ಥವಾಗುತ್ತಿಲ್ಲ. ಸೂಕ್ತ ಪರಿಶೀಲನೆಯ ನಂತರ ನಿಮಗೆ ಸಂಪೂರ್ಣ ಚಿತ್ರಣ ಕೊಡುತ್ತೇನೆ." ಎಂದಿದ್ದಾರೆ. ರಾಜ್ಯ ಪೊಲೀಸ್ ಮುಖ್ಯಸ್ಥರ ಮಾತಿನ ಭಾವಾರ್ಥವನ್ನು ಅರ್ಥಮಾಡಿಕೊಳ್ಳಲು ಮಹಾ ಪಂಡಿತ್ಯವೇನೂ ಬೇಕಾಗಿಲ್ಲ.

"ಇದು ಸಂಪೂರ್ಣ ಕಾನೂನುಬಾಹಿರ. ಯಾರ ಅನುಕೂಲಕ್ಕಾಗಿ ಅವರು ಇಂಥಾ ಆದೇಶವನ್ನು ಹೊರಡಿಸಿದ್ದಾರೆ?..... 2011ರ ಮೇ ತಿಂಗಳವರೆಗೂ ಅವರೇ ಪೊಲೀಸ್ ಕಮೀಷನರ್ ಆಗಿದ್ದರು. ಅವರಿಗೆ ಹಿಂದೆಂದೂ ಮತ್ತಷ್ಟು ತನಿಖೆ ನಡೆಸಬೇಕು ಅಂತ ಅನಿಸಿರಲೇ ಇಲ್ಲ. ಆದರೆ ತಾವು ಪೊಲೀಸ್ ಇಲಾಖೆಯ ಮುಖ್ಯಸ್ಥರಾದ ಕೇವಲ ಹತ್ತು ದಿನಗಳಲ್ಲಿ ಈ ಕೇಸನ್ನು ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ವರ್ಗಾಯಿಸಿ ಆದೇಶ ಹೊರಡಿಸಿದ್ದಾರೆ. ಅದೂ ಸಹಾ ಈ ಕೇಸಿನ ವಿಚಾರಣೆ ಮುಕ್ತಾಯ ಹಂತಕ್ಕೆ ತಲುಪಿರುವ ಸಂದರ್ಭದಲ್ಲಿ..... ಅವರಿಗೆ ಇಂಥಾ ಆದೇಶ ಹೊರಡಿಸುವ ಅಧಿಕಾರವೇ ಇಲ್ಲ. ಕೇಸಿನ ಬಗ್ಗೆ ಮತ್ತಷ್ಟು ತನಿಖೆಯ ಅಗತ್ಯವಿದ್ದಲ್ಲಿ ಸಂಬಂಧಿಸಿದ ತನಿಖಾಧಿಕಾರಿ ಅಥವಾ ಪಬ್ಲಿಕ್ ಪ್ರಾಸಿಕ್ಯೂಟರ್ ಅಭಿಪ್ರಾಯದ ಮೇರೆಗೆ ನಡೆಯಬೇಕು. ಇಲ್ಲಿ ಅಂಥದ್ದೇನೂ ಆಗಿಲ್ಲ. ಹೀಗಿರುವಾಗ ಡಿಜಿಪಿ ಹುದ್ದೆಯಲ್ಲಿ, ಪೊಲೀಸ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಕುಳಿತು ಇಂಥಾ ಆದೇಶವನ್ನು ಹೊರಡಿಸಲು ಹೇಗೆ ಸಾಧ್ಯ" ಇದು ಪ್ರಾಸಿಕ್ಯೂಟರ್ ಆಗಿರುವ ಸಿ.ವಿ.ನಾಗೇಶ್ ಅವರ ನೇರ ಪ್ರಶ್ನೆ. ಸದ್ಯಕ್ಕೆ ಈ ಪ್ರಶ್ನೆಗೆ ಮಾನ್ಯ ಶಂಕರ್ ಬಿದರಿಯವರೇ ಉತ್ತರಿಸಬೇಕು.



ಕೊಲೆಯಾದ ವಿನೋದನ ಬಂಧುಗಳು

• ಜಂಗಮ

ಬೇಡ-ಜಂಗಮ ಮೀಸಲಾತಿ ದಲಿತರಿಗೆ ಅನ್ಯಾಯ


ಸಂದರ್ಶನ

ಭಾರತ ದೇಶದ ಚರಿತ್ರೆಯಲ್ಲಿ ಸಾವಿರಾರು ವರ್ಷಗಳಿಂದಲೂ ಸಾಮಾಜಿಕವಾಗಿ, ಆರ್ಥಿಕವಾಗಿ ತುಳಿತಕ್ಕೊಳಗಾದ ಜನಾಂಗಗಳಿಗೆ ಸ್ವಲ್ಪ ಮಟ್ಟಿಗಾದರೂ ಚೈತನ್ಯ ತಂದುಕೊಟ್ಟಿದ್ದೇ ಮೀಸಲಾತಿ ನೀತಿ. ಹಲವು ರೀತಿಯ ವಿಕೃತಿಗಳಿಂದಾದ ಚಾರಿತ್ರಿಕ ಅನ್ಯಾಯವನ್ನು ಸರಿಪಡಿಸುವ ಅಗತ್ಯವನ್ನು ಮನಗಂಡು ನಮ್ಮ ಸಂವಿಧಾನಕರ್ತರು ಮೀಸಲಾತಿಯೆಂಬ ಒಂದು ಪರಿಹಾರೋಪಾಯವನ್ನು ರೂಪಿಸಿದ್ದಾರೆ. ಮೀಸಲಾತಿಯ ಪರಿಣಾಮವಾಗಿ ಶೋಷಿತ ದಲಿತ ಸಮುದಾಯ ಅಲ್ಪಸ್ವಲ್ಪ ಮಟ್ಟಿಗಾದರೂ ಚೇತರಿಸಿಕೊಂಡು ವಿವಿಧ ಕ್ಷೇತ್ರಗಳಲ್ಲಿ ನೆಲೆ ಕಂಡುಕೊಳ್ಳುತ್ತಿದೆ. ಆದರೂ ಈ ಆರು ದಶಕಗಳಲ್ಲಿ ಸಾಮಾಜಿಕ ಅಥವಾ ಆರ್ಥಿಕ ಸಮಾನತೆಯನ್ನು ನಿರೀಕ್ಷಿತ ಮಟ್ಟದಲ್ಲಿ ಸಾಧಿಸಲಾಗದೆ ನಮ್ಮ ಸಮಾಜ ಹಲವು ವಿಚಾರಗಳಲ್ಲಿ ಇನ್ನೂ ರೋಗಗ್ರಸ್ತವಾಗಿಯೇ ಮುಂದುವರೆದಿರುವುದು ನಮ್ಮ ಕಣ್ಣೆದುರಿಗಿರುವ ಸತ್ಯ.

ಭಾರತದ ಸಾಮಾಜಿಕ ಸನ್ನಿವೇಶದಲ್ಲಿ ತೀರಾ ಅನಿವಾರ್ಯವಾಗಿದ್ದ ಮಾನವೀಯ ಕಳಕಳಿಯಿಂದ ಕೂಡಿದ್ದ ಮೀಸಲಾತಿ ಸೌಲಭ್ಯವನ್ನು ಪಡೆದುಕೊಂಡ ಪ್ರಕ್ರಿಯೆ ಸರಳವಾಗಿ ಸುಲಲಿತವಾಗಿ ನೆರವೇರಿದ್ದಲ್ಲವೇ ಅಲ್ಲ. ಶತಶತಮಾನಗಳಿಂದ ಆರ್ಥಿಕ ಸಂಪನ್ಮೂಲಗಳ ಮೇಲೆ ಬಿಗಿ ಹಿಡಿತವನ್ನು ಹಾಗೂ ಸಾಮಾಜಿಕವಾಗಿ ಅತ್ಯಂತ ಪ್ರತಿಷ್ಠಿತ ಸ್ಥಾನಗಳನ್ನು ಅನುಭವಿಸುತ್ತಿದ್ದ ಪಟ್ಟಭದ್ರ ಶಕ್ತಿಗಳು ಇಂತಹ ಮಾನವೀಯ ನೀತಿಯನ್ನು ಖಂಡತುಂಡವಾಗಿ ವಿರೋಧಿಸಿದ್ದರು, ಈಗಲೂ ನಾನಾ ಹುಸಿನೆಪಗಳನ್ನು ಮುಂದೊಡ್ಡಿ ವಿರೋಧಿಸುತ್ತಲೇ ಇದ್ದಾರೆ ಎಂಬುದು ವರ್ತಮಾನದ ಕ್ರೂರ ವ್ಯಂಗ್ಯ.

ಮತ್ತೊಂದೆಡೆ ದಲಿತರಿಗೆ ನ್ಯಾಯಯುತವಾಗಿ ದಕ್ಕಬೇಕಾದ ಸರ್ಕಾರಿ ಸವಲತ್ತುಗಳನ್ನು ಸುಳ್ಳು ಪ್ರಮಾಣ ಪತ್ರಗಳ ಮೂಲಕ ಕಬಳಿಸುವ ವ್ಯಕ್ತಿಗತ ನೆಲೆಯ ಹುನ್ನಾರಗಳನ್ನು ನಾವು ನೋಡುತ್ತಲೇ ಇದ್ದೇವೆ. ದಲಿತರು ಈ ಬಗ್ಗೆ ಜಾಗೃತರಾಗಿ ಕಟ್ಟುನಿಟ್ಟಿನ ಕಾನೂನು ಜಾರಿಗೆ ಒತ್ತಾಯಿಸುತ್ತಿರುವ ಹಿನ್ನೆಲೆಯಲ್ಲಿ ಇಂಥ ಕುಕೃತ್ಯಗಳಿಗೆ ತಕ್ಕಮಟ್ಟಿನ ಕಡಿವಾಣ ಬಿದ್ದಿದೆ. ಆದರೆ ಇಂಥಾ ಹುನ್ನಾರ ಮತ್ತಷ್ಟು ವ್ಯವಸ್ಥಿತವಾಗಿ, ನಮ್ಮನ್ನಾಳುತ್ತಿರುವ ಸರ್ಕಾರಗಳ ಅಧಿಕೃತ ಕೃಪಾಶೀರ್ವಾದದೊಂದಿಗೆ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. 'ಬೇಡ ಜಂಗಮ' ಜಾತಿಯನ್ನು ಪರಿಶಿಷ್ಟ ಜಾತಿಯ ಪಟ್ಟಿಗೆ ಸೇರಿಸಿರುವುದು ಇತ್ತೀಚಿನ ಉದಾಹರಣೆ. ಪರಿಣಾಮವಾಗಿ ಶೋಷಿತ ಜನರು ತಮ್ಮ ನ್ಯಾಯಯುತ ಪಾಲಿನಿಂದ ವಂಚಿತರಾಗುತ್ತಿರುವುದು ವರ್ತಮಾನದ ವಾಸ್ತವ.

ದಲಿತ, ಶೋಷಿತ ಸಮುದಾಯಗಳ ಪರವಾಗಿ ದನಿಯೆತ್ತಿರುವ ಹಾಗೂ ಅದೇ ಕಾರಣಕ್ಕಾಗಿ ಪಟ್ಟಭದ್ರ ಶಕ್ತಿಗಳ ಕೆಂಗಣ್ಣಿಗೆ ಗುರಿಯಾಗಿರುವವರಲ್ಲಿ ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲಸ್ವಾಮಿಗಳು ಪ್ರಮುಖರು. ಮೀಸಲಾತಿ ನೀತಿಯ ಸಾಧಕಬಾಧಕಗಳ ಬಗ್ಗೆ ಹಾಗೂ ಇತ್ತೀಚೆಗೆ ಬರುತ್ತಿರುವ ಬದಲಾವಣೆಗಳ ಬಗ್ಗೆ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ತಮ್ಮ ಅಭಿಪ್ರಾಯಗಳನ್ನು ಅತ್ಯಂತ ತಾರ್ಕಿಕವಾಗಿ ಹಾಗೂ ವೈಜ್ಞಾನಿಕವಾಗಿ ಮುಂದಿಸಿದ್ದಾರೆ. ಅದರ ಸಂಕ್ಷಿಪ್ತ ರೂಪ ಇಲ್ಲಿದೆ.



ಎಲ್ಲಾ ಪ್ರಗತಿಪರ ಮನಸ್ಸುಗಳು ಶೋಷಿತ ವರ್ಗದ ಜನರೊಂದಿಗೆ ಒಗ್ಗೂಡಬೇಕು. ದಲಿತರಿಗೆ ಸಾಮಾಜಿಕ ನ್ಯಾಯ ಒದಗಿಸುವ ಪ್ರಕ್ರಿಯೆಯಲ್ಲಿ ಉದಾತ್ತ ಮನಸ್ಸುಗಳೆಲ್ಲಾ ಒಟ್ಟಾಗಬೇಕು. ಇದು ಬರೀ ಮೀಸಲಾತಿಯ ವಿಚಾರದಲ್ಲಿ ಮಾತ್ರವಲ್ಲ, ಈ ಸಮಾಜದ ನಾನಾ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಪ್ರಗತಿಶೀಲರು ಒಟ್ಟಾಗುವ ಅಗತ್ಯ ಇಂದು ಬಹಳ ಇದೆ.

ಪ್ರಶ್ನೆ : ಪ್ರಸ್ತುತದ ಮೀಸಲಾತಿ ನೀತಿಯಲ್ಲಿರುವ ಸಮಸ್ಯೆಗಳನ್ನು ನೀವು ಯಾವ ರೀತಿ ವಿಶ್ಲೇಷಿಸುತ್ತೀರಿ?

ಶೋಷಿತ ವರ್ಗಗಳಿಗೆ ಸಾಮಾಜಿಕ ನ್ಯಾಯವನ್ನು ನೀಡಿ ಅವರನ್ನು ಪ್ರಧಾನ ಧಾರೆಗೆ ತರಲಿಕ್ಕೆ ಮೀಸಲಾತಿ ಅತ್ಯಂತ ಅವಶ್ಯಕ. ಆದರೆ ಮೀಸಲಾತಿಗೆ ಸಂಬಂಧಿಸಿದ ಕಾನೂನುಗಳ ಬಗ್ಗೆ ಒಂದು ಮರುಚಿಂತನೆ ಆಗಬೇಕಾಗಿದೆ. ಆ ನಿಟ್ಟಿನಲ್ಲಿ ಮೀಸಲಾತಿಯನ್ನು ಶೇಕಡ 50ಕ್ಕೆ ಮಾತ್ರ ಸೀಮಿತಗೊಳಿಸಿರುವ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನೂ ಸಹ ಪುನರ್‌ಪರಿಶೀಲಿಸಬೇಕಾದ ಅಗತ್ಯವಿದೆ. ವಾಸ್ತವದಲ್ಲಿ ಈ ತೀರ್ಪು ಶೋಷಿತ ಸಮುದಾಯಗಳಿಗೆ ಒಂದು ದೊಡ್ಡ ಹಿನ್ನಡೆಯೆಂದೇ ನಾನು ಭಾವಿಸುತ್ತೇನೆ. ಆಯಾ ಜಾತಿಗಳ ಜನಸಂಖ್ಯೆಗೆ ಅನುಗುಣವಾಗಿ ಒಂದು ಸಮಗ್ರ ಮೀಸಲಾತಿಯನ್ನು ಜಾರಿಗೆ ತರುವ ಕೆಲಸ ಆಗಬೇಕಿದೆ. ಉದಾಹರಣೆಗೆ ಬ್ರಾಹ್ಮಣರು 4% ಇದ್ದಾರೆ ಎಂದರೆ ಅವರಿಗೆ 4% ಕೊಡಿ, ಲಿಂಗಾಯತರು 13-14% ಇದ್ದಾರೆ ಅಂದರೆ ಅವರಿಗೆ 14% ಕೊಡಿ. ಹಾಗೆ ದಲಿತರು 19-20% ಇದ್ದಾರೆ ಎಂದರೆ ಅವರ ಪಾಲು ಅವರಿಗೆ ಕೊಡಿ. ಯಾರಿಗೂ ಅನ್ಯಾಯ ಆಗೋದು ಬೇಡ. ಹೀಗೆ ಸಮಗ್ರ ಮೀಸಲಾತಿ ಜಾರಿಗೆ ಬರಬೇಕು. ಈ ರೀತಿ ನೂರಕ್ಕೆ ನೂರು ಮೀಸಲಾತಿ ಜಾರಿಗೆ ಬಂದರೆ ಎಲ್ಲರಿಗೂ ತಮ್ಮತಮ್ಮ ನ್ಯಾಯಯುತವಾದ ಪಾಲು ಸಿಕ್ಕಂತಾಗುತ್ತದೆ ಹಾಗೂ ಅನಗತ್ಯ ಪೈಪೋಟಿ, ವಿರಸ, ವೈಷಮ್ಯ ಹಾಗೂ ವಂಚನೆಗಳನ್ನು ನಾವು ತಡೆಗಟ್ಟಬಹುದು. ಅದರ ಜೊತೆಗೆ ಒಳಮೀಸಲಾತಿಯನ್ನೂ ಜಾರಿಗೆ ತರಬೇಕು. ಇದು ಈ ಸಮಸ್ಯೆಯನ್ನು ಪರಿಹರಿಸುವ ಒಂದು ನ್ಯಾಯವಾದ ವಿಧಾನ.

ಪ್ರಶ್ನೆ : ಒಳಮೀಸಲಾತಿ ಬೇಕು ಎಂಬ ಬೇಡಿಕೆಯ ಬಗ್ಗೆ ನಿಮ್ಮ ನಿಲುವೇನು?

ಮೀಸಲಾತಿಯನ್ನು ನಾವು ಒಪ್ಪಿಕೊಂಡ ಮೇಲೆ ಒಳಮೀಸಲಾತಿಯನ್ನೂ ನಾವು ಒಪ್ಪಿಕೊಳ್ಳಬೇಕು, ಅನುಷ್ಠಾನಕ್ಕೆ ತರಬೇಕು. ಇಲ್ಲವಾದರೆ ಯಾವುದೇ ಕೆಟಗರಿ ಒಳಗಿರುವ ಬಲಿಷ್ಠರೇ ಹೆಚ್ಚಾಗಿ ಮೀಸಲಾತಿಯ ಸೌಲಭ್ಯ ಪಡೆದು ಅದರಲ್ಲಿರುವ ದುರ್ಬಲರು ಅದರಿಂದ ವಂಚಿತರಾಗುತ್ತಾರೆ. ಈಗ ನಡೆಯುತ್ತಿರುವುದೂ ಹೀಗೆಯೇ. ಆದ್ದರಿಂದ ಆ ಸಮುದಾಯಗಳಲ್ಲೇ ತಳವರ್ಗದ ಜನ, ನೆಲಕಚ್ಚಿದ ಜನರಿಗೆ ನ್ಯಾಯ ಒದಗಿಸುವ ಕೆಲಸ ಮೊದಲು ಆಗಬೇಕು. ದಲಿತರಲ್ಲೇ ದಲಿತರಾಗಿರುವ ಜನರನ್ನು ಮೇಲೆತ್ತುವ ಕಾರ್ಯ ಆಗಬೇಕು. ಇಲ್ಲವಾದರೆ ಕೆಲವೇ ಬಲಿಷ್ಠರು ಮೀಸಲಾತಿಯ ಮೇಲೆ ಏಕಸ್ವಾಮ್ಯ ಸ್ಥಾಪಿಸುವ ಪ್ರಕ್ರಿಯೆ ಮುಂದುವರೆಯುತ್ತಲೇ ಇರುತ್ತೆ. ಇದನ್ನು ನಾವು ತಪ್ಪಿಸಬೇಕು.

ಶೈಕ್ಷಣಿಕ ಸೌಲಭ್ಯಗಳನ್ನು ಎಲ್ಲಾ ಸಮುದಾಯಗಳ ಬಡವರಿಗೂ ಸಮಾನವಾಗಿ ಕೊಡಲಿ. ಆದರೆ ಮೀಸಲಾತಿಯ ವಿಚಾರಕ್ಕೆ ಬಂದಾಗ ನಾವು ಕೆಲವು ಸೂಕ್ಷ್ಮತೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತೆ, ಅದೇನೆಂದರೆ ಒಂದು ತಲೆಮಾರಿನಲ್ಲಿ ಒಂದು ಕುಟುಂಬಕ್ಕೆ ಒಬ್ಬರಿಗೆ ಮಾತ್ರ ಮೀಸಲಾತಿಯನ್ನು ಅನ್ವಯಿಸಬೇಕು. ಯಾಕೆಂದರೆ ಒಂದು ಕುಟುಂಬದಲ್ಲಿ ವಿದ್ಯಾವಂತರಾಗಿರುವ 5-6 ಜನ ಮಕ್ಕಳಿದ್ದರೆ ಅವರೆಲ್ಲರೂ ಮೀಸಲಾತಿ ಸೌಲಭ್ಯ ಪಡೆದುಕೊಂಡರೆ ಅದೇ ಸಮುದಾಯದಲ್ಲಿ ಇನ್ನೂ ನಿರ್ಲಕ್ಷಿತರಾಗಿರುವ ಅಸಹಾಯಕರಿಗೆ ಅನ್ಯಾಯವಾಗುತ್ತೆ, ಅಂದರೆ ಮೀಸಲಾತಿ ಪಡೆದು ಮೇಲೆ ಹೋಗೋರು ಹೋಗ್ತಾನೇ ಇರ್ತಾರೆ. ಮೀಸಲಾತಿಯಿಂದ ವಂಚಿತರಾಗಿ ಅಸಹಾಯಕ ಸ್ಥಿತಿಯಲ್ಲಿರುವ ಜನ ಅದೇ ಪರಿಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಮೀಸಲಾತಿಯ ಸಮರ್ಪಕ ಬಳಕೆ ಮಾಡಿ, ಇಂಥಾ ಅವಕಾಶ ವಂಚಿತರಿಗೂ ತಲುಪುವಂತೆ ಮಾಡಲು ಮರುಚಿಂತನೆ ನಡೆಯಬೇಕು.

ಪ್ರಶ್ನೆ : ಬಡ್ತಿ ಮೀಸಲಾತಿಯ ಅನುಷ್ಠಾನದ ಬಗ್ಗೆ ಕೂಡ ಭಿನ್ನ ಸ್ವರಗಳು ಕೇಳಿ ಬರುತ್ತಿವೆಯಲ್ಲಾ ?

ಮೀಸಲಾತಿಯ ನಂತರ ಬಡ್ತಿ ಮೀಸಲಾತಿಯ ವಿಷಯ ಪ್ರಮುಖವಾದದ್ದು. ಈ ವಿಷಯದಲ್ಲಿ ನನ್ನ ಸಲಹೆ ಏನೆಂದರೆ ಅರ್ಹತೆಯ ಆಧಾರದಲ್ಲಿ ನೇರವಾಗಿ ನೇಮಕಾತಿ ಮಾಡುವ ಪ್ರಕ್ರಿಯೆ ಜಾರಿಗೆ ತರಬೇಕು. ಇಲ್ಲವಾದರೆ ಸಮಾಜದಲ್ಲಿ ದ್ವೇಷ, ಅಸೂಯೆಗಳು ಹೆಚ್ಚಾಗಲು ಕಾರಣವಾಗುತ್ತೆ.


ಇದರ ಜೊತೆಗೆ ರಾಜಕಾರಣದ ಕ್ಷೇತ್ರಕ್ಕೆ ಮೀಸಲಾತಿ ಅನ್ವಯಿಸುವ ವಿಷಯದಲ್ಲೂ ಮರುಚಿಂತನೆಯ ಅಗತ್ಯವಿದೆ. ರಾಜಕಾರಣದಲ್ಲಿ ವಂಶವೃಕ್ಷವನ್ನೇ ನಾಟ ಹಾಕುವ ಪದ್ಧತಿ ಮುಂದುವರೆಯುತ್ತಿದೆ. ಇತರರಿಗೆ ಅವಕಾಶ ಸಿಗುತ್ತಿಲ್ಲ, ಯಾಕೆಂದರೆ ಈಗಾಗಲೇ ರಾಜಕಾರಣದಲ್ಲಿರುವವರು ಬೇರೆಯವರು ಮುಂದೆ ಬರಲು ಬಿಡುವುದಿಲ್ಲ, ಆದ್ದರಿಂದ ಒಬ್ಬ ವ್ಯಕ್ತಿಗೆ ಒಮ್ಮೆ ಮಾತ್ರ ಅವಕಾಶ ಮಾಡಿಕೊಟ್ಟರೆ ಸಾಕಲ್ಲವೇ? ಆತ ಸೋಲಲಿ, ಗೆಲ್ಲಲಿ ಆತನ ಕರ್ಮ. ಇತರರಿಗೂ ಅವಕಾಶ ಮಾಡಿಕೊಡಬೇಕಲ್ಲವೇ? ಹೀಗೆ ಮೀಸಲಾತಿಯ ಒಳಗೆ ಅನೇಕ ಸೂಕ್ಷ್ಮಗಳಿವೆ. ವೈರುಧ್ಯಗಳಿವೆ. ಆ ವೈರುಧ್ಯಗಳಿಂದ ಅದನ್ನು ಪಾರುಮಾಡಿ ಸರ್ವಜನ ಸ್ವೀಕಾರಾರ್ಹವಾಗುವಂಥ ಒಂದು ಸಮಗ್ರ ಮೀಸಲಾತಿ ತರುವ ಬಗ್ಗೆ ಮರುಚಿಂತನೆ ಮಾಡುವ ಅಗತ್ಯವಿದೆ.

ಪ್ರಶ್ನೆ : ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಜಾತಿಗಳ ನಡುವೆ ಮೀಸಲಾತಿಯ ಹಂಚಿಕೆಯಲ್ಲಿ ಬಹಳ ತಾರತಮ್ಯ ನಡೆಯುತ್ತಿದೆ. ಸರಿಪಡಿಸುವುದು ಹೇಗೆ?

ನಮ್ಮ ಸಮಾಜದಲ್ಲಿ ಶೋಷಿತರಲ್ಲೇ ಅತ್ಯಂತ ಶೋಷಿತರೆಂದರೆ ದಲಿತರು,ಅದರಲ್ಲೂ ದಲಿತ ಮಹಿಳೆಯರು. ದಲಿತರು ಎಂದರೆ ಅದರಲ್ಲಿ ಸ್ಪೃಶ್ಯ ದಲಿತರು ಯಾರು ಮತ್ತು ಅಸ್ಪೃಶ್ಯ ದಲಿತರು ಯಾರು ಎಂಬುದನ್ನು ಸ್ಪಷ್ಟವಾಗಿ ಗುರುತಿಸಬೇಕು. ಅಸ್ಪೃಶ್ಯ ದಲಿತರ ಜೊತೆಗೆ ಸ್ಪೃಶ್ಯ ಜಾತಿಗಳನ್ನು ಸೇರಿಸುವುದು ಯಾವ ನ್ಯಾಯ? ಇದರಲ್ಲೇ ಒಂದು ಅನೈತಿಕತೆ ಅಡಗಿದೆ ಎಂಬುದು ನನ್ನ ಅಭಿಪ್ರಾಯ. ಅಸ್ಪೃಶ್ಯತೆಯ ಕಳಂಕ ಅಂಟಿರುವ ದಲಿತ ಸಮುದಾಯಗಳನ್ನು ಒಂದು ಗುಂಪಿಗೆ ತರಬೇಕು. ಅವರನ್ನು ಸಮಾಜದಲ್ಲಿ ಮೇಲೆತ್ತಲಿಕ್ಕೆ ಪ್ರಾಮಾಣಿಕ ಪ್ರಯತ್ನ ಆಗಬೇಕು. ಅವರಿಗೆ ನಿಜವಾಗಿಯೂ ಸಾಮಾಜಿಕ ನ್ಯಾಯ ಒದಗಿಸಬೇಕೆಂದರೆ ಅಸ್ಪೃಶ್ಯ ಜಾತಿಗಳ ಗುಂಪಿನಿಂದ ಸ್ಪೃಶ್ಯ ದಲಿತರನ್ನು (ಉದಾ: ಭೋವಿ, ಲಂಬಾಣಿ ಇತ್ಯಾದಿ) ಪ್ರತ್ಯೇಕ ಮಾಡಬೇಕು. ನನ್ನ ಮಾತಿನ ಆಶಯವೇನೆಂದರೆ ನಿಜವಾದ ಅಸ್ಪೃಶ್ಯತೆಯ ಕಳಂಕ ಅಂಟಿರುವ ಸಮುದಾಯಗಳನ್ನು ಸಮಾಜದ ಮುಖ್ಯಧಾರೆಗೆ ತರುವುದು ಆದ್ಯತೆಯ ವಿಷಯವಾಗಬೇಕು. ಹಾಗೆ ಸ್ಪೃಶ್ಯ ದಲಿತರನ್ನು ಸಹ ಒಂದು ಗುಂಪಾಗಿ ಪರಿಗಣಿಸಿ ಅವರಿಗೆ ನ್ಯಾಯವಾಗಿ ಸಿಗಬೇಕಾದ ಪಾಲನ್ನು ಅವರಿಗೆ ನೀಡಬೇಕು. ಈ ಬಗ್ಗೆ ಮರುಚಿಂತನೆ ಆಗಬೇಕು.

ಅದೇರೀತಿ ಪರಿಶಿಷ್ಟ ಪಂಗಡಗಳಿಗೂ ಇದೇ ಮಾನದಂಡ ಅಳವಡಿಸಬೇಕು. ಹಿಂದುಳಿದ ಪ.ಪಂಗಡ ಹಾಗೂ ಅತಿ ಹಿಂದುಳಿದ ಪ.ಪಂಗಡ ಎಂಬುದಾಗಿ ವಿಂಗಡಿಸುವುದು ಸೂಕ್ತ ಅನಿಸುತ್ತೆ. ಹಿಂದುಳಿದ ವರ್ಗಗಳಲ್ಲಿ ಬಿ.ಸಿ ಮತ್ತು ಒ.ಬಿ.ಸಿ ಅಂತಾ ಮಾಡಿದ್ದಾರಲ್ಲಾ ಹಾಗೆ. ಗುರುತಿಸುವಿಕೆ ಬಹಳ ಮುಖ್ಯ.

ರಕ್ಷಣಾ ವೇದಿಕೆ ಸುಳ್ಳು ದೂರು ವಜಾ ಆಯಿತು!



ನಮ್ಮ ಪತ್ರಿಕಾ ಬಳಗದ ಪಾರ್ವತೀಶ ವಿರುದ್ಧ ಕರ್ನಾಟಕ ರಕ್ಷಣಾ ವೇದಿಕೆಯ ಕರವೇ ನಲ್ನುಡಿಯ ಜ್ಞಾನೇಂದ್ರ ಕುಮಾರ ಕೊಟ್ಟಿದ್ದ ಪೊಲೀಸ್ ದೂರು ವಜಾ ಆಗಿದೆ.


"ನಾರಾಯಣ ಗೌಡನಿಂದ 50 ಲಕ್ಷ ರೂಪಾಯಿ ಕೊಡಿಸಬೇಕೆಂತಲೂ ಇಲ್ಲದಿದ್ದರೆ ಆತನ ಭ್ರಷ್ಟಾಚಾರಗಳ ಬಗ್ಗೆ ವರದಿ ಮಾಡುವುದಾಗಿಯೂ ಪಾರ್ವತೀಶ ತನ್ನ ಮೊಬೈಲ್ 9611257695ಗೆ ಫೋನ್ ಮಾಡಿ ಬೆದರಿಸಿದ್ದರೆಂದು" ಜ್ಞಾನೇಂದ್ರ ಹೈಗ್ರೌಂಡ್ಸ್ ಪೊಲೀಸರಿಗೆ ದಿನಾಂಕ 26-3-2010 ರಂದು ಕಂಪ್ಲೇಂಟ್ ನೀಡಿದ್ದರು. ಪಾರ್ವತೀಶ ವಿರುದ್ಧ ಕರವೇಗಳು ಬೆಂಗಳೂರಿನ ಮಹಾತ್ಮಗಾಂಧಿ ಪ್ರತಿಮೆ ಎದುರು 'ಸತ್ಯಾ'ಗ್ರಹ ಕೂಡ ನಡೆಸಿದ್ದರು.

ಕೊನೆಗೂ ಆ 'ಸತ್ಯ' ಏನೆಂದು ಈಗ ಪೊಲೀಸರ ತನಿಖೆಯಿಂದ ಹೊರ ಬಂದಿದೆ.


ಮೊದಲಿಗೆ ಜ್ಞಾನೇಂದ್ರ ತನ್ನದೆಂದು ಹೇಳಿಕೊಂಡಿದ್ದ ಮೊಬೈಲ್ 9611257695 ಆತನದಲ್ಲ, ಬದಲಿಗೆ ಮಂಜುನಾಥ ನಗರದ ರಮೇಶ್ ಎಂಬ ಟೈಲರ್‌ಗೆ ಸೇರಿದ್ದೆಂಬುದು ಗೊತ್ತಾಗಿದೆ.


ಜ್ಞಾನೇಂದ್ರನಿಗೆ ಗಾಂಧಿಬಜಾರಿನ ಕಾಯಿನ್ ಬೂತ್‌ನಿಂದ ಬೆದರಿಕೆಯ ಫೋನ್ ಕರೆ ಹೋಯಿತೆನ್ನಲಾದ ಸಮಯದಲ್ಲಿ ಪಾರ್ವತೀಶ ಅಲ್ಲಿಂದ 5 ಕಿ.ಮೀ. ದೂರದ ಬನಶಂಕರಿ 3ನೇ ಹಂತದಲ್ಲಿದ್ದರೆಂಬುದನ್ನು ಬಿ.ಎಸ್.ಎನ್.ಎಲ್. ಟವರ್ ಸಿಗ್ನಲ್ ದಾಖಲೆಗಳಿಂದ ಸಾಕ್ಷಿ ಸಿಕ್ಕಿದೆ. ಹಾಗಾಗಿ ಪಾರ್ವತೀಶ ಈ ಫೋನ್ ಕರೆ ಮಾಡಿಲ್ಲವೆಂಬುದು ಸಾಬೀತಾದಂತಾಯಿತು.

ಇನ್ನೂ ವರದಿ ಮಾಡಲು ಅಥವಾ ಮಾಡದಿರಲು ಹಣ ಪಡೆದ ಆರೋಪದ ಬಗ್ಗೆ....



ನಾರಾಯಣ ಗೌಡರ ಬಗ್ಗೆ ಲಂಕೇಶ್ ಈ ಹಿಂದೆಯೂ ಬರೆದಿದೆ. ಈಗಿನ ಸುಳ್ಳು ದೂರು ಕೊಟ್ಟು ಬೆದರಿಸಲು ಯತ್ನಿಸಿದಾಗಲೂ ಬರೆಯಲಾಗಿದೆ. ಆದರೆ 'ಸತ್ಯ'ವಾದಿ ಶ್ರೀಮಾನ್ ನಾರಾಯಣ ಗೌಡರಿಗೆ 'ಲಂಕೇಶ್' ತನ್ನ ಬಗ್ಗೆ ಯಾವುದೇ 'ಸತ್ಯ' ಬರೆಯಕೂಡದು ಎನ್ನುವ ಅಭಿಪ್ರಾಯ ಇರುವಂತಿದೆ. ಹಾಗಾಗಿ ಅವರು 'ತನ್ನ ವಿರುದ್ಧ ಲಂಕೇಶ್‌ನಲ್ಲಿ ಮಾನಹಾನಿಯಾಗುವಂತಹ ವರದಿ ಪ್ರಕಟಿಸದಂತೆ' ಕೋರ್ಟ್‌ಗೆ ಅರ್ಜಿ ಹಾಕಿ **injunction** ಪಡೆದಿದ್ದಾರೆ!






ಅದೇನೇ ಇರಲಿ, ಸತ್ಯಸಂಗತಿಗಳನ್ನು ಬರೆಯದಂತೆ 'ಲಂಕೇಶ್' ಬಳಗವನ್ನು ಬೆದರಿಸುವ ದುರುದ್ದೇಶದಿಂದಲೇ ಪಾರ್ವತೀಶ್ ವಿರುದ್ಧ ಈ ಸುಳ್ಳು ದೂರನ್ನು ಕೊಡಿಸಲಾಗಿತ್ತು ಎಂಬುದೀಗ ಖಚಿತವಾಗಿದೆ.

ಈ ದೂರು ನೀಡಿದ್ದು ಜ್ಞಾನೇಂದ್ರ ಕುಮಾರ್; ಅವರೊಂದಿಗಿದ್ದವರು ದಿನೇಶ್ ಕುಮಾರ್. ಇವರ ಬಗ್ಗೆ ಪತ್ರಕರ್ತ ಮಿತ್ರರು ಕೊಂಚ ಎಚ್ಚರಿಕೆಯಿಂದ ಇದ್ದರೆ ಒಳಿತು.

ಯಾವುದೇ ಆರೋಪ ಹಾಗೂ ಒತ್ತಡಗಳಿಗೂ ಮಣಿಯದೆ ನಾರಾಯಣ ಗೌಡನ ನಿಜ ಬಣ್ಣ ಏನೆಂದು ತನಿಖೆಯ ಮೂಲಕ ಸಾಬೀತುಮಾಡಿದ ಹೈಗ್ರೌಂಡ್ಸ್ ಠಾಣೆಯ ಇನ್ಸ್‌ಪೆಕ್ಟರ್ ಮೃತ್ಯುಂಜಯಪ್ಪ ಹಾಗೂ ಎಸ್.ಐ. ಹರಿಯಪ್ಪ ಹಾಗೂ ಸಿಬ್ಬಂದಿಗೆ 'ಲಂಕೇಶ್' ಬಳಗದ ಧನ್ಯವಾದಗಳು.


ಆರೋಪವನ್ನು ದೃಢಪಡಿಸುವಂತಹ ಇತರೆ ಯಾವುದೇ ಸಾಕ್ಷಿಗಳು ಇರುವುದಿಲ್ಲ. ಪಿರ್ಯಾದುದಾರರ ಕಚೇರಿಯಲ್ಲಿ ಕೆಲಸ ಮಾಡುವವರು, ಪಾರ್ವತೀಶ ಕರೆ ಮಾಡಿ ಹಣ ಕೇಳುತ್ತಾನೆ ಎಂದು ಪಿರ್ಯಾದುದಾರರು ಹೇಳಿದ್ದನ್ನು ಹೇಳುತ್ತಾರೆಯೇ ವಿನಃ ಇವರು ಕರೆಯನ್ನು ಖುದ್ದು ಕೇಳಿಸಿಕೊಂಡಿರುವುದಿಲ್ಲ ಮತ್ತು ನೋಡಿರುವುದಿಲ್ಲ. ಈ ಪ್ರಕರಣದಲ್ಲಿ ಆರೋಪವನ್ನು ದೃಢಪಡಿಸಲು ಯಾವುದೇ ಉಪಯುಕ್ತ ಸಾಕ್ಷಾದಾರಗಳು ಇರುವುದಿಲ್ಲ. ಆರೋಪಿ ತಿಳಿಸಿರುವಂತೆ, ಗೌರಿ ಲಂಕೇಶ್ ಪತ್ರಿಕೆಯ ವರದಿಗಾರರು ಕನ್ನಡ ರಕ್ಷಣಾ ವೇದಿಕೆಯ ಸಂಘಟನೆಯ ಬಗ್ಗೆ ಮತ್ತು ಅದರ ಅಧ್ಯಕ್ಷ ಶ್ರೀ.ಟಿ.ಎ ನಾರಾಯಣಗೌಡ ರವರ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದುದನ್ನು ಮೊದಲೇ ತಿಳಿದುಕೊಂಡು ಈ ಸಂಚಿಕೆ ಪ್ರಕಟವಾಗುವ ಮೊದಲೆ ಈ ರೀತಿಯ ದೂರು ನೀಡಿರುವ ಸಾಧ್ಯತೆ ಇರಬಹುದು. ಪಿರ್ಯಾದುದಾರರು ತಮ್ಮ ದೂರಿನಲ್ಲಿ ತಿಳಿಸಿರುವಂತೆ ದಿನಾಂಕ 26.08.2010 ರಂದು ಬೆಳಿಗ್ಗೆ 11.33 ಗಂಟೆಗೆ ಅವರ ಮೊಬೈಲ್‌ಗೆ ಕರೆಯೊಂದು ಬಂದಿದ್ದು ಈ ಕರೆಯನ್ನು ಆರೋಪಿ ಪಾರ್ವತೀಶ ಬಿಟ್ಟು ಬೇರೆ ಯಾರೊ ಮಾಡಿದ್ದು ಇದುವರೆಗಿನ ತನಿಖೆಯಿಂದ ಅವರು ಯಾರೆಂಬುದು ಪತ್ತೆಯಾಗಿರುವುದಿಲ್ಲ. ಆದ್ದರಿಂದ ಈ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಆರೋಪವನ್ನು ದೃಢಪಡಿಸಲು ಸಾಕ್ಷಾದಾರಗಳ ಕೊರತೆ ಇರುವುದರಿಂದ ಈ ಪ್ರಕರಣದಲ್ಲಿ 'ಬಿ' ಅಂತಿಮ ವರದಿಯನ್ನು ಸಲ್ಲಿಸಲು ಮಾನ್ಯ ಎಸಿಪಿ ಶೇಷಾದ್ರಿಪುರಂ ರವರ ಕಛೇರಿ ಅನುಮತಿ ಸಂಖ್ಯೆ ಸಂ.ಎಸ್‌ಪಿಎಸ್‌ಡಿ/ಬಿ&ಸಿ/138/2011 ದಿ:10/08/2011 ರಂದು ಅನುಮತಿ ಪಡೆದು ಪಿರ್ಯಾದುದಾರರಿಗೆ ಫಾರಂ ನಂ.159 ನ್ನು ಖುದ್ದು ಜಾರಿ ಮಾಡಿದ್ದು, ಅದರ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಆದ್ದರಿಂದ ಮಾನ್ಯ ಘನ ನ್ಯಾಯಾಲಯದಲ್ಲಿ ನಿವೇದಿಸಿಕೊಳ್ಳುವುದೇನೆಂದರೆ ಈ ಕೇಸಿನ 'ಬಿ' ಅಂತಿಮ ವರದಿಯನ್ನು ಅಂಗೀಕರಿಸಿಕೊಂಡು ನ್ಯಾಯಾಲಯದ ಎಫ್‌ಐಆರ್ ನಂಬರನ್ನು ನೀಡಲು ಕೋರಿದೆ.

ಪೊಲೀಸರ ತನಿಖಾ ವರದಿ

ಈಗ ಏನು ನಡೀತಾಯಿದೆ ಅಂದರೆ ಮೀಸಲಾತಿಯ ಸೌಲಭ್ಯ ಪಡೆದುಕೊಳ್ಳೋರೇ ಪಡಕೊಳ್ತಾ ಇದಾರೆ. ದುರ್ಬಲರಾಗಿರುವವರು ನಿರಂತರ ವಂಚನೆಗೆ ಗುರಿಯಾಗ್ತಾ ಇದಾರೆ. ದಲಿತರಲ್ಲೇ ಬಹು ದೊಡ್ಡ ಅಂತರ ಸೃಷ್ಟಿಯಾಗುತ್ತಾ ಇದೆ.

ಒಬ್ಬರ ಸೌಲಭ್ಯವನ್ನು ಮತ್ತೊಬ್ಬರು ಕಸಿದುಕೊಳ್ಳುವ ದೊಡ್ಡ ಹುನ್ನಾರವೇ ಚಾಲ್ತಿಯಲ್ಲಿದೆ. ಒಟ್ಟಾರೆ ನಮ್ಮ ಸಾಮಾಜಿಕ ಪರಿಸರದಲ್ಲಿ ಅವಕಾಶಗಳು ಕಡಿಮೆ ಇವೆ. ಸ್ಪರ್ಧೆ ಜಾಸ್ತಿ ಇದೆ. ಹೀಗಿರುವಾಗ ಮೀಸಲಾತಿಯ ವಂಚನೆ ಶುರುವಾಗ್ತಾ ಇದೆ. ಈ ದೇಶದಲ್ಲಿ ಲಾಗಾಯ್ತಿನಿಂದಲೂ ಬ್ರಾಹ್ಮಣರು ವಿದ್ಯಾವಂತರಾಗಿದ್ದರು. ಅವರಿಗೆ ಹೇಗೆ ಸವಲತ್ತುಗಳನ್ನು ಪಡೆದುಕೊಳ್ಳಬೇಕೆಂಬುದು ಚೆನ್ನಾಗಿ ಗೊತ್ತಿತ್ತು. ಹಾಗೆಯೇ ಮೀಸಲಾತಿಯ ವಂಚನೆಗೆ ನಾಂದಿ ಹಾಡಿದವರೇ, ಅದನ್ನು ಪ್ರಾರಂಭ ಮಾಡಿದವರೇ ಬ್ರಾಹ್ಮಣರು ಎಂಬುದಕ್ಕೆ ನನ್ನ ಬಳಿ 42 ವರ್ಷಗಳ ಹಿಂದಿನ ಆಧಾರಗಳಿವೆ. ಪೋಷಕರಿಲ್ಲದ ತಮ್ಮ ಬ್ರಾಹ್ಮಣ ಮಕ್ಕಳನ್ನು ಶಾಲೆಗೆ ಸೇರಿಸುವಾಗಲೇ ಎಸ್.ಸಿ ಅಂತ ಬರೆಸಿದ್ದಾರೆ. ಅವರಿಗೆ ಹೇಗೆ ಸವಲತ್ತುಗಳನ್ನು ಕಬಳಿಸಬೇಕು ಅಂತಾ ಚೆನ್ನಾಗಿ ಗೊತ್ತಿತ್ತು, ಈ ಬಗ್ಗೆ ನನ್ನ ಬಳಿ ದಾಖಲೆಗಳಿವೆ.

ಪ್ರಶ್ನೆ : ಬೇಡ ಜಂಗಮ ಎಂಬ ಹೆಸರಿನಲ್ಲಿ ವೀರಶೈವರು ಮೀಸಲಾತಿಯನ್ನು ಕಬಳಿಸುತ್ತಿದ್ದಾರೆ ಎಂಬ ಆರೋಪ.....

ಬೇಡ ಜಂಗಮ, ಬುಡ್ಗ ಜಂಗಮ, ಮಾಲಾ ಜಂಗಮ ಎಂಬ ಹೆಸರಿನಲ್ಲಿ ವೀರಶೈವ ಜಂಗಮರು ಮೀಸಲಾತಿ ಪಡೆದುಕೊಳ್ಳಲು ಪ್ರಾರಂಭಿಸಿದ್ದಾರೆ. ಶೋಷಿತ ಸಮುದಾಯಗಳಿಗೆ ಸೇರಬೇಕಾದ ಸವಲತ್ತನ್ನು ವೀರಶೈವರು ಪಡೆದುಕೊಳ್ಳುವುದು ಯಾವ ನ್ಯಾಯ? ಇದು ಸರಿಯಾದ ಮಾತಿನಲ್ಲಿ ಹೇಳಬೇಕೆಂದರೆ ಮೀಸಲಾತಿಯ ಕಳ್ಳತನ. ವೀರಶೈವ ಜಂಗಮರು ಸಾಮಾಜಿಕವಾಗಿ, ಧಾರ್ಮಿಕವಾಗಿ ಯಾವ ರೀತಿಯಿಂದಲೂ ಬೇಡ ಜಂಗಮರಾಗಲು ಸಾಧ್ಯವೇ ಇಲ್ಲ.

ಸಾಮಾಜಿಕ ಪ್ರತಿಷ್ಠೆಯ ವಿಷಯ ಬಂದಾಗ ತಾವು ಶ್ರೇಷ್ಠರೆಂದು ಕ್ಲೈಮ್ ಮಾಡ್ತಾರೆ, ಸರ್ಕಾರಿ ಸೌಲಭ್ಯಗಳ ವಿಷಯ ಬಂದಾಗ ಪರಿಶಿಷ್ಟ ಜಾತಿಯ ಪಾಲಿಗೆ ಕೈ ಹಾಕುತ್ತಾರೆ. ವೀರಶೈವ ಜಂಗಮರಲ್ಲಿ ಬಹುಪಾಲು ಜನ ಬಡವರೇ ಇದ್ದಾರೆ ಎಂಬುದು ಸತ್ಯ. ಆದ್ದರಿಂದ ಅವರು ಆರ್ಥಿಕ ಮಾನದಂಡಗಳ ಆಧಾರದಲ್ಲಿ ತಮ್ಮ ಬಡತನದ ಕಾರಣಕ್ಕೆ ಪ್ರತ್ಯೇಕ ಮೀಸಲಾತಿಯನ್ನು ಪಡೆದುಕೊಳ್ಳಲಿ. ಅದು ಬಿಟ್ಟು ದಲಿತರಿಗೆ ಸಲ್ಲಬೇಕಾದ ಮೀಸಲಾತಿಯನ್ನು ಕಸಿದುಕೊಳ್ಳುವ, ಕದಿಯುವ ಕೆಲಸಕ್ಕೆ ಇಳಿದಿರುವುದು ಸರ್ವಥಾ ನ್ಯಾಯವಲ್ಲ. ಇದು ಒಂದು ಸಮಾಜದ ನೈತಿಕತೆಯ ಪ್ರಶ್ನೆ. ಇದನ್ನು ಆ ಸಮುದಾಯದ ಮುಖಂಡರು ಗಂಭೀರವಾಗಿ ಚಿಂತಿಸಿ ಇನ್ನಾದರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಈ ಮಾತನ್ನು ನಾನು 22 ವರ್ಷಗಳಿಂದಲೂ ಹೇಳುತ್ತಾ ಬಂದಿದ್ದೇನೆ.

ಪ್ರಶ್ನೆ : ಮೀಸಲಾತಿಯ ಒಂದು ನಿರ್ದಿಷ್ಟ ಕೆಟಗರಿಯ ಒಳಗಡೆಯೇ ನಾನಾ ತಾರತಮ್ಯಗಳಿವೆಯೆಂಬ ದೂರುಗಳ ಬಗ್ಗೆ ಏನು ಹೇಳುತ್ತೀರಿ?

ಒಂದು ಕಡೆ ಬಲಿಷ್ಠರಾಗಿರುವ ವರ್ಗಗಳು ಸರ್ಕಾರಿ ಸವಲತ್ತುಗಳನ್ನು ಪಡೆದುಕೊಳ್ಳಲು ತಮ್ಮನ್ನು ಮೀಸಲಾತಿಯ ಕೆಟಗರಿಗಳಲ್ಲಿ ಸೇರಿಸುವಂತೆ ರಾಜಕೀಯ ಒತ್ತಡಗಳನ್ನು, ಪ್ರಭಾವಗಳನ್ನು ಬೀರುತ್ತಿದ್ದಾರೆ. ಶೈಕ್ಷಣಿಕವಾಗಿ, ಆರ್ಥಿಕವಾಗಿ ಎಲ್ಲದಕ್ಕಿಂತ ಮುಖ್ಯವಾಗಿ ರಾಜಕೀಯವಾಗಿ ಪ್ರಬಲರಾಗಿರುವವರೇ. ಇದು ನ್ಯಾಯವಲ್ಲ.

ಮತ್ತೊಂದು ಕಡೆ, ಎಸ್‌ಸಿ ಜಾತಿಗಳಲ್ಲಿ ಒಟ್ಟು ನೂರಕ್ಕೂ ಹೆಚ್ಚಿನ ಜಾತಿಗಳನ್ನು ಪಟ್ಟಿ ಮಾಡಿದ್ದಾರೆ. ಆದರೆ ಇದುವರೆಗೂ ಮೀಸಲಾತಿಯ ಪ್ರಯೋಜನ ಪಡೆದುಕೊಂಡಿರುವುದು ಪ್ರಮುಖವಾಗಿ ಎರಡು ಜಾತಿಗಳು ಮಾತ್ರ. ಹೀಗಾದರೆ ಉಳಿದ ನೂರಕ್ಕೂ ಹೆಚ್ಚಿನ ಸಮುದಾಯಗಳ ಸ್ಥಿತಿಗತಿ ಏನು? ಅವರನ್ನು ಕೇಳುವವರಾರು? ಇನ್ನೊಂದು ಕಡೆ ಈ ಎರಡು ಜಾತಿಗಳಲ್ಲೂ ಸಹ ಬಲಗೈ ಎಡಗೈಗಳ ನಡುವೆ ಸಮಸ್ಯೆ ಶುರುವಾಗಿದೆ. ಬಲಗೈನವರೇ ಹೆಚ್ಚಿನ ಮೀಸಲಾತಿ ಪಡೆದುಕೊಳ್ತಾ ಇದಾರೆ ಅಂತ ಎಡಗೈನವರು ಆರೋಪಿಸುತ್ತಿದ್ದಾರೆ. ಈ ಎಲ್ಲಾ ಹಿನ್ನೆಲೆಯಲ್ಲಿ ಸರಿಯಾದ ಮರುಚಿಂತನೆ ನಡೆಸಿ ಒಳ ಮೀಸಲಾತಿಯನ್ನು ಒಳಗೊಂಡ ಒಂದು ಸಮಗ್ರ ಮೀಸಲಾತಿ ನೀತಿಯನ್ನು ರೂಪಿಸುವ ಅಗತ್ಯವಿದೆ. ಇಲ್ಲದೇ ಹೋದರೆ ನಮ್ಮ ಸಮಾಜದಲ್ಲಿ ಮೀಸಲಾತಿ ಅನ್ನೋದೆ ಸಾಮಾಜಿಕ ಭೇದವನ್ನು ಸೃಷ್ಟಿಸುವ ಒಂದು ಸಾಧನವಾಗಿಬಿಡುತ್ತೆ.

ಉದಾಹರಣೆಗೆ ಕೊರಗರನ್ನು ತೆಗೆದುಕೊಳ್ಳಿ. ನನ್ನ ತಿಳಿವಳಿಕೆಯ ಪ್ರಕಾರ ಅವರಲ್ಲಿ ಇದುವರೆಗೆ ಕೇವಲ ಒಬ್ಬನೇ ಒಬ್ಬ ಮಾತ್ರ ಪದವೀಧರನಾಗಿದ್ದಾನೆ ಎಂದರೆ ಪರಿಸ್ಥಿತಿಯ ಗಂಭೀರತೆಯನ್ನು ನಾವು ಅರ್ಥಮಾಡಿಕೊಳ್ಳಬಹುದು. ಅವರಿಗೆ ರಾಜಕೀಯ ನಾಯಕತ್ವವೂ ಇಲ್ಲ. ಅವರ ಸಂಖ್ಯೆ ತುಂಬಾ ಕಡಿಮೆ ಇರೋದರಿಂದ ಅವರು ಓಟುಬ್ಯಾಂಕ್ ರಾಜಕೀಯದ ವ್ಯಾಪ್ತಿಗೂ ಬರುವುದಿಲ್ಲ. ಆದ್ದರಿಂದ ಅರವತ್ತು ವರ್ಷಗಳ ನಂತರವೂ ನಿರಂತರ ನಿರ್ಲಕ್ಷ್ಯಕ್ಕೆ ತುತ್ತಾಗಿದ್ದಾರೆ. ಇಂಥಾ ಸಮುದಾಯಗಳನ್ನೆಲ್ಲಾ ಒಂದು ಗುಂಪಿನಡಿ ತಂದು ಅವರಿಗೆ ಸಲ್ಲಬೇಕಾದ ಪಾಲನ್ನು ನೀಡುವುದು ಸಾಮಾಜಿಕ ನ್ಯಾಯ ಅನಿಸಿಕೊಳ್ಳುತ್ತೆ.

ಪ್ರಶ್ನೆ : ವಿಭಿನ್ನ ಜಾತಿಗಳ ನಡುವೆ ಸಂಘರ್ಷದ ವಾತಾವರಣ ದಿನೇದಿನೆ ಹೆಚ್ಚಾಗಲು ಕಾರಣವೇನು?

ಸುಮಾರು 5000 ವರ್ಷಗಳಿಂದ ಆಡಳಿತದಲ್ಲಿ ನೂರಕ್ಕೆ ನೂರು ಮೀಸಲಾತಿಯನ್ನೂ ಅನುಭವಿಸಿದವರು ಬ್ರಾಹ್ಮಣರು. ಇಂಥಾ ಒಂದು ಮೀಸಲಾತಿಯನ್ನು ಯಾವ ಸರ್ಕಾರಗಳೂ ಜಾರಿಗೆ ತರಲು ಸಾಧ್ಯವಿಲ್ಲ, ಆದರೆ ಇದು ನಮ್ಮ ಇತಿಹಾಸದಲ್ಲಿ ನಡೆದುಬಂದಿದೆ.

ವರ್ಣ ಮತ್ತು ಜಾತಿವ್ಯವಸ್ಥೆಯ ಮೂಲ ಸ್ವಭಾವವೇ ಮನುಷ್ಯರನ್ನು ಬೇರ್ಪಡಿಸುವುದು, ಭೇದಗಳನ್ನು ಸೃಷ್ಟಿಸುವುದು. ಸಮಾಜವನ್ನು ವಿಭಜಿಸುವುದೇ ಅವುಗಳ ಮೂಲಗುಣ. ವರ್ಣ ಮತ್ತು ಜಾತಿಗಳು ಮನುಷ್ಯರನ್ನು ಒಂದಾಗಲಿಕ್ಕೆ ಬಿಡೋದಿಲ್ಲ, ಹಾಗೆ ಇಂದಿನ ದಿನಗಳಲ್ಲಿ ರಾಜಕಾರಣಿಗಳು ಮತ್ತು ಅಧಿಕಾರಿಗಳು ಜಾತಿಗಳಿಗೆ ಸ್ಫೋಟಕ ಗುಣಗಳನ್ನು ತುಂಬುತ್ತಿದ್ದಾರೆ. ಜಾತಿಗಳಿಗಿಂತ ಇಂದು ಉಪಜಾತಿಗಳು ಇನ್ನಷ್ಟು ಪ್ರಬಲರಾಗುತ್ತಿದ್ದಾರೆ. ಬಲಿಷ್ಠ ಜಾತಿಗಳು ಇನ್ನಷ್ಟು ಹೆಚ್ಚಿನ ಪಾಲು ಕಸಿಯಲು ಪ್ರಯತ್ನಿಸುತ್ತಿದ್ದರೆ ದುರ್ಬಲ ಜಾತಿಗಳು ಈಗೀಗ ಎಚ್ಚೆತ್ತುಕೊಂಡಿರುವ ಜನವರ್ಗಗಳು ತಮ್ಮ ನ್ಯಾಯಯುತ ಪಾಲಿಗಾಗಿ ಆಗ್ರಹಿಸುತ್ತಿದ್ದಾರೆ. ಹೀಗೆ ಜಾತಿಗಳೊಳಗೆ ಅಂತಃಸ್ಪರ್ಧೆ ಉಂಟಾಗಿದೆ. ಹೀಗಾಗಿ ನಮ್ಮ ಸಮಾಜದಲ್ಲಿ ಜಾತಿಜಾತಿಗಳ ನಡುವೆ ದ್ವೇಷ, ಅಸೂಯೆ, ಬಿರುಕು ಜಾಸ್ತಿಯಾಗ್ತಾ ಇದೆ. ರಾಜಕಾರಣಿಗಳು, ಅಧಿಕಾರಿಗಳು ಹಾಗೂ ಮಠಾಧಿಪತಿಗಳು ಈ ಬಿರುಕನ್ನು ಹೆಚ್ಚಿಸುತ್ತಿದ್ದಾರೆ ಹಾಗೂ ಈ ಮೂರೂ ವರ್ಗಗಳು ಈ ಬಿರುಕಿನ ಲಾಭವನ್ನು ಪಡೆದುಕೊಳ್ತಾ ಇದ್ದಾರೆ. ಇದನ್ನು ಹೇಗೆ ಸರಿಮಾಡಬೇಕೆಂದು ಗಂಭೀರ ಚಿಂತನೆ ನಡೆಯಬೇಕು. ಈ ನಿಟ್ಟಿನಲ್ಲಿ ಸರ್ಕಾರಗಳು ಕಾರ್ಯಪ್ರವೃತ್ತನಾಗಬೇಕು.

ಒಟ್ಟಾರೆಯಾಗಿ ನೋಡುವುದಾದರೆ ಒಂದು ಸಮಗ್ರ ಮೀಸಲಾತಿ ನೀತಿಯ ಅಗತ್ಯವಿದೆ. ಎಲ್ಲಾ ಜಾತಿಗಳಲ್ಲೂ ಬಡವರಿದ್ದಾರೆ. ಅಂಥಾ ಬಡವರಿಗೆಂದೇ ವಿಶೇಷ ಸವಲತ್ತುಗಳನ್ನು ಕೊಡುವ ಕೆಲಸವೂ ಆಗಬೇಕು. ಆದರೆ ಕಟ್ಟಕಡೆಯ ಜನರನ್ನು ತಲುಪಲು ಮೀಸಲಾತಿಯೊಂದೇ ನಮ್ಮ ಮುಂದಿರುವ ಪರಿಹಾರ. ಅದು ಬಿಟ್ಟು ಬೇರೆ ಯಾವ ಆಯುಧವೂ ಇಲ್ಲ.

ಪ್ರಶ್ನೆ : ಇಂಥಾ ಸಂದಿಗ್ಧ ಸನ್ನಿವೇಶದಲ್ಲಿ ಪ್ರಗತಿಪರರ ಪಾತ್ರವನ್ನು ಯಾವ ರೀತಿ ನಿರೀಕ್ಷಿಸಬಹುದು?

ಹಿಂದೂ ಧರ್ಮದ ಸಮಸ್ಯೆ ಅಂದ್ರೆ ನೀವೆ?

ಥೂತ್ತೇರಿ

ಯಾಹೂ

"ಯಾವುದೇ ಪದ್ಧತಿ ಸಾವಿರಾರು ವರ್ಷದಿಂದ ನಡೆದುಕೊಂಡು ಬಂದಿದೆ ಅನ್ನುವುದಾದರೆ, ಅದರಲ್ಲಿ ನಿಜಕ್ಕೂ ವೈಜ್ಞಾನಿಕವಾದ ಅಂಶಗಳು ಅಡಕವಾಗಿರುತ್ತವೆ" ಎಂದು ನಮ್ಮ ವೇದಬ್ರಹ್ಮ, ಗೀತಾಪಂಡಿತ, ವಿದ್ಯಾವಾಚಸ್ಪತಿ ಎಂಬ ಬಿರುದಾಂಕಿತರಾದ ಗೋವಿಂದಾಚಾರಿ ಹೇಳಿದರೆಂಬ ಮಾಹಿತಿಯನ್ನಾಧರಿಸಿ, ಈ ಬಗ್ಗೆ ಅವರೊಡನೆ ಮಾತನಾಡಬೇಕೆನಿಸಿತಲ್ಲಾ. ಆ ಕೂಡಲೇ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: ಭಜಗೋವಿಂದಂ, ಭಜಗೋವಿಂದಂ, ಗೋವಿಂದಂ ಭಜ......"

"ಹಲೋ? ಯಾರು ಹೇಳಿ?"

"ನಾನು ಯಾಹು ಅಂತ ಪತ್ರಕರ್ತ ಸಾರ್. ತಾವು ಗೋವಿಂದಾಚಾರಿನ?"

"ಹೌದು ಏನಾಗಬೇಕು?"

"ಬಿಡುವಾಗಿದ್ದಿರಾ ಸಾರ್? ಒಂದೆರಡು ಮಾತಾಡಬೇಕು."

"ಮಾತನಾಡುವುದಕ್ಕಾದರೆ ನಾನು ಯಾವಾಗಲೂ ಬಿಡುವಾಗಿರುತ್ತೇನೆ. ಮಾತು ಅಂದರೆ ನನಗೆ ಭೂರಿಭೋಜನವಿದ್ದಂತೆ."

"ನಿಜ ಸಾರ್, ನಿಮ್ಮ ಭಾಷಣ ಅಂದ್ರೆ ನನಗೆ ಇಂಗು ತೆಂಗು ಹಾಕಿ ಮಾಡಿದ ರಸಕವಳ ಇದ್ದಂಗೆ. ಕಳೆದ ಮೂವತ್ತು ವರ್ಷದಿಂದ ಆಗಾಗ್ಗೆ ನಿಮ್ಮ ಭಾಷಣ ಕೇಳಿದ್ದಿನಿ. ಬಸವಣ್ಣ ಹೇಳಿದನಲ್ಲಾ ಸಾರ್, ನುಡಿದರೆ ಮುತ್ತಿನ ಹಾರದಂತಿರಬೇಕು ಅಂತ, ಆ ತರ ಮಾತನಾಡೋರು ನೀವೊಬ್ಬರೆ ಸಾರ್. ನಿಜಕ್ಕೂ ನೀವು ಲಿಂಗಾಯತರಾಗಿದ್ರೆ ಎಲ್ಲಾ ಮಠದವರೂ ಕರೆಸುತ್ತಿದ್ದರು."

"ಲಿಂಗಾಯತರ ಮಠಗಳಿಗೂ ಹೋಗಿ ಮಾತನಾಡಿದ್ದಿನಿ. ಆದ್ರು ಆ ಜನ ಬದಲಾಗಲಿಲ್ಲ."

"ಅಲ್ಲಾ, ಸಾವಿರಾರು ವರ್ಷದಿಂದ ಧರ್ಮಬೋಧನೆ ಮಾಡ್ತ ಅದನ್ನೇ ಹಾಸಿ ಹೊದ್ದುಕಂಡು, ಉಂಡುಕೊಂಡು ಬರ್ತಾಯಿರೋ ನೀವೇ ಹಿಂಗಿರುವಾಗ, ಪಾಪ ಹನ್ನೆರಡನೇ ಶತಮಾನದಿಂದ ಈಚೆಗೆ ಒಂದಿಷ್ಟು ಬದಲಾವಣೆಗೆ ಬಲವಂತವಾಗಿ ಹೆಣಗ್ತಾಯಿರೊ ಲಿಂಗಾಯತರನ್ನು ಜರೀತಿರಲ್ಲ ಸಾರ್?"

"ಜರೀಲಿಲ್ಲ, ಅವರು ಬದಲಾಗಿಲ್ಲ ಅಂತ ಹೇಳಿದೆ."

"ಖಂಡಿತ ಬದಲಾಗಿದಾರೆ. ನಿಮ್ಮ ಮಡೆಸ್ನಾನ ವಿರೋಧಿಸಿ ಎಲ್ಲಾ ವೀರಶೈವ ಮಠದ ಗುರುಗಳು ಪ್ರತಿಭಟಿಸಿ ಸಭೆ ಮಾಡಿದ್ರು. ಜಗದ್ಗುರುಗಳು ಬದಲಾದ್ರೆ ಜನಗಳೂ ಬದಲಾಗ್ತರೆ. ಆದ್ರೆ ನೀವು, ನಿಮ್ಮ ಪೇಜಾವರ ಇನ್ನೂ ಮಡೆಲಿ ಬಿದ್ದು ಒದ್ದಾಡ್ತಾಯಿದ್ದಿರಲ್ಲ ಸಾರ್?"

"ನೀವು ಆ ರೀತಿ ಹೇಯವಾದ ಭಾಷೆ ಬಳಸಿ ಮಾತನಾಡುವುದು ಬೇಡಿ. ಪೇಜಾವರ ಹೇಳಿದ್ದರಲ್ಲಿ ತಪ್ಪೇನಿದೆ?"

"ಮಡೆಸ್ನಾನ ಎಂಜಲಾದ್ರೆ ಇಫ್ತಿಯಾರ್ ಕೂಟವೂ ಎಂಜಲು ಅಂದವರೆ."

"ಪೇಜಾವರ ಹೇಳಿದ್ದರಲ್ಲಿ ಸ್ವಲ್ಪ ವ್ಯತ್ಯಾಸ ಇರಬಹುದು. ನಮ್ಮ ಊಟವನ್ನೆ ನಾವು ಎಂಜಲು ಅನ್ನುವುದಿಲ್ಲ, ಇನ್ನೊಬ್ಬರ ಊಟವನ್ನು ಎಂಜಲು ಅನ್ನುವುದುಂಟು. ಹಾಗೇ ಒಂದೇ ತಟ್ಟೆಯಲ್ಲಿ ಹಲವರು ತಿನ್ನುವಾಗ ಕೈ ತಾಗಿದರೆ ಅದು ಎಂಜಲಾಗುವುದಿಲ್ಲವೆ? ಎಂಜಲು ಎಂಜಲೆ."

"ಅಲ್ಲಾ ಸಾರ್, ಜೊತೆಲಿ ಉಣ್ಣೋದು ಸೋದರತ್ವದ ಪ್ರತೀಕ. ನಮ್ಮ ಮನೇಲಿ ತಟ್ಟೆ ಕಡಮೆ ಇದ್ದಾಗ, ಕೇವಲ ಮೂರು ತಟ್ಟೆಲಿ ಆರು ಜನ ಉಣ್ತಿದ್ವಿ. ಅದು ಬೇರೆ. ಆದ್ರೆ ಬ್ರಾಹ್ಮಣರು ಉಂಡ ಎಲೆ ಮೇಲೆ ಅನ್ಯಜಾತಿಯವನು ಉರುಳೋದು ಮೌಢ್ಯದ ಪರಮಾವಧಿ ಅಲ್ಲವೆ?"

"ಅದು ನಿನ್ನೆಮೊನ್ನೆಯಿಂದ ನಡೆದುಬಂದ ಪದ್ಧತಿಯಲ್ಲ. ಸಾವಿರಾರು ವರ್ಷದಿಂದ ನಡೆದುಬಂದಿರುವ ಭಕ್ತಿಪೂರಿತ ಆಚರಣೆ. ಹಾಗಾಗಿ ಅದರಲ್ಲಿ ಚರ್ಮರೋಗ ನಿವಾರಣೆ ಔಷಧ ಗುಣಗಳಿವೆಯೋ ಎಂದು ಪರೀಕ್ಷಿಸಬೇಕು."

"ಯಾರು ಪರೀಕ್ಷೆ ಮಾಡಬೇಕು ಸಾರ್?"

"ವೈದ್ಯರು, ಅದರಲ್ಲೂ ಚರ್ಮರೋಗ ಪಂಡಿತರು."

"ಅವರು ಎಂಜಲೆಲೆ ಪರೀಕ್ಷೆ ಮಾಡಬೇಕೊ ಅಥವಾ ಉರುಳೋರ ಪರೀಕ್ಷೆ ಮಾಡಬೇಕೊ."

"ಉರುಳುವ ಜನರ ಭಕ್ತಿ, ಆ ಭಕ್ತಿಯ ಹಿಂದಿನ ಭಾವ. ಅಂದರೆ ಒಳಗಿನ ಕಾಯಿಲೆ ಉಷಾರಾಗುತ್ತೆ ಅನ್ನುವ ಉತ್ಕಟವಾದ ಆಧ್ಯಾತ್ಮಿಕ ಭಾವ. ಅವುಗಳನ್ನೆಲ್ಲ ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಿ ಹೇಳಬೇಕಾಗ್ತದೆ."

"ಅಂದರೆ ಮಡೆಸ್ನಾನಕ್ಕೂ, ಚರ್ಮರೋಗಕ್ಕೂ ರೋಗಿ ಮತ್ತು ವೈದ್ಯನ ಸಂಬಂಧವಿದೆ ಅಂತ ಹೇಳ್ತಿರಿ."

"ಹೌದು. ಏಕೆಂದರೆ ಅದು ನಿನ್ನೆಮೊನ್ನೆಯ ಆಚರಣೆಯಲ್ಲ, ಸಾವಿರಾರು ವರ್ಷದ ಆಚರಣೆ."

"ಆಚರಣೆಗಳು ಸತ್ಯಸಂಗತಿಯನ್ನು ಮುಚ್ಚಿ ಹಾಕ್ತವೆ ಅಂತ ನಮ್ಮ ಸಂತೆಶಿವರದ ಭೈರಪ್ಪ ಹೇಳ್ತರೆ."

"ಸರಿಯಾಗೇ ಹೇಳಿದ್ದಾರೆ. ಯಾವುದೇ ಆಚರಣೆಗೆ ಒಂದು ಪ್ರಬಲವಾದ ಕಾರಣವುಂಟು. ಆ ಕಾರಣ ಕ್ರಮೇಣ ಅಳಿಸಿಹೋಗಬಹುದು. ನಂತರ ಆಚರಣೆಗಳು ಮೂಢಾಚರಣೆಗಳಂತೆ ಕಾಣಬಹುದು."

"ಹಾಗಿದ್ರೆ ಕುಕ್ಕೆ ಸುಬ್ರಹ್ಮಣ್ಯ ಮಠಕ್ಕೆ ಚರ್ಮರೋಗ ಚಿಕಿತ್ಸಾಲಯ ಅಂತ ಹೆಸರಿಡಬಹುದಲ್ಲ ಸಾರ್?"

"ನೀವು ಕಟಕಿ ಆಡುವುದು ಬೇಡ. ನೀವು ಈ ರೀತಿ ಮಾತನಾಡುವುದಾದರೆ ನಾವು ಅದಕ್ಕೆ ಸರಿಯಾಗಿ ಉತ್ತರ ಕೊಡಬೇಕಾಗ್ತದೆ."

"ಸಾರಿ ಸಾರ್. ನಿಮ್ಮ ಮಾತಿಗೆ ಬರ್ತಿನಿ. ಮಡೆಸ್ನಾನದ ಹಿಂದೆ ಚರ್ಮವ್ಯಾಧಿಗಳ ಸಂಕಷ್ಟವಿರಬಹುದು ಅಂದಿದ್ದೀರಿ. ಚರ್ಮರೋಗದಲ್ಲಿ ಕಜ್ಜಿ, ಕುರ, ಇಸುಬು, ಸೋರಿಯಾಸಿಸ್, ಉಳುಕಡ್ಡಿ, ತುರಿಕೆ ಇಂತವೆಲ್ಲಾ ಇವೆ. ಇವುಗಳ ಪೈಕಿ ಯಾವ ರೋಗ ವಾಸಿಯಾಗುತ್ತೆ ಸಾರ್?"

"ನಾನು ಮೊದಲೆ ಹೇಳಿದ್ದೆ, ನೀವು ಚೇಷ್ಟೆ ಮಾಡುವುದು ಬೇಡ ಅಂತ ಹೇಳಿ."

"ಸಾರಿ ಸಾರ್, ಆಚರಣೆಯನ್ನು ವೈಜ್ಞಾನಿಕವಾಗಿ ನೋಡಿ ಅಂತ ಹೇಳಿದ್ರಿ. ಅಸ್ಪೃಶ್ಯತೆನ ಸಾವಿರಾರು ವರ್ಷದಿಂದ ಆಚರಿಸಿಕೊಂಡು ಬರ್ತೀರಲ್ಲಾ, ಅದಕ್ಕೂ ವೈಜ್ಞಾನಿಕ ಕಾರಣ ಇದಿಯಾ."

"ನಮ್ಮ ಚರ್ಚೆ ನಡೆಯುತ್ತಿರುವುದು ಅಸ್ಪೃಶ್ಯತೆ ಬಗ್ಗೆ ಅಲ್ಲ."

"ಲೋ ಗೋವಿಂದಾಚಾರಿ, ಆ ಪೇಜಾವರನ್ನೋಡಿದ್ರೆ ಅನ್ಯಧರ್ಮದ ಆಚರಣೆನ ಉದಾಹರಣೆ ಕೊಡ್ತರೆ. ನೀನು 'ವೈಜ್ಞಾನಿಕವಾಗಿ ವಿಶ್ಲೇಷಣ ಮಾಡಿ' ಅಂತಿ. ಆಧುನಿಕ ಮನುವರ್ಯ ರಾಮಾಜೋಯಿಸನ್ನ ನೋಡಿದ್ರೆ 'ಅಜ್ಯೇಷ್ಠಾಸೋ ಅಕನಿಷ್ಠಾಸ ಏತೇ ಸಂಭ್ರಾತರೂ ವಾವೃಧುಃ ಸೌಭಾಗಾಯ' ಅಂತ ಹೇಳಿಕೊಂಡೇ, ಅಂದ್ರೆ ಯಾರೂ ಮೇಲಲ್ಲ, ಯಾರೂ ಕೀಳಲ್ಲ, ಎಲ್ಲರೂ ಎಲ್ಲರಿಗಾಗಿ ದುಡಿದು ಅಭಿವೃದ್ಧಿಯಾಗಬೇಕು ಅಂತ ಹೇಳಿಕೊಂಡೇ, ಮೀಸಲಾತಿ ವಿರುದ್ಧ ರಿಟ್ ಹಾಕಿ ಸ್ಟೇ ತರ್ತನೆ. ಅಂದ್ರೆ ನೀವು ಹೇಳೂದೊಂದು ಮಾಡೂದೊಂದು... ನೇರವಾಗಿ ಬದುಕಕ್ಕೆ ನಿಮಗೇನಾಗಿದೆ. ಹಿಂದೂ ಧರ್ಮದ ಸಮಸ್ಯೆಗಳು ಅಂದ್ರೆ ನೀವೇ."

"ನಿನ್ನ ಬಳಿ ಮಾತನಾಡುವವರಿಗೆ ಮಂಡೆಯಿಲ್ಲ."

"ಆದೀಗ್ಗೊತ್ತಾಯ್ತು ನಿನಗೆ?"

"ಕೆಟ್ಟವನೆ."

" ಥೂ, ಥೂ, ಥೂತ್ತೇರಿ !!!"





ಅಷ್ಟ ಅನಿಷ್ಟಾಧೀಶರ 'ಪರ್ಯಾಯ'ಫೈಟಿಂಗ್!

• ನಹುಷ

ಉಡುಪಿಯ ಮಾಧ್ವ ಮಠಾಧೀಶರ ಮುಸಲತ್ತು-ಮನಸ್ತಾಪದ ಒಳಗುದಿ ಕ್ಲೈಮ್ಯಾಕ್ಸ್ ತಲುಪಿದೆ. ಒಬ್ಬನ ತಲೆ ಕಂಡರೆ ಮತ್ತೊಬ್ಬನಿಗಾಗದ ಈ ಅಷ್ಟಯತಿಗಳ ಅಸಹ್ಯ ಕಚ್ಚಾಟ ಪ್ರತಿ ಪರ್ಯಾಯ ಉತ್ಸವದ ಹೊತ್ತಲ್ಲಿ ಬೀದಿ ರಂಪವಾಗುವುದು ಧಾರ್ಮಿಕ ವಾಡಿಕೆಯಂತಾಗಿಹೋಗಿದೆ! ಎಂಟೂ ಸ್ವಾಮಿಗಳದು ನುಡಿಯೇ ಒಂಥರಾ; ನಡೆಯೇ ಇನ್ನೊಂಥರಾ. ಈ ದಗಲುಬಾಜಿ ಧಾರ್ಮಿಕ ನಡವಳಿಕೆಯಲ್ಲಿ ಮಾತ್ರ ಅಷ್ಟಮಠಾಧೀಶರು ಮಾಧ್ವರ "ದ್ವೈತ" ಸಿದ್ಧಾಂತ ಅಕ್ಷರಶಃ ಪಾಲಿಸುತ್ತಿದ್ದಾರೆ.

ಪರ್ಯಾಯದ 'ಪರ್ವಕಾಲ' ಬಂತೆಂದರೆ ಸಾಕು; ಅಷ್ಟ ಮಠಾಧೀಶರ ಧರ್ಮಾಧಾರಿತ ಒಣಪ್ರತಿಷ್ಠೆ ದ್ವೇಷಾಸೂಯೆ, ಕೃಷ್ಣ ದೇಗುಲದ ಹುಂಡಿ ಮೇಲಿನ ಹಿಡಿತಕ್ಕಾಗಿ ಪೈಪೋಟಿ ಮತ್ತು ಪರ್ಯಾಯದ ನೆಪದಲ್ಲಿ ಸಾವಿರಾರು ಜೋಳಿಗೆ ತುಂಬ ಧನ-ಕನಕ ಸಂಗ್ರಹಿಸುವ ಮೇಲಾಟದ ಸಪ್ಪಳ ದಶದಿಕ್ಕಿಗೆ ಅಪ್ಪಳಿಸಲಾರಂಭಿಸುತ್ತದೆ. "ಧಾನೋ ರಕ್ಷತಿ ಧರ್ಮ" ಎಂಬ ಬೀಜಮಂತ್ರದ ಈ ವೈಷ್ಣವ "ಸರ್ವಸಂಗ ಸಹವಾಸಿ"ಗಳಿಗೆ ದುಡ್ಡೇ ಧರ್ಮ! ಮುಗ್ಧ ಶೂದ್ರರಿಗೆ ಕೃಷ್ಣನ ವಿಗ್ರಹ ತೋರಿಸಿ ಸುಲಿದ ಕಾಸಿಗಾಗಿ ಅಷ್ಟ ಯತಿಗಳು ಬಡಿದಾಡಿದ ದೊಡ್ಡ ಇತಿಹಾಸವೇ ಇದೆ. ಈ ಸೋಗಲಾಡಿ ಸನ್ಯಾಸಿಗಳ ವೈಭೋಗದ ಕಾಪಿ ಜೀವನವಂತೂ ಲೋಕ ಪ್ರಸಿದ್ಧ.



ಸೋದೆ, ಶಿರೂರು, ಪುತ್ತಿಗೆ, ಪೇಜಾವರ ಶ್ರೀಗಳ ಗ್ಯಾಂಗ್‌ವಾರ್

ಪರ್ಯಾಯ ಪುರಾಣ

ಸರಿಸುಮಾರು 700 ವರ್ಷದ ಹಿಂದಿನ ಮಾತು. ಅಂದು ಮಧ್ವಾಚಾರ್ಯರು ದ್ವಾರಕೆಯಿಂದ ಬಂದ ಹಡಗಿನಲ್ಲಿದ್ದ ಕಡಗೋಲು ಕೃಷ್ಣನ ಮೂರ್ತಿಯನ್ನು ಹಡಗಿನಲ್ಲಿದ್ದ ಭಕ್ತರಿಂದ 'ಗಂಡಾಗುಂಡಿ'ಯಿಂದ ಪಡೆದು ಉಡುಪಿಯಲ್ಲಿ ಸ್ಥಾಪಿಸಿದರಂತೆ; ಸಾಕ್ಷಾತ್ ರುಕ್ಮಿಣಿಯಿಂದಲೇ ಪೂಜಿಸಲ್ಪಟ್ಟದ್ದೆಂದು ಹೇಳಲಾದ ಈ ಕೃಷ್ಣ ವಿಗ್ರಹದ ಪೂಜೆ ಮತ್ತು ದ್ವೈತ ಮತದ ಪ್ರಚಾರಕ್ಕಾಗಿ ಎಂಟು ಮಠಗಳನ್ನು ಮಧ್ವಾಚಾರ್ಯರು ಹುಟ್ಟುಹಾಕಿದ್ದರಂತೆ. ಅವೇ ಫಲಿಮಾರು-ಅದಮಾರು, ಕೃಷ್ಣಾಪುರ-ಪುತ್ತಿಗೆ, ಶಿರೂರು-ಸೋದೆ, ಕಾಣಿಯೂರು-ಪೇಜಾವರ ಎಂಬ ದ್ವಂದ್ವ ಮಠಗಳು.

ಮಧ್ವಾಚಾರ್ಯರ ಕಾಲದಲ್ಲಿ ಎರಡೆರಡು ತಿಂಗಳಿಗೊಮ್ಮೆ ಒಂದೊಂದು ಮಠದ ಯತಿ ಕೃಷ್ಣನನ್ನು ಪೂಜಿಸುವ ವ್ಯವಸ್ಥೆ ಮಾಡಲಾಗಿತ್ತು, ಈ ಪೂಜಾ ಪದ್ಧತಿ ಸುಮಾರು 200 ವರ್ಷದ ಬಳಿಕ ಸೋದೆ ಮಠದ ಸ್ವಾಮಿಯಾಗಿದ್ದ ವಾದಿರಾಜರು ಎರಡೆರಡು ವರ್ಷಕ್ಕೆ ವಿಸ್ತರಿಸಿದರಂತೆ. ಈ ದ್ವೈವಾರ್ಷಿಕ ಪಾಳಿಯೇ ಇವತ್ತು ಉಡುಪಿಯ ಎಂಟು ಎಡವಟ್ಟು ಕಾವಿಧಾರಿಗಳ ಹೊಟ್ಟೆಕಿಚ್ಚಿನ ಜಿದ್ದಾಜಿದ್ದಿಗೆ ಕಾರಣವಾಗಿರುವುದು ಕದನ ಕುತೂಹಲಕರ ಪ್ರಸಂಗದಂತಾಗಿ ಹೋಗಿದೆ! ಅಷ್ಟ ಮಠಾಧೀಶರ ಆಜನ್ಮ ವೈರತ್ವದ ಮೂಲ ಇರುವುದೇ-ದಿನವೊಂದಕ್ಕೆ ಎರಡು ಲಕ್ಷ ಜಮೆಯಾಗುವ ಕೃಷ್ಣ ದೇವಾಲಯದ ಹುಂಡಿಯಲ್ಲಿ! ಜೊತೆಗೆ ಧರ್ಮಾಧಾರಿತ ಆರ್ಥಿಕ ದಂಧೆಯ ಪೈಪೋಟಿ.

'ಪರ್ಯಾಯ' ಪೀಠವೇರುವ ಯತಿಯ ಗ್ಯಾಂಗಿಗಂತೂ ಎರಡು ವರ್ಷ ನಿರಂತರ ಹಬ್ಬವೇ ಹಬ್ಬ! ಕಾಣಿಕೆ-ಶುಲ್ಕದಿಂದಲೇ ಪ್ರತಿ ದಿನ ದೇವಾಲಯದಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ದುಡ್ಡು ಒಟ್ಟಾಗುತ್ತದೆ. ದಿನವೊಂದಕ್ಕೆ ಹತ್ತಕ್ಕಿಂತ ಹೆಚ್ಚು ಚಾಮರ ಸೇವೆ ನಡೆಯುತ್ತದೆ. ಕೃಷ್ಣಮೂರ್ತಿಯನ್ನು ರಥಬೀದಿಯಲ್ಲಿ ಒಂದು ರೌಂಡು ಹಾಕಿಸಿಕೊಂಡು ಬರುವ ಈ ಸೇವೆಗೆ ಭಕ್ತರಿಂದ 10-15 ಸಾವಿರ ಪಡೆಯಲಾಗುತ್ತದೆ. ಅಲ್ಲಿಗೆ ದಿನಕ್ಕೆ ಎರಡು ಲಕ್ಷಕ್ಕಿಂತಲೂ ಜಾಸ್ತಿ ಹಣ ಸಂಗ್ರಹವಾದಂತಾಯ್ತು. ಇದು ಪರ್ಯಾಯದ ನಂತರ ವರಮಾನ. ಪರ್ಯಾಯಕ್ಕೂ ಮೊದಲು ನಿಯೋಜಿತ ಪರ್ಯಾಯ ಪೀಠಾಧೀಶ ದೇಶ-ವಿದೇಶದಲ್ಲಿ ಪ್ರತ್ಯಕ್ಷ-ಪರೋಕ್ಷವಾಗಿ ಭಿಕ್ಷಾಟನೆ ನಡೆಸುತ್ತಾನೆ; ದೇಶ-ವಿದೇಶದ ದೋನಂಬರ್ ಧನಿಕ, ಕಳ್ಳ ಉದ್ಯಮಿ, ಕಪ್ಪು ವ್ಯಾಪಾರಿ ಎಂಬ ಭೇದ ಎಣಿಸದೆ ಎಲ್ಲರೆದುರು ತನ್ನ ಧರ್ಮೋದ್ಧಾರದ ಯೋಜನೆ-ಯೋಚನೆಗಳ ಸ್ಕೆಚ್ ಬಿಚ್ಚಿಟ್ಟು ಕೋಟಿ-ಕೋಟಿ ಕೂಡಿಸುತ್ತಾನೆ!!

ಎಂಟೂ ಸ್ವಾಮಿಗಳು ಪರ್ಯಾಯ ಪೀಠದಲ್ಲಿದ್ದ ಹೊತ್ತಲ್ಲಿ ಆರ್ಥಿಕವಾಗಿ ಬಲಾಢ್ಯರಾಗಿದ್ದಾರೆ. ಭರ್ಜರಿ ಶಾಪಿಂಗ್ ಕಾಂಪ್ಲೆಕ್ಸ್, ಸಿನಿಮಾ ಥಿಯೇಟರ್, ಸಭಾ ಭವನ, ಲಾಡ್ಜ್ ಛತ್ರ, ಡೊನೇಷನ್ ವಿದ್ಯಾಸಂಸ್ಥೆಗಳನ್ನು ಕಟ್ಟಿಕೊಂಡಿರುವ ಈ ಲೌಕಿಕ ಸನ್ಯಾಸಿಗಳು ಸದಾ ದೊಡ್ಡ ಆದಾಯ ಬರುವಂತೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಕುರುಡು ಕಾಂಚಾಣದ ಮಹಿಮೆಯಿಂದ ಮಠದಲ್ಲೇ ಬಸಿರು, ಬಾಣಂತನ, ಗನ್ನು, ಗುಂಡು, ಗೂಂಡಾಗಿರಿ, ಬಡ್ಡಿ ವ್ಯವಹಾರ ನಿರಂತರ-ನಿರಾತಂಕವಾಗಿ ನಡೆಯುತ್ತಿದೆ. ಒಬ್ಬೊಬ್ಬ ಭೈರಾಗಿಯ ಐಭೋಗದ ರಂಗೀಲಾ ರಗಳೆ ಸಂಸಾರಿಗಳೇ ನಾಚುವಂತಿದೆ!!

ಸಮುದ್ರೋಲ್ಲಂಘನ ಸಂಕಟ

ಪ್ರತಿ ಪರ್ಯಾಯದ ಸಮಯದಲ್ಲೂ ಒಂದಲ್ಲ ಒಂದು ಭಾನ್ಗಡಿಯ ಅಡ್ಡೆಯಂತಾಗುವುದು ಅಷ್ಟಮಠಗಳ ಕರ್ಮ. ಪರ್ಯಾಯ ಪ್ರಹಸನಗಳಲ್ಲಿ 'ಸಾಗರೋಲ್ಲಂಘನ' ಕಥನವೇ ಹೆಚ್ಚು ರೋಚಕ ರಗಳೆಯದು. ಸಮುದ್ರ ದಾಟಿ ವಿದೇಶ ಯಾತ್ರೆ-ವಿದೇಶ ವಾಸ್ತವ್ಯ ಮಾಡುವ ಯತಿಗೆ ಶ್ರೀಕೃಷ್ಣನ ಪೂಜಾಧಿಕಾರ ಇಲ್ಲ ಎಂಬ ಅಲಿಖಿತ ಸಂವಿಧಾನ ಒಂದನ್ನು ಮಾಧ್ವ ಮಠಗಳು ತಯಾರಿಸಿಟ್ಟುಕೊಂಡಿವೆ. ಮಜಾ ಎಂದರೆ ಮಾಧ್ವ ಬ್ರಾಹ್ಮಣರ ನಂಬಿಕೆಗೇ ಈ ನಿಯಮ ವಿರುದ್ಧವಾಗಿದೆ. ಮಾಧ್ವ ಮಠ ಸ್ಥಾಪಕ ಮಧ್ವಾಚಾರ್ಯ ಹನುಮಂತನ ಅಪರಾವತಾರ ಎಂಬ ಬಲವಾದ ಭಾವನೆ ಮಾಧ್ವರದು. ಈ ಹನುಮಂತನೇ ಮೊಟ್ಟಮೊದಲು ಸಮುದ್ರೋಲ್ಲಂಘನ ಮಾಡಿದ್ದಲ್ಲವಾ?

ಹಾಗೆಯೇ ಈ ಉಡುಪಿಯಲ್ಲಿ ಮಾಧ್ವರು ಪೂಜಿಸುವ ಕಡಗೋಲು ಕೃಷ್ಣ ವಿಗ್ರಹವಿದೆಯಲ್ಲ, ಅದೇ ಸಮುದ್ರ ಯಾನ ಮಾಡಿ ದ್ವಾರಕೆಯಿಂದ ಬಂದಂಥದ್ದು! ಹೀಗಿರುವಾಗ ಅದರ ಆರಾಧಕ ಯತಿಗೇಕೆ ಪೂಜೆ ನಿಷಿದ್ಧ? ಇದಕ್ಕೆ ಉತ್ತರ ಪೇಜಾವರ ಸ್ವಾಮಿಯಂಥ ಹಿಂದೂ ಧರ್ಮೋದ್ಧಾರಕರಲ್ಲೂ ಇಲ್ಲ; ಮಾಧ್ವ ಪಂಡಿತ-ಪಾಮರರಲ್ಲೂ ಇಲ್ಲ!

ಸಾಗರೋಲ್ಲಂಘನ ಫೈಟಿಂಗ್ ಅಷ್ಟ ಮಠಗಳ ಅಖಾಡದಲ್ಲಿ ಹಲವು ಸಲ ನಡೆದಿದೆ. ಎರಡು ವರ್ಷದ ಪರ್ಯಾಯದ 31ನೇ ಸುತ್ತಿನಲ್ಲಿ ಕೃಷ್ಣಾಪುರ ಮಠಾಧೀಶರಿಂದ ಪುತ್ತಿಗೆ ಮಠದ ಸುಗುಣೇಂದ್ರ ಸ್ವಾಮಿಗೆ 'ಅಧಿಕಾರ' ಹಸ್ತಾಂತರ ಆಗುವಾಗ -ಅಂದರೆ 2008 ರಲ್ಲಿ ಈ ಸಮುದ್ರೋಲ್ಲಂಘನ ಸಂಗತಿ ಅಷ್ಟ ಮಠದ ಪಡಸಾಲೆಯಲ್ಲಿ ಭೀಭತ್ಸ ಸಂಘರ್ಷವನ್ನೇ ಸೃಷ್ಟಿಸಿತ್ತು! ಅಂದು ಪುತ್ತಿಗೆ ಮಠದ ಸುಗುಣೇಂದ್ರರಿಗೆ ಸಾಗರೋಲ್ಲಂಘನ ಅಪರಾಧಕ್ಕಾಗಿ ಕೃಷ್ಣ ಪೂಜೆ ಮತ್ತು ಪರ್ಯಾಯಪೀಠ ನಿರಾಕರಿಸಲಾಗಿತ್ತು. ಪೇಜಾವರ ಮಠಾಧೀಶ ವಿಶ್ವೇಶತೀರ್ಥರ ಗ್ಯಾಂಗಿನ ಐವರು ಮಠಾಧೀಶರು ಸುಗುಣೇಂದ್ರರನ್ನು 'ಧರ್ಮಭ್ರಷ್ಟ'ನೆಂದು ಫತ್ವಾ ಹೊರಡಿಸಿತ್ತು! ಪೇಜಾವರ ಸಾಂಪ್ರದಾಯಿಕ ಎದುರಾಳಿ ಶಿರೂರು ಮಠದ 'ರಸಿಕಶ್ರೀ' ಲಕ್ಷ್ಮೀವರತೀರ್ಥರ ಪಂಗಡದಲ್ಲಂದು ಮೂವರು ಯತಿಗಳಿದ್ದರು. 2008 ರಲ್ಲಿ ಈ ಜಗಳಗಂಟ ಸ್ವಾಮಿಗಳ ಗ್ಯಾಂಗ್‌ವಾರ್ ತಿಂಗಳುಗಟ್ಟಲೆ ನಡೆದಿತ್ತು. ಕೊನೆಗೆ "ಸರ್ವ ಸಮ್ಮತ" ಸೆಟಲ್‌ಮೆಂಟ್ ಒಂದು ನಡೆದಿತ್ತು. ಪರ್ಯಾಯ ಅಧಿಕಾರ ಹಣಕಾಸಿನ ವ್ಯವಹಾರವೆಲ್ಲ ಸುಗುಣೇಂದ್ರರಿಗೆ; ಕೃಷ್ಣ ಪೂಜೆ ಕರ್ಮ ಆತನ ಶಿಷ್ಯನಿಗೆ ಎಂದು ರಾಜಿ ಪಂಚಾಯ್ತಿಕೆ ಮಾಡಲಾಗಿತ್ತು.

ಸಾಗರೋಲ್ಲಂಘನೆ-ಅಂದರೆ ವಿದೇಶಕ್ಕೆ ಹೋಗುವ- ಅಷ್ಟ ಮಠಾಧೀಶನಿಗೆ ಕೃಷ್ಣ ಪೂಜಾಧಿಕಾರ ಮತ್ತು ಪರ್ಯಾಯ ಉಸ್ತುವಾರಿಕೆ ಕೊಡಲಾಗದೆಂಬುದು ವೈಷ್ಣವ ಮಠ ಪರಂಪರೆಯ ಕಟ್ಟುನಿಟ್ಟಿನ ನಿರ್ಬಂಧದಲ್ಲೊಂದೇನೋ ಖರೆ. ಆದರೆ ನೈತಿಕತೆ-ಧಾರ್ಮಿಕತೆಯನ್ನೇ ನಿಷ್ಠೆ-ಶ್ರದ್ಧೆಯಿಂದ ಪಾಲಿಸದ ಈ ಮತಲಬಿ ಮಠಾಧೀಶರು ಸಮುದ್ರ ದಾಟಬಾರದೆಂಬ ಜುಜುಬಿ ಷರತ್ತನ್ನೆಲ್ಲ ಕೇರ್ ಮಾಡುತ್ತಾರಾ? ಈ ಸಾಗರೋಲ್ಲಂಘನೆ ನೆಪದಿಂದ ಹಲವು ಬಾರಿ ಅಷ್ಟ ಯತಿಗಳು ನಿಕೃಷ್ಟವಾಗಿ ಜಗಳಾಡಿದ್ದಾರೆ. ಮೊಟ್ಟಮೊದಲು ಪೇಜಾವರರ ಪಟ್ಟ ಶಿಷ್ಯ ವಿಶ್ವವಿಜಯ ಅಮೆರಿಕೆಗೆ ಹಾರಿದ್ದು ಅಷ್ಟ ಯತಿಗಳ ನಡುವೆ ಸಂಘರ್ಷ ಸೃಷ್ಟಿಸಿತ್ತು.

ವಿಶ್ವ ವಿಜಯನ 'ವಿಶ್ವ ಪರ್ಯಟನೆ'ಗೆ ಅಂದು ಗುರು ಪೇಜಾವರ ಸಮ್ಮತಿಯೂ ಇತ್ತು. ಆದರೆ ಅದೊಂದು 'ಧರ್ಮಸೂಕ್ಷ್ಮ'ದ ಈಶ್ಯೂ ಆದಾಗ ಪೇಜಾವರರು ಶಿಷ್ಯನನ್ನೆ ಬಲಿ ಪಡೆದುಬಿಟ್ಟರು! ಸಾಗರ ದಾಟಿದ್ದಕ್ಕಾಗಿ ವಿಶ್ವ ವಿಜಯಿ ಪೀಠವನ್ನೇ ಬಿಡಬೇಕಾಗಿ ಬಂತು. ಆ ನಂತರ ಆತ ಪಟ್ಟಪಾಡು ಹೇಳತೀರದು. ಇತರ ಮಠಾಧೀಶರ ಕಿರಿಕಿರಿ-ಕುಹಕದಿಂದ ಆ ವಟು ಹೈರಾಣಾಗಿ ಹೋಗಿದ್ದ. ಈ ವಿವಾದದಲ್ಲಿ ಈಗ ತಲೆ ಮಾಸಿರುವ ಅಂದಿನ 'ಮತ್ಸ್ಯ ಸುಂದರಿ' ಎಂಬ ಅಭಿದಾನ ಹೊತ್ತಿದ್ದ ಮಹಿಳಾ ರಾಜಕಾರಣಿಯ ಹೆಸರು ಥಳಕು ಹಾಕಿಕೊಂಡಿತ್ತು.

ಈ ಪ್ರಕರಣದ ನಂತರ 'ಇಂಗ್ಲಿಷ್ ಸ್ವಾಮಿ' ಎಂಬ ಅಡ್ಡ ಹೆಸರು ಪಡೆದಿದ್ದ ಅದಮಾರು ಮಠದ ವಿಭುದೇಶ ತೀರ್ಥರು ವಿದೇಶಕ್ಕೆ ಜಾಲಿ ಟ್ರಿಪ್ ಹೋಗಿ ಬಂದರು. ತನ್ನ ಪೂರ್ಣ ಪ್ರಜ್ಞಾ ವಿದ್ಯಾಸಂಸ್ಥೆಗೆ ಅನಿವಾಸಿ ಭಾರತೀಯರಿಂದ ವಂತಿಗೆ ಎತ್ತಲು ವಿಭುದೇಶರು ವಿದೇಶ ಯಾತ್ರೆ ಕೈಗೊಂಡಿದ್ದರು. ಈ ವಿಭುದೇಶರಿಗೆ "ಸಹೋದ್ಯೋಗಿ" ಮಠಾಧೀಶರ ವೃತ್ತಿ ಮಾತ್ಸರ್ಯದ ಹಠದಿಂದ ಪರ್ಯಾಯ ಪೀಠಾಧಿಕಾರ ಸಿಗಲೇ ಇಲ್ಲ. ಆದರೆ ತುಂಬ ಚಾಲಾಕಿಯೂ-ಸೀನಿಯರ್ ಸ್ವಾಮಿಯೂ ಆಗಿದ್ದ ಈತ ತನ್ನ ಶಿಷ್ಯನಿಗೆ ಪರ್ಯಾಯದ ಪವರ್ ಸಿಗುವಂತೆ ತಂತ್ರಗಾರಿಕೆ ನಡೆಸಿ ಹುಂಡಿ ಕೈವಶ ಪಡಿಸಿಕೊಂಡಿದ್ದರು.

ಸುಗುಣೇಂದ್ರ ಪ್ರಕರಣ!

ಆನಂತರ ಪುತ್ತಿಗೆ ಮಠದ ಸುಗುಣೇಂದ್ರರ ವಿದೇಶ ಯಾತ್ರೆ-ಪರ್ಯಾಯ ನಿರಾಕರಣೆಯ ತರಲೆ-ತಂಟೆ ಆಸ್ಫೋಟಿಸಿ ಮಾಧ್ವ ಮಠ-ಮಾಧ್ವ ಮತದಲ್ಲಿ ಚಿತ್ರ-ವಿಚಿತ್ರ ಕುಸ್ತಿ-ಕಸರತ್ತು ನಡೆದುಹೋಯ್ತು! 2008 ರಲ್ಲಿ ಪುತ್ತಿಗೆ ಮಠಾಧೀಶರ ಪರ್ಯಾಯ ಪಾಳಿ ಶುರುವಾಗುವುದಿತ್ತು, ಪರ್ಯಾಯ ಪೀಠ ಏರಲು ಸುಗುಣೇಂದ್ರರ ಪರಿವಾರ ಸಕಲ ಸಿದ್ಧತೆಯೂ ಮಾಡಿಕೊಂಡಿತ್ತು, ಆಗೆಲ್ಲ ಸುಮ್ಮನಿದ್ದ ಪೇಜಾವರ ಸ್ವಾಮಿ ಬಳಗ ಪರ್ಯಾಯದ ಮುಹೂರ್ತ (ಜನವರಿ 18, 2008) ಹತ್ತಿರ ಬರುತ್ತಿದ್ದಂತೆ ಏಕಾಏಕಿ ಸಮುದ್ರೋಲ್ಲಂಘನದ ಕ್ಯಾತೆ ತೆಗೆದು ತಿರುಗಿಬಿದ್ದುಬಿಟ್ಟಿತು! ವಿಪರ್ಯಾಸ ಎಂದರೆ, ವಿದೇಶ ಯಾತ್ರೆ ಮುಗಿಸಿಬಂದ ಸುಗುಣೇಂದ್ರರಿಗೆ ಭವ್ಯ ಸ್ವಾಗತ ಕೋರಿ, ಸನ್ಮಾನಿಸಿ, ಮಾಧ್ವ ತತ್ವ ಪುನರ್ ಪ್ರಚಾರಾಧೀಶ್ವರ ಎಂದೆಲ್ಲಾ ಹಾಡಿಹೊಗಳಿದ್ದೇ ಈ ಪೇಜಾವರರಾಗಿತ್ತು. ಉಡುಪಿ ರಥಬೀದಿಯೆಲ್ಲಾ ಶೃಂಗರಿಸಿ ವಿದೇಶದಿಂದ ತಂದ ಕಾಣಿಕೆಯಿಂದ ಸ್ವದೇಶದ ಹಿಂದೂಗಳ ಉದ್ಧಾರ ಸಾಧ್ಯವೆಂದು ಅಂದು ಪೇಜಾವರರು ಹೇಳಿ ಸಂಭ್ರಮಿಸಿದ್ದರು.

ಅದೇ ಸುಗುಣೇಂದ್ರರ ಪರ್ಯಾಯ ಹತ್ತಿರ ಬಂದಿದ್ದೇ ತಡ "ದ್ವಂದ್ವಾಚಾರ್ಯ ಪೇಜಾವರಶ್ರೀ" ಉಲ್ಟಾ ಹೊಡೆದುಬಿಟ್ಟಿದ್ದರು! ಸುಗುಣೇಂದ್ರರಿಗೆ ಪರ್ಯಾಯ ಅಧಿಕಾರ ಕೊಡದೆ ಧರ್ಮ ರಕ್ಷಿಸುವ ದೃಢ ನಿರ್ಧಾರಕ್ಕೆ ಬಂದಿದ್ದರು. ಪೇಜಾವರರ ಕ್ಯಾಪ್ಟನ್‌ಶಿಪ್‌ನಲ್ಲಿ ಕೃಷ್ಣಾಪುರ, ಫಲಿಮಾರು, ಕಾಣಿಯೂರು ಮತ್ತು ಸೋದೆ ಸ್ವಾಮಿ ಸೇರಿ ಸುಗುಣೇಂದ್ರ ಪರ್ಯಾಯ ಸ್ವಾಮಿ ಆಗುವುದಕ್ಕೆ ಅಯೋಗ್ಯನೆಂದು ಘೋಷಿಸಿಬಿಟ್ಟರು. ಸುಗುಣೇಂದ್ರರ ವಿರುದ್ಧದ ಈ ಫರ್ಮಾನು ಹೊರಬಿದ್ದಿದ್ದೇ ತಡ, ಪೇಜಾವರರ ಪರಂಪರಾಗತ ಎದುರಾಳಿ ಶಿರೂರು ಮಠದ ಲಕ್ಷ್ಮೀವರ ತೀರ್ಥ ಯುದ್ಧಕ್ಕೆ ದಮಕಿಯೇ ಬಿಟ್ಟರು! ತನ್ನ ಮತ್ತು ಅದಮಾರು-ಪುತ್ತಿಗೆ ಮಠಾಧೀಶರ ಅನುಪಸ್ಥಿತಿಯಲ್ಲಿ ಪೇಜಾವರ ಪರಿವಾರ ಕೈಗೊಂಡ ತೀರ್ಮಾನಕ್ಕೆ ಯಾವ ಕಿಮ್ಮತ್ತೂ ಇಲ್ಲ ಎಂದು ಅರ್ಭಟಿಸತೊಡಗಿದರು. ಅಲ್ಲಿಗೆ ಪುತ್ತಿಗೆ ಶ್ರೀಗಳ ಪರ್ಯಾಯ ಪ್ರಹಸನ ಅಷ್ಟ ಮಠದ ಅನಾಹುತಕಾರಿ ಸ್ವಾಮಿಗಳನ್ನು ಬರೋಬ್ಬರಿ ಎರಡು ತಂಡವಾಗಿ ಒಡೆದು ಹಾಕಿದಂತಾಗಿತ್ತು!

ಪುತ್ತಿಗೆ ಸ್ವಾಮಿಗೆ ಸಮುದ್ರ ದಾಟಿದರೆ ಪರ್ಯಾಯ ಪೀಠಾಧಿಕಾರಕ್ಕೆ ಸಂಚಕಾರ ಬರುತ್ತದೆಂಬ ವೈಷ್ಣವ ಕಾನೂನೇನೂ ಗೊತ್ತಿಲ್ಲದ್ದಲ್ಲ, ಆತ ಬುದ್ಧಿಪೂರ್ವಕವಾಗೇ ನಿಯಮ ಧಿಕ್ಕರಿಸಿ ಅಮೆರಿಕಾಕ್ಕೆ ಹೋಗಿದ್ದರು. ಇದಕ್ಕೊಂದು 'ಸ್ಥಾವರಶಾಹಿ' ಕಾರಣವೂ ಇತ್ತು. ಈ ಸ್ವಾಮಿ ಕಟ್ಟಿಸುತ್ತಿದ್ದ 'ಗೀತಾ ಮಂದಿರ' ಎಂಬ ಬೃಹತ್ ಬಿಲ್ಡಿಂಗ್‌ಗೆ ಕಾಸು ಕಡಿಮೆ ಬಿದ್ದಿತ್ತು. ಆತನ ಅಮೆರಿಕಾ ಪ್ರವಾಸದ ಉದ್ದೇಶವೇ ಅನಿವಾಸಿ ಭಾರತೀಯ ಶ್ರೀಮಂತರಿಂದ ಕೋಟ್ಯಂತರ ಕಾಸು ಕೂಡಿಸಿ ತರುವುದಾಗಿತ್ತು. ಕಾಂಕ್ರೀಟು ಕಟ್ಟಡಗಳ ಕಟ್ಟಿಸಿ ಕಾವಿ ವಾಣಿಜ್ಯೋದ್ಯಮಿಗಳಾಗುವ ಕೆವಲು ಅಷ್ಟ ಯತಿಗಳಿಗೆಲ್ಲ ಇರುವ ಸಾಮಾನ್ಯ ಗುಣ-ಲಕ್ಷಣದಲ್ಲಿ ಒಂದು.

ಸುಗುಣೇಂದ್ರರು ಅಮೆರಿಕಾಕ್ಕೆ ಹೋಗುವಾಗ ಹಾಕಿದ ದೂ(ದು)ರಾಲೋಚನೆಯೇ ಬೇರೆಯಿತ್ತು, ಪರ್ಯಾಯದಿಂದ ಬರುವ ದುಡ್ಡಿಗಿಂತ ಹತ್ತಾರು ಪಟ್ಟು ಹೆಚ್ಚು ಹಣ ಅಮೆರಿಕೆಯಿಂದ ತರಬಹುದೆಂದು ಸುಗುಣೇಂದ್ರರು ಭಾವಿಸಿದ್ದರು. ಆದರೆ ಆತನ ಲೆಕ್ಕ ತಪ್ಪಿತ್ತು, ಅಷ್ಟ ಮಠಾಧೀಶರ ಲೀಲಾ ವಿನೋದಗಳು ಜನರಲ್ಲಿ ತಿರಸ್ಕಾರ-ತಾತ್ಸಾರ ಮೂಡಿಸಿತ್ತು. ಹೀಗಾಗಿ ಸುಗುಣೇಂದ್ರರಿಗೆ ನಿರೀಕ್ಷಿತ ಮೊತ್ತ ಒಟ್ಟುಗೂಡಿಸಲು ಸಾಧ್ಯವಾಗಲೇ ಇಲ್ಲ. ಅಮೆರಿಕೆಯಲ್ಲಿ ಸುಗುಣೇಂದ್ರರ ಜೋಳಿಗೆ ತುಂಬಲಿಲ್ಲ; ಉಡುಪಿಯಲ್ಲಿ ಪರ್ಯಾಯಕ್ಕೂ ಸಂಚಕಾರ ಬಂದಿತ್ತು. ಆದರೆ ಗೂಂಡಾ ಶ್ರೀ, ರಂಗಿಲಾ ಶ್ರೀ, ಗನ್‌ಶ್ರೀ, ಕುದುರೆ ಸವಾರಿ ಶ್ರೀ, ಕಾರ್ ಡ್ರೈವರ್ ಶ್ರೀ ಎಂಬೆಲ್ಲ ಬಿರುದು-ಬಾವಲಿ ಪಡೆದಿರುವ ಶಿರೂರು ಮಠಾಧೀಶರ ತಂತ್ರಗಾರಿಕೆಯಿಂದ ಸುಗುಣೇಂದ್ರರಿಗೆ ಕೃಷ್ಣ ದೇವಾಲಯದ ಹುಂಡಿ ಮೇಲಿನ ಅಧಿಕಾರ ಪ್ರಾಪ್ತವಾಗಿತ್ತು, ಕೃಷ್ಣಮೂರ್ತಿ ಮುಟ್ಟಲಾರೆನೆಂದು ಮಾತು ಕೊಟ್ಟು ವ್ಯವಹಾರಿಕವಾಗಿ ಯಶ ಸಾಧಿಸಿದ್ದರು.

ಸೋದೆ ಸ್ವಾಮಿ 'ಹುಡುಗಾಟ'

ಈ ಬಾರಿಯ ಪರ್ಯಾಯ ಪ್ರಹಸನಕ್ಕೂ, ಮತ್ತದೇ ಸಾಗರೋಲ್ಲಂಘನ ಭೂತ ಬಡಿದು ದೊಡ್ಡ ಗಲಾಟೆ-ಗೌಜಿ ಎಬ್ಬಿಸಿಬಿಟ್ಟಿದೆ! ಶಿರೂರು ಮಠದ ಪುಂಡ ಸ್ವಾಮಿ ಲಕ್ಷ್ಮೀವರ ತೀರ್ಥರ ಕೈಲಿರುವ ಕೃಷ್ಣ ದೇವಾಲಯದ ಆಡಳಿತ ದರ್ಬಾರು ಸೋದೆ ಮಠದ 'ಎಳಸು ವಟು' ವಿಶ್ವವಲ್ಲಭತೀರ್ಥರ ಕಬ್ಜಾಕ್ಕೆ ಒಳಪಡುವ ಪರ್ಯಾಯವಿದು. ಈ ಹಸೀ ಹುಂಬ ವಿಶ್ವವಲ್ಲಭನಿಗಿನ್ನೂ ಪ್ರಾಯ 20 ವರ್ಷವಾಗಿಲ್ಲ, ಈತನಿಗೆ ಸರಿಯಾದ ಮಾರ್ಗದರ್ಶಕರೂ ಇಲ್ಲ. ಪೂರ್ವಾಶ್ರಮದ ತಾಯ್ತಂದೆಗಳು-ದಿವಾನರು-ರಹಸ್ಯ ಹಿತರಕ್ಷಕ ಪೇಜಾವರ ಸ್ವಾಮಿ ಇವರ್‍ಯಾರೂ ವಿಶ್ವವಲ್ಲಭನಿಗೆ ಸಂಯಮ-ಸಂಸ್ಕಾರ-ಹಿರಿಯರಿಗೆ ಗೌರವಿಸುವ ಗುಣ ಕಲಿಸಿದಂತಿಲ್ಲ, ತಾನು ಆಡಿದ್ದೇ ಆಟ; ಮಾಡಿದ್ದೇ ಮಾಧ್ವ ಮಠಗಳ ಕಾನೂನು ಎಂಬಂತೆ ಈ ಪೆದ್ದು ಪೋರ ಹಾರಾಡುತ್ತಿದ್ದಾನೆ.

ಪುತ್ತಿಗೆ ಮಠಾಧೀಶರ ಬಗ್ಗೆ ಈತನ ತಲೆಯಲ್ಲಿ ಅದೆಂಥದೋ ಪೂರ್ವಾಗ್ರಹಗಳಿವೆ. ಈತನ ವಿದ್ಯಾಗುರು ಕೃಷ್ಣಾಪುರ ಮಠಾಧೀಶ ವಿದ್ಯಾಸಾಗರರು ಮತ್ತು ಪುತ್ತಿಗೆ ಸ್ವಾಮಿ ಸುಗುಣೇಂದ್ರರ ನಡುವೆ ದ್ವೇಷ-ಈರ್ಷೆಗಳಿದೆ; ಅಷ್ಟ ಮಠದ ಹಿರಿಯಣ್ಣ ಪೇಜಾವರರಿಗೂ ಸುಗುಣೇಂದ್ರರ ಕಂಡರಾಗದು.



ಜಿದ್ದಾಜಿದ್ದಿಗೆ ಬಿದ್ದ ಪುತ್ತಿಗೆ ಮತ್ತು ಪೇಜಾವರ ಶ್ರೀಗಳು; ವಿಫಲವಾದ ಡಿವಿಎಸ್ ಸಂಧಾನ

ಮಠದೊಳಗಣ ಬೆಕ್ಕು ಪುಟ ನೆಗೆದಂತೆ....

ಉಡುಪಿಯ ಮಾಧ್ವ ಮಠದ ಅಷ್ಟ ಮಠಾಧೀಶರು ಪರ್ಯಾಯ ಫೈಟಿಂಗ್‌ಗೆ ಸಮುದ್ರೋಲ್ಲಂಘನ ಎಂಬ ಗೊಡ್ಡು ...ಕ್ತಿಕ ಭಿನ್ನಾಭಿಪ್ರಾಯವೇ ಕಾರಣವೆಂಬಂತೆ ಪೋಸು ಕೊಡುತ್ತಿದ್ದಾರಲ್ಲವಾ? ...ಈ ಕಾವಿ ಖದೀಮರು ಹೇಳೋದು ವೇದಾಂತ; ಮಾಡೋದು ಮಾತ್ರ ...ರ್ಮಕಾಂಡ. ಸೋಗಲಾಡಿ ಸ್ವಾಮಿಗಳ ಜಗಳದ ಅಸಲಿಯತ್ತೇನೆಂದರೆ, ...ಠದೊಳಗಿನ ಅಧಾರ್ಮಿಕ ರಾಜಕೀಯ ಮತ್ತು ಯತಿಗಳಲ್ಲಿರಬಾರದ ...ಸಾಮ್ರಾಜ್ಯಶಾಹಿ ಸೊಕ್ಕು!


ವಿದೇಶದಲ್ಲಿ ಪುತ್ತಿಗೆ ಸ್ವಾಮಿ...

ಪರ್ಯಾಯ ಮಹೋತ್ಸವದಲ್ಲಿ ಹೇಗಾದರೂ ಮಾಡಿ ಭಾಗವಹಿಸಿ ...ಮಾನ ಉಳಿಸಿಕೊಳ್ಳಲು ಪುತ್ತಿಗೆ ಸಾಧು ಶತಾಯುಗತಾಯ ತಿಪ್ಪರಲಾಗ ...ಹಾಕಿದರೆ, ಇನ್ನೊಂದೆಡೆ ಆತನನ್ನು ಹಣಿಯಲು ವಿರೋಧಿ ಮಠಾಧೀಶರ ...ಗ್ಯಾಂಗಿನ ಪೇಜಾವರ-ಸೋದೆ-ಕೃಷ್ಣಾಪುರ ಸ್ವಾಮಿಗಳು ಮಾಡಬಾರದ್ದೆಲ್ಲ ...ಮಾಡಿದರು. ಈ ಮಠಾಧೀಶರ ಮಾರಾಮಾರಿಯಿಂದ ಮಾನ-ಪ್ರಾಣ ...ಹೋದಂತೆ ಚಡಪಡಿಸಿದ್ದು ಮಾತ್ರ ಉಡುಪಿಯ ಹಿಂದೂತ್ವದ ಹರಿಕಾರರು ...ಷ! ಹಾಗಾಗಿ ಆರೆಸ್ಸೆಸ್-ಭಜರಂಗಿ-ವಿಹೆಚ್‌ಪಿ ಮುಂದಾಳುಗಳು ಸ್ವಾಮಿಗಳು ಗ್ಯಾಂಗ್‌ವಾರ್‌ನಿಂದ ತಮ್ಮ ಓಟ್ ...ಬ್ಯಾಂಕ್ ಆದ ಶೂದ್ರರ ಮೇಲೆ ದುಷ್ಪರಿಣಾಮ ಆಗುತ್ತೆಂದು ಹೆದರಿ ರಾಜಿಸಂಧಾನ ಒಳಗೊಳಗೇ ನಡೆಸಿದರು. ...ಹಿಂದೂವಾದಿಗಳ ರಾಜ ಗುರು ಪೇಜಾವರರನ್ನೇ ಮುಂದಿಟ್ಟು ಬಿಕ್ಕಟ್ಟು ಬಗೆಹರಿಸಲು ತಂತ್ರ-ಮಂತ್ರ ...ಮಾಡತೊಡಗಿದರು.

ಈ ಸಂಧಾನ ಸಭೆಗಳಲ್ಲಿ 'ಸಾಗರೋಲ್ಲಂಘನ' ಸಿದ್ಧಾಂತಕ್ಕಿಂತ ಅಷ್ಟ ಮಠಗಳ ಒಳಸುಳಿಗಳ ಬಗ್ಗೆ ಚರ್ವಿತಚರ್ವಣ ನಡೆಯಿತು. ಎಂಟೂ ಧಾರ್ಮಿಕ ದಂಧೆಕೋರರು ಪರಸ್ಪರರ ಹಳಿಗಿಸಲು ಹವಣಿಸಿದರು. ತಂತಮ್ಮ ಸಾಮ್ರಾಜ್ಯ ವಿಸ್ತರಣೆ ಮಾಡಿಕೊಂಡು ಎದುರಾಳಿಯನ್ನು ಮಣಿಸಲು ಮಸಲತ್ತು ಮಾಡಿದರು. ಅಲ್ಲಿ ಯಾವುದೇ ಧಾರ್ಮಿಕ ತಾತ್ವಿಕ-ಸೈದ್ಧಾಂತಿಕ ಚರ್ಚೆಯೇ ಇರಲಿಲ್ಲ. ಪರ್ಯಾಯದಲ್ಲಿ ಪುತ್ತಿಗೆ ಸ್ವಾಮಿ ಭಾಗವಹಿಸಬೇಕೆಂದಿದ್ದರೆ ಆತ ತನ್ನ ಪರ್ಯಾಯ ಕಾಲದಲ್ಲಿ ಕೃಷ್ಣಮೂರ್ತಿಯನ್ನು ಸ್ಪರ್ಶಿಸಿ ಅರ್ಚನೆ ನಡೆಸಿಲ್ಲವೆಂದು ಬರೆದು ಕೊಡಬೇಕು ಮತ್ತು ತನ್ನ ಪುತ್ತಿಗೆ ಮಠದ ಉತ್ತರಾಧಿಕಾರಿಗೆ-ಆತ ವಿದೇಶಕ್ಕೆ ಹೋಗಿಬಂದಿದ್ದರಿಂದ 'ಮಲಿನ'ನಾಗಿರುವುದರಿಂದ-ಆಶ್ರಮ ದೀಕ್ಷೆ ಕೊಡಕೂಡದು. ಆ ದೀಕ್ಷೆ ಆತನ ವಿರೋಧಿ ಕೃಷ್ಣಾಪುರ ಮಠದ ಮಠಾಧೀಶನಿಂದಲೇ ಕಡ್ಡಾಯವಾಗಿ ನಡೆಯಬೇಕೆಂಬ ಷರತ್ತು ಸುಗುಣೇಂದ್ರರಿಗೆ ವಿಧಿಸಲಾಯ್ತು. ಒಟ್ಟಿನಲ್ಲಿ ಪುತ್ತಿಗೆ ಮಠಾಧೀಶನನ್ನು ಡಿಮೊರಲೈಸ್ ಮಾಡಿ ಮೂಲೆಗುಂಪು ಮಾಡುವ ಹಿಕಮತ್ತು ಇದಾಗಿತ್ತು!

ಈ ಕಂಡಿಷನ್‌ಗೆ ಒಪ್ಪಿದರಷ್ಟೇ ಪುತ್ತಿಗೆ ಸ್ವಾಮಿಗೆ ಪರ್ಯಾಯ ಉತ್ಸವದ ಉತ್ತರಾರ್ಧ ಅಥವಾ ಪೂರ್ವಾರ್ಧದಲ್ಲಿ ಭಾಗವಹಿಸಲು ಅವಕಾಶ ಕೊಡುವುದಾಗಿ ಹೇಳಲಾಯ್ತು. ಇದಕ್ಕೆ ಆತ ಒಪ್ಪದೇ ಎದುರಾಳಿಗಳ ಬಂಡವಾಳ ಬಿಚ್ಚಿಟ್ಟರು. ತಾನು ಜನಸ್ಪಂದಿತ; ಎದುರಾಳಿಗಳಿಗೆ ತನ್ನಷ್ಟು ಭಕ್ತ-ಅನುಯಾಯಿಗಳಿಲ್ಲ. ಈ ಅಸೂಯೆಯಿಂದ ತನಗೆ ತೊಂದರೆ ಕೊಡಲಾಗುತ್ತಿದೆ ಎಂದು ಪುತ್ತಿಗೆ ಸ್ವಾಮಿ ವಿರೋಧಿ ಸ್ವಾಮಿಗಳ ಮೇಲೆ ಭರ್ಜರಿ ದಾಳಿ ಮಾಡಿದರು. ಅಲ್ಲಿಗೆ ಸಂಧಾನ ಮುರಿದುಬಿತ್ತು.

ಇಲ್ಲಿರುವ ಪ್ರಶ್ನೆ ಒಂದೇ. ವಿದೇಶಕ್ಕೆ ಹೋಗಿ 'ಅಶುದ್ಧ'ನಾಗಿರುವ ಪುತ್ತಿಗೆ ಸ್ವಾಮಿ ವಿರೋಧಿ ಸಂತರ ಅಡಿಯಾಳಾದರೆ ಶುದ್ಧವಾಗ್ತಾರಾ? ಅಷ್ಟ ಯತಿಗಳ ಕಿತ್ತಾಟಕ್ಕೆ ಸಾಗರೋಲ್ಲಂಘನ ಕಾರಣವೇ ಅಲ್ಲ; ಒಣ ಪ್ರತಿಷ್ಠೆ-ಧಾರ್ಮಿಕ ದಾದಾಗಿರಿಯೇ ಈ ಬುರ್ನಾಸ್ ಬಡಿದಾಟಕ್ಕೆ ಕಾರಣವಷ್ಟೇ!

...ದೆ ಸ್ವಾಮಿ ವಿಶ್ವವಲ್ಲಭನಿಗೆ ಆಶ್ರಮ-ಮಠ ಕೊಟ್ಟು ...ಗಿರುವ ಗುರು ವಿಶ್ವೋತ್ತಮರಿಗಂತೂ ಸುಗುಣೇಂದ್ರರ ...ಸಿಟ್ಟಿತ್ತು. ಇದೆಲ್ಲ ವಿಶ್ವವಲ್ಲಭನ ತಲೆ ಕೆಡಿಸಿ ನ್ಯಾಯ-...-ಶಿಷ್ಟಾಚಾರವನ್ನೆಲ್ಲಾ ಧಿಕ್ಕರಿಸುವ 'ಉದ್ಧಟ'ನನ್ನಾಗಿಸಿ ...ತಿದೆ.

ಈ ವಿಶ್ವವಲ್ಲಭ ತನ್ನ ಪರ್ಯಾಯ ಮಹೋತ್ಸವದ ...ದವಣಿಗೆ ಮತ್ತು ಸರ್ವಜ್ಞ ಪೀಠವೇರುವ ದರ್ಬಾರಿನ ...ಮಂತ್ರಣ ಪತ್ರಿಕೆಯಲ್ಲಿ ಪ್ರಜ್ಞಾಪೂರ್ವಕವಾಗೇ ಪುತ್ತಿಗೆ ಶ್ರೀ ...ರು ಹಾಕಿಲ್ಲ. ಸಮುದ್ರೋದಲ್ಲಂಘನ ಮಾಡಿ ತನ್ನ ...ಯ ಗುರುತ್ರಯರ (ಪೇಜಾವರ-ಕೃಷ್ಣಾಪುರ ಮತ್ತು ...ದೆ ಹಿರಿಯ ಸ್ವಾಮಿಗಳು) ದುರಾಗ್ರಹಕ್ಕೆ ತುತ್ತಾಗಿರುವ ...ಗೆ ಸ್ವಾಮಿ ತನ್ನ ಪರ್ಯಾಯದ ಉತ್ಸವದಲ್ಲಿ ...ಗವಹಿಸುವುದೇ ಬೇಡ ಎಂಬುದು ವಿಶ್ವವಲ್ಲಭನ ...ದಿಚ್ಛೆಯಾಗಿತ್ತು! ಈತನ ಹುಚ್ಚಾಟ ಸಹಜವಾಗೇ ...ಸ್ವಾಮಿ ಸುಗುಣೇಂದ್ರರನ್ನು ಕೆರಳಿಸಿತಲ್ಲದೆ, ಅಷ್ಟ ಮಠದಲ್ಲಿ ...ಲ್ಲೋಲಕಲ್ಲೋಲ ಮೂಡಿಸಿಬಿಟ್ಟಿತು. ಅಷ್ಟ ಮಠದ


ಪರ್ಯಾಯ ಪಾಲಿಟಿಕ್ಸ್...

...ಕಗಂಟ ಯತಿಗಳಲ್ಲಿ ಎರಡು ಗ್ಯಾಂಗ್ ಆಗಿಹೋಯ್ತು. ...ಮಾಧ್ವಮಠದ ಸಂಪ್ರಾದಯದಂತೆ ಪರ್ಯಾಯ ...ಶಕ್ಕೇರುವ ಸ್ವಾಮಿ ತನ್ನ ಸರ್ವಜ್ಞ ಪೀಠಾರೋಹಣ ...ಆರಂಭಕ್ಕೆ ಉಳಿದ ಏಳು ಸ್ವಾಮಿಗಳ ಮಠಕ್ಕೇ ಹೋಗಿ ...ಹ್ವಾನಿಸಬೇಕು. ಆದರೆ ಈತ ಎಲ್ಲರನ್ನೂ ಕರೆದರೂ ಪುತ್ತಿಗೆ ...ಮಿಯನ್ನು ಮಾತ್ರ ಬುದ್ಧಿಪೂರ್ವಕವಾಗೇ ಅವಮಾನಿಸಿದ್ದ. ...ರಿಂದ ಕೆರಳಿದ ಪುತ್ತಿಗೆ ಮಠದ ಶಿಷ್ಯರಾದ ಮಾಧ್ವ ...ಹ್ಮಣರು ತಮ್ಮ ಗುರುವನ್ನು ಪಲ್ಲಕ್ಕಿಯಲ್ಲಿ ...ತ್ತುಕೊಂಡು ಹೋಗಿ ಪರ್ಯಾಯ ದರ್ಬಾರಿನಲ್ಲಿ ...ಶ್ವರಿಸುತ್ತೇವೆಂದು ಬೊಬ್ಬೆ ಹಾಕತೊಡಗಿದರು. ...ಜಾವರರೊಂದಿಗೆ ದುಷ್ಮನಿಗೆ ಬಿದ್ದಿರುವ ಶಿರೂರು ...ಮಿಯಂತೂ ಪುತ್ತಿಗೆ ಮಠಾಧೀಶರ ಪರವಹಿಸಿ ವಾಗ್ದಾಳಿ ...ರು ಹಚ್ಚಿಕೊಂಡರು. ಸೋದೆ ಸ್ವಾಮಿ ಮತ್ತವನ ...ಮರೆಯ ಸೂತ್ರಧಾರರಾದ ಪೇಜಾವರ ಮತ್ತು ಕೃಷ್ಣಾಪುರ ...ಠಾಧೀಶರರೇ ಈ ಗೊಂದಲ-ಗಲಾಟೆಗೆ ಕಾರಣರೆಂಬಂತೆ ...ಳಿಕೆ ಕೊಡತೊಡಗಿದರು. ಪುತ್ತಿಗೆ ಸ್ವಾಮಿಯಂತೂ ಪೇಜಾವರ-ಸೋದೆ ಸ್ವಾಮಿಗಳ ಮೇಲೆ ದಾಳಿಯೇ ಮಾಡಹತ್ತಿದರು.

ಪೇಜಾವರರ ಡಬಲ್ ಗೇಮ್!

ಆನಂತರ ರಹಸ್ಯ ಸಂಧಾನ ಸಭೆಗಳಾದವು. ಪುತ್ತಿಗೆ ಸ್ವಾಮಿ ತನ್ನ ಪರ್ಯಾಯದ ವೇಳೆ ಕೃಷ್ಣ ವಿಗ್ರಹ ಸ್ಪರ್ಶಿಸಿಲ್ಲವೆಂದು ಲಿಖಿತವಾಗಿ ಬರೆದುಕೊಡುವಂತೆ ಕೆಲವು ಸ್ವಾಮಿಗಳು ಹೇಳಿದರು. ಇದಕ್ಕೆ ಸುಗುಣೇಂದ್ರ ಸೊಪ್ಪು ಹಾಕಲಿಲ್ಲ. ಜಿಲ್ಲಾ ಮಂತ್ರಿ ವಿ.ಎಸ್. ಆಚಾರ್ಯರ ರಾಜಿ ಪ್ರಯತ್ನವೂ ವಿಫಲವಾಯ್ತು. ಆಗ ಪುತ್ತಿಗೆ ಸ್ವಾಮಿ "ನಾನು ಪರ್ಯಾಯದಲ್ಲಿ ಭಾಗವಹಿಸಲಿ-ಬಿಡಲಿ ಇದರಿಂದ ವೈಯಕ್ತಿಕವಾಗಿ ನನಗೇನೂ ಲಾಭ-ಹಾನಿಯಿಲ್ಲ. ಆದರೆ ಅಷ್ಟ ಮಠಗಳಲ್ಲಿ ಒಗ್ಗಟ್ಟು ಬೇಕು.... ಅದಕ್ಕಾಗಿ ಪರ್ಯಾಯದ ಮುನ್ನಾದಿನ ದಿಂದ ಉಪವಾಸ ಸತ್ಯಾಗ್ರಹ ಮಾಡ್ತೇನೆ" ಎಂದುಬಿಟ್ಟರು. ಆಗ ಪೇಜಾವರರಿಗೆ ಪೀಕಲಾಟ ಶುರುವಾಯ್ತು. ಸುಗುಣೇಂದ್ರರಿಂದ ತನ್ನ ಇಮೇಜಿಗೆ ಧಕ್ಕೆ ಬರುತ್ತದೆ; ಆತನ ಹೋರಾಟದ 'ವಸ್ತುವೇ' ತಾನೆಂಬುದು ಪೇಜಾವರರಿಗೆ ಖಾತ್ರಿಯಾಗಿ ಹೋಯ್ತು. ಸೋದೆ ಮಠದ ಬಾಲಕ ಸ್ವಾಮಿಯ ನಿರ್ದೇಶಕರೇ ಪೇಜಾವರ ಮತ್ತು ಕೃಷ್ಣಾಪುರ ಮಠದ ಸ್ವಾಮಿಗಳೆಂಬುದು ಜಗಜ್ಜಾಹೀರಾಗಿ ಹೋಗಿತ್ತು. ಹೀಗಾಗಿ ಪೇಜಾವರ ಸ್ವಾಮಿ ತಾನೂ ಪ್ರತಿ ಉಪವಾಸ ಮಾಡ್ತೇನೆಂದು ಬಿಟ್ಟರು.

ಆತನ ಸತ್ಯಾಗ್ರಹ ಪುತ್ತಿಗೆ ವಿರುದ್ಧವೇ ಆಗಿತ್ತು. ಆದರೆ ಅದಕ್ಕೊಂದು ಗಿಲೀಟನ ಆಯಾಮ ಕೊಡಲು ಆತ ಹಿಕಮತ್ತು ಮಾಡಿದರು. "ನನ್ನ ಸಹಸ್ವಾಮಿಯೊಬ್ಬ ಉಪವಾಸ ಮಾಡುವಾಗ ನಾನು ಭೋಜನ ಸ್ವೀಕರಿಸುವುದು ಅನ್ಯಾಯ...." ಎಂದ್ಹೇಳಿ ಮಹಾಮಾನವತಾವಾದಿಯ ಹುಸಿ ಪೋಸು ಕೊಟ್ಟರು. ಇಬ್ಬರೂ ಒಂದೊಂದು ಕಡೆಯಲ್ಲಿ ಉಪವಾಸ ಆರಂಭಿಸಿಯೇಬಿಟ್ಟರು! ಅದೇ ಹೊತ್ತಿಗೆ ಪರ್ಯಾಯ ಉತ್ಸವದ ಸ್ವಾಗತ ಸಮಿತಿ ಗೌರವಾಧ್ಯಕ್ಷರೂ ಆದ ಸಿಎಂ ಸದಾನಂದ ಗೌಡ ಉಡುಪಿಗೆ ಬಿಜಯಂಗೈದರು. ಇಬ್ಬರೂ ಕಾವಿ ಶೋಮ್ಯಾನ್‌ಗಳೊಂದಿಗೆ ಅದೇನು ಮಾತಾಡಿದರೋ? ಇದ್ದಕ್ಕಿದ್ದಂತೆ ಪುತ್ತಿಗೆ ಸ್ವಾಮಿ ಉಪವಾಸ ಬಿಟ್ಟರಷ್ಟೇ ಅಲ್ಲ; ತಾನು ಪರ್ಯಾಯ ಹಬ್ಬದ ದರ್ಬಾರು-ಮೆರವಣಿಗೆಗೂ ಹೋಗಲಾರೆ ಎಂದು ಒಂಥರಾ ಅಸಹಾಯಕತೆಯಲ್ಲಿ ಕೈಚೆಲ್ಲಿ ಬಿಟ್ಟರು.

ನಾಲ್ಕು ವರ್ಷದ ಹಿಂದೆ ನಡೆದ ಪುತ್ತಿಗೆ ಪರ್ಯಾಯದ ಹೊತ್ತಲ್ಲಿ ಆದ ಮುಖಭಂಗ-ಸೋಲುಗಳ ಸೇಡನ್ನು ಪೇಜಾವರರು ಈಗ ತೀರಿಸಿಕೊಂಡಿದ್ದಾರೆ. ಈ ಬಾರಿ ಪೇಜಾವರ ಗ್ಯಾಂಗ್ ಕೈಮೇಲಾಗಿದೆ. ಪರ್ಯಾಯ ಉತ್ಸವದಲ್ಲಿ ಪುತ್ತಿಗೆ ಮಠದ ಬಂಡಾಯಗಾರ ಸ್ವಾಮಿ ಭಾಗವಹಿಸದಂತೆ ಸರಿಯಾದ ಅಡೆತಡೆ ಹಾಕಿದ ಪೇಜಾವರ ಗ್ಯಾಂಗ್ ಗೆದ್ದಿದೆ. ಪುತ್ತಿಗೆ ಸ್ವಾಮಿ ತನ್ನ ಮುಂದಿನ ಪರ್ಯಾಯವನ್ನು ವಿಶ್ವ ಪರ್ಯಾಯವನ್ನಾಗಿ ಮಾಡುತ್ತೇನೆಂದು ಹೇಳುವ ಮೂಲಕ ಈಗಾದ ತನ್ನ ವೈರಿ ಸೋದೆ ಮಠದ 'ಶಿಶು' ಸ್ವಾಮಿ ಪರ್ಯಾಯ ಪೂರ್ವಾಗ್ರಹ ಪೀಡಿತರ ಹೊಟ್ಟೆಕಿಚ್ಚಿನ ಹಬ್ಬವೆಂಬಂತೆ ಪರೋಕ್ಷವಾಗಿ ಮಾತಾಡಿದ್ದಾರೆ.

ಏನೇ ಇರಲಿ. ಇದು ಅಷ್ಟ ಮಠದ ಅನಿಷ್ಟ ಸ್ವಾಮಿಗಳ ಬಣಬಡಿದಾಟ ಮುಂದಿನ ದಿನಗಳಲ್ಲಿ ತಾರಕಕ್ಕೇರಿ ಮಾಧ್ವ ಮಠದ ಅನುಯಾಯಿಗಳಲ್ಲಿ ಗೊಂದಲ-ಗಲಾಟೆ ಹುಟ್ಟುಹಾಕುವುದು ಗ್ಯಾರಂಟಿ ಎಂಬ ಸಂಕೇತ ಬಿತ್ತರಿಸಿದೆಯಷ್ಟೇ! ಈ ಪರ್ಯಾಯ ಪ್ರಹಸನ ಒಂದಿಷ್ಟು ಪ್ರಶ್ನೆಗಳನ್ನು ಎಬ್ಬಿಸಿದೆ. ಪೇಜಾವರ ಗ್ಯಾಂಗಿಗೆ ಸೆಡ್ಡು ಹೊಡೆದಿದ್ದ ಪುತ್ತಿಗೆ ಸ್ವಾಮಿ ಏಕಾಏಕಿ ತಣ್ಣಗಾಗಿದ್ದು ಯಾಕೆ? ಸೋದೆ ಸ್ವಾಮಿಯ ಪರ್ಯಾಯ ಮೆರವಣಿಗೆ-ದರ್ಬಾರ ಹೊತ್ತಲ್ಲಿ ತಗಾದೆ ತೆಗೆದು ಕಾರ್ಯಕ್ರಮ ಕೆಡಿಸಿದರೆ ಎಂದು ಪುತ್ತಿಗೆ ಸ್ವಾಮಿಯನ್ನು ಗೃಹಬಂಧನದಲ್ಲಿಡಲು ಪೊಲೀಸರು ಪ್ಲಾನ್ ಮಾಡಿದ್ದೇನಾದರೂ ಆತನಿಗೆ ಗೊತ್ತಾಗಿ ಹೆದರಿದರಾ? ಪೇಜಾವರ ಸ್ವಾಮಿ ತನಗಿರುವ ಆಡಳಿತಗಾರರೊಂದಿಗಿನ 'ರಾಜಪುರೋಹಿತ' ಸಂಪರ್ಕ ಬಳಸಿ ಸುಗುಣೇಂದ್ರರು ಬಾಲ ಬಿಚ್ಚದಂತೆ ಮಾಡಿದರಾ? ಕುತಂತ್ರದಲ್ಲಿ ನಿಸ್ಸೀಮರಾದ ಪೇಜಾವರರ 'ಭಯೋತ್ಪಾದನೆ'ಗೆ ಸುಗುಣೇಂದ್ರರು-ಪುತ್ತಿಗೆ ಮಠದ ಹಿಂಬಾಲಕರು ಭಯಭೀತರಾಗಿ ಪಲಾಯನ ಮಾಡಿದರಾ? ಸಿಎಂ ಸದಾನಂದ ಗೌಡ ಮಾಡಿದ್ದು ಸಂಧಾನವೋ? ನೈಚ್ಯಾನುಸಂಧಾನವೋ? ಬ್ಲ್ಯಾಕ್‌ಮೇಲೋ?

ಒಟ್ಟಿನಲ್ಲಿ ಉಡುಪಿಯಲ್ಲಿರುವುದು ಅಷ್ಟ ಮಠಗಳಾ? ಸಟ್ ಮಠಗಳಾ? ಎಂಬ ಧರ್ಮಸೂಕ್ಷ್ಮದ ಪ್ರಶ್ನೆ ಈಗ ಉದ್ಭವಿಸಿದೆ.



ಏಕೆಂದರೆ ಪುತ್ತಿಗೆ ಸ್ವಾಮಿ ಮತ್ತು ಅದಮಾರು ಮಠಾಧೀಶರ ಬಿಟ್ಟು ಆರೇ ಸ್ವಾಮಿಗಳಿದ್ದ ಉತ್ಸವ ಮುಗಿದಿದೆ. ಪೇಜಾವರ, ಸೋದೆ ಮಠದ ಗ್ಯಾಂಗು ಪುತ್ತಿಗೇ ಶ್ರೀಗೆ 'ಕಾಫರ್' ಎಂದು ಪರ್ಯಾಯದಿಂದ ಹೊರಗಿಟ್ಟರೇ ಅದಮಾರು ಮಠಾಧೀಶರು ಪುತ್ತಿಗೆ ಸ್ವಾಮಿಗೆ ಬೆಂಬಲವಾಗಿ ತಾವೇ ಪರ್ಯಾಯ ಪ್ರೋತ್ಸಾಹಕ್ಕೆ ಬಹಿಷ್ಕಾರ ಹಾಕಿದ್ದಾರೆ. ಎಲ್ಲ ಎಂಟೂ ಸ್ವಾಮಿಗಳ ಸಮಕ್ಷಮದಲ್ಲೇ ಪರ್ಯಾಯ ನಡೆಯಬೇಕೆಂಬ ಪದ್ಧತಿ ಮಾಡಿದ್ದೇ ಸೋದೆ ಮಠದ ವಾದಿರಾಜರದಾಗಿತ್ತು. ಈಗ ಅದೇ ಮಠದ ವಿಶ್ವವಲ್ಲಭನೆಂಬ ಚಿಲ್ಟು ಸ್ವಾಮಿ ತನ್ನ ಹಿರಿಯ ತತ್ತ್ವಾದರ್ಶವನ್ನೇ ಧಿಕ್ಕರಿಸಿ ಸಂಪ್ರದಾಯ ಉಲ್ಲಂಘಿಸಿ ಪರ್ಯಾಯ ಸರ್ವಜ್ಞ ಪೀಠ ಏರಿದ್ದಾನೆ. ಅಷ್ಟೇ ಅಲ್ಲ, ಅಂದು ವಾದಿರಾಜರು 'ಅಸ್ಪೃಶ್ಯತೆ' ವಿರೋಧಿಯಾಗಿದ್ದರು. ಕನಕದಾಸರಿಗೆ ಕೃಷ್ಣ ದರ್ಶನ ಮಾಡಿಸಿದ್ದೇ ಈ ವಾದಿರಾಜರೆಂಬ ಪ್ರತೀತಿಯಿದೆ. ಇವತ್ತು ಆತನ ಸೋದೆ ಮಠದ ಪೀಠದಲ್ಲಿರುವ ಉತ್ತರಾಧಿಕಾರಿ ವಿಶ್ವವಲ್ಲಭ ಸಹ ಸ್ವಾಮಿಯನ್ನೇ ಅಸ್ಪೃಶ್ಯನೆಂದ್ಹೇಳಿ ತನ್ನ ಪರ್ಯಾಯದಿಂದ ದೂರ ಇಟ್ಟಿದ್ದು ವಿಪರ್ಯಾಸವೇ ಸರಿ.

ಹಾಗೆ ನೋಡಿದರೆ ಉಡುಪಿಯ ಅಷ್ಟ ಮಠದಂಗಳದಲ್ಲಿ ಅಸ್ಪೃಶ್ಯ ನೀತಿ ಹೊಸತೇನೂ ಅಲ್ಲ ಬಿಡಿ. ವರ್ಣಭೇದ ನೀತಿಯಿಂದಾಗಿಯೇ ಉಡುಪಿಯ ಅಷ್ಟ ಮಠಗಳು ಜಗತ್ಪ್ರಸಿದ್ಧವಾಗಿದೆ. ಅಂದಿನ ಕನಕದಾಸರಿಗೆ ಕೃಷ್ಣ ದರ್ಶನಕ್ಕೆ ಅವಕಾಶ ಕೊಡದಿರುವುದರಿಂದ ಇಂದಿನ ಕುಂಜಾರುಗಿರಿಯ ದೇವಳದಲ್ಲಿ ಮಾಧ್ವ ಮಠದವರು ಊಟಕ್ಕೆ ಕುಳಿತವರನ್ನು ಎಬ್ಬಿಸುವತನಕ, ಅಲ್ಲಿಂದ ವಿದೇಶಕ್ಕೆ ಹೋಗಿಬಂದದ್ದೇ ಪಿಳ್ಳೆ ನೆವಕ್ಕೆ ಪುತ್ತಿಗೆ ಸ್ವಾಮಿಗೆ ಕೃಷ್ಣ ವಿಗ್ರಹ ಪೂಜಿಸದಂತೆ ತಾಕೀತು ಮಾಡುವ ತನಕ ಉಡುಪಿ ಮಾಧ್ವಮಠದಲ್ಲಿ ಅಸ್ಪೃಶ್ಯತೆಯದೇ ಹಾವಳಿ! ಜನಿವಾರಗಳದೇ ಜಂಭದ ಜಂಜಾಟ!!

ಒಟ್ಟಿನಲ್ಲಿ ಸೋದೆ ಮಠದ ವಿಶ್ವವಲ್ಲಭ ಪೇಜಾವರ ಸ್ವಾಮಿಯ 'ಪೌರೋಹಿತ್ಯ'ದಲ್ಲಿ ಮಾಡಿಕೊಂಡ ಪರ್ಯಾಯ ಮಹೋತ್ಸವ 'ಅಸ್ಪೃಶ್ಯತೆ'ಯಿಂದ ಮಲಿನವಾಗಿರುವುದೇ ಈಗ ಎಲ್ಲೆಲ್ಲೂ ಧರ್ಮಸೂಕ್ಷ್ಮದ ಚರ್ಚೆಯ ಸಂಗತಿಯಾಗಿ ಬಿಟ್ಟಿದೆ. ಅಷ್ಟ ಮಠಾಧೀಶರಿಗೆ ಶಿಷ್ಟಾಚಾರ-ಮನುಷ್ಯತ್ವ ಎಂದು ಬಂದಿತೋ... ಕೃಷ್ಣ... ಕೃಷ್ಣಾ!!

ಸೋಗಲಾಡಿ ಸೋದೆ ಸ್ವಾಮಿ

"ಮೀಸೆ ಮೂಡುವಾಗ ದೇಶ ಕಾಣುವುದಿಲ್ಲ" ಅಂತಾರಲ್ಲ, ಹಾಗಾಗಿದೆ ...ಸೋದೆ ಮಠಾಧೀಶ ವಿಶ್ವವಲ್ಲಭನ ಸ್ಥಿತಿ-ಗತಿ! ಅತ್ಯಂತ ...ಮಂತ ಮಠವಾದ ಸೋದೆ ಮಠದ ಪಟ್ಟಕ್ಕೆ ...ತಯೇ ಈ 18-19 ರ ಹರೆಯದ ಹುಡುಗನಿಗೆ ...ಸಗತ್ತ, ಅಹಂಕಾರ ಬಂದುಬಿಟ್ಟಿದೆ ಎಂದೇ ಅಷ್ಟಮಠದ ...ಗಳದಲ್ಲಿ ಚರ್ಚೆಯಾಗುತ್ತಿದೆ! ಈತನಿಗೆ ಮಾರ್ಗದರ್ಶನ ...ದು ಹಿರಿಯ ಸ್ವಾಮಿಯಿಲ್ಲ, ಇಡೀ ಮಠದ ಉಸ್ತುವಾರಿ ...ತನ ಪೂರ್ವಾಶ್ರಮದ ತಂದೆಯ ಕೈಯಲ್ಲಿದೆ. ತಾನೇಕೆ ...ಗೆ ಸ್ವಾಮಿಗಳನ್ನು ವಿರೋಧಿಸುತ್ತಿದ್ದೇನೆಂಬ ಸ್ಪಷ್ಟ ಅರಿವೇ ...ಗಿಲ್ಲ. ಪೇಜಾವರರ ಡಬಲ್ ಗೇಮ್‌ಗೆ ವಿಶ್ವವಲ್ಲಭ ...ಳವಾಗಿರುವುದಕ್ಕೆ, ಆತನ ಅಜ್ಞಾನ-ಮುಂಬತನವೇ ...ರಣ!



ಈ ವಿಶ್ವವಲ್ಲಭನ ನಡತೆಯ ಬಗ್ಗೆಯೂ ರಂಗು-ರಂಗಿನ ಸುದ್ದಿಗಳು ಈಗಲೇ ಶುರುವಾಗಿ ಹೋಗಿದೆ. ಆತನ ಮೊಬೈಲ್‌ನಲ್ಲಿ ಎಂಟಿವಿ ನಂಗಾನಾಚ್ ಕ್ಲಿಪಿಂಗ್‌ಗಳಿರುತ್ತವೆ.... ಆತ ಕಾಲೇಜೊಂದರ ಎದುರು ಹುಡುಗಿಯರನ್ನು ನೋಡುತ್ತ ನಿಲ್ಲುತ್ತಾನೆಂಬುದು ಉಡುಪಿಯಲ್ಲಿ ಟಾಕ್ ಆಫ್ ದಿ ಟೌನ್ ಸಮಾಚಾರ. ಸನ್ಯಾಸಿಯೊಬ್ಬನಿಗಿರಲಿ, ಎಳೆಯ ಹುಡುಗನೊಬ್ಬನಿಗಿರಬೇಕಾದ ಸಂಯಮ-ಶಿಸ್ತು-ವಿಧೇಯತೆಗಳು ಈತನಿಗಿಲ್ಲ ಎನ್ನುತ್ತಾರೆ ಆತನ ಆಟಾಟೋಪವನ್ನು ಹತ್ತಿರದಿಂದ ಬಲ್ಲವರು. ಈತನ ತಮ್ಮನಂತೂ ಹುಟ್ಟಾ ಪೋಲಿ. ಅಣ್ಣ ಪೋರ್ಕಿ. ಹಾಗೆಂಬುದು ಉಡುಪಿ ರಥ ಬೀದಿಯಲ್ಲಿರುವ ಅಭಿಪ್ರಾಯ.

ಈತ ಬಾಯಿ ತೆಗೆದರೆ ಅಧಿಕ ಪ್ರಸಂಗ-ಉದ್ಧಟತನದ ಆಣಿಮುತ್ತುಗಳೇ ಉದುರುತ್ತವೆ. ಮೊನ್ನೆ ಈತ ಕಾಪು ಶಾಸಕ ಲಾಲಾಜಿ ಮೆಂಡನ್ ಎಂಬ ಬಿಜೆಪಿ ಬ್ರಾಹ್ಮಣ ನಾಯಕರ ದಾಸಾನುದಾಸನಿಗೇ ರೋಪು ಹಾಕಿದ್ದು ದೊಡ್ಡ ಸುದ್ದಿಯಾಗಲೇ ಇಲ್ಲ. ಕಾರಣ ಸ್ವಂತಿಕೆ ಇಲ್ಲದ ಶಾಸಕ ಲಾಲಾಜಿ ಅವಮಾನ ಸಹಿಸಿಕೊಂಡು ಸುಮ್ಮನಾಗಿದ್ದು. ತನ್ನ ಪರ್ಯಾಯ ಉತ್ಸವದ ಪೂರ್ವಭಾವಿ ಕಾರ್ಯಕ್ರಮವಾದ ಹೊರಗಾಣಿಕೆ ಸಂಗ್ರಹ-ಬಿಕ್ಷಾಟನೆಗೆ ಈತ ಕಾಪು ಸುತ್ತಮುತ್ತ ಓಡಾಡುತ್ತಿದ್ದ. ಆಗ ಶಾಸಕ ಲಾಲಾಜಿ "ಪುತ್ತಿಗೆ ಸ್ವಾಮಿಗೂ ಪರ್ಯಾಯಕ್ಕೆ ಆಹ್ವಾನಿಸಿರಿ... ಅಷ್ಟ ಮಠಾಧೀಶರೂ ಒಗ್ಗಟ್ಟಾಗಿರಿ....." ಎಂದು ಮನವಿ ಕೊಡಲು ಹೋಗಿದ್ದರು.

ಲಾಲಾಜಿಯ ಈ ಮನವಿ ಕಂಡಿದ್ದೇ ಎಳಸು ವಿಶ್ವವಲ್ಲಭ ಕೆರಳಿಕೆಂಡವಾಗಿ ಹೋದ. "ಮಠದ ವಿಷಯದಲ್ಲಿ ನೀವು ತಲೆ ಹಾಕಬೇಡಿ..... ನೀವು ಬೇಕಿದ್ದರೆ ವಿಧಾನಸೌಧದಲ್ಲಿ ಮಾತಾಡಿ... ಮಠದ ವಿವಾದದಲ್ಲಿ ಪ್ರವೇಶಿಸಿದರೆ ಪರಿಸ್ಥಿತಿ ನೆಟ್ಟಗಿರದು... ಹುಷಾರ್.....!" ಎಂದು ಜನಸಮೂಹಕ್ಕೆ ಕೇಳುವ ಹಾಗೇ ಹರಿಹಾಯ್ದು ಬಿಟ್ಟ ಈ ಮತಿಗೇಡಿ ಯತಿ! ಶಾಸಕ ಲಾಲಾಜಿ ವಿಧೇಯನಾಗೇ ತಲೆ ತಗ್ಗಿಸಿಕೊಂಡು ಹೋದರು. ಹೇಗಿದೆ ವಿಶ್ವವಲ್ಲಭನಿಗೆ ಮೀಸೆ ಮೂಡುವ ಮೊದಲೇ ತಲೆಗೇರಿರುವ ಮಠಾಧಿಕಾರದ ಅಮಲು?

ಇದು ಸ್ವಾಮಿಗೆ ಭೂಷಣವಾ? ಕಾವಿಗೆ ಶ್ರೇಯಸ್ಕರವಾ?

ರಾಣೆಬೆನ್ನೂರ
ಮನೆ ವಾಸ್ತುಗಾಗಿ ಬಸವನಗೌಡ ನರಬಲಿ ಕೊಟ್ಟ!



ಹಾವೇರಿ ಜಿಲ್ಲೆಯಲ್ಲಿ ನಡೆದಿರುವ ನರಬಲಿ ಘಟನೆ ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿದೆ. ಬಲಿ ತೆಗೆದುಕೊಂಡ ವನು ಬಸವನಗೌಡ. ಬಲಿಯಾದ ನತದೃಷ್ಟ ಯುವಕ ದಲಿತ ಸಮುದಾಯದ ಬಸವರಾಜ ಕಡೆಮನಿ. ರಾಣೆಬೆನ್ನೂರು ತಾಲೂಕಿನ ತಿರುಮಲ ದೇವರ ಕೊಪ್ಪದಲ್ಲಿ ಈ ಭಯಾನಕ ಮನುಷ್ಯ ಬಲಿ ಪ್ರಕರಣ ನಡೆದಿದೆ.

ಮನೆ ವಾಸ್ತು ಸರಿಯಿಲ್ಲ, ಅದನ್ನು ಸರಿಮಾಡಲು ನರಬಲಿ ಆಗಬೇಕು ಎಂದು ಹೇಳಿದ್ದ ಮಂತ್ರವಾದಿಯ ಮಾತು ನರಬಲಿಗೆ ಕಾರಣವಾಗಿದೆ. ಬಸವನಗೌಡ ಎಂಬಾತನ ಮನೆಯಲ್ಲಿ ಕೆಲಸಕ್ಕಿದ್ದ ದಲಿತ ಯುವಕನನ್ನು ಬಸವನಗೌಡನ ಕ್ರೂರಿ ಕುಟುಂಬ ಕೊಂದು ಹಾಕಿದೆ. ತಾವು ಮಾಡಿದ ಕ್ರೌರ್ಯದಿಂದ ಪಾರಾಗಲು ಹತ್ಯೆಗೀಡಾದ ಯುವಕನೊಂದಿಗೆ ತಮ್ಮ ಮನೆ ಸೊಸೆಗೆ ಅಕ್ರಮ ಸಂಬಂಧ ಸೃಷ್ಟಿಸಲು ಯತ್ನಿಸಿದ್ದಾರೆ. ಖಾಕಿಗಳೊಂದಿಗೆ ಮಿಲಾಖತ್ತಾಗಿ ಕೊಲೆಯ ರೂಪಕೊಟ್ಟು ನರಬಲಿ ಪ್ರಕರಣದಿಂದ ಎಸ್ಕೇಪಾಗಲು ಅವರು ನಡೆಸಿದ ಸಂಚು ಕೂಡ ಈಗ ಬಯಲಾಗಿದೆ.

ಅದು ಅಕ್ರಮ ಸಂಬಂಧಕ್ಕೆ ನಡೆದ ಹತ್ಯೆಯಲ್ಲ. ಬದಲಾಗಿ ಬಸವನಗೌಡನ ಮನೆಯ ವಾಸ್ತು ಸರಿಮಾಡಲು ನಡೆಸಿದ ವಾಮಾಚಾರಕ್ಕಾದ ನರಬಲಿ ಎಂಬುದು ಪ್ರಗತಿಪರ ಸಂಘಟನೆಗಳು ಕೈಗೊಂಡ ಸತ್ಯಶೋಧನೆಯಿಂದ ಸ್ಪಷ್ಟಗೊಂಡಿದೆ. ಅಲ್ಲದೆ ಉಳ್ಳವರು ಉಣಬಡಿಸಿದ ಹಣದ ಪ್ರಸಾದದ ಋಣಕ್ಕೆ ಪೊಲೀಸರು ಬಡ ದಲಿತನ ಬಲಿಯನ್ನು ಮುಚ್ಚಿಹಾಕುವ ಸಂಚು ಕೂಡಾ ಹೊರಬಂದಿದೆ.

ಹೌದು, ಹಾವೇರಿ ಜಿಲ್ಲೆಯ ರಾಣೆಬೆನ್ನೂರ ತಾಲೂಕಿನ ತಿರುಮಲದೇವರಕೊಪ್ಪ ಎಂಬ ಗ್ರಾಮದ ಗೌಡಕಿ ಕುಟುಂಬದ ದೌಲತ್ತಿನ ಒಡೆಯ ಬಸವನಗೌಡ ಮತ್ತವನ ಮಕ್ಕಳು ಸೇರಿಕೊಂಡು ದಲಿತ ಯುವಕನ್ನ ಬಲಿ ಪಡೆದಿದ್ದಾರೆ.. ವಂಶಪಾರಂಪರಿಕವಾಗಿ ಈ ಗೌಡನ ಮನೆಯಲ್ಲಿ ಜೀತದಾಳಿನಂತೆ ದುಡಿಯುತ್ತಾ ಇದ್ದ ಕಡೆಮನಿ ಎಂಬ ಬಡ ದಲಿತ ಕುಟುಂಬದ ಬಸವನ ಗೌಡನ ವಾಮಾಚರದ ಚಟಕ್ಕೆ ಪ್ರಾಣಬಿಟ್ಟಿದ್ದಾನೆ.

ಬಾಲ್ಯದಿಂದ ಗೌಡರ ಮನೆಯನ್ನೇ ತನ್ನ ನೆಲೆಯನ್ನಾಗಿಸಿಕೊಂಡು ಬಸವರಾಜಕಡಿಮನಿ ಟ್ರ್ಯಾಕ್ಟರ ಡ್ರೈವರನಾಗಿ ದುಡಿಯುತ್ತಿದ್ದ. ಈ ಕಟುಕ ಗೌಡ ಮತ್ತವನ ಮಕ್ಕಳು ಸೇರಿಕೊಂಡು ಗದಗ ಹತ್ತಿರದ ನೀರಲಗಿ ಗ್ರಾಮದ ಮಂತ್ರವಾದಿ ತಾತು ಅಜ್ಜನ ನೀಚ ಸಲಹೆಗಳನ್ನು ನಂಬಿ ಕಡಿಮನಿಯನ್ನು ಕೊಚ್ಚಿ ಹಾಕಿದ್ದಾರೆ.

ಹಾದಿ ತಪ್ಪಿಸಿದ ಖದೀಮ ಖಾಕಿಗಳು

ಕಳೆದ ವರ್ಷ ನವೆಂಬರ್ 26 ರಂದು ಅಮಾವಾಸ್ಯೆಯ ಮಾರನೆ ದಿನ ತಿರುಮಲ ದೇವರಕೊಪ್ಪ ಗ್ರಾಮದ ಬಸವನಗೌಡನ ಮನೆಯಲ್ಲಿ ವಾಮಾಚಾರದ ಭರ್ತಿ ಪೂಜೆ ಜರುಗಿದೆ. ತಾತು ಅಜ್ಜ ಎಂಬ ತಲೆಹಿಡುಕ ಮಂತ್ರವಾದಿಯ ನೇತೃತ್ವದಲ್ಲಿ ಈ ಹೀನಕಾರ್ಯ ಕತ್ತಲಲ್ಲಿ ಜರುಗಿಹೋಗಿದೆ. ಆದರೆ, ಅಲ್ಲಿ ನಡೆದಿದ್ದು ಬರೀ ಅರಿಶಿಣ ಕುಂಕುಮ ನಿಂಬೆಹಣ್ಣು ಹಿಟ್ಟಿನ ಮೂರ್ತಿಯ ವಾಮಾಚಾರದ ಪೂಜೆಯಲ್ಲ, ಜೀವಂತ ಮನುಷ್ಯನನ್ನ ಕೊಂದು ಹಾಕಿ ಅವನ ರಕ್ತದಿಂದ ರಾಕ್ಷಸರಂತೆ ನಡೆಸಿದ ರಾತ್ರಿ ಪೂಜೆ. ಕೇವಲ ತಮ್ಮ ಮನೆಯ ವಾಸ್ತು ದೋಷ ನಿವಾರಣೆಗೆ ಒಂದು ಜೀವವನ್ನು ಬಲಿತೆಗೆದುಕೊಂಡ ಕಟುಕ ಕುಟುಂಬ ತಮ್ಮ ಕಾರ್ಯ ಮುಗಿಸಿ ಕೊಂದ ದೇಹವನ್ನ ಊರಾಚೆ ಬಿಸಾಕಿ ಬೇರೊಂದು ಕಥೆ ಕಟ್ಟಿ ಪಾರಾಗುವ ಇರಾದೆಯಿಂದಲೇ, ವ್ಯವಸ್ಥಿತವಾಗಿ ಎಲ್ಲ ಕೆಲಸ ಮಾಡಿ ಮುಗಿಸಿದ್ದರು.


ವಾಮಾಚಾರದ ಕಥೆ ಈಗ ಬಯಲಾಗಿರಬಹುದು ಆದರೆ, ನಡೆಯದ ಒಂದು ಅಶ್ಲೀಲ ಕಥೆಯನ್ನ ಈ ಪ್ರಕರಣದ ಕಥೆಗೆ ತಲೆಬರಹವನ್ನಾಗಿ ಕಟ್ಟಲಾಗಿತ್ತು. ಅಸಲಿಗೆ ಇವರು ತಮ್ಮ ವಾಮಾಚಾರಕ್ಕಾಗಿ ಬಸವರಾಜ ಕಡೆಮನಿಯ ಮೃತದೇಹವನ್ನ ಬಳಸಿಕೊಂಡು ನಂತರ ಅದನ್ನ ಸುಟ್ಟು ಹಾಕುವ ಇರಾದೆ ಹೊಂದಿದ್ದರು. ಅದರಂತೆ ನವೆಂಬರ್ 26 ರ ರಾತ್ರಿ ಬಸವನಗೌಡನ ಮಗ ನಿಂಗನಗೌಡ ಮತ್ತು ಅವನ ಅಳಿಯ ಹುಚ್ಚಪ್ಪ ಪೂಜೆ ಮುಗಿದಾಕ್ಷಣ ಬಸವರಾಜನ ಮೃತ ದೇಹವನ್ನ ತಮ್ಮ ಟ್ರ್ಯಾಕ್ಟರಿನಲ್ಲಿ ಹಾಕಿಕೊಂಡು ಗ್ರಾಮದ ಹೊರಗೆ ಹೊಲವೊಂದರಲ್ಲಿ ಸುಟ್ಟು ಭಸ್ಮ ಮಾಡಲು ಹೊರಟಿದ್ದರು. ಆದರೆ, ರಸ್ತೆಯ ಅಕ್ಕಪಕ್ಕದಲ್ಲಿರುವ ನೀರಾವರಿ ಜಮೀನುಗಳಲ್ಲಿ ರಾತ್ರಿ ಹೊತ್ತು ಹೊಲಗಳಿಗೆ ನೀರುಣಿಸುತ್ತಿದ್ದ ರೈತರು 'ಇಷ್ಟು ಹೊತ್ತಿನಲ್ಲಿ ಗೌಡರ ಗಾಡಿ ಇತ್ತ ಬಂದಿದ್ದೇಕೆ?' ಎಂದು ಒಬ್ಬೊಬ್ಬರೇ ರಸ್ತೆಯತ್ತ ಬಂದರು. ಇದನ್ನು ಗಮನಿಸಿದ ನಿಂಗನಗೌಡ ಗೋಣಿ ಚೀಲದಲ್ಲಿ ತುಂಬಿದ್ದ ಬಸವರಾಜನ ದೇಹವನ್ನು ಕಾಲುವೆ ಯಲ್ಲಿ ಬಿಸಾಕಿ ಅಲ್ಲಿಂದ ಕಾಲ್ಕಿತ್ತಿದ್ದಾನೆ. ಇದು ಅನೇಕರಿಗೆ ಸಂಶಯ ತಂದಿದೆ.

ಮಾರನೆಯ ದಿನ ಗ್ರಾಮದ ಜನ ಪೊಲೀಸರಿಗೆ ಗೋಣಿಚೀಲದಲ್ಲಿ ಶವವಿರುವ ವಿಚಾರವನ್ನು ತಿಳಿಸಿದ್ದಾರೆ. ಇದು ಬಸವನಗೌಡ ಮತ್ತವನ ಮಕ್ಕಳು ಸೇರಿ ಮಾಡಿದ ಕೃತ್ಯ ಎಂಬುದನ್ನೂ ವಿವರಿಸಿದ್ದಾರೆ. ಆದರೆ, ಖದೀಮ ಖಾಕಿಗಳು ನಿಂಗನಗೌಡ ಮತ್ತು ಹುಚ್ಚಪ್ಪನನ್ನು ಅರೆಸ್ಟ್ ಮಾಡುವ ಬದಲು ಅವರು ಹಾಕಿದ ಬಿಸ್ಕೇಟಿಗಾಗಿ ಖುದ್ದು ಅವರೇ ಸರೆಂಡರ್ ಆಗಿದ್ದಾರೆ ಎಂಬ ಕರುಣೆಯ ಕಥೆಯನ್ನ ತೆರೆದಿಟ್ಟರಲ್ಲದೇ, ಹೆಣದ ಹಿಂದೆ ಹಸಿಬಿಸಿ ಸುಳ್ಳಿನ ಕಂತೆಯನ್ನ ಕಡತದಲ್ಲಿ ಸೇರಿಸಲು ಸಜ್ಜಾಗಿ ನಿಂತಿದ್ದರು.

ಅಕ್ರಮ ಸಂಬಂಧ ಎಂದ ಅನಾಚಾರಿಗಳು

ತಮ್ಮ ವಾಮಾಚಾರದ ನಂಬಿಕೆಗೆ ಮುಗ್ಧ ದಲಿತ ಯುವಕ ಬಸವರಾಜನನ್ನ ಆಹುತಿ ಪಡೆದ ಬಸವನಗೌಡ ಮತ್ತವನ ಮಕ್ಕಳು ಕ್ರೂರಿಗಳಷ್ಟೇ ಅಲ್ಲ, ಮಾನಗೇಡಿಗಳೂ ಹೌದು. ಯಾಕೆಂದರೆ, ತಾವು ಮಾಡಿದ ಪಾಪದ ಕೆಲಸದಿಂದ ಪಾರಾಗಲು ಸ್ವತಃ ಮನೆಯ ಸೊಸೆಯ ಚಾರಿತ್ರ್ಯವನ್ನೇ ಹಾಳುಗೆಡವಿದ್ದಾರೆ.

ತಾನೇ ಕೊಲೆಮಾಡಿರುವುದಾಗಿ ಹೇಳಿಕೊಂಡು



ಹಣೆಗೆ ರಂಧ್ರಮಾಡಿ ಕಣ್ಣು ತೆಗೆದಿರುವುದು...

ಪೊಲೀಸರಿಗೆ ಶರಣಾದ ನಿಂಗನಗೌಡ ತನ್ನ ಹೆಂಡತಿನೇ ಸರಿಯಿಲ್ಲ ಎಂದು ಹೇಳಿಕೆ ಬರೆದುಕೊಟ್ಟಿದ್ದಾನೆ. ಹತ್ತಾರು ವರ್ಷ ಇವನೊಂದಿಗೆ ಬದುಕು ನಡೆಸಿದ ಸಭ್ಯ ಹೆಣ್ಣುಮಗಳು ಈ ಕ್ರೂರಿಗಳಿಂದ ಚಾರಿತ್ರ್ಯಹೀನಳಾಗುವಂತಾಗಿದೆ. ನಿಂಗನಗೌಡನ ಪ್ರಕಾರ ಅವನ ಹೆಂಡತಿ 35 ವರ್ಷದ ಸರೋಜಮ್ಮ ತಮ್ಮ ಮನೆಯಲ್ಲಿ ಟ್ರಾ?ಕ್ಟರ್ ಡ್ರೈವರ್ ಆಗಿದ್ದ 18 ವರ್ಷದ ಬಸವರಾಜ ಕಡೆಮನಿಯೊಂದಿಗೆ ಹಲವು ವರ್ಷಗಳಿಂದ ಅಕ್ರಮ ಸಂಬಂಧ ಇತ್ತಂತೆ. ಅನೇಕ ಬಾರಿ ಅವರಿಬ್ಬರೂ ಸೇರುವುದನ್ನು ಈತ ಕಣ್ಣಾರೆ ಕಂಡಿದ್ದನಂತೆ. ಇದರಿಂದ ಸಿಟ್ಟಿಗೆದ್ದು ಬಸವರಾಜನನ್ನು ನಾನೇ ಕೊಂದಿದ್ದೇನೆ ಮತ್ತು ಈ ಕೆಲಸಕ್ಕೆ ನನ್ನ ಮಾವ ಹುಚ್ಚಪ್ಪ ಸಹಾಯ ಮಾಡಿದ್ದಾನೆ ಎಂದು ಈತ ಹೇಳಿಕೊಂಡಿದ್ದಾನೆ.

ಇದು ಪೊಲೀಸರೇ ಬರೆದ ಸ್ಕ್ರಿಪ್ಟ್ ಎಂಬುವುದರಲ್ಲಿ ಎರಡು ಮಾತಿಲ್ಲ, ಆದರೆ, ಇನ್ನೊಂದು ವಿಚಿತ್ರವೆಂದರೆ, ಈ ಘಟನೆ ನಡೆದನಂತರ ಇದೇ ಖಾಕಿಗಳು ಹೊರಹಾಕಿದ ಮೊದಲ ಸ್ಕ್ರಿಪ್ಟ್ ಬೇರೇನೇ ಆಗಿತ್ತು. ಅಂತಹದ್ದೊಂದು ಸಿಲ್ಲಿ ಕಥೆ ಹೀಗಿತ್ತು.

ಕೊಲೆಯಾದ ದಿನ ನಿಂಗನಗೌಡ ಮೊಬೈಲ್ ಫೋನಿನಲ್ಲಿ ಸುಮಾರು ಎರಡು ಗಂಟೆ ಮಾತನಾಡುತ್ತಿದ್ದನಂತೆ, ಇದನ್ನು ನೋಡಿದ ಟ್ರ್ಯಾಕ್ಟರ್ ಡ್ರೈವರ್ ಬಸವರಾಜ ನಿಂಗನಗೌಡನಿಗೆ 'ಯಾವ ಸೂಳೆಯ ಜೊತೆ ಇಷ್ಟೊತ್ತಿನಿಂದ ಮಾತನಾಡುತ್ತಿದ್ದೆ?' ಎಂದು ಕೇಳಿದ್ದಕ್ಕೆ ಆಕ್ರೋಶಗೊಂಡ ಮಾಲೀಕ ನಿಂಗನಗೌಡ ಅವನೊಂದಿಗೆ ಜಗಳ ಕಾಯ್ದು ಅದು ಅತಿರೇಕಕ್ಕೆ ಹೋಗಿ ನಂತರ ದೊಡ್ಡ ಬಡಿಗೆಯಿಂದ ಬಸವರಾಜನ ತಲೆಗೆ ಬಲವಾಗಿ ಹೊಡೆದಿದ್ದರಿಂದ ಆತ ಸತ್ತಿದ್ದಾನೆಂದು ಇದೇ ಖಾಕಿಗಳು ಮಾಧ್ಯಮದ ಮುಂದೆ ಹೇಳಿಕೊಂಡಿದ್ದರು. ಆದರೆ, ಕೇಳಿದವರೆಲ್ಲಾ ಇಂತಹ ಸಿಲ್ಲಿ ಕಾರಣಕ್ಕೆ ಯಾರಾದರೂ ಕೊಲೆ ಮಾಡ್ತಾರಾ ಅಂತ ಮರುಪ್ರಶ್ನೆ ಹಾಕಿದರು. ತಮ್ಮ ಕಟ್ಟುಕತೆಯ ಬಗ್ಗೆ ಖುದ್ದು ಪೊಲೀಸರಿಗೆ ನಂಬಿಕೆ ಬಾರದೆ ಕಾದೂ ಕೊನೆಗೆ ಅಕ್ರಮ ಸಂಬಂಧದ ಕಥೆಯನ್ನೇ ಫೈನಲ್ ಮಾಡಿದ್ದಾರೆ.

ಉಳ್ಳವರ ನೆರವಿಗೇ ನಿಂತರು

ನಮ್ಮನ್ನಾಳುವ ಸರ್ಕಾರ ಮತ್ತದರ ಅಧಿಕಾರಿವರ್ಗ ಉಳ್ಳವರ ಪರವಾಗಿದೆ ಎಂದು ತಿರುಮಲದೇವರಕೊಪ್ಪದ ಈ ಪ್ರಕರಣದಿಂದ ಮತ್ತೊಮ್ಮೆ ಸಾಬೀತಾಗಿದೆ. ಇದು ಸಹಜ ಹತ್ಯೆಯಲ್ಲ, ಅದರಲ್ಲೂ ಒಬ್ಬನೇ ಇದನ್ನು ಮಾಡಿಲ್ಲ, ಇಡೀ ಬಸವನಗೌಡನ ಕುಟುಂಬ ಬಸವರಾಜನ ಹತ್ಯೆಯಲ್ಲಿ ಶಾಮೀಲಾಗಿದೆ ಎಂಬುದು ಶವವನ್ನು ಹತ್ತಿರದಿಂದ ನೋಡಿದ ಪ್ರತಿಯೊಬ್ಬರಿಗೂ ಅರ್ಥವಾಗುತ್ತದೆ.




ಗ್ರಾಮದಲ್ಲಿರುವ ಸುಮಾರು 26 ದಲಿತ ಕುಟುಂಬಗಳು ಒಟ್ಟಾಗಿ ಈ ಪ್ರಕರಣದ ತನಿಖೆಗೆ ಒತ್ತಾಯಿಸಿವೆ. ಆದರೂ, ಆಡಳಿತ ವ್ಯವಸ್ಥೆ ಮಾತ್ರ ಕ್ಯಾರೆ ಎನ್ನದಿರುವುದು ದುರಂತವೇ ಸರಿ.

ವಂಶಪಾರಂಪರ್ಯ ಗೌಡರ ಮನೆಯಲ್ಲಿ ಜೀತದಾಳಿನಂತೆ ನರಭಲಿಗೆ ಆಹುತಿಯಾದ ಬಸವರಾಜ ಕಡೆಮನಿಯ ಇಡೀ ಕುಟುಂಬ ದುಡಿಯುತ್ತಾ ಬಂದಿದೆ. ಬಸವರಾಜ ಟ್ರ್ಯಾಕ್ಟರ್ ಚಾಲಕನಾದರೆ, ಅವನ ತಂದೆ ಬರಮಪ್ಪ ತಾಯಿ ಮಂಜವ್ವ, ಅಣ್ಣ ನಾಗರಾಜ ಸೇರಿದಂತೆ ಬಹುತೇಕ ಎಲ್ಲರೂ ಬಸವನಗೌಡನ ಮನೆಯಲ್ಲಿ ಕೂಲಿಗಳೇ. ತಮ್ಮ ಸ್ವಂತ ಗೇಣು ಜಮೀನಿಲ್ಲದೆ ದುಡಿದು ತಿನ್ನುವ ಕಡುಬಡತನದ ಕುಟುಂಬ ಮಾಲೀಕನ ಕ್ರೌರ್ಯದಿಂದ ಇಂದು ಕಣ್ಣೀರಿನಲ್ಲಿ ಕೈತೊಳೆಯುವಂತಾಗಿದೆ.

ಘಟನೆ ಜರುಗಿ ಅದರಿಂದ ಸುಧಾರಿಸಿಕೊಳ್ಳಲಾಗದೆ, ಗೋಳಾಡುತ್ತಿರುವ ಕಡೆಮನಿ ಕುಟುಂಬ ಗೌಡರ ವಿರುದ್ಧ ತಿರುಗಿ ಬೀಳಲಾರದೆ, ಸಂಕಟದಲ್ಲೇ ತಿಂಗಳು ಕಳೆದಿದೆ. ನಂತರ ಗ್ರಾಮದ ಉಳಿದ ದಲಿತ ಕುಟುಂಬದಿಂದ ಧೈರ್ಯ ಪಡೆದು ಬಸವರಾಜನದು ಸಹಜ ಕೊಲೆಯಲ್ಲ, ಇದು ವಾಮಾಚಾರಕ್ಕೆ ಆದ ನರಬಲಿ ಎಂಬುದನ್ನ ಸ್ಪಷ್ಟಪಡಿಸಿಕೊಂಡು ಸ್ಥಳೀಯ ಡಿ ವೈ ಎಸ್ ಪಿ ಜಯಪ್ರಕಾಶ ಮತ್ತು ಗ್ರಾಮಾಂತರ ಸರ್ಕಲ್ ಇನ್ಸ್‌ಪೆಕ್ಟರ್ ಗಿರೀಶ್‌ಮೂರ್ತಿಯನ್ನು ಕಂಡು ಪ್ರಕರಣವನ್ನು ತನಿಖೆ ಮಾಡಿ ಶಾಮೀಲಾಗಿರುವ ಗೌಡನ ಇಡೀ ಕುಟುಂಬವನ್ನು ಬಂಧಿಸುವಂತೆ ಒತ್ತಾಯಿಸಿದೆ. ಆದರೆ, ಇಡೀ ಕೇಸನ್ನೇ ಹಳ್ಳಹಿಡಿಸಿದ ಖಾಕಿಗಳು ದಲಿತನ ಮಾತಿಗೆ ಮರ್ಯಾದೆ ಇಲ್ಲದಂತೆ ಮಾಡಿ ಸಾಗುಹಾಕಿದ್ದಾರೆ.

ಇವರಿಂದ ನ್ಯಾಯ ಸಿಗಲ್ಲ ಎಂದು ಅರಿತ ಬಸವರಾಜನ ತಂದೆ ಬರಮಪ್ಪ ಮತ್ತವನ ಹೆಂಡತಿ ಮಂಜವ್ವ 21-12-2011 ರಂದು ಜಿಲ್ಲಾಧಿಕಾರಿ ಹೆಚ್.ಜಿ. ಶ್ರೀವರ ಹಾಗೂ ಎಸ್ ಪಿ ಚೇತನ್‌ಸಿಂಗ್ ರಾಥೋಡ್ ಅವರಿಗೂ ಮನವಿ ನೀಡಿ ನ್ಯಾಯ ಒದಗಿಸುವಂತೆ ಬೇಡಿಕೊಂಡಿದ್ದಾರೆ. ಆದರೆ, ಇವರ ಕಿವಿಗೂ ದಲಿತರ



ಸಂಕಷ್ಟದ ಕೂಗು ಕೇಳಲೇ ಇಲ್ಲ, ಕೊಟ್ಟ ಮನವಿಯ ಡಸ್ಟ್‌ಬಿನ್‌ಗೆ ಎಸೆದರು. ತಿಂಗಳಾದರೂ, ಯಾವೊಂದು ಪ್ರಗತಿ ಇವರಿಂದ ಹೊರಬರಲೇ ಇಲ್ಲ. ಈ ವ್ಯವಸ್ಥೆಯಿಂ ರೋಸಿಹೋಗಿ ತಮ್ಮ ಮಗನ ಸಾವಿಗೆ ನ್ಯಾಯ ಇನ್ನೇ ದೊರಕದು. ?ದಲಿತ ಎಂದರೆ, ದೂರ ನಡಿ? ಎನ್ನು ವ್ಯವಸ್ಥೆ ಜೀವಂತಿಕೆಯಲ್ಲಿರುವಾಗ ಸ ಮಗನಿಗೆ ನ್ಯಾಯ ಕೊಡಿಸುವ ಮಾತ ದೂರಾಯಿತು ಎಂದು ತಟಸ್ಥವಾ ಉಳಿದುಬಿಟ್ಟರು.

ಬಯಲಿಗೆ ಬಿದ್ದ ವಾಮಾಚಾರ

ಬಸವರಾಜನ ಹತ್ಯೆ ಎಂದು ಪ ಬರೆದಿಟ್ಟು, ಕೈತೊಳೆದುಕೊಂಡಿ ಖಾಕಿಗಳ ಬುಡಕ್ಕೆ ಬಿಸಿನೀರ ಬಿಟ್ಟಂತಾಗಿದ್ದು ಪ್ರಗತಿಪರ ಸಂಘಟ ಗಳಾದ ಪ್ರಜಾತಾಂತ್ರಿಕ ಜನರ ವೇದಿಕೆಯ ನಗರಗೆರೆ ರಮೇಶ, ನಗರಿಬಾಬಯ ಸ್ವಾಭಿಮಾನಿ ದಲಿತ ಶಕ್ತಿ ಸಂಘಟನೆಯ ಶಿವಲಿಂಗಂ, ಕ್ರಾಂ ಗೋವಿಂದು ಹಾಗೂ ಶಿವರಾಮುನ್ ನಡೆಸಿದ ಸ ಶೋಧನೆಯಿಂದ. ಆಗ ಹೊರಬಿದ್ದ ಅಂಶದಿಂ ರಾಣೆಬೆನ್ನೂರು ಖಾಕಿಗಳು ತರಗುಟ್ಟಿಹೋಗಿದ್ದಾರೆ.

ತಿರುಮಲದೇವರಕೊಪ್ಪ ಗ್ರಾಮದಲ್ಲಿ ಘಟನೆ ಕುರಿತು ಕೂಲಂಕಷ ವಿಚಾರಣೆ ನಡೆಸಿದ ಈ ತಂಡಕ್ಕೆ ಸ ಅರ್ಥವಾಗುವುದು ತಡವೇನಾಗಲಿಲ್ಲ, ನವೆಂಬರ್ 2 ರಂದು ರಾತ್ರಿ ಬಸವನಗೌಡನ ಮನೆ ವಾಸ್ತುದೋ ನಿವಾರಣೆಗೆ ಮನೆಯ ಪಕ್ಕದ ಕೊಟ್ಟಿಗೆಯಲ್ಲಿ ಮಂತ್ರವಾ ತಾತು ಅಜ್ಜ ನಡೆಸಿದ ವಾಮಾಚಾರದ ದುಷ್ಟ ಪೂಜೆ ಬಸವರಾಜನನ್ನ ನರಬಲಿಯನ್ನಾಗಿ ಕೊಡಲಾಗಿದೆ. ಇದ ಪೂರಕವೆಂಬಂತೆ ಪೂಜೆಯ ನಂತರ ಆತನ ಶವವ ಊರಾಚೆಗೆ ಗೋಣಿ ಚೀಲವೊಂದರಲ್ಲಿ ತುಂ ಬಿಸಾಕಲಾಗಿತ್ತು. ಆ ಸಮಯದಲ್ಲಿ ಬಸವರಾಜನ ದೇಹ ಮೇಲೆ ಅನೇಕ ಕುರುಹುಗಳು ವಾಮಾಚಾರ ಚಿತ್ರಣವನ್ನು ಹೊರಹಾಕುತ್ತಿದ್ದವು. ಪೂಜೆಗಾಗಿ ಆತನ ಬ ಕಣ್ಣನ್ನು ಕೀಳಲಾಗಿದೆ. ಅಲ್ಲದೆ, ಹಣೆಯ ಮೇಲೆ ರಂ ತೆಗೆಯಲಾಗಿದೆ ಮತ್ತು ತಲೆಯ ಮೇಲೆ ಅರಶಿ ಕುಂಕುಮವನ್ನು ಎರಚಲಾಗಿತ್ತು.

ನಂತರ ಜರುಗಿದ ನಾಟಕೀಯ ಬೆಳವಣಿಗೆಗಳಿಂ ಗೌಡನ ಕುಟುಂಬ ಬಂಧನದ ಭೀತಿಯಿಂದ ಮನೆಗೆ ಬ ಜಡಿದುಕೊಂಡು ಗ್ರಾಮ ತೊರೆದುಬಿಟ್ಟರು. ಆಗಲಿಂ ಮನೆಯೊಳಗೆ ಯಾರೂ ಪ್ರವೇಶ ಮಾಡಿರಲಿಲ್ಲ, ಮೊ ಸತ್ಯಶೋಧನಾ ತಂಡ ಮನೆಹೊಕ್ಕು ನೋಡಿದಾ ವಾಮಾಚಾರ ನಡೆಸಿದ್ದರ ಬಗ್ಗೆ ಅನೇಕ ಸಾಕ್ಷ್ಯಾಧಾರಗಳ ಹೊರಬಿದ್ದಿವೆ. ಹತ್ಯೆ ಮಾಡಿದ ಸ್ಥಳದಲ್ಲಿ ನೀರಿನ ಕೊ ಮತ್ತು ಪ್ಲಾಸ್ಟಿಕ್ ಬುಟ್ಟಿಗಳಿಗೆ ರಕ್ತ ಸಿಡಿದಿರುವುದು ಪೂ ಸಾಮಗ್ರಿಗಳು ಅಲ್ಲಲ್ಲಿ ಬಿದ್ದಿರುವುದು

ಕಂಡುಬಂದಿದೆ. ಇದರಿಂದ ಬಸವರಾಜನ ಹತ್ಯೆಯ ಕೇವಲ ನಿಂಗನಗೌಡ ಅಷ್ಟೇ ಮಾಡಿಲ್ಲ ಅವನ ಅ ಬಸವನಗೌಡ ಅಣ್ಣ ರಂಗನಗೌಡ ಅಲ್ಲದೆ, ಮಂತ್ರವಾ ತಾತು ಅಜ್ಜ ಕೂಡ ಇದರಲ್ಲಿ ಶಾಮೀಲಾಗಿದ್ದಾರೆ ಎಂಬು ಸ್ಪಷ್ಟಗೊಂಡಿದೆ. ಆದರೆ, ಗೌಡ ಹೆಣೆದ ಕಥೆಗೆ ಮು ಅಳಿಯ ಹುಚ್ಚಪ್ಪ ಇಂದು ಜೈಲು ಸೇರುವಂತಾಗಿದೆ. ವಾಮಾಚಾರದಲ್ಲಿ ಇವನ ಪಾತ್ರವಿಲ್ಲ ಎಂಬುದನ ಸ್ಪಷ್ಟವಾಗಿ ಮನಗಂಡ ಸತ್ಯಶೋಧನಾ ಸಮಿತಿ ತನಿಖೆ ವಿವರವನ್ನು ರಾಣೆಬೆನ್ನೂರು ಡಿವೈಎಸ್‌ಪಿ ಜಯಪ್ರಕಾಶ ಸಲ್ಲಿಸಿದೆ. ಆದರೆ, ನಡೆದದ್ದನ್ನೇ ಹಾಗೆ ನಡೆದೇ ಇಲ್ಲ ಎಂ ಕಥೆ ಕಟ್ಟಿದ ಪೊಲೀಸರು ಈಗಲಾದರೂ ಇನ್ನು ಸಾಕ್ಷಿಗಳನ್ನ ಭಕ್ಷಣೆ ಮಾಡದೆ ನ್ಯಾಯ ಒದಗಿಸಲಿ.

• ಹುರಳಿಕುಪ್ಪಿ ವಿನಯ



"ನನ್ನ ಇಪ್ಪತ್ತು ವರ್ಷದ ದಲ್ಲಾಳಿ ಜೀವನದಲ್ಲಿ ಯಾವುದೂ ನನ್ನನ್ನು ಇಷ್ಟು ಆಳವಾಗಿ ಅಲುಗಾಡಿಸಿರಲಿಲ್ಲ. ಒಂದೇ ಹೊಡೆತಕ್ಕೆ ಮುದುಕ ನನ್ನೆಲ್ಲ ಪಾಪಗಳಿಗೆ ಶಿಕ್ಷೆ ನೀಡಿದ್ದ. ಚಾಚಿದ ತೋಳುಗಳ ಎರಡು ಹಸಿದ ಆಕೃತಿಗಳು ನನ್ನೆದುರು ನಿಂತಿದ್ದವು. ಎರಡು ಜೀವಂತ ಅಸ್ಥಿಪಂಜರಗಳು! ಯಾರನ್ನು ಉಳಿಸಲಿ; ಅಳಿಸಲಿ ಯಾರನ್ನು!? ಪ್ರಶ್ನೆಗಳು ನನ್ನನ್ನು ತೀವ್ರವಾಗಿ ಇರಿದವು. ಈ ಮುದುಕನಿಗೆ ಏನು ಹೇಳಲಿ ಹೂಂ ಅಥವಾ ಉಹೂಂ? ನನ್ನ ಒಂದು ಹೂಂ ಮುದುಕನನ್ನು ಕೊಂದು ಹೂಂಕರಿಸುತ್ತದೆ. ಒಂದು ಉಹೂಂ ಕಾಶಿಯ ಚರಮಗೀತೆ ಹಾಡುತ್ತದೆ."

ದಲ್ಲಾಳಿ

ಕತೆ

ರಾಜಸ್ಥಾನಿ ಮೂಲ: ರಾಮ ಸ್ವರೂಪ ಕಿಸಾನ್
ಇಂಗ್ಲಿಷ್ ರೂಪಾಂತರ: ಶ್ಯಾಮ್ ಮಾಥೂರ್
ಕನ್ನಡಕ್ಕೆ: ವಿಠಲ ದು. ದಳವಾಯಿ

ದನಗಳ ವ್ಯಾಪಾರದ ದಲ್ಲಾಳಿಯಲ್ಲಿ ನನ್ನದು ದೊಡ್ಡ ...ಸರು. ದನಗಳನ್ನು ಕೊಳ್ಳುವವರಿಗೆ ಮತ್ತು ಮಾರುವವರಿಗೆ ...ತೃಪ್ತಿದಾಯಕವಾಗಿ ನಾನು ವ್ಯವಹಾರ ಕುದುರಿಸುತ್ತೇನೆ. ಅದಕ್ಕೆ ...ಂತೆ ನನ್ನ ಆಮದನಿಯೂ ಚೆನ್ನಾಗಿದೆ. ಸಂತೆಗೆ ಹೋದೊ... ಜನ ನನ್ನನ್ನು ಚಹಾದಂಗಡಿಗೆ ಕರೆದೊಯ್ಯುತ್ತಾರೆ. ...ಡಿಯವನು ನನ್ನೆಡೆಗೆ ಅರ್ಥಪೂರ್ಣವಾಗಿ ನೋಡಿ ಕಣ್ಣು ...ಮಿಟುಕಿಸಿ ಕೇಳುತ್ತಾನೆ "ವ್ಯಾಪಾರ ಜೋರೇನ್ರೀ ಸಾಹುಕಾರ?" ...ನು ಅವನಿಗೆ ತುಂಬ ಕ್ಲೋಸು ಎಂದು ಮಂದಿಯೆದುರು ...ತೋರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಕೆಲವೊಮ್ಮೆ ...ಭವರಿಂದ ತಪ್ಪಿಸಿಕೊಳ್ಳುವುದೇ ಹರಸಾಹಸವಾಗುತ್ತದೆ.

...ನಾನು ಸಂತೆಯಿಂದ ಸಂತೆಗೆ, ಜಾತ್ರೆಯಿಂದ ಜಾತ್ರೆಗೆ ಅಲೆ...ಯುತ್ತಲೇ ಇರುತ್ತೇನೆ. ಇಲ್ಲಿಯೇ ನನ್ನ ದಿನದ ರೊಟ್ಟಿ ...ಡಿಯುತ್ತೇನೆ. ವರ್ಷಪೂರ್ತಿ ಎಲ್ಲಾದರೂ ಜಾತ್ರೆಗಳು ...ತ್ತೇ ಇರುತ್ತವೆ. ನನ್ನ ಹತ್ತಿರ ತರಹೇವಾರಿ ಸುಳ್ಳುಗಳ ದೊಡ್ಡ ...ಖಜಾನೇ ಇದೆ. ರಾತ್ರಿ ಕಂಡ ಬಾವಿಗೆ ನಾನು ಜನರನ್ನು ಹಗಲೇ ...ಳಿಸುತ್ತೇನೆ. ತೀರಾ ಯಾತಕ್ಕೂ ಬಾರದ ದನವನ್ನು ಗಬ್ಬಾದ ...ಣಕಿನ ಹಾಗೆ ಮಾರಿಸಬಲ್ಲೆ ಅಥವಾ ಮೈ ಕೈ ತುಂಬ ಗಡಿಗೆ ...ಬ ಹಾಲು ಹಿಂಡುವ ಎಮ್ಮೆಯಲ್ಲಿ ಏನಾದರೂ ಊನ ...ಹುಡುಕಿ ಶಾಶ್ವತ ಕೊಟ್ಟಿಗೆಯಲ್ಲೇ ಕಟ್ಟಿ ಹಾಕಿಸಬಲ್ಲೆ. ...ಒಂದೇ ಮಾತಿನಲ್ಲಿ ಹೇಳುವುದಾದರೆ ನಾನು ಈ ವಿಷಯದಲ್ಲಿ ...ನಿತ ಜಾದುಗಾರನಂತೆ ಕ್ಷಣಾರ್ಧದಲ್ಲಿ ಕಲ್ಲನ್ನು ರತ್ನವಾಗಿ ...ಅಥವಾ ರತ್ನವನ್ನು ಕಲ್ಲಾಗಿ ಬದಲಾಯಿಸಬಲ್ಲೆ. ನನ್ನದೆಂತಹ ...ತ್ರವೆಂದರೆ ಕೊಳ್ಳುವವ ಎದುರಿಗೆ ಬಿದ್ದ ಕಬ್ಬಿಣವನ್ನೂ ...ಗಾರವೆಂದೇ ತಿಳಿಯುತ್ತಾನೆ. ಹಾಗಂತ ನಾನು ...ಕೊಳ್ಳುವವನಿಗಷ್ಟೇ ಟೋಪಿ ಹಾಕುವುದಿಲ್ಲ, ಮಾರುವವನ ...ಯ ಮೇಲೂ ದಾಸವಾಳ ಗಿಡವನ್ನೇ ನೆಡುತ್ತೇನೆ. ಕೆಲವು ...ಲಾಕ ಮಾಲಕರು ಕಣ್ಣು ಬಾಯಿಗಳೆರಡನ್ನೂ ತೆರೆದು ಗಿರಾಕಿ ...ಹುಡುಕುತ್ತಿರುತ್ತಾರೆ. ನಂಗೆ ಕ್ಯಾರೆ ಅನ್ನುವುದಿಲ್ಲ. ಅಂಥವರಿಗೆ ...ಅಮಾವಾಸ್ಯೆಯ ಚಂದ್ರನಂತೆ ಗಿರಾಕಿಗಳು ಮಂಗಮಾಯ ...ವ ಹಾಗೆ ನನ್ನ ಕೈಚಳಕ ತೋರಿಸುತ್ತೇನೆ. ಇದರಿಂದ ...ದ್ದು ಹೋಗುವ ಜನ ಎಲ್ಲಾ ನಿಂದೇ ತಂದೆ ಎನ್ನುತ್ತಾ ...ಬಳಕಾಯಿ ಕುಡುಗೋಲು ನನ್ನ ಕೈಯಲ್ಲೇ ಕೊಟ್ಟು ...ಪ್ಪಿಸಿರು ಹಾಕುತ್ತಾರೆ. ಜನರನ್ನು ಹೇಗೆ ಮರಳು ...ಮಾಡಬೇಕೆಂಬುದು ನಂಗೆ ಗೊತ್ತು. ಇಷ್ಟಕ್ಕೂ ನಾನ್ಯಾರು? ...ಕಶ್ಚಿತ್ ಒಬ್ಬ ದಲ್ಲಾಳಿ; ಹೆಸರು ತನಸುಖ್!

...ನಂಗೊತ್ತು: ನನ್ನದಿದು ಪುಣ್ಯದ ಕೆಲಸವಲ್ಲ. ಮೂರೂ ...ಹೊತ್ತು ಮುಗ್ಧರನ್ನು ಮೋಸ ಮಾಡುವುದು ಪುಣ್ಯದ ...ಸ ಹೇಗಾಗುತ್ತದೆ? ಸುಳ್ಳು ಪಾಪದ ಒಂದು ಸಣ್ಣ ...ಪವಷ್ಟೇ. ನಾನು ...ಮಕಲು ಗೊತ್ತಿರುವ ...ರಿ ಇದೊಂದೇ. ನನಗೆ ...ಲ ಆಸ್ತಿ ಪಾಸ್ತಿ ಏನೂ ...ಲ್ಲ. ನನ್ನ ಉಸಿರು ...ಮಿಷನ್ ಮೇಲೆಯೇ ...ತಿದೆ. ದಲ್ಲಾಳಿ ...ನ್ನುವುದು ಒಂದು ...ವರಿಕೆ ಹುಟ್ಟಿಸುವ ಶಬ್ದ. ...ವಕ್ಕೆ ಸಮಾಜದಲ್ಲಿ ಯಾವ ...ಮೌಲ್ಯವತ್ತೂ ಇಲ್ಲ. ನಂಗಿದು ...ದಿದೆ. ಆದರೆ ನಾನು ಅಸಹಾಯಕ. ಇಲ್ಲಿ ನಿಮ್ಮ ...ಮುಂದೆ ನನ್ನ ಜಾಣತನದ ಬಗ್ಗೆ ಕೊಚ್ಚಿಕೊಳ್ಳುತ್ತಿಲ್ಲ. ...ವಲಿಗೆ ನನ್ನ ವಂಚನೆಯ ಕ್ರೂರ ಕೌಶಲವನ್ನು ...ಚಯಿಸಿದೆ.

...ಒಂದು ಗೋಧೂಳಿಯ ಸಂಜೆ ಈ ಘಟನೆ ನಡೆಯಿತು. ...ನು ಆದೆ ತಾನೆ ಮನೆಗೆ ಬಂದು ಅಂಗಳದಲ್ಲಿದ್ದ ಹೊರಸಿನ ...ಮೇಲೆ ಹೊರಳಾಡುತ್ತಿದ್ದೆ. ಜಂತಿಯಲ್ಲಿ ಗುಬ್ಬಿಗಳು ಕಚಿಪಚಿ ...ಗದ್ದಲವೆಬ್ಬಿಸಿದ್ದವು. ಜಂತಿಯೆಲ್ಲ ಇಲ್ಲಣಾ (ಹೊಗೆಯ ಮಸಿ) ...ತ್ತಿ ಗುಬ್ಬಿಗಳ ಹಾವಳಿಯಿಂದ ಮಣ್ಣೆಲ್ಲ ಉದುರುತ್ತಿದೆ. ನನ್ನ ...ಹೃದಯದ ಬಣ್ಣವೂ ಇದೇ ಅಲ್ಲವೇ; ನನ್ನೊಳಗೆ ...ಬಾಲುಗಳೇಳುತ್ತಿವೆ. ಶಿಥಿಲವಾಗುತ್ತಿರುವ ಛಾವಣಿ ತನ್ನ ...ಶಕಗಳ ಇತಿಹಾಸವನ್ನು ಸಾರಿ ಹೇಳುತ್ತಿದೆ. ಹಕ್ಕಿಗಳಿಂದಾದ ...ಹುತುಗಳು ನನ್ನ ಜೀವನದ ಖಾಲಿತನವನ್ನು ಕಿಲಕಿಲಿಸುತ್ತಿವೆ. ...ನು ಎಷ್ಟು ಸುಳ್ಳುಗಳನ್ನು ಹೇಳಿದೆ, ಎಷ್ಟೊಂದು ಪಾಪ ...ಮಾಡಿದೆ. ರೋಗಿಷ್ಟ ದನಗಳನ್ನು ದುಬಾರಿ ರೇಟಿಗೆ ಮಾರಿದೆ, ...ಜೊಳ್ಳೆ ದನಗಳನ್ನು ಬಡಿಗಾಸಿಗೆ ಕೊಂಡೆ. ಎಲ್ಲ ಈ ಹೊಟ್ಟೆಗಾಗಿ ತುಂಡು ಬಟ್ಟೆಗಾಗಿ. ಇಷ್ಟೆಲ್ಲ ದುರ್ನೀತಿ ನಡೆದೂ ಕಡೆಗೇನಿದೆ? ಎಲ್ಲ ಖಾಲಿ ಖಾಲಿ!

ಮನದ ತುಂಬ ತುಂಬಿತುಳುಕುವಷ್ಟು ಬೇಸರ ದುಗುಡ ಆವರಿಸಿದೆ. ಏನೇನೊ ಹಳೆಯ ಯೋಚನೆಯಲ್ಲಿರುವಾಗ ಅಂಗಳದಲ್ಲಿ ಕೇಳಿಸಿದ ಹೆಜ್ಜೆ ಸಪ್ಪಳ ವಾಸ್ತವಕ್ಕೆ ತಂದಿತು.

ನೋಡಿದರೆ ಅರವತ್ತು ವರ್ಷದ ಮುದುಕ ನಿಂತಿದ್ದಾನೆ.

"ಸಲಾಮ್ರೀ ಯಪ್ಪಾ"

"ಸಲಾಮಪಾ ಯಣ್ಣಾ ಬಾ" ಅಂದೆ.

"ನೀವು ತನಸುಖ್ ಅಲ್ಲಾ?"

"ಹೌದು."

"ನಂಗೊಂದು ಎಮ್ಮಿ ಕೊಂಡುಕೋ ಬೇಕಾಗ್ಯದ" ನನ್ನ ಪಾದದ ಹತ್ತಿರ ಕೂಡುತ್ತ ಅಂವ ಹೇಳಿದ.

ಮುದುಕನ ಮುಖದಲ್ಲಿ ಬಡತನ, ದುಃಖಗಳು ಮೂಡಿಸಿದ ನೆರಿಗೆಗಳು ಸ್ಪಷ್ಟವಾಗಿದ್ದುವು. ಬದುಕಿನ ದಾರುಣತೆಗೆ ಸೋತು ಜರ್ಜರಿತನಾದವನಂತೆ ತೋರುತ್ತಾನೆ. ನನ್ನ ಇದುವರೆಗಿನ ಬೇಸರವನ್ನೆಲ್ಲ ತೊಲಗಿಸುವಂತಹ ಮಿಂಚೊಂದು ನನ್ನ ತಲೆಯಲ್ಲಿ ಥಟ್ಟನೇ ಹೊಳೆಯಿತು. ಹಾಂ! ಇದು ನನಗೊಂದು ಅದ್ಭುತ ಅವಕಾಶ, ನನ್ನೆಲ್ಲ ಪಾಪಗಳನ್ನು ತೊಳೆದುಕೊಳ್ಳಲು. ಈ ದಿನ ಈ ದೀನ ಮುದುಕನಿಗೆ ಒಂದು ಚೆಂದದ ದನ ಕೊಡಿಸಿ ಜೀವನದಲ್ಲಿ ಒಂದಾದರೂ ಉಪಕಾರ ಮಾಡುವ ಸಮಯವಿದೆಂದು ಅಂದುಕೊಂಡೆ.

ಸ್ವಲ್ಪ ನೀರು ಕುಡಿದು ಅಂವ ಕೇಳಿದ "ನಾನಂದದ್ದು ಕೇಳಿಸಿತ್ರಿ?"

"ಹೂಂ. ನೀ ಯಾವ್ದಾರ ಎಮ್ಮಿ ನೋಡೀಯೇನ್?"

"ಹೌದ್ರಿ ನಿಮ್ಗ ಗೊತ್ತಿರೋ ಎಮ್ಮಿನೇ ಅದು."

"ಎಲ್ಲೈತಿ ಅದ?"

"ಖರೇ ಹೇಳ್ಬೇಕಂದ್ರ ಇಲ್ಲೇ ಐತಿ; ನಿಮ್ಮ ಮಗ್ಗಲಮನಿ ಕಾಶಿ ರೇಗಾರಂದು."

"ಹಾಂ! ಕಾಶೀ ಎಮ್ಮಾ?!?"

ಕಾಶಿಯ ಹೆಸರು ಕೇಳುತ್ತಲೇ ನನ್ನ ತಲೆ ಗಿರ್ರೆನ್ನತೊಡಗಿತು. ತಲೆತಲಾಂತರದಿಂದ ಬಡತನದ ಶಾಪವನ್ನು ಬಡಿದುಕೊಂಡಿದೆಯೇನೋ ಅನ್ನುವಂತಹ ಮನೆ, ಗುಳಿ ಕಣ್ಣುಗಳ ದುಃಖ ಮಡುಗಟ್ಟಿದ ಮುಖ ಕಣ್ಮುಂದೆ ಅಳತೊಡಗಿದವು. ಕಾಶಿಯ ಹೆಂಡತಿಯನ್ನು ಕ್ಯಾನ್ಸರ್ ಹಿಂಡಿ ಹಿಪ್ಪೆ ಮಾಡುತ್ತಿದ್ದು, ಆಕೆಗೆ ಚೌಳಿಕಾಯಿ, ಬೆಂಡಿಕಾಯಿಯಂತಹ ಕೂಸುಗಳಿವೆ. ಆಕೆಯ ಆಪರೇಶನ್ ಮತ್ತು ಔಷಧಿಗಾಗಿ ತನ್ನಲ್ಲಿರುವ ಒಂದೇ ಒಂದು ಎಮ್ಮೆಯನ್ನು ಕಾಶಿ ಮಾರಬೇಕೆಂದಿದ್ದ. ಅದನ್ನು ಮಾರಿಸಿ ಕೊಡುವಂತೆ ನನಗೆ ಪದೇಪದೇ ನೆನಪಿಸಿದ್ದ.

ಮಾರಿಸಬಹುದಿತ್ತು. ಆದರೆ ಎಮ್ಮೆಯ ಇತಿಹಾಸ ಅಷ್ಟು ಸರಿ ಇರಲಿಲ್ಲ. ಅದು ಈಗಾಗಲೇ ನಾಲ್ಕು ಸಲ ಕಂದಾ (ಗರ್ಭಪಾತ) ಹಾಕಿತ್ತು. ವೆಟರ್ನರಿ ಡಾಕ್ಟರ್ ಚೆಕ್ ಮಾಡಿ ಇನ್ನೊಮ್ಮೆ ಏನಾದರೂ ಇದು ಕಂದಾ ಹಾಕಿದರೆ ಸಾಯೋದು ಗ್ಯಾರಂಟಿ ಎಂದು ಎಚ್ಚರಿಸಿದ್ದರು. ಈಗ ಅದೇ ಎಮ್ಮೆಯನ್ನು ಕೊಡಿಸೆಂದು ಈ ಪಾಪದ ಮುದುಕ ಗಂಟು ಬದ್ದಿದ್ದಾನೆ.

ನಾನು ದೊಡ್ಡ ಅಡಕತ್ತರಿಯಲ್ಲಿ ಸಿಲುಕಿಕೊಂಡೆ. ಒಳಗೊಳಗೆ ನೋವು ತಿನ್ನುತ್ತ ನನಗೆ ಒಂದು ಶಬ್ದವನ್ನೂ ಮಾತನಾಡಲಾಗಲಿಲ್ಲ.

ಮುದುಕನೇ ಮೌನ ಮುರಿದ. "ಏನ್ ವಿಚಾರ ಮಾಡ್ಲಿಕತ್ತೀರಿ? ನಾ ಹೇಳಿದ್ದು ಸರಿ ಬರಲಿಲ್ಲೇನ್ರೀ?"

"ಹೇ ಹಂಗೇನಿಲ್ಲ, ಆದ ಕಾಶಿ ಎಮ್ಮೇನು?"

"ಹೌದ್ರಿ, ಮತ್ಯಾಕ ಚಿಂತಿ ಮಾಡಾತೀರಿ? ಆ ಎಮ್ಮಿ ಒಳಗ ಏನಾರ ಊನ ಐತೇನ್ರೀ ಮತ್ತ? ಕಾಲ ಬೀಳತೇನ್ರೀ ಇಲ್ಲ ಅನಬ್ಯಾಡ್ರೀ ಯಪ್ಪಾ ನಾ ಬಡವ. ನನಗಾಗಿ ಅಲ್ಲದಿದ್ರೂ ನನ ಮಗನ ಮಾರಿ ನೋಡೆರ ಆ ಎಮ್ಮಿ ಕೊಡಸ್ರೀ!"

"ನಿನ್ನ ಮಗಾ?"

"ಹೂಂನ್ರೀ, ಅಂವಾ ಯಾಡ ವರ್ಷಾತು ದವಾಖಾನ್ಯಾಗ ಇದ್ದಾನ್ರಿ. ನಿನ್ನೆ ಬಂದಾನ್ರೀ. ಡಾಕತರ್ ಅಂವಗ ಹಾಲ ಕುಡಿಬೇಕಂತ ಹೇಳ್ಯಾರ. ಅದಕ ಈ ಎಮ್ಮೀ ತಗೋಬೇಕಂತ ಇಚಾರ ಮಾಡೇನ್ರೀ. ಇದರಲೇ ನನ ಮನೀ ಉಪ್ಪ ಖಾರಾನೂ ಆಕೈತಿ, ಹುಡುಗಗ ಹಾಲ ಸಿಗುವಂಗೂ ಆಕೈತಿ ಅನ್ನೋದು ನನ ಬರೋಸ್ರಿ" ಅಂದ.

"ಓಹ್!" ಉದ್ಗರಿಸಿದೆ.

"ಆದಕ್ರೀ ಸಾಹುಕಾರ, ಇದೊಂದ್ ಕೆಲಸ ಮಾಡಿ ಪುಣ್ಯ ಕಟ್ಕೋಳ್ರಿ. ನಾ ಸೋತ ಹೋಗೇನ್ರಿ."

ನನ್ನೊಳಗೆ ನಡೆಯುತ್ತಿರುವ ಯುದ್ಧ ಮುದುಕನಿಗೆ ಗೊತ್ತೇ? ಅಲುಗಾಡದೇ ಕುಳಿತಿದ್ದೆ. ಇಡೀ ಜಗತ್ತು ನನ್ನ ಸುತ್ತಲೇ ಗಿರಗುಟ್ಟುತ್ತಿದೆ ಅನ್ನಿಸಿತು. ಎದೆಯಲ್ಲಿ ಕೋಲಾಹಲದ ಸುನಾಮಿ ಎದ್ದಿತ್ತು. ನನ್ನ ಇಪ್ಪತ್ತು ವರ್ಷದ ದಲ್ಲಾಳಿ ಜೀವನದಲ್ಲಿ ಯಾವುದೂ ನನ್ನನ್ನು ಇಷ್ಟು ಆಳವಾಗಿ ಅಲುಗಾಡಿಸಿರಲಿಲ್ಲ. ಒಂದೇ ಹೊಡೆತಕ್ಕೆ ಮುದುಕ ನನ್ನೆಲ್ಲ ಪಾಪಗಳಿಗೆ ಶಿಕ್ಷೆ ನೀಡಿದ್ದ. ಚಾಚಿದ ತೋಳುಗಳ ಎರಡು ಹಸಿದ ಆಕೃತಿಗಳು ನನ್ನೆದುರು ನಿಂತಿದ್ದವು. ಎರಡು ಜೀವಂತ ಅಸ್ಥಿಪಂಜರಗಳು! ಯಾರನ್ನು ಉಳಿಸಲಿ; ಅಳಿಸಲಿ ಯಾರನ್ನು!? ಪ್ರಶ್ನೆಗಳು ನನ್ನನ್ನು ತೀವ್ರವಾಗಿ ಇರಿದವು. ಈ ಮುದುಕನಿಗೆ ಏನು ಹೇಳಲಿ ಹೂಂ ಅಥವಾ ಉಹೂಂ? ನನ್ನ ಒಂದು ಹೂಂ ಮುದುಕನನ್ನು ಕೊಂದು ಹೂಂಕರಿಸುತ್ತದೆ. ಒಂದು ಉಹೂಂ ಕಾಶಿಯ ಚರಮಗೀತೆ ಹಾಡುತ್ತದೆ.


"ಏನ್ರೀ ಯಪ್ಪಾ ಕಾಶೀ ಮನಿಗೆ ಹೋಗೋನೇನ್ರಿ?" ಮುದುಕ ಮತ್ತೆ ಕೇಳಿದ.

"ಯಜ್ಜಾ ನಾ ದಲ್ಲಾಳಿ ಅಲ್ಲ ಹೋಗ!!" ನಾ ಚೀರಿದೆ. "ನಿನಗ ಹೆಂಗ ಅನಸೈತಿಹಂಗ ಮಾಡು."

ಸಾವಕಾಶ ತನ್ನ ಕೋಲಿನ ಸಹಾಯದಿಂದ ಮುದುಕ ಎದ್ದ. ಕಾಲು ಕಟ್ಟಿದ ಮುದಿ ಕುದುರೆಯಂತೆ ನಡಗುತ್ತ ನಡೆದ.

ನನ್ನ ಹೊರಸಿಗೆ ಬೆನ್ನು ಒರಗಿಸಿದೆ. ಜಂತಿಯಲ್ಲಿ ಗುಬ್ಬಿಗಳ ಜಗಳ ಇನ್ನೂ ಮುಗಿದಿರಲಿಲ್ಲ.

❖



ನನ್ನ ಅವ್ವಾ

ನನ್ನ ಅವ್ವಾ ಗಾಳಿಪಟ!
ನನ್ನ ಅಪ್ಪಾ ಸೂತ್ರದಾರ!!
ನಾವು ಅದರ ಬಾಲಂಗೋಚಿ!!!

ಗಾಳಿಪಟ ಹಾರಾಡಿದ್ದೇ ಹಾರಾಡಿದ್ದು!
ಅದಕ್ಕಿಲ್ಲ ದಿಕ್ಕು ದೆಸೆ!!
ಹಾರಾಡಿಸಿದ್ದು ಅಪ್ಪ ಮಾತ್ರ!!!

ಬಾಲಂಗೋಚಿ ಒಂದೊಂದೇ ಕಿತ್ತುಬಿದ್ದವು!
ಅವ್ವ ಅದನ್ನು ಆಯ್ದು ತಂದಳು!!
ಅಪ್ಪನಿಗೆ ಮಾತ್ರ ಪಟ ಹಾರಿಸುವಾಸೆ!!!

ಅವ್ವಾ ಚೀರಿದಳು ಬಾಲಂಗೋಚಿ ಕೈಗೆ ಸಿಗುತ್ತಿಲ್ಲ!
ಅಪ್ಪ ಅಂದ ಸೂತ್ರ ನನ್ನದು ಪಟ ಹಾರುತ್ತಿದೆ!!
ಬಾಲಂಗೋಚಿ ಇಲ್ಲದ ಪಟ ಕೆಳಗೆ ಬಿತ್ತು!!!

• ದೇವಾನಂದ ಜಗಾಪುರ, ಹುಬ್ಬಳ್ಳಿ
(ಇತ್ತೀಚೆಗೆ ತೀರಿಕೊಂಡ ತಾಯಿಯ ನೆನಪಲ್ಲಿ)

ತುಳುನಾಡಿನಲ್ಲಿ ಧಾರ್ಮಿಕ ವ್ಯಾಪಾರ

ವಿಶೇಷ ಲೇಖನ


• ಪ್ರವೀಣ ಎಸ್.ಶೆಟ್ಟಿ,
ಮಂಗಳೂರು

15-20 ವರ್ಷಗಳ ಹಿಂದೆ ದ.ಕ.-ಉಡುಪಿ ಜಿಲ್ಲೆಗಳಲ್ಲಿ ಕೃಷಿರಂಗದ ನಂತರ ಸಾರಿಗೆ ರಂಗವು ಜನರಿಗೆ ಅತಿಹೆಚ್ಚು ಉದ್ಯೋಗ-ಆದಾಯ ಮೂಲ ಒದಗಿಸುವ ಕ್ಷೇತ್ರವಾಗಿತ್ತು. ಆದರೆ ಇಂದು ಈ ತುಳುನಾಡಿನಲ್ಲಿ ಈ ಎರಡನೇ ಸ್ಥಾನವನ್ನು "ಧಾರ್ಮಿಕ ರಂಗವು" ಆಕ್ರಮಿಸಿಕೊಂಡಿದೆ. ಅತಿಹೆಚ್ಚು ಪವಿತ್ರ ಕ್ಷೇತ್ರಗಳನ್ನು ಹೊಂದಿರುವ ತುಳುನಾಡಿನಲ್ಲಿ ಧಾರ್ಮಿಕರಂಗದಲ್ಲಿ ನೇರ ಹಾಗೂ ಪರೋಕ್ಷ ಉದ್ಯೋಗ-ವ್ಯಾಪಾರದ ಅವಕಾಶಗಳು ವೇಗವಾಗಿ ಹೆಚ್ಚುತ್ತಿದ್ದು ಮುಂದೊಂದು ದಿನ ಅದು ಕೃಷಿರಂಗವನ್ನು ಹಿಂದಿಕ್ಕಿದ್ದರೂ, ಆಶ್ಚರ್ಯವಿಲ್ಲ. ಧಾರ್ಮಿಕ(ಹಿಂದೂ) ಸಂಘಟನೆಗಳು ಅಧಿಕೃತವಾಗಿ ನಡೆಸುವ ಸೆಕ್ಯೂರಿಟಿ & ಜಾಬ್ ಏಜೆನ್ಸಿಗಳು ಇದರಲ್ಲಿ ಸೇರಿಲ್ಲ. (4 ವರ್ಷಗಳ ಹಿಂದೆ ಮಂಗಳೂರಿನ ಕುಖ್ಯಾತ ಪಬ್‌ದಾಳಿ ನಡೆದದ್ದು ರಾಮಸೇನೆಯ ಏಜೆನ್ಸಿಯಿಂದ ಗಾರ್ಡ್‌ಗಳನ್ನು ಆ ಹೋಟೆಲ್‌ನವರು ನೇಮಿಸಿಕೊಳ್ಳಲು ನಿರಾಕರಿಸಿದರೆಂಬ ಕಾರಣಕ್ಕೆ)



ಪವಿತ್ರ ಕ್ಷೇತ್ರಗಳಿಗೆ ಹಾಗೂ ಧಾರ್ಮಿಕ ಸಭೆಸಮಾರಂಭಗಳಿಗೆ ಹೋಗಿಬರಲು ಭಕ್ತಾದಿಗಳಿಗೆ ಬೇಕಾಗುವ ದೊಡ್ಡ ಮಟ್ಟದ ಸಾರಿಗೆ ಸೌಲಭ್ಯಗಳಿಂದಾಗಿ, ಧಾರ್ಮಿಕರಂಗಕ್ಕೆ ಪೂರಕವಾಗಿ ಸಾರಿಗೆ ರಂಗವೂ ಬೆಳೆಯುತ್ತಿದ್ದು, ಇದೂ ಸೇರಿದಲ್ಲಿ ಧಾರ್ಮಿಕರಂಗದಲ್ಲಿಯ ಒಟ್ಟು ಉದ್ಯೋಗ ಸೃಷ್ಟಿ ಕೃಷಿರಂಗವನ್ನು ಸರಿಗಟ್ಟುವಂತಿದೆ. ಇದು ತುಳುನಾಡಿನ ವೈಶಿಷ್ಟ್ಯವೆನ್ನುವ ಬದಲು, ಇಲ್ಲಿಯ ಸಮಾಜ ಧರ್ಮದ ವಿಷಯದಲ್ಲಿ ಮಧ್ಯ-ಯುಗಕ್ಕೆ ಸರಿಯುತ್ತಿರುವುದರ ಸಂಕೇತ. ಧಾರ್ಮಿಕ ರಂಗದಲ್ಲಿ ದೊಡ್ಡ ಸಂಖ್ಯೆಯಲ್ಲಿ ಸ್ಥಳೀಯರಿಗೆ ಉದ್ಯೋಗ ಸೃಷ್ಟಿಯಾಗುತ್ತಿದೆ ಎಂಬ ಕಾರಣಕ್ಕೆ, ಹಿಮ್ಮುಖವಾಗಿ ನಡೆಯುತ್ತಿರುವ ಸಮಾಜವನ್ನು ಹಾಗೂ ದೇವರು-ಧರ್ಮದ ಹೆಸರಲ್ಲಿ ನಡೆಯುವ ಮೋಸ, ವಂಚನೆ, ಮೌಢ್ಯದ ಪ್ರಸಾದವನ್ನು ಮೂಕರಾಗಿ ನೋಡುತ್ತಿರಲು ಸಾಧ್ಯವೇ? ಜ್ಯೋತಿಷ್ಯ, ವಾಸ್ತು, ಸಂಖ್ಯಾಶಾಸ್ತ್ರ ಈ ಉದ್ಯೋಗಗಳೂ, ಮೌಢ್ಯಭರಿತ ಧಾರ್ಮಿಕರಂಗದ ಭಾಗವೇ ಆಗಿದೆ. ಕರಾವಳಿಯಲ್ಲಿರುವ ನಾಗಾರಾಧನೆ ಮತ್ತೂ ಭೂತಾರಾಧನೆಯು ತುಳುನಾಡಿನಲ್ಲಿ ಧಾರ್ಮಿಕ ರಂಗವನ್ನು ತುಂಬಾ ವಿಸ್ತಾರಗೊಳಿಸಿದೆ. ಇಡೀ ಭಾರತದಲ್ಲೇ ಶಿಕ್ಷಣರಂಗವನ್ನು ಮೊಟ್ಟ ಮೊದಲಿಗೆ ವ್ಯಾಪಾರೀಕರಣಗೊಳಿಸಿದ ಕೀರ್ತಿ ದ.ಕ. -ಉಡುಪಿ ಜಿಲ್ಲೆಯುವರಿಗೆ ಸಂದಿರುವಂತೆ, ಧಾರ್ಮಿಕ ಕ್ಷೇತ್ರವನ್ನೂ ಮೊಟ್ಟ ಮೊದಲಿಗೆ ವಾಣಿಜ್ಯೀಕರಣಗೊಳಿಸಿದೆ. ಇಡೀ ಭಾರತದಲ್ಲೇ ಶಿಕ್ಷಣರಂಗವನ್ನು ಮೊಟ್ಟ ಮೊದಲನೇ ವ್ಯಾಪಾರರೀಕರಣ ಗೊಳಿಸಿದ ಕೀರ್ತಿಯೂ ಇದೇ ದ.ಕ.-ಉಡುಪಿ ಜಿಲ್ಲೆಯುವರಿಗೇ ಸಂದಿರುತ್ತದೆ. ಇಲ್ಲಿಯ ಎಲ್ಲಾ ಹಳೆಯ ದೇವಸ್ಥಾನಗಳು ಈಗ ಬಂಪರ್ ಆದಾಯದ ಮೂಲಗಳಾಗಿವೆ. ಹಾಗಾಗಿ ಕುಕ್ಕೆ ಮಾತ್ರವಲ್ಲ ಮಂಗಳೂರು ನಗರದ ಸುತ್ತಮುತ್ತವಿರುವ 500 ವರ್ಷಕ್ಕಿಂತ ಹೆಚ್ಚು ಹಳೆಯ 10-12 ಸುಬ್ರಹ್ಮಣ್ಯ ಕ್ಷೇತ್ರಗಳಲ್ಲಿ ಮಡೆಸ್ನಾನ ನಡೆಯುತ್ತಿದ್ದರೂ ವಾಣಿಜ್ಯಕ ಕಾರಣಗಳಿಗಾಗಿ ಈ ಅನಿಷ್ಟ ಹೊರಪ್ರದೇಶದವರಿಗೆ ಗೊತ್ತಾಗದಂತೆ ಜಾಗರೂಕತೆ ವಹಿಸಿದ ಸ್ಥಾಪಿತ ಹಿತಾಸಕ್ತಿಗಳಲ್ಲಿ ಕೆಲವು ಪತ್ರಕರ್ತರೂ ಸೇರಿದ್ದಾರೆ.

ಮೇಲಾಗಿ ಮದುವೆ ಮುಂಜಿ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ತುಳುನಾಡು ಮೂಲದ ಮುಂಬೈಯ ಶ್ರೀಮಂತ ಉದ್ಯಮಿಗಳ(ಕಪ್ಪು) ಹಣದ ಪ್ರದರ್ಶನದ ಖಯಾಲಿಯಿಂದಾಗಿ ಧಾರ್ಮಿಕರಂಗವು ಬಿಲಿಯನ್-ಡಾಲರ್ ಟರ್ನ್ ಓವರ್ ಉಳ್ಳ ಬೃಹತ್ ಉದ್ಯಮವಾಗಿ ಬೆಳೆದುನಿಂತಿದೆ. ಅದಕ್ಕಾಗೇ ಕಾವಿಯುಟ್ಟು ಲಾಭದಾಯಕ ಆಶ್ರಮ ಸ್ಥಾಪಿಸಿ, ಮುಂಬೈ ಅಥವಾ ತುಳುವರು ಹೆಚ್ಚಾಗಿರುವ ಕೊಲ್ಲಿ ರಾಷ್ಟ್ರಗಳಿಗೆ ವಿಮಾನವೇರಲು ತುದಿಗಾಲಲ್ಲಿ ನಿಂತಿರುವ ಹತ್ತಾರು 'ಸ್ವಾಮಿಗಳು' ನೂರಾರು 'ವೇದಮೂರ್ತಿಗಳು' ಜಿಲ್ಲೆಯ ಎಲ್ಲೆಡೆ ಬೇರು ಬಿಟ್ಟಿದ್ದಾರೆ. ಕೆಲಸವಿಲ್ಲದ ಹಳ್ಳಿಯ ನೇತಾರರಿಗೆ ತಮ್ಮೂರಿನ ಹಳೆಯ ದೇಗುಲಗಳ ಜೀರ್ಣೋದ್ಧಾರ, ಅಷ್ಟಬಂಧ, ಪುನರ್‌ಪ್ರತಿಷ್ಠೆಯು ಅತಿ ಲಾಭದಾಯಕ ಉದ್ಯೋಗವಾಗಿದೆ. ಈಗ ಧರ್ಮ ಹಾಗೂ ರಾಜಕೀಯ ಸಮ್ಮಿಳಿತವಾಗಿರುವುದರಿಂದ ಧಾರ್ಮಿಕರಂಗಕ್ಕೆ ಕಪ್ಪು ಹಣದ ಹರಿವು ಭಾರೀ ಪ್ರಮಾಣದಲ್ಲಿ ಹೆಚ್ಚಿದೆ. ರಾಜಕೀಯ ಮಧ್ಯಸ್ಥಿಕೆಯಿಂದ ಮಠಾಧೀಶರುಗಳು ದಂಡಿಯಾಗಿ ಕಮಾಯಿಸಿದರೆ, ರಾಜಕೀಯ ನೇತಾರರ 'ಸೋಕಾಲ್ಡ್' ಲೋಕ-ಕಲ್ಯಾಣವಾಗಿ ನಡೆಯುವ ಯಜ್ಞ ಶತ್ರುಸಂಹಾರ ಯಾಗ, ಹೋಮಹವನಗಳಿಂದಾಗಿ ಪುರೋಹಿತರುಗಳು ಲಕ್ಷಾಧೀಶರಾಗಿರುವುದು ಮಾತ್ರವಲ್ಲ ರಾಜಕೀಯವಾಗಿಯೂ ಪ್ರಭಾವಿಗಳಾಗಿದ್ದಾರೆ, ಪವರ್ ಬ್ರೋಕರ್‌ಗಳಾಗಿಯೂ ಪರಿವರ್ತಿತರಾಗಿದ್ದಾರೆ. ತಮ್ಮ ಈ ರಾಜಕೀಯ ಪ್ರಭಾವ ಬಳಸಿ ಮುಜರಾಯಿ ದೇವಸ್ಥಾನಗಳ ಯಕಶ್ಚಿತ ಅರ್ಚಕರು ಈಗ ಸರ್ಕಾರಿ ಆಡಳಿತಾಧಿಕಾರಿ ಹಾಗೂ ಶತಮಾನಗಳಿಂದ ಇದ್ದ ಸ್ಥಳೀಯ ಶೂದ್ರ ಅನುವಂಶಿಕ-ಮೊಕ್ತೇಸರರುಗಳನ್ನು ಮೂಲೆಗುಂಪಾಗಿಸಿ ಇಡೀ ಕ್ಷೇತ್ರದ ಆಡಳಿತ ತಮ್ಮ ಕೈವಶ ಮಾಡಿಕೊಂಡು ಭರ್ಜರಿಯಾಗಿ ಮೇಯುತ್ತಿದ್ದಾರೆ. ಕಟೀಲು ಕ್ಷೇತ್ರ ಇದಕ್ಕೆ ಅತ್ಯುತ್ತಮ ಉದಾಹರಣೆ. ಧರ್ಮವು ವಾಣಿಜ್ಯೀಕರಣಗೊಂಡು ಹುಟ್ಟಿದ ಧನಪ್ರೇಮಕ್ಕೆ ಧರ್ಮಪ್ರೇಮ ಹಾಗೂ ಒಣ ಭಕ್ತಿಯ ಮುಸುಕು, ಧರ್ಮದ ಪುನರುತ್ಥಾನದ ಹಣೆಪಟ್ಟಿ ಅಷ್ಟೇ.



ಮುಂಬೈ ಮಹಾನಗರವೊಂದರಲ್ಲೇ ಸುಮಾರು 15 ಲಕ್ಷ ಕರ್ನಾಟಕ ಮೂಲದ ತುಳು ಭಾಷಿಕರು ನೆಲೆಸಿದ್ದಾರೆ. ಇದರಲ್ಲಿ ಅರ್ಧದಷ್ಟು ತುಳುವರಿಗೆ ಅಂದರೆ ಮುಂಬೈಯಲ್ಲೇ ಹುಟ್ಟಿ ಬೆಳೆದ ತಲೆಮಾರಿಗೆ ಕನ್ನಡ ಬರುವುದಿಲ್ಲ. ಇವರು ತಮ್ಮ ಕುಟುಂಬದ ನಾಗಪೂಜೆಗೆ ವರ್ಷಕ್ಕೊಮ್ಮೆ ದ.ಕ.-ಉಡುಪಿ ಜಿಲ್ಲೆಯ ತಮ್ಮ ಊರಿಗೆ ಬಂದೇಬರುತ್ತಾರೆ. ಈ ಪೂಜೆಯಲ್ಲಿ ನಾಗಪಾತ್ರಿಯು ಬ್ರಾಹ್ಮಣನಾಗಿದ್ದು ಅವನ ಮಾತೃಭಾಷೆಯೂ ತುಳುವೇ ಆಗಿರುತ್ತದೆ. ಆದರೆ ನಾಗದೇವರು ಮೈಮೇಲೆ ಆವರಿಸಿದ ಕೂಡಲೇ ಆ ನಾಗಪಾತ್ರಿಗೆ ಯಕ್ಷಗಾನದಂತಹ ಗ್ರಾಂಥಿಕ ಕನ್ನಡ ಮಾತ್ರ ಮಾತನಾಡಲು ಬರುವುದು. ಆದರೆ ಕನ್ನಡ ಬಾರದ ಮುಂಬೈಯ ತುಳುವರು ಕಣಿ ಕೇಳುವ ಪ್ರಶ್ನೆಗಳಿಗೆ ನಾಗಪಾತ್ರಿ ಉತ್ತರಿಸುವುದು ಸಂಸ್ಕೃತ ಮಿಶ್ರಿತ ಕನ್ನಡದಲ್ಲಿ, ಪಾತ್ರಿಯ ಈ ಕನ್ನಡ ಉತ್ತರವನ್ನು ಕನ್ನಡ ಬಾರದ ಮುಂಬೈಗರಿಗಾಗಿ ತುಳುವಿನಲ್ಲಿ ಭಾಷಾಂತರ ಮಾಡಲು ಇನ್ನೊಬ್ಬ ಭಟ್ಟನಿರುತ್ತಾನೆ. ಹೀಗೆ ಈ ತುಳು-ಕನ್ನಡ ದ್ವಂದ್ವ ನಾಟಕ ಪೂಜೆಯು ಕೊನೆಯವರೆಗೆ ನಡೆಯುತ್ತದೆ. ಆದರೆ ತಮಾಷೆಯೆಂದರೆ ನಾಗಪಾತ್ರಿಗೆ ಮುಂಬೈಯ ತುಳುವ[...] ಕೊಡುವ ಭಾರೀ ದಕ್ಷಿಣೆ ಸ್ವೀಕರಿಸುವಾಗ ಮಾತ್ರ ಆತ ಶು[...] ತುಳುವಿನಲ್ಲಿ ಮಾತನಾಡಿ ಹರಸುತ್ತಾನೆ! ತುಳುನಾಡಿನ ಮೂ[...] ನಿವಾಸಿಗಳ ಆರಾಧ್ಯದೈವವಾದ ನಾಗನಿಗೆ ಮೂಲನಿವಾಸಿ[...] ತುಳು ಭಾಷೆ ಏಕೆ ಅರ್ಥವಾಗುವುದಿಲ್ಲ ಎಂದು ನಾ[...] ಪಾತ್ರಿಯೊಬ್ಬನಿಗೆ ನಾನೊಮ್ಮೆ ಕೇಳಿದ್ದು ಅವನ[...] ದೈವನಿಂದನೆಯೆನಿಸಿತಂತೆ!

'ಡ್ರಗ್-ಅಡಿಕ್ಟ್' ಹಾಗೂ 'ಗಾಡ್-ಅಡಿಕ್ಟ್' ಇವರಿಬ್ಬ[...] ಯಾರು ಹೆಚ್ಚು ಅಪಾಯಕಾರಿ ಎಂಬ ಪ್ರಶ್ನೆಗೆ ಸ[...] ಉತ್ತರ-ಗಾಡ್ ಅಡಿಕ್ಟ್! ಕಾರಣ ಡ್ರಗ್-ಅಡಿಕ್ಟ್ ಕೇ[...] ತನ್ನೊಬ್ಬನ ಸ್ವಾಸ್ಥ್ಯ ತಾನೇ ಕೆಡಿಸಿಕೊಂಡರೆ, ಗಾಡ್-ಅಡಿ[...] ಇಡೀ ಸಮಾಜದ ಸ್ವಾಸ್ಥ್ಯ ಕೆಡಿಸುತ್ತಾನೆ! ಒಂದು ಕುಟುಂಬ[...] ಹಿರಿಯ ಹೆಂಗಸು ಗಾಡ್-ಅಡಿಕ್ಟ್ ಆದಾಗಲಂತೂ ಇ[...] ಕುಟುಂಬದ ಮಾನಸಿಕ ಸ್ವಾಸ್ಥ್ಯ ಕೆಡುತ್ತದೆ.

ವಿಚಾರವಾದದ ಅನುಸಂಧಾನ ಮತ್ತು ನೈಚ್ಯಾನುಸಂಧಾನ

ಒಂದು ಪತ್ರ

ರಾಜ್ಯದಲ್ಲಿ ಹಲವು ಕಡೆ ಆಚರಣೆಯಲ್ಲಿರುವ ಕುಖ್ಯಾತ ಮಡೆಸ್ನಾನವನ್ನು ನಿಲ್ಲಿಸಬೇಕೆಂದು ಪ್ರಗತಿಪರ ಚಿಂತಕರು ಒತ್ತಾಯಿಸುತ್ತ ಬಂದಿದ್ದರೂ ಸರಕಾರ ನಿರ್ಧಾರ ಕೈಗೊಂಡಿಲ್ಲ. ಈ ಬಾರಿ ಸುಬ್ರಹ್ಮಣ್ಯದ ಮಡೆಸ್ನಾನದ ವಿರುದ್ಧ ದನಿ ಎತ್ತಿದ ಪ್ರಗತಿಪರರ ಮೇಲೆ ಪಟ್ಟಭದ್ರ ಶಕ್ತಿಗಳು ಆಕ್ರಮಣ ಮಾಡಿದಾಗಲೂ ಸರಕಾರ ಇತ್ಯಾತ್ಮಕವಾಗಿ ಸ್ಪಂದಿಸಿಲ್ಲ. ಪೇಜಾವರದ ಶ್ರೀ ವಿಶ್ವೇಶತೀರ್ಥರು ಅದು ನಂಬಿಕೆಯ ವಿಷಯವೆಂದೂ ಪರಂಪರೆಯ ಆಚರಣೆಯೆಂದೂ ಎಂದರು. ಮಡೆಸ್ನಾನವನ್ನು ನಿಷೇಧಿಸಲು ಸರ್ಕಾರ ಮುಂದಾಗದಿದ್ದಾಗ ನಿಡುಮಾಮಿಡಿಯ ಶ್ರೀ ವೀರಭದ್ರ ಚನ್ನಮಲ್ಲರು ಮಡೆಸ್ನಾನ ಕುರಿತ ಸಂವಾದ ಏರ್ಪಡಿಸಿ ಸಮಾನ ಮನಸ್ಕ ಮಠಾಧಿಪತಿಗಳು ಮತ್ತು ವಿಚಾರವಂತರೊಂದಿಗೆ ಸಂವಾದದಲ್ಲಿ ಭಾಗವಹಿಸುವಂತೆ ಶ್ರೀ ವಿಶ್ವೇಶತೀರ್ಥರನ್ನು ಆಹ್ವಾನಿಸಿದರು. ಇದೇ ಶನಿವಾರ 7ರಂದು ನಡೆದ ಆ ಸಭೆಯಲ್ಲಿ ಶ್ರೀ ವಿಶ್ವೇಶತೀರ್ಥರು ಭಾಗವಹಿಸಲಿಲ್ಲ. ಇತರ ಹಿಂದುಳಿದ ವರ್ಗಗಳ ವಿವಿಧ ಮಠಾಧಿಪತಿಗಳು ಸೇರಿ ಮಡೆಸ್ನಾನವನ್ನು ನಿಷೇಧಿಸುವಂತೆ ಸರಕಾರವನ್ನು ಒತ್ತಾಯಿಸಿದರು.

ಭಾನುವಾರ 8ರಂದು ನಡೆದ ಮತ್ತೊಂದು ಸಭೆಯಲ್ಲಿ ಪೇಜಾವರದ ಶ್ರೀ ವಿಶ್ವೇಶತೀರ್ಥರು ತಾವು ಮಡೆಸ್ನಾನವನ್ನು ಸಮರ್ಥಿಸಿಲ್ಲವೆಂದೂ ಅದು ಹಿಂದೂ ಸಂಪ್ರದಾಯದ ಭಾಗವಾಗಿ ಉಳಿಯ ಬೇಕಿಲ್ಲವೆಂದೂ ಹೇಳಿದ್ದಾರೆ. ಇದಕ್ಕೆ ಮುನ್ನ ಶ್ರೀ ವೀರಭದ್ರ ಚನ್ನಮಲ್ಲರು ಮಾತನಾಡಿ ಪೇಜಾವರರ ಬಗ್ಗೆ ತಮಗೆ ಅಪಾರ ಗೌರವವಿರುವುದಾಗಿಯೂ, ಅವರು ವರ್ಷದಲ್ಲಿ ಒಂದು ದಿನ ಅಷ್ಟ ಮಠಗಳಲ್ಲಿ ಸಮಾಜದ ಎಲ್ಲ ವರ್ಗಗಳವರಿಗೆ ಪೂಜೆ ಸಲ್ಲಿಸಲು ಅವಕಾಶ ಕೊಡಬೇಕೆಂದು – ಮೊದಲಾದ ತಮ್ಮ ಕೆಲವು ಬೇಡಿಕೆಗಳನ್ನು ಈಡೇರಿಸಿದರೆ ತಾವು ಅವರ ಶಿಷ್ಯವೃತ್ತಿ ಸ್ವೀಕರಿಸುವುದಾಗಿಯೂ ಹೇಳಿದರೆಂದು ವರದಿಯಾಗಿದೆ.

ಸಂವಿಧಾನ ಮತ್ತು ಪರಂಪರೆಗಳಲ್ಲಿ ತಾವು ಪರಂಪರೆಯನ್ನು ಹೆಚ್ಚು ಗೌರವಿಸುವವರು ಎಂದು ಹೇಳಿರುವ ಶ್ರೀ ವಿಶ್ವೇಶತೀರ್ಥರ ಎದುರು ಪ್ರಗತಿಪರರೆಂದು ಕೊಂಡವರು ಈ ರೀತಿ ಶರಣಾದುದನ್ನು ನೋಡಿ ಇದೇನು ಸಮಾನತೆಯ ನೆಲೆಯ ಅನುಸಂಧಾನವೊ ನೈಚ್ಯಾನುಸಂಧಾನವೊ ಎಂದು ಸಖೇದಾಶ್ಚರ್ಯವಾಯಿತು. 'ಪ್ರಗತಿಪರ ಸ್ವಾಮೀಜಿ' ಎನ್ನುವುದೇ 'ಬಿಸಿಬಿಸಿ ಐಸ್ಕ್ರೀಮ್' ಎಂಬಂಥ ವಿರೋಧಾಭಾಸ. ಪರಂಪರೆ, ಆಚರಣೆಗಳು ಖಾಸಗೀ ನಂಬಿಕೆಗಳು. ಮತಧರ್ಮ ನಿರಪೇಕ್ಷ ಪ್ರಜಾಪ್ರಭುತ್ವದಲ್ಲಿ ಸಂವಿಧಾನ ಮಾತ್ರ ಪರಮೋಚ್ಚ. ಶ್ರೀ ವಿಶ್ವೇಶತೀರ್ಥರ ಶಿಷ್ಯರಾಗಲು ಶ್ರೀ ವೀರಭದ್ರ ಚನ್ನಮಲ್ಲರು ಹಾತೊರೆಯುವ ಬದಲು ರಾಷ್ಟ್ರಕವಿ ಕುವೆಂಪು ಅವರ ಕರೆಗೆ ಓಗೊಟ್ಟು 'ಗುಡಿ ಚರ್ಚು ಮಸೀದಿಗಳನ್ನು ಬಿಟ್ಟು ಹೊರಬಂದು, ಮೌಢ್ಯತೆಯ ಮಾರಿಯನ್ನು ಹೊರದೂಡ'ಲಿ; 'ಕೇವಲ ಮನುಷ್ಯ'ರಾಗಿ ಎಲ್ಲರ ಜೊತೆ ಸಮಾನ ಗೌರವದ ನೆಲೆಯಲ್ಲಿ ಅನುಸಂಧಾನ ಮಾಡಲಿ.



ಸಂವಿಧಾನ ಪರಮೋಚ್ಚ ಎಂದು ಒಪ್ಪದ ಸ್ವಾಮಿಗಳಿಗೆ ಪ್ರಗತಿಪರತೆಯ ಮುಖವಾಡದ ಅಗತ್ಯ ಇದೆ; ಅಂಥವರ ಆಶ್ರಯದಲ್ಲಿ ವಿಚಾರವಾದವನ್ನು ಬೆಳೆಸುವ (?) ಅನಿವಾರ್ಯತೆ ವಿಚಾರವಾದಿಗಳಿಗೆ ಇಲ್ಲ.

– ಡಾ ಪಂಡಿತಾರಾಧ್ಯ, ಜೆ.ಪಿ. ಬಸವರಾಜು, ಮೈಸೂರು

ಇನ್ನಾದರೂ ಅರಿಯಿರಯ್ಯಾ ಇವರ ನಿಜರೂಪವ

ಇನ್ನಾದರೂ ಅರಿಯಿರಯ್ಯಾ ಇವರ
ನಿಜರೂಪವ...

ಬುದ್ಧ, ಬಸವಣ್ಣ, ನಾರಾಯಣ ಗುರು,
ಅಂಬೇಡ್ಕರ್, ವಿವೇಕಾನಂದ, ಭಗತ್ ಸಿಂಗರ ಕಪಟ
ಹಿಂಬಾಲಕರಿವರು

ಕಾವಿಧಾರಿಗಳ ಮುಂದಿಟ್ಟು ಜನರನು ಧರ್ಮದ
ಅಮಲಿನಲಿ ತೇಲಿಸಿ ಮಂಕುಬೂದಿ ಎರಚುವವರಿವರು

ಧರ್ಮ ಸಂರಕ್ಷಕರ, ದೇಶಭಕ್ತರ ಮುಸುಕಿನಡಿಯ
ಕಪಟಿಗಳಿವರು

ಸಂಸ್ಕೃತಿ ರಕ್ಷಕರ ಸೋಗಿನಲಿ ಜೋಡಿಗಳ
ಅಟ್ಟಾಡಿಸುವ ಸಂಸ್ಕೃತಿಹೀನರಿವರು

ಗೋರಕ್ಷಕ ಮುಖವಾಡದಲ್ಲಿರುವ ರಕ್ತಪಿಪಾಸು
ವ್ಯಾಘ್ರಗಳಿವರು

ಇನ್ನಾದರೂ ಅರಿಯಿರಯ್ಯಾ ಇವರ ನಿಜರೂಪವ...

ಇನ್ನಾದರೂ ಅರಿಯಿರಯ್ಯಾ 'ನಾವೆಲ್ಲರೂ ಒಂದು'
ಎನುವವರ ನಿಜ ಬಣ್ಣವ...

ಶತಶತಮಾನಗಳಿಂದ ದಲಿತ, ಆದಿವಾಸಿ, ಮಹಿಳೆ,
ಅಲ್ಪಸಂಖ್ಯಾತರ ತುಳಿಯುತಲಿರುವ ಧೂರ್ತರಿವರು

ಕೋಮುಗಲಭೆ ಸೃಜಿಸಿ ದೇಶವೊಡೆಯುವ
ದುರುಳರಿವರು

ಮಂದಿರ ಮಸೀದಿ ವಿವಾದ ಸೃಷ್ಟಿಸಿ ಮತಗಟ್ಟೆಯ
ಲಾಭಗಳಿಸುವ ವಂಚಕ ಪಡೆಗಳಿವು

ಬಾಬರಿ ಮಸೀದಿ ಉರುಳಿಸಿ ಪರಸ್ಪರರ
ತಬ್ಬಿಕೊಂಡ ದುಷ್ಟ ಮನಗಳಿವು

ರಾಷ್ಟ್ರ ಭ್ರಷ್ಟಾಚಾರದ ಹುಯಿಲೆಬ್ಬಿಸಿ ರಾಜ್ಯ
ಭ್ರಷ್ಟಾಚಾರದ ಸೊಲ್ಲೆತ್ತದ ಮೋಸಗಾರರಿವರು

ಇನ್ನಾದರೂ ಅರಿಯಿರಯ್ಯಾ ಇವರ ನಿಜರೂಪವ...

ಇನ್ನಾದರೂ ಅರಿಯಿರಯ್ಯಾ 'ನಾವೆಲ್ಲರೂ ಒಂದು'
ಎನುವವರ ನಿಜಬಣ್ಣವ...

ಹಿಟ್ಲರನ ಫ್ಯಾಸಿ ದಂಡುಗಳ ಮಾದರಿಯಲಿ
ದಾಳಿಗೈವವರಿವರು

ಸಭರ್‌ವಾಲ್‌ರಂತಹ ಗುರುವನೆ ಕೊಂದ
ಹಂತಕರಿವರು

ಹೆಣ್ಣುಮಕ್ಕಳ ಗರ್ಭ ಬಗೆದು ಭ್ರೂಣವ
ತ್ರಿಶೂಲಕೆ ಚುಚ್ಚಿ ಕೇಕೆಹಾಕುವ ಕಿರಾತಕರಿವರು

ಗ್ರಹಾಂ ಸ್ಟೇನ್ಸ್ ತಂದೆಮಕ್ಕಳ ಸಜೀವ ದಹಿಸಿ
ಅಟ್ಟಹಾಸಗೈದ ರಕ್ಕಸರಿವರು

ಕಂಧಮಾಲ್ ಸನ್ಯಾಸಿನಿಯ ಲೈಂಗಿಕ
ಅತ್ಯಾಚಾರವೆಸಗಿದ ಹಿಂಸ್ರಪಶುಗಳಿವು

ಇನ್ನಾದರೂ ಅರಿಯಿರಯ್ಯಾ ಇವರ
ನಿಜರೂಪವ...

ಇನ್ನಾದರೂ ಅರಿಯಿರಯ್ಯಾ 'ನಾವೆಲ್ಲರೂ ಒಂ[...]
ಎನುವವರ ನಿಜಬಣ್ಣವ...

ಕ್ರಿಸ್ತ ಶಿಲ್ಪವ ಭಂಜಿಸಿ ವಿಜೃಂಭಿಸಿದ
ಪಾತಕಿಗಳಿವರು

ಕ್ರಿಸ್ಮಸ್ ಊಟವುಣ್ಣುವವರಿಗೆ ಹಲ್ಲೆಗೈಯುವ
ನರಪಿಶಾಚಿಗಳಿವರು

ಬಾಂಬ್ ಸ್ಫೋಟಿಸಿ ಮುಸ್ಲಿಮರ ತಲೆಗೆ ಕಟ್ಟಿ
ದೇಶವೊಡೆಯುವ ನರಿಬುದ್ಧಿಗಳಿವು

ದರ್ಗಾ ಪತಾಕೆಯ ಪಾಕ್ ಧ್ವಜವೆಂದ,
ಸಿಂಧಗಿಯಲಿ ಪಾಕ್ ಬಾವುಟವೇರಿಸಿದ
ದೇಶದ್ರೋಹಿಗಳಿವರು

ಅಸತ್ಯವ ಸತ್ಯವೆಂದೆ ಬಿಂಬಿಸುತ ಗುಟ್ಟು
ರಟ್ಟಾದಾಗ ಸತ್ಯದರ್ಶನಕ್ಕಂಜಿದ ಹತಾಶರಿವರು

ಇನ್ನಾದರೂ ಅರಿಯಿರಯ್ಯಾ ಇವರ
ನಿಜರೂಪವ...

ಇನ್ನಾದರೂ ಅರಿಯಿರಯ್ಯಾ 'ನಾವೆಲ್ಲರೂ ಒಂ[...]
ಎನುವವರ ನಿಜಬಣ್ಣವ...

• ಸುರೇಶ ಭಟ್ ಬಾಕ್ರಬೈಲು

('ಪ್ರಜಾವಾಣಿ' ಪತ್ರಿಕೆಯ ಮೇಲೆ ನಡೆದ, ಪತ್ರಿ[...] ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವಂತಹ ಫ್ಯಾಸಿಸ್ಟ್ ಸಂಸ್ಕೃತಿಯ ದಾಳಿಯನ್ನು ಖಂಡಿಸುತ್ತಾ)



•ಪಾರ್ವತೀಶ್ ಬಿಡಿ ಚಿತ್ರಗಳು

ಗೆಳೆಯ ಶೆಣೈ 'ಪ್ರಾರ್ಥನೆ' ಸಿನಿಮಾ



...ತೋದ್ಯೋಗಿ ಮಿತ್ರ ಸದಾಶಿವ ಶೆಣೈ ...ಶನದ 'ಪ್ರಾರ್ಥನೆ' ಸಿನಿಮಾ ಈಗತಾನೆ ...ಗಡೆಯಾಗಿದೆ. ಕಚೇರಿಯ ನಾವೊಂದಿಷ್ಟು ...ು ಕಳೆದ ವಾರ ಹೋಗಿ 'ಪ್ರಾರ್ಥನೆ' ...ತಿಬಂದೆವು.


...ನಮ್ಮ ಸುತ್ತಲಿನ ಪರಿಚಯದ ಯಾರೇ ... ಹೊಸದೊಂದು ಕತೆಯೋ, ಕವನವನ್ನೋ ...ವರೆ, ಪುಸ್ತಕ ಪ್ರಕಟಿಸಿದರೆ, ಕೃಷಿಯಲ್ಲಿ ...ನ್ನವಾದುದನ್ನೇನಾದರೂ ಸಾಧಿಸಿದರೆ ...ವನ್ನು ನೋಡೇ ನೋಡುತ್ತೇವೆ.

...ಹೊಸದೇನಿದೆ ಎಂಬ ಹುಡುಕಾಟ ಅದು.

...ಿ ದೃಷ್ಟಿಯಿಂದ ಹೇಳಬೇಕೆಂದರೆ 'ಪ್ರಾರ್ಥನೆ' ಸಿನಿಮಾದ ಥೀಮ್ ...ನ್ನವಾಗೇ ಇದೆ. ತಾನು ಪಾಠ ಹೇಳುವ ಕನ್ನಡ ಶಾಲೆಯೊಂದನ್ನು ...ಸಿಕೊಳ್ಳಲು ಪ್ರಾಂಜಲ ಮನಸ್ಸಿನ ಬಡ ಶಿಕ್ಷಕನೊಬ್ಬ ಅನೇಕ ಕಷ್ಟಗಳನ್ನು ...ರಿಸುವ ಕತೆ ಇದು. ಶೆಣೈ ಕನಸಿನ ಮೊದಲ ಸಿನಿಮಾ ಪ್ರಯತ್ನಕ್ಕೆ ...ಚೈತನ್ಯ ತುಂಬುವ ಕೆಲಸ ಶುರು ಮಾಡಿದಾಗ ಇನ್ನೊಂದಿಷ್ಟು ...ಂವರ್ಕ್ ಮಾಡಿ ತಮ್ಮನ್ನು ಪೂರ್ಣವಾಗಿ ಅರ್ಪಿಸಿಕೊಂಡಿದ್ದರೆ ...ರ್ಥನೆ ಇನ್ನೂ ಚೆನ್ನಾಗಿರುತ್ತಿತ್ತು, ಕತೆಯ ಓಟ ಕೊಂಚ ನಿಧಾನವಾಗಿದೆ. ಕಷ್ಟಕ್ಕೆ ಸಿಕ್ಕುವ ಶಾಲೆ ಒಂದು ಸಾರಿ ಮಲೆನಾಡಿನಲ್ಲೂ ಇನ್ನೊಮ್ಮೆ ಬೆಂಗಳೂರಿನ ಹೊರವಲಯದಲ್ಲೂ ಕಾಣಿಸಿಕೊಂಡು ಗೊಂದಲವಾಗುವಂತಿದೆ. ಪ್ರಕಾಶ್ ರೈ ಹಾಜರಾತಿಯನ್ನು ಉಪಯುಕ್ತವಾಗಿ ಬಳಸಿಕೊಳ್ಳಲಾಗಿಲ್ಲ. ಹೀಗೆ ಇದರಲ್ಲಿ ಕೆಲ ಮಿತಿಗಳಿವೆ ಅನ್ನಿಸಿತು. ಆದರೇನು ಶೆಣೈರ ಸಿನಿಮಾ ನಿರ್ದೇಶನದ ಹಂಬಲ ಮುಂದುವರೆಯಲಿ, ಅವರಿಗೆ ಹೊಸ ಅವಕಾಶಗಳು ಸಿಗಲಿ, ಬಲಿಷ್ಠ ನಿರ್ಮಾಪಕರು, ಸರಳ ಮನಸ್ಸಿನ ಜಾಣ ಗೆಳೆಯರ ನೆರವೂ ಸಿಗಲಿ. ಕನ್ನಡದ ಅತ್ಯಂತ ಹೆಸರಿರುವ ಹಾಗೂ ಹಿರಿಯ ಸಿನಿಮಾ ಪತ್ರಕರ್ತ ಶೆಣೈ ಕಳೆದ 20 ವರ್ಷದಿಂದ ಸಿನಿಮಾ ಜನರೊಂದಿಗೆ ಬೆರೆತು ಬದುಕಿದ್ದಾರೆ. ನನ್ನ ಪ್ರಕಾರ ಶೆಣೈ ಈಗ್ಗೆ 10 ವರ್ಷದ ಹಿಂದೆಯೇ ಇಂತಾ ಪ್ರಯತ್ನ ಮಾಡಬೇಕಿತ್ತು, ಇಷ್ಟು ಹೊತ್ತಿಗೆ ಅವರ creditನಲ್ಲಿ ನಾಲ್ಕಾರು ಸಿನಿಮಾಗಳು ಖಂಡಿತಾ ಇರುತ್ತಿದ್ದವು. ಇರಲಿ ಕೊಂಚ ತಡವಾದರೇನು ಪರವಾಗಿಲ್ಲ, ಮೊದಲ ಸಿನಿಮಾ ಎಂದು ಅನೇಕ ಕಲಾವಿದರ ಹೃದಯಾಪೂರ್ವಕ ಬೆಂಬಲ ಶೆಣೈಗೆ ಸಿಕ್ಕಿದೆ. 'ಪ್ರಾರ್ಥನೆ'ಯಲ್ಲಿ ನಟರಾದ ಅಶೋಕ್, ಪ್ರಕಾಶ್ ರೈ, ಬಿ.ಸಿ. ಪಾಟೀಲ್, ಅನಂತ್ ನಾಗ್ ಇದ್ದಾರೆ. ಪವಿತ್ರಾ ಲೋಕೇಶ್ ಬಹಳ ಚೆಂದಾಗಿ ನಟಿದ್ದು ಗಮನ ಸೆಳೆಯುತ್ತಾರೆ.

ಗೆಳೆಯ ಶೆಣೈಗೆ ಈಗ ಹೇಳಬಹುದಾದ ಒಂದೇ ಮಾತೆಂದರೆ 'ಯಾರಾದರೂ ನಿಮ್ಮನ್ನು ಹೊಗಳಿದರೆ ಕೊಂಚ ದೂರ ನಿಂತು ಆ ಮಾತು ನಿಜಾನಾ' ಎಂದು ಪರೀಕ್ಷಿಸಿಕೊಳ್ಳಿ. ಮನ ನೋಯಿಸುವ ವಿಮರ್ಶೆ ಬರೆದರೆ ನಿಂದಿಸಿದರೆ ನಿರ್ಲಕ್ಷಿಸಿ. ಆದರೆ ನಿಮ್ಮ ನಿರ್ದೇಶನದ ಒಟ್ಟು ಸಾಮರ್ಥ್ಯ ಹಾಗೂ ಮಿತಿಗಳ ಬಗ್ಗೆ ಗುರುತಿಸಿ ಸರಳವಾಗಿ ಪ್ರೀತಿಯಿಂದ ಬರುವ ವಿಮರ್ಶೆಗಳನ್ನು ಅಷ್ಟೇ ಪ್ರೀತಿಯಿಂದ ಸ್ವಾಗತಿಸಿ.

ಹೊಸ ಸಿನಿಮಾ ಬಗ್ಗೆ ಯೋಚಿಸಿ.



...ಪುಸ್ತಕ ಪ್ರಕಾಶಕರ ಸಂಘ ಒಂದಿದ್ದರೆ.....!

...ಪುಸ್ತಕ ಪ್ರಕಾಶಕರ ವೇದಿಕೆಯೊಂದನ್ನು ಕಟ್ಟಿದರೆ ಹೇಗೆ ಅನ್ನುವ ಯೋಚನೆಯೊಂದು ಬಂದಿದೆ. ಕರ್ನಾಟಕದಲ್ಲೀಗ ಪ್ರತಿ ವರ್ಷ ಸರಾಸರಿ ಆರೆಂಟು ...ರ ಪುಸ್ತಕಗಳು ಪ್ರಕಟವಾಗುತ್ತಿವೆ. ನಿಮಗೆ ಗೊತ್ತಿರಲಿ, ಇವೆಲ್ಲಾ ಶಾಲಾ ಪಠ್ಯ ಪುಸ್ತಕಗಳಿಗೆ ಹೊರತಾದ ಸಾಹಿತ್ಯ ಪ್ರಪಂಚದ ಹಿರಿ-ಕಿರಿ ಪುಸ್ತಕಗಳು. ...ಪುಸ್ತಕಗಳನ್ನು ಬರೆಯುವವರ ಪ್ರಪಂಚ ಒಂದಾದರೆ ಪ್ರಕಟಿಸುವವರ ಜಗತ್ತೇ ಬೇರೆ. ಕೆಲವು ಬರಹಗಾರರು ಮಾತ್ರ ತಮ್ಮ ಕಲಾಕೃತಿಯನ್ನು ...ೇ ಹಣ ಹಾಕಿ ಪ್ರಕಟಿಸಿ ಯಾರಿಗೆ, ಎಲ್ಲಿ ಹೇಗೆ ಮಾರಬೇಕೆಂಬುದು ಗೊತ್ತಾಗದೆ ಖರ್ಚು ಮಾಡಿದ ಹಣವೂ ಸಿಗದೆ ನಿತ್ರಾಣಗೊಳ್ಳುತ್ತಾರೆ. ...ದಂತೆ ಬಹುತೇಕ ಪುಟ್ಟ ಪ್ರಕಾಶಕರಿಗೆ ಪ್ರೊಫೇಷನಲ್ ಧೋರಣೆಗಳ ಅಗತ್ಯವಿದೆ. ಕೆಲವು ದೊಡ್ಡ ಸೈಜಿನ ಪ್ರಕಾಶಕರು ಪ್ರೊಫೇಷನಲ್ ಧೋರಣೆ ...ಕ ಕಮರ್ಷಿಯಲ್ ಧೋರಣೆಗೆ ತಲುಪಿ ಪಸಂದಾಗಿದ್ದಾರೆ. ಇದನ್ನೆಲ್ಲಾ ಬದಿಗಿಟ್ಟು ಹೇಳಬೇಕೆಂದರೆ ಕರ್ನಾಟಕದಲ್ಲಿ ಪುಸ್ತಕ ಪ್ರಕಾಶನ, ವಿತರಣೆ, ...ರಾಟ, ಕಮಿಷನ್ ಪ್ರಮಾಣ, ಸರ್ಕಾರದ ಬೆಂಬಲ, ಪ್ರಚಾರ ಕುರಿತಂತೆ ಬದಲಾವಣೆ ತರಲು ಒಂದು ತೀವ್ರವಾದ, ರಭಸದ ಸಂಘಟಿತ ಪ್ರಯತ್ನ ...ಬೇಕಿದೆ.

...ಪುಸ್ತಕ ಪ್ರಕಾಶಕರ ಸಂಘ ಕಟ್ಟುವ ಮೂಲಕ ಆ ಕೆಲಸಗಳಿಗೆ ಚಾಲನೆ ನೀಡಲು ಸಾಧ್ಯ ಅಲ್ಲವೆ?

...ನೀವು ಪುಸ್ತಕ ಪ್ರಕಾಶಕರಾಗಿದ್ದರೆ, ನಿಮ್ಮ ಅನುಭವ ಆಧರಿಸಿ ಕೆಲವು ಸಲಹೆ ಸೂಚನೆಯ ಮಾತುಗಳನ್ನು ದಯವಿಟ್ಟು ಪತ್ರಿಕೆಯ ವಿಳಾಸಕ್ಕೆ ಬರೆದು ...ಿ. ಆದನ್ನೆಲ್ಲ ಆಧರಿಸಿ 'ಕರ್ನಾಟಕ ಪುಸ್ತಕ ಪ್ರಕಾಶಕರ ಸಂಘ'ದ ರೂಪುರೇಷೆ ನಿರ್ಧರಿಸಬಹುದು.

▸2 ಹಸಿದ ನಾಯಿಗಳ ವರ್ತಮಾನ

...ವ ಪ್ರಯತ್ನ ಮಾಡಿ ಅಧಿಕಾರ ಕಳೆದುಕೊಂಡಿತ್ತು. ನಂತರ ಅವು ...ಜ್ಞಾಪೂರ್ವಕವಾಗಿ ಆ ಅಜೆಂಡಾವನ್ನು ಕೈಬಿಟ್ಟಿದ್ದರೆ ಬಿಎಸ್‌ಪಿಗೆ ಆ ...ಂಡಾವೇ ಇಲ್ಲ, ತಳಸಮುದಾಯದ ದೃಷ್ಟಿಯಿಂದ ನೋಡಿದರೆ ...ಕೇತಿಕ ಅಧಿಕಾರ ಧನ್ಯತೆಯನ್ನು ಬಿಟ್ಟರೆ ಈ ಪಕ್ಷಗಳು ಅಧಿಕಾರಕ್ಕೆ ...ದದ್ದು ದಮನಿತ ಸಮುದಾಯಗಳ ಬದುಕಿನಲ್ಲಿ ಜಾಗತೀಕರಣದ ...ಘಟ್ಟದಲ್ಲಿ ಯಾವ ಮೂಲಭೂತ ಬದಲಾವಣೆಯನ್ನು ತಂದಿಲ್ಲ. ...ಪಕ್ಷಗಳು ಜನಪರ ನೀತಿಗಳನ್ನು ಜಾರಿಗೆ ತಂದದ್ದೆಲ್ಲಾ 1991ಕ್ಕೆ ಮುಂಚೆ. ...ೂ ಹಲವಾರು ರಾಜಿಗಳಿಂದ ನಜ್ಜುಗುಜ್ಜಾದ ನೀತಿಗಳಾಗಿದ್ದವು. ಅದಕ್ಕೆ ...ಸು ಅಧಿಕಾರ ಸಿಕ್ಕ ಕ್ಷಣ ಬದಲಾದರು ಎಂಬ ಕಾರಣ ಮಾತ್ರವೇ ಸಮಾ...ಸಕರವಾದುದ್ದಲ್ಲ, ಬದಲಿಗೆ ಜಾಗತೀಕರಣದ ಕಾಲಘಟ್ಟದಲ್ಲಿ ಪ್ರಭುತ್ವ ...ತ್ತು ನಮ್ಮ ಆರ್ಥಿಕ ವ್ಯವಸ್ಥೆ ಕೇವಲ ಶಾಸನಾತ್ಮಕವಾಗಿಯೇ ಜನವಿರೋಧಿ...ಾಗಿ ಬದಲಾಗಿದೆ. ದೇಶದ ಸಂಪತ್ತಿನ ಮಾಲೀಕತ್ವವನ್ನು ಸಂವಿಧಾನದ ...ರಿಸಲ್ಲೇ ದೇಶದ ಮತ್ತು ಪರದೇಶದ ಬಂಡವಾಳಶಾಹೀ ಶಕ್ತಿಗಳಿಗೆ ...ನಬದ್ಧವಾಗಿ ಪರಭಾರೆ ಮಾಡಲಾಗಿದೆ. ಈ ಮಾರಾಟದಲ್ಲಿ ಸ್ಥಳೀಯರು ...ಭ ಪಡೆದುಕೊಂಡಿದ್ದಾರೆ. ಹೀಗೆ ಜನರಿಗೆ ಸೇರಬೇಕಾದ ಸಂಪತ್ತಿನಲ್ಲಿ ...ವ ಪಂಚಸೇಜು ಫಲಾನುಭವಿಗಳೇ ಅಹಿಂದ ಸಮುದಾಯದ ಶ್ರೀ...ಮಂತಿಗಳು, ರೆಡ್ಡಿಗಳು, ಬ್ರಾಹ್ಮಣ ನಾರಾಯಣಮೂರ್ತಿಗಳು, ...ಅಂಬಾನಿಗಳು, ಮುಸ್ಲಿಮ್ ಪ್ರೇಂಜಿಗಳು. ಇವರೆಲ್ಲಾ ...ಗತೀಕರಣವೆಂಬ ಜನವಿರೋಧಿ ಆರ್ಥಿಕ ನೀತಿಗಳ ಜಾತ್ಯತೀತ ...ಸಂತಾನಗಳು. ಅವುಗಳಿಂದ ಪೋಷಿತವಾದ ರಾಜಕೀಯ ಪಕ್ಷ ಮತ್ತು ...ನಾಂತಗಳು ಅದರ ಕಸಿಸಂತಾನಗಳಷ್ಟೆ ಆಗುತ್ತವೆ, ಅಲ್ಲವೇ? ಇದು ...ದಲಾಗಲು ಬೇಕಿರುವುದು ಈ ಶೋಷಕ ವ್ಯವಸ್ಥೆಯಲ್ಲಿ ಪಾಲಲ್ಲ, ಬದಲಿಗೆ ...ನ್ನು ಜನಪರವಾಗಿ ಬದಲುಗೊಳಿಸುವ, ಪ್ರಜಾತಂತ್ರವನ್ನು ನಿಜಕ್ಕೂ ...ಸಂತ್ರಸನ್ನಾಗಿಸುವ ರಾಜಿರಹಿತ ಹೋರಾಟ.

ರಾಜಕೀಯ ಅಧಿಕಾರ ಬೇಕೇ ಬೇಕು. ಆದರೆ ಆರ್ಥಿಕ ಮತ್ತು ...ಮಾಜಿಕ ಸಮಾನತೆಯಿಲ್ಲದ ದೇಶದಲ್ಲಿ ರಾಜಕೀಯ ಅಧಿಕಾರ ನಮ್ಮ ...ಗೆ ನಾಳೆ ಕೊಡುವ ಪರವಾನಗಿ ಅಷ್ಟೆ. ಆರ್ಥಿಕ ಮತ್ತು ಸಾಮಾಜಿಕ ...ಯನ್ನು ಕಡ್ಡಾಯ ಮಾಡದ ಕೇವಲ ಅಸ್ತಿ ಸ್ವಾತಂತ್ರ್ಯವನ್ನು ಮಾತ್ರ ...ಗೊಳಿಸುವ, ಸಂಸದೀಯ ಪ್ರಜಾತಂತ್ರದಲ್ಲಿ ಪ್ರಾತಿನಿಧಿಕ ಪ್ರಜಾತಂತ್ರ ...ಸಮುದಾಯದ ಹೆಸರಲ್ಲಿ ಆ ಸಮುದಾಯದ ಒಂದು ವರ್ಗವನ್ನು ಮಾತ್ರ ಬೆಳೆಸುತ್ತಿರುತ್ತದೆ. ಆ ವರ್ಗ ಆ ಸಮುದಾಯದ ಮೇಲಿನ ಪ್ಯಾರಾಸೈಟಿನಂತೆ ಅದನ್ನೇ ತಿಂದು ಬೆಳೆಯುತ್ತಿರುತ್ತದೆ. 63 ವರ್ಷಗಳ ಅಧಿಕಾರ ರಾಜಕಾರಣ, ಕಳೆದ ಮೂರು ದಶಕಗಳ ಹೋರಾಟ ರಾಜಕಾರಣ ಅದನ್ನೇ ಹೇಳುತ್ತದೆ.

ಈ ಸಂಸದೀಯ ಪ್ರಜಾತಂತ್ರ ದಮನಿತ ಸಮುದಾಯವನ್ನು ಸಬಲೀಕರಿಸಿ ನಿಜವಾದ ಪ್ರಭುವನ್ನಾಗಿಸಬೇಕೆಂದರೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಪೂರ್ವ ಶರತ್ತಾಗುತ್ತದೆ. ಅದು ಶಾಸನಸಭೆಯಲ್ಲಿ ನಡೆಯುವ ರಾಜಿಗಳಿಂದ ಮತ್ತು ಭಾಷಣಗಳಿಂದ ಸಾಧ್ಯವಾಗುವುದಿಲ್ಲ. ಬೀದಿಯಲ್ಲಿ, ಗಲ್ಲಿಯಲ್ಲಿ, ಹಳ್ಳಿಗಳಲ್ಲಿ ಈ ದೇಶದ ಮತ್ತು ಪ್ರದೇಶದ ಬಲಾಢ್ಯ ಆರ್ಥಿಕ ಮತ್ತು ಸಾಮಾಜಿಕ ಶಕ್ತಿಗಳೊಂದಿಗೆ ಜನಶಕ್ತಿ ನಡೆಸುವ ಸಂಘರ್ಷದ ಮೂಲಕ ಮಾತ್ರ ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಅರಳುತ್ತದೆ. ಆ ಪ್ರಕ್ರಿಯೆಯಲ್ಲೇ ಯಾವ ಹೀರೋನಿಗೂ ಕಾಯಬೇಕಿಲ್ಲದ ಸಮಾಜ, ಹೊಸ ಮೌಲ್ಯಗಳುಳ್ಳ ಮನುಷ್ಯನೂ ರೂಪುಗೊಳ್ಳುತ್ತಾನೆ. ಇದೇ ಕೆಳಗಿಂದ ರೂಪುಗೊಳ್ಳಬೇಕಾದ ಪ್ರಜಾತಂತ್ರ.

ಅದಾಗ ಬೇಕೆಂದರೆ ಹೋರಾಟಗಳು ವಿಧಾನಸೌಧವೆಂಬ ಹಾವಿನ ಹೆಡೆಯಿಂದ ಹೊರಬರಬೇಕು. ಶಾಸಕರ ಭವನದಿಂದ, ಸೆಮಿನಾರ್ ಹಾಲ್‌ಗಳಿಂದ ಹೋರಾಟಗಳು ಬೀದಿಗೆ ಮರಳಬೇಕು. ಹಳ್ಳಿಯನ್ನು ತಲುಪಬೇಕು. ನಾಯಕರು ಕಾರುಗಳಿಂದ ಕಾಲ್ನಡಿಗೆಗಳಿಗೆ ಮರಳಬೇಕು. ಮಟನ್ ಬಿರಿಯಾನಿ ಕೋಳಿಸಾರು ಸಿಗದಿದ್ದರೂ ಬೀದಿಬದಿಯ ಚಿತ್ರಾನ್ನ, ಬೈಟು ಟೀಯ ಬದುಕಿಗೆ ವಾಪಸಾಗಬೇಕು. ಬಿಸಿನೀರಿನ ಸ್ನಾನಕ್ಕಿಂತ ಧೂಳಿನ ಸ್ನಾನ ಸಾಮಾಜಿಕ ಕಾರ್ಯಕರ್ತನ ಅಂತಸ್ಸಾಕ್ಷಿಯನ್ನು ಶುಭ್ರಗೊಳಿಸುತ್ತದೆ.

ಇದು ಪರೀಕ್ಷೆಗಳ ಕಾಲ. ಆಮಿಷಗಳು ನಾಯಕರನ್ನು, ಹೋರಾಟಗಳನ್ನು ಕೊಳೆಸಲು ಕಾದುಕೂತಿರುವ ಸಂದರ್ಭ. ಕವಿ ಫೈಜ್ ಹೇಳುವಂತೆ 'ಪ್ರತಿಮನದ ಪಡಸಾಲೆಯಲ್ಲಿ ಸತ್ತ ದೀಪಗಳ ಸಾಲು'ಗಟ್ಟಿರುವ ಸಂದರ್ಭ. ನಾಯಿಗಳು ಹಸಿದು ಕೂತಿರುವ ಸಂದರ್ಭದಲ್ಲಿ ನಮ್ಮ ತಟ್ಟೆಯ ಅನ್ನ ಹಳಸದಂತೆ ನೋಡಿಕೊಳ್ಳಬೇಕಿದೆ. ಇಲ್ಲದಿದ್ದರೆ ಅಡಿಗರಂತ ಅಡಿಗರೂ ಹೇಳುವಂತೆ "ಕೊಳೆಯಲು ಪ್ರಾರಂಭಿಸಿದರೆ ಒಳ್ಳೆಯದಾದರೂ ಕೆಟ್ಟದಾದರೂ ಎಲ್ಲವೂ ಒಂದೇ ದುರ್ನಾತ."

ಅಂತಸ್ಸಾಕ್ಷಿ ಕೊಳೆಯಬಾರದು. ಶತ್ರು ನಮ್ಮದೇ ವೇಷ ಹಾಕಿದ್ದರೂ ರಾಜಿಯಾಗಬಾರದು. ಮೋಸ ಹೋಗಬಾರದು. ಎಲ್ಲಕ್ಕಿಂತ ಹೆಚ್ಚಾಗಿ ಜನರಿಗೆ ಮೋಸ ಮಾಡಬಾರದು.

ರಾಜೀವ್ ಚಂದ್ರಶೇಖರನೂ ಪಾರ್ಟಿ ಫಂಡೂ

ಅಣ್ಣಾ ಹಜಾರೆ ನೇತೃತ್ವದ ತಂಡ ಭ್ರಷ್ಟಾಚಾರ ವಿರೋಧಿ ಹೋರಾಟವನ್ನು ತೀವ್ರಗೊಳಿಸುತ್ತ ತನ್ನ ಬಣ್ಣವನ್ನು ಬಯಲುಮಾಡಿಕೊಳ್ಳುತ್ತಿರುವ ಬೆನ್ನಲ್ಲೇ ರಾಜಕೀಯ ಪಕ್ಷಗಳು ದೇಶದ ಪ್ರತಿಷ್ಠಿತ ಕಾರ್ಪೊರೇಟ್ ಕಂಪನಿಗಳಿಂದ ಕೋಟಿಗಟ್ಟಲೇ ಪಾರ್ಟಿ ಫಂಡನ್ನು ಪಡೆದಿರುವ ವಿವರಗಳನ್ನು ದಿ ಎಕನಾಮಿಕ್ಸ್ ಟೈಮ್ಸ್ ವರದಿ ಮಾಡಿದೆ. ದೆಹಲಿ ಮೂಲದ ಅಸೋಸಿಯೇಶನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಎಂಬ ನಾಗರಿಕ ಸಂಸ್ಥೆ ಮಾಹಿತಿ ಹಕ್ಕಿನಡಿ ಈ ವಿವರಗಳನ್ನು ಪಡೆದಿದೆ. (ವಿವರಗಳಿಗೆ ಕೋಷ್ಟಕ ನೋಡಿ)

ದೇಶದ ಪ್ರತಿಷ್ಠಿತ ಕಾರ್ಪೊರೇಟ್ ಕಂಪನಿಗಳು, ಲಿಕ್ಕರ್, ಮೈನಿಂಗ್, ಕ್ಯಾಪಿಟೇಶನ್... ಹೀಗೆ ಬೇರೆ ಬೇರೆ ಬ್ಯುಸಿನೆಸ್ ಲಾಬಿಗಳು ಪಾರ್ಟಿ ಫಂಡ್ ನೀಡುವ ಪರಿಪಾಠ ಹೊಸದೇನೂ ಅಲ್ಲ. ಹೀಗೆ ದೇಣಿಗೆ ಪಡೆಯುವ ಪಕ್ಷಗಳು ಸಂಬಂಧಪಟ್ಟ ಉದ್ಯಮಿಯ ವ್ಯಾವಹಾರಿಕ ಹಿತಾಸಕ್ತಿಗಳ ವಿಷಯ ಬಂದಾಗ ಮೃದು ಧೋರಣೆ ತಳೆಯುವುದು ಅನೂಚಾನವಾಗಿ ನಡೆದುಕೊಂಡು ಬಂದಿದೆ. ಹಾಗೆ ನೋಡಿದರೆ ಭ್ರಷ್ಟಾಚಾರದ ಮೂಲ ಆರಂಭವಾಗುವುದೇ ಇಲ್ಲಿಂದ. ದೇಣಿಗೆ ನೀಡುವ ಉದ್ಯಮಿಗಳು ತೆರಿಗೆ ರಿಯಾಯ್ತಿ, ಭೂಸ್ವಾಧೀನ, ಮೂಲಭೂತ ಸೌಕರ್ಯ.... ಹೀಗೆ ಹಲವು ಬಾಬ್ತುಗಳಲ್ಲಿ ತಾವು ನೀಡಿದ ದೇಣಿಗೆ ನೂರುಪಟ್ಟು ಹೆಚ್ಚು ವಸೂಲಿ ಮಾಡುತ್ತಾರೆ. ತಾವು ಪ್ರತಿಷ್ಠಾಪಿಸುವ ಜನವಿರೋಧಿ ಯೋಜನೆಗಳಿಗೆ ಎದುರಾಗುವ ಜನರ ಪ್ರತಿರೋಧವನ್ನು ತಮ್ಮ ಪೊಲೀಸ್ ಪಡೆಗಳಿಂದ ಹತ್ತಿಕ್ಕುವ ಷರತ್ತು ಸೇರಿದಂತೆ ಬಹುತೇರನಾಗಿ ಈ ದೇಣಿಗೆ ಸಂದಾಯವಾಗಿರುತ್ತದೆ.

Top 10 Corporate Donors

Total of 36 corporate entities donated ₹1 crore or more to political parties

RANK	DONOR	AMOUNT (₹CR)
1	General Electoral Trust (Aditya Birla Group)	30.6
2	Asianet TV Holding Pvt Ltd	12.5
3	Torrent Power Ltd	10.6
4	Electoral Trust (Tatas)	9.8
5	Infrastructure Development & Consultant	5.5
6	Hindustan Construction Co Ltd.	5.0
7	ITC Limited	5.0
8	Sterlite Industries (India)	5.0
9	KSK Energy Venture Ltd.	4.0
10	Harmony Electoral Trust	3.5

Fig for 2009-10 SOURCE: Association for Democratic Reforms

ಹೆಚ್ಚೆಚ್ಚು ದೇಣಿಗೆ ನೀಡುವ ಉದ್ಯಮಿ ಹೆಚ್ಚೆಚ್ಚು ವಸೂಲಿ ಮಾಡುತ್ತಾನೆ. ಅದನ್ನು ಹೊರತುಪಡಿಸಿದರೆ ಇವರಿಗೆ ಯಾವ ಜನತೆಯ ಹಿತಾಸಕ್ತಿಯೂ ಇಲ್ಲಿರುವುದಿಲ್ಲ, ಇದು ಜನಜನಿತವಾಗಿರುವ ಸಾರ್ವತ್ರಿಕ ಸತ್ಯ. ಮೇಲೆ ನೀಡಿದ ಕೋಷ್ಟಕದ ವಿವರಗಳ ಆಳಕ್ಕೆ ಹೋಗಿ ನೋಡಿದಾಗ ಇಲ್ಲಿ ಹೆಸರಿಸಲಾಗಿರುವ ಕಾರ್ಪೊರೇಟ್ ಸಂಸ್ಥೆಗಳೂ ಅವುಗಳ ವಹಿವಾಟಿನ ವಿವರಗಳನ್ನೂ ನೋಡಿದಾಗ ಸಿಗುವ ಮಾಹಿತಿಗಳೂ ಈ ಸತ್ಯವನ್ನೇ ಹೊರಗೆಡಹುತ್ತವೆ.

ಈ ಕೋಷ್ಟಕದ ಪ್ರಕಾರ ಅತಿಹೆಚ್ಚು ಪಾರ್ಟಿ ಫಂಡ್ ನೀಡಿರುವ ಯಾದಿಯಲ್ಲಿ ಆದಿತ್ಯ ಬಿರ್ಲಾ ಗ್ರೂಪ್‌ನ ಜನರಲ್ ಎಲೆಕ್ಟೋರಲ್ ಟ್ರಸ್ಟ್ ಮೊದಲನೆಯದಾಗಿದ್ದು ನಂತರದ ಯಾದಿಯಲ್ಲಿ ಏಷಿಯಾನೆಟ್ ಟಿವಿ ಹೋಲ್ಡಿಂಗ್ಸ್‌ನ ಹೆಸರಿದೆ.

ಕರ್ನಾಟಕದಿಂದ ರಾಜ್ಯಸಭಾ ಸದಸ್ಯರಾಗಿರುವ, ಉದ್ಯಮಿಯೂ ಆಗಿರುವ, ಭ್ರಷ್ಟಾಚಾರ ವಿರೋಧಿ ಹೋರಾಟಗಾರ ಎಂದೂ ತನ್ನನ್ನು ಬಣ್ಣಿಸಿಕೊಂಡಿರುವ ರಾಜೀವ್ ಚಂದ್ರಶೇಖರ್ ಈ ಏಷಿಯಾನೆಟ್ ಮಾಧ್ಯಮ ಸಮೂಹದ ಮಾಲೀಕ. 2ಜಿ ತರಂಗಾಂತರ ಹಗರಣದ ಚರ್ಚೆಯ ಸಂದರ್ಭದಲ್ಲಿ ತಾನೊಬ್ಬ ಸಾಚಾ ಉದ್ಯಮಿ ಎಂದು ಪೋಜು ಕೊಡುತ್ತಾ ತನ್ನ ಮಾಲೀಕತ್ವದ ಮಾಧ್ಯಮಗಳಲ್ಲಿ ತನ್ನ ಅಭಿಪ್ರಾಯಗಳನ್ನು ಜಗಜ್ಜಾಹೀರುಗೊಳಿಸಿಕೊಳ್ಳುತ್ತಿದ್ದ ಈತನ ಮತ್ತೊಬ್ಬ ಉದ್ಯಮಿ ಟಾಟಾಗೆ ಬಹಿರಂಗಪತ್ರ ಬರೆದು ವಿವರಣೆ ಕೇಳಿದ್ದ. ಅಣ್ಣಾ ಹೋರಾಟದ ಅಬ್ಬರದಲ್ಲಿ ತಾನೇನೂ ಕಡಿಮೆ ಇಲ್ಲವೆಂದು ತೋರಿಸಲು ಭಾರತದಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರದ ಬಗ್ಗೆ ಸಂಸತ್ತಿನಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿ ಭ್ರಷ್ಟಾಚಾರದ ವಿರುದ್ಧ ಉದ್ದುದ್ದ ಭಾಷಣಗಳನ್ನು ಬಿಗಿದಿದ್ದ. ಅದರ ಸ್ಯಾಂಪಲ್ ಗಮನಿಸಿ:

"ಭಾರತದಲ್ಲಿ ಇಂದು ಭ್ರಷ್ಟಾಚಾರ ಹಾಗೂ ಸರ್ಕಾರದ ದುರಾಡಳಿತದ ವಿರುದ್ಧ ಅಭೂತಪೂರ್ವ ಜನ ಸಂಚಲನ ಸೃಷ್ಟಿಯಾಗಿದೆ. ಸರ್ಕಾರದ ಪಾರದರ್ಶಕತೆ ಹಾಗೂ ಹೊಣೆಗಾರಿಕೆ ಹೆಚ್ಚಿಸಲು ಲೋಕಪಾಲ ವಿಧೇಯಕ ಮಹತ್ವದ ವೇದಿಕೆ ಒದಗಿಸುತ್ತದೆ ಎಂಬುದರ ಬಗ್ಗೆ ಎಲ್ಲೆಡೆ ಚರ್ಚೆ ನಡೆದಿದೆ. ದೇಶದ ಎಲ್ಲೆಡೆಯಿಂದ ಲಕ್ಷಾಂತರ ಜನ ಸಮೂಹ ರಾಜಕೀಯ ಬಣ್ಣವಿಲ್ಲದ, ಅಹಿಂಸಾತ್ಮಕ ಹೋರಾಟಕ್ಕೆ ಇಳಿದಿರುವುದು ಮೆಚ್ಚುಗೆಯ ಸಂಗತಿ. ಭಾರತ ಸ್ವಾತಂತ್ರ್ಯದ ನಂತರ ಪ್ರಥಮ ಬಾರಿಗೆ ಪ್ರಜಾಪ್ರಭುತ್ವದ ಶಕ್ತಿ ಸಾಮರ್ಥ್ಯಕ್ಕೆ ನೈಜಸಾಕ್ಷಿಯಾಗಿ ಈ ಹೋರಾಟ ಕಾಣಿಸುತ್ತದೆ. ಸಂಸತ್ತಿನಲ್ಲಿ ಜನಪ್ರತಿನಿಧಿಯಾಗಿ, ಪ್ರಸಕ್ತ ವಿದ್ಯಮಾನದ ಬಗ್ಗೆ ನಾಗರಿಕ ಸಮಾಜದಿಂದ ದೊರಕುವ ಪರ ವಿರೋಧ ಚರ್ಚೆಗಳನ್ನು ಆಲಿಸಿ ಜವಾಬ್ದಾರಿಯುತವಾಗಿ ಪ್ರತಿಕ್ರಿಯಿಸುವುದು ಸಂಸದನ ಕರ್ತವ್ಯವಾಗಿದೆ.

ಅಸಮರ್ಥ ಸರ್ಕಾರ ಅಥವಾ ಅರಾಜಕತೆಯ ಪರಿಣಾಮವೇ ಭ್ರಷ್ಟಾಚಾರ ಎಂದು ಸ್ಪಷ್ಟವಾಗಿ ಹೇಳಬಹುದು. ಅಶಕ್ತ ಸರ್ಕಾರದ ಜೊತೆ ಲಂಪಟತನ ಸೇರಿ, ಅಭಿವೃದ್ಧಿ ಯೋಜನೆ ಮೇಲೆ ಯೋಜನೆ ಘೋಷಿಸಿ, ಗೊತ್ತು ಗುರಿಯಿಲ್ಲದಂತೆ ಆಡಳಿತ ನಡೆಸುವುದರ ಪರಿಣಾಮವಾಗಿ ಭ್ರಷ್ಟಾಚಾರ ಅಳಿಯದೆ ಉಳಿದಿದೆ.

ನಾವು ಈ ಏಳು ಅಂಶಗಳನ್ನು ಭ್ರಷ್ಟಾಚಾರವನ್ನು ತಡೆಗಟ್ಟಲು ಪ್ರಬಲ ಕಾನೂನು ಪ್ರಮುಖ ಅಸ್ತ್ರವಾಗುತ್ತದೆ."

ಇಡೀ ಸಂಸತ್ತು ಈ ವ್ಯಾಖ್ಯಾನಕ್ಕೆ ಸಾಕ್ಷಿಯಾಗಿದೆ. ಹಾಗಾದರೆ ರಾಜೀವ್ ಚಂದ್ರಶೇಖರ್ ಒಡೆತನದ ಏಷಿಯಾನೆಟ್ ಸಮೂಹ 10 ಕೋಟಿಯಷ್ಟು ಹಣವನ್ನು ಕೋಮುವಾದಿ ಭಾರತೀಯ ಜನತಾ ಪಕ್ಷಕ್ಕೂ, 2.5 ಕೋಟಿಯಷ್ಟು ಹಣವನ್ನು ಭ್ರಷ್ಟಾಚಾರದ ಹಗರಣಗಳಲ್ಲಿ ಮುಳುಗೇಳುತ್ತಿರುವ ಕಾಂಗ್ರೆಸ್ ಪಕ್ಷಕ್ಕೂ ಧಾರೆಯೆರೆಯುವ ಅಗತ್ಯವೇನಿತ್ತು? ಯಾವ ರೀತಿಯ ಸುಧಾರಣೆ, ಬದಲಾವಣೆಯ ನಿರೀಕ್ಷೆಯಲ್ಲಿ ಈ ಮೊತ್ತವನ್ನು ನೀಡಲಾಗಿದೆ? ಪಟ್ಟಿಯಲ್ಲಿರುವ ಉಳಿದ ಉದ್ಯಮಿಗಳಿಗೆ ತಮ್ಮ ದಂಧೆಯ ರಕ್ಷಣೆಗಾಗಿ ಕೊಡುವ ತುರ್ತು ಇತ್ತೇನೋ? ಆದರೆ ಪ್ರಜ್ಞಾವಂತರು ಪ್ರತಿನಿಧಿಸುವ ರಾಜ್ಯಸಭೆಯ ಸದಸ್ಯನಾಗಿರುವ ರಾಜೀವ್ ಚಂದ್ರಶೇಖರ್‌ಗೆ ಯಾವ ತುರ್ತು ಇತ್ತು? ಅಲ್ಲಿಗೆ ರಾಜಕೀಯ ಹಿತಾಸಕ್ತಿ ಬೇರೆ, ವ್ಯಾವಹಾರಿಕ ಹಿತಾಸಕ್ತಿ ಬೇರೆ ಎಂದಲ್ಲವೇ? ಹಾಗಿದ್ದಾಗ ರಾಜೀವ್ ಚಂದ್ರಶೇಖರ್ ಅವರು 'ಸಾಚಾತನದ ಭಗವದ್ಗೀತೆ' ಯಾರನ್ನು ದೃಷ್ಟಿಯಲ್ಲಿಟ್ಟುಕೊಂಡು ಪಠಿಸುತ್ತಾರೆ?

ರಾಜಕೀಯ ಮೌಲ್ಯಗಳ ಬಗ್ಗೆ "ಆಚಾರ ಹೇಳೋಕೆ ಬದನೆಕಾಯಿ ತಿನ್ನೋಕೆ" ಎಂಬ ಧೋರಣೆಯಲ್ಲಿ ಅಧಿಕಾರಸ್ಥರು ಮಾತನಾಡುತ್ತ ನಡೆದುಕೊಳ್ಳುತ್ತಿರುವುದರಿಂದಲೇ ಅಲ್ಲವೇ ನಮ್ಮ ಜನ ಎಲ್ಲವನ್ನು ಸಿನಿಕತನದ ಧೋರಣೆಯಲ್ಲಿ ನೋಡುವಂಥ ವಿಷಯಾಸಕರ ಸನ್ನಿವೇಶ ನಿರ್ಮಾಣವಾಗಿರುವುದು?


ಗೌರಿಯ ಮದುವೆ ಅಜಿತು ಆಕ್ಸಿಡೆಂಟ್



ರಿಜಿಸ್ಟರ್ ಮದುವೆ ಆದಾಗ ಸತ್ಯ, ಚಿದು, ಗೌರಿ, ಇಂದಿರಾ, ಉಮಾ, ರಾಜಣ್ಣ ಮತ್ತು ಲಂಕೇಶ್......



ಚಿದು ಮತ್ತು ಗೌರಿ ಜೊತೆ ಶಿವರುದ್ರಪ್ಪ...



ನಾವಿನ್ನೂ ಗಾಂಧಿಬಜಾರಿನ ಮನೆಯಲ್ಲಿ ಇದ್ದಾಗಲೇ ನಮ್ಮ ದೊಡ್ಡ ಮಗಳು ಗೌರಿ ನ್ಯಾಷನಲ್ ಕಾಲೇಜಿನಲ್ಲಿ ಪಿಯುಸಿ ಮುಗಿಸಿ ಬೆಂಗಳೂರು ವಿಶ್ವವಿದ್ಯಾಲಯ ಆಗತಾನೇ ಪ್ರಾರಂಭಿಸಿದ್ದ ಬಿಎ ಪತ್ರಿಕೋದ್ಯಮ ಕೋರ್ಸ್ ಸೇರಿದಳು. ಅದೇ ಹೊತ್ತಿಗೆ ಚಿದಾನಂದ ರಾಜಘಟ್ಟ ಕೂಡ ಡಿಗ್ರಿ ಮುಗಿಸಿ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಕೋರ್ಸ್‌ಗೆ ಸೇರಿದ್ದ. ಅವರಿಬ್ಬರ ಸ್ನೇಹ ಮುಂದುವರೆದಿತ್ತು. ಗೌರಿ ಮತ್ತು ಚಿದು ಒಬ್ಬರನ್ನೊಬ್ಬರು ಬಿಟ್ಟು ಇರುವುದಿಲ್ಲ ಎಂದು ನನಗೆ ಖಾತರಿ ಆಗಿ ಅದರ ಬಗ್ಗೆ ತಕರಾರೆತ್ತದೆ ಸುಮ್ಮನಾದೆ. ಚಿದು ನಮ್ಮ ಮನೆಯವರಿಗೆ ಹತ್ತಿರವಾದ. ಟೆನ್ನಿಸ್ ಅಥವಾ ಕ್ರಿಕೆಟ್ ಟೆಸ್ಟ್ ಮ್ಯಾಚ್‌ಗಳಿದ್ದರಂತೂ ಲಂಕೇಶರು, ಅಜಿತು ಮತ್ತು ಚಿದು ದಿನಗಟ್ಟಲೆ ಆಗಿನ ಬ್ಲಾಕ್ ಅಂಡ್ ವೈಟ್ ಟಿವಿ ಮುಂದೆ ಕೂತು ಆಟವನ್ನು ನೋಡುತ್ತಿದ್ದರು.

ಡಿಗ್ರಿ ಮುಗಿಸಿದ ನಂತರ ಗೌರಿ ದೆಹಲಿಯಲ್ಲಿರುವ ಐಐಎಂಸಿ ಎಂಬ ಸಂಸ್ಥೆಯಲ್ಲಿ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಓದಲು ಒಬ್ಬಳೇ ಹೋದಳು. ನಮ್ಮ ಮಗುವೊಂದು ಪ್ರಥಮ ಬಾರಿಗೆ ಮನೆ ಬಿಟ್ಟು ಅಷ್ಟು ದೂರ, ಅಷ್ಟು ದಿನ ಒಬ್ಬಳೇ ಹೋದದ್ದು ಅದೇ ಮೊದಲು. ಆಕೆಯನ್ನು ಬೆಂಗಳೂರಿನ ನಿಲ್ದಾಣದಲ್ಲಿ ಟ್ರೈನ್ ಹತ್ತಿಸಿದಾಗ ನನ್ನ ಕಣ್ಣಲ್ಲಿ ಸಹಜವಾಗಿಯೇ ಕಣ್ಣೀರು. ಲಂಕೇಶರಿಗೂ ಒಂದು ತರಹ ಆತಂಕ. ಗೌರಿ ಮನೆಯಲ್ಲಿದ್ದಾಗ ಆಕೆಯ ಬಗ್ಗೆ ಅಷ್ಟು ತಲೆ ಕೆಡಿಸಿಕೊಳ್ಳದಿದ್ದ ಅವರು ಆಕೆ ದೆಹಲಿಯಲ್ಲಿದ್ದಾಗ ಪ್ರತಿದಿನ ಟಿವಿಯಲ್ಲಿ ನ್ಯೂಸ್ ನೋಡುವಾಗ ದೆಹಲಿಯಲ್ಲಿ ಹವಾಮಾನ ಹೇಗಿದೆ ಎಂದು ವಿಶೇಷವಾಗಿ ಗಮನವಿಟ್ಟು ನೋಡುತ್ತಿದ್ದರು; ತಮ್ಮ ಮಗಳು ದೆಹಲಿಯ ಶೆಖೆಯಿಂದಲೋ, ಚಳಿಯಿಂದಲೋ ಕಷ್ಟ ಅನುಭವಿಸುವುದು ಬೇಡ ಎಂಬ ಕಾಳಜಿಯಿಂದ. ಆಕೆ ದೆಹಲಿಯಲ್ಲಿದ್ದಾಗ ಚಿದಾನಂದ ಬೆಂಗಳೂರಿನಲ್ಲಿ ದಿ ಟೆಲಿಗ್ರಾಫ್ ಪತ್ರಿಕೆಯ ವರದಿಗಾರನಾಗಿದ್ದ.

ನಾನು ಬಯಸಿದ್ದಂತೆ ನನ್ನ ಮೊದಲ ಮಗಳು ಡಾಕ್ಟರೂ ಆಗಲಿಲ್ಲ, ಇಂಜಿನಿಯರ್ ಕೂಡ ಆಗಲಿಲ್ಲ, ಬದಲಾಗಿ ಆಕೆ ಇಂಗ್ಲಿಷ್ ಪತ್ರಿಕೋದ್ಯಮ ಸೇರುವುದು ಗ್ಯಾರಂಟಿ ಆಗಿತ್ತು.

ಇದಾದ ಮುಂದಿನ ವರ್ಷ ಬೇಬಿ (ಕವಿತಾ) ಕೂಡ ಜಯನಗರದಲ್ಲಿರುವ ನ್ಯಾಷನಲ್ ಕಾಲೇಜ್ ಸೇರಿದಳು. ಆದರೆ ಎಲ್ಲಿ ನಾನು ಆಕೆಯ ಮೇಲೆ "ಡಾಕ್ಟರ್ ಆಗು ಅಥವಾ ಇಂಜಿನಿಯರ್ ಆಗು" ಎಂದು ಒತ್ತಡ ಹಾಕುತ್ತೇನೋ ಎಂದು ಯೋಚಿಸಿದ ಬೇಬಿ ನನಗೆ ಗೊತ್ತಾಗದಂತೆ ಪಿಯುಸಿಯಲ್ಲೇ ಸೈನ್ಸ್ ಕ್ಲಾಸ್‌ಗಳನ್ನು ತೊರೆದು ಆರ್ಟ್ ಕ್ಲಾಸ್ ಸೇರಿದ್ದಳು. ಅಂದರೆ ಆಕೆಗೂ ಡಾಕ್ಟರ್ ಅಥವಾ ಎಂಜಿನಿಯರ್ ಆಗುವ ಇಷ್ಟವಿರಲಿಲ್ಲ.

ಕಾಲೇಜಿಗೆ ಹೋಗಿಬರಲು ತನ್ನ ಬಳಿ ಇದ್ದ ಲೂನಾ ಮೊಪೆಡ್ ಬದಲು ತನಗೆ ಇನ್ನೂ ದೊಡ್ಡ ಗಾಡಿ ಬೇಕೆಂದು ಬೇಬಿ ತನ್ನ ಅಪ್ಪನನ್ನು ಕೇಳಿದಳು. ಅಗ ನಾನು ಸ್ಕೂಟರ್ ತೆಗೆದುಕೊ ಎಂದು ಹೇಳಿದೆ. ಆದರೆ ಬೇಬಿ "ನನಗೆ ಸ್ಕೂಟರ್ ಬೇಡ, ಮೋಟಾರ್ ಸೈಕಲ್ಲೇ ಬೇಕು" ಎಂದು ಹಟ ಹಿಡಿದಳು. ಕೊನೆಗೂ ತನ್ನ ಅಪ್ಪನಿಂದ ಒಂದು ಹೀರೋ ಹೊಂಡಾ ಬೈಕ್ ಕೊಡಿಸಿಕೊಂಡಳು. ಆಗ ಯಾವ ಹುಡುಗಿಯೂ ಬೆಂಗಳೂರಿನಲ್ಲಿ ಬೈಕ್ ಓಡಿಸುತ್ತಿರಲಿಲ್ಲ. ಬೇಬಿಯೇ ಮೊದಲು ಬೆಂಗಳೂರಿನಲ್ಲಿ ಬೈಕ್ ಓಡಿಸಿದ್ದು.

ಬೇಬಿ ಸಮಯ ಸಿಕ್ಕಾಗಲೆಲ್ಲ ಅಂಗಡಿಗೆ ಬಂದು ನನಗೆ ಸಹಾಯ ಮಾಡುತ್ತಿದ್ದಳು. ಗೌರಿಗೆ ಬಿಸಿನೆಸ್‌ನಲ್ಲಿ ಎಂದೂ ಇಂಟರೆಸ್ಟ್ ಇರಲಿಲ್ಲ. ಆದರೆ ಬೇಬಿಗೆ ಅಂಗಡಿಗೆ ಬಂದ ಗ್ರಾಹಕರನ್ನು ಚೆನ್ನಾಗಿ ಮಾತನಾಡಿಸಲು ಬರುತ್ತಿತ್ತು. ಯಾರು, ಅವರ ಅಭಿರುಚಿ ಏನು, ಅವರಿಗೆ ಎಂತಹ ಸೀರೆ ಇಷ್ಟವಾಗುತ್ತದೆ ಎಂದು ಅಂದಾಜಿಸಿ ಗ್ರಾಹಕರೊಂದಿಗೆ ಮಾತನಾಡುತ್ತಿದ್ದಳು.

ಕೆಲವೊಮ್ಮೆ ಬೇಬಿ ಕಾಲೇಜ್‌ಗೆ ಹೋಗದೆ ನನ್ನೊಂದಿಗೆ ಅಂಗಡಿಯಲ್ಲಿ ಇರುತ್ತಿದ್ದಳು. ಬೇಬಿಗೆ ಮೊದಲಿನಿಂದಲೂ ತಾನು ದುಡಿಯಬೇಕು, ಆರ್ಥಿಕವಾಗಿ ಸ್ವತಂತ್ರಳಾಗಿರಬೇಕು ಎಂಬ ಆಸೆ. ಆದ್ದರಿಂದ ನಾನು ಆಕೆಗೆ ಪಾಕೆಟ್ ಮನಿಗೆ ಆಗುವಷ್ಟು ಹಣವನ್ನು ಸಂಬಳ ಎಂದು ನೀಡುತ್ತಿದ್ದೆ. ಆಕೆಯೇ ಮುಂದೆ ನನ್ನ ಅಂಗಡಿಯ ಜವಾಬ್ದಾರಿಯನ್ನು ಹೊರುತ್ತಾಳೆ ಎಂದು ನಾನು ಆಶಿಸಿದ್ದೆ. ಆದರೆ ಬದುಕಿನಲ್ಲಿ ನಾವು ಅಂದುಕೊಂಡಂತೆ ಎಲ್ಲವೂ ಆಗುವುದಿಲ್ಲವಲ್ಲ...


******


ದೆಹಲಿಯಲ್ಲಿ ಕೋರ್ಸ್ ಮುಗಿಸಿಕೊಂಡು ಒಂದು ವರ್ಷದ ನಂತರ ಬೆಂಗಳೂರಿಗೆ ವಾಪಸ್ ಬಂದ ಗೌರಿ ಆಗತಾನೇ ಬೆಂಗಳೂರಿನಲ್ಲಿ ಪ್ರಾರಂಭವಾಗಿದ್ದ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ವರದಿಗಾರ್ತಿಯಾಗಿ ಸೇರಿಕೊಂಡಳು. ಚಿದಾನಂದ ಕೂಡ ಪತ್ರಿಕೋದ್ಯಮದಲ್ಲಿ ಹೆಸರು ಗಳಿಸಲಾರಂಭಿಸಿದ್ದ. "ಇನ್ನು ನೀವಿಬ್ಬರೂ ಹೀಗೆ ಓಡಾಡಿದ್ದು ಸಾಕು. ಮದುವೆ ಮಾಡಿಕೊಳ್ಳಿ ಇಲ್ಲವೆಂದರೆ ಒಟ್ಟಿಗೆ ಓಡಾಡುವುದನ್ನು ನಿಲ್ಲಿಸಿ" ಎಂದು ನಾನು ಹಟ ಮಾಡಿದೆ. ಹೇಗಿದ್ದರೂ ನನ್ನ ಮಗಳು ಓದಿದ್ದಾಳೆ, ಈಗ ಕೆಲಸ ಪಡೆದು ತನ್ನ ಕಾಲ ಮೇಲೆ ನಿಂತಿದ್ದಾಳೆ ಎಂಬ ವಿಶ್ವಾಸ ನನಗೆ ಬಂದಿತ್ತು.


ಒಂದು ದಿನ ಲಂಕೇಶರು ನಮ್ಮನ್ನೆಲ್ಲ ಎಂಜಿ ರಸ್ತೆಯಲ್ಲಿರುವ ಹೋಟೆಲ್ಲಿಗೆ ಊಟಕ್ಕೆಂದು ಕರೆದುಕೊಂಡು ಹೋಗಿದ್ದಾಗ ಗೌರಿ "ನಾನು ಮತ್ತು ಚಿದು ಮುಂದಿನ ತಿಂಗಳು ಮದುವೆ ಆಗುತ್ತೇವೆ. ನಮ್ಮಿಬ್ಬರ ಹೆಸರುಗಳನ್ನು ರಿಜಿಸ್ಟ್ರಾರ್ ಆಫೀಸಿನಲ್ಲಿ ನಮೂದಿಸಿ ಬಂದಿದ್ದೇವೆ" ಎಂದಳು. ಅದನ್ನು ಕೇಳಿ "ಇದೆಂತಹ ಮದುವೆ?" ಎಂದೆ ನಾನು. ಆದರೆ ಅದನ್ನು ಕೇಳಿ ಲಂಕೇಶರಿಗೆ ತುಂಬಾ ಸಂತೋಷವಾಯಿತು. ಯಾಕೆಂದರೆ ಗೌರಿ ಯಾವ ಸಂಪ್ರದಾಯ ಇತ್ಯಾದಿಗಳಿಲ್ಲದೆ ಸರಳವಾಗಿ ರಿಜಿಸ್ಟರ್ ಮದುವೆಯಾಗಲು ನಿಶ್ಚಯಿಸಿದ್ದಳು. ಆಕೆ "ನನ್ನ ಮದುವೆಗೆ ಖರ್ಚಾಗುವುದು ಕೇವಲ ಹದಿನೈದು ರೂಪಾಯಿ ಐವತ್ತು ಪೈಸೆ" ಎಂದಾಗ ಲಂಕೇಶರು ಹೆಮ್ಮೆಯಿಂದ ನಕ್ಕಿದ್ದರು. ಯಾಕೆಂದರೆ ಅವರೂ ಇಂತಹ ಸರಳ ಮದುವೆಗಳಲ್ಲಿ ನಂಬಿಕೆ ಇಟ್ಟಿದ್ದವರು ಮತ್ತು ಪ್ರೋತ್ಸಾಹಿಸುತ್ತಿದ್ದವರು.

ಒಂದು ದಿನ ಆಫೀಸಿನಿಂದ ಮನೆಗೆ ಬಂದ ಗೌರಿ "ನಾಳೆ ಬೆಳಗ್ಗೆ ಹನ್ನೊಂದು ಗಂಟೆಗೆ ರಿಜಿಸ್ಟ್ರಾರ್ ಆಫೀಸಿನಲ್ಲಿ ಮದುವೆ ಆಗುತ್ತಿದ್ದೇನೆ" ಎಂದಳು. ಆಕೆಯ ಅಪ್ಪ ಇನ್ನೂ ಆಫೀಸಿನಿಂದ ಬಂದಿರಲಿಲ್ಲವಾದ್ದರಿಂದ ಅವರ ಆಫೀಸಿಗೆ ಫೋನ್ ಮಾಡಿ ತನ್ನ ಅಪ್ಪನಿಗೆ ಹೇಳಿದಳು.


ಮಾರನೆ ದಿನ ನನ್ನ ಅಂಗಡಿಯನ್ನು ತೆರೆದ ನಂತರ, ಅದರ ಜವಾಬ್ದಾರಿಯನ್ನು ಶಾಂತಾಳಿಗೆ ವಹಿಸಿ ಲಂಕೇಶರೊಂದಿಗೆ ನಾನು ರಿಜಿಸ್ಟ್ರಾರ್ ಆಫೀಸಿಗೆ ಹೋದೆ. ಅಲ್ಲಿಗೆ ಗೌರಿ ಮತ್ತು ಚಿದು ಬಂದಿದ್ದರು. ಸ್ವಲ್ಪ ಹೊತ್ತಿನ ನಂತರ ಚಿದು ತಂದೆ ಡಾ. ರಾಜಣ್ಣ ಮತ್ತು ತಾಯಿ ಉಮಾ ಕೂಡ ಬಂದರು. ಅವರಿಬ್ಬರಿಗೆ ಈ ಕಾನೂನು ಮದುವೆ ಒಂದಿಷ್ಟೂ ಇಷ್ಟ ವಿರಲಿಲ್ಲ.







ಓದಲು ದೆಹಲಿಗೆ ಹೋಗುವ ಮುನ್ನ ಚಿದು, ಕವಿತಾ ಮತ್ತು ಇಂದಿರಾ ಜೊತೆ ಗೌರಿ



ಅಷ್ಟೇ ಅಲ್ಲ, ನಮ್ಮ ಮಗಳಂತೆ ಚಿದು ತನ್ನ ಹೆತ್ತವರಿಗೆ ಮದುವೆ ಆಗುತ್ತಿರುವ ಬಗ್ಗೆ ಮುಂಚಿತವಾಗಿ ಹೇಳದೇ ಅದೇ ದಿನ ಬೆಳಗ್ಗೆ ಹೇಳಿ ರಿಜಿಸ್ಟರ್ ಕಚೇರಿಗೆ ಆತ ಬಂದಿದ್ದರಿಂದ ಸಹಜವಾಗಿಯೇ ಅವರು ತಳಮಳಗೊಂಡಿದ್ದರು.

ರಿಜಿಸ್ಟರ್ ಆಫೀಸಿನಲ್ಲಿ ಮದುವೆ ಮುಗಿದು ಎಲ್ಲರೂ ಹೊರ ಬಂದನಂತರ ಉಮಾ ಅವರು "ಇದೆಂತಹ ಮದುವೆ. ಸಂಪ್ರದಾಯವಾಗಿ ಮದುವೆ ಆಗಬೇಕು. ನಾವು ನಮ್ಮ ಸಂಬಂಧಿಕರನ್ನು, ಹತ್ತಿರದವರನ್ನು ಕರೆಯಬೇಕು" ಎಂದು ಹಟ ಹಿಡಿದರು. ಗೌರಿ ಅದಕ್ಕೆ ಒಪ್ಪಲಿಲ್ಲ. "ಸಂಪ್ರದಾಯದ ಹೆಸರಲ್ಲಿ ಹುಡುಗಿ ಮನೆಯವರಿಂದ ಗಂಡಿನ ಕಡೆಯವರು ಅನಗತ್ಯವಾಗಿ ಹಣ ವೆಚ್ಚ ಮಾಡಿಸುತ್ತಾರೆ. ನನಗೆ ಅದು ಬೇಕಿಲ್ಲ. ನನ್ನ ಅಪ್ಪ ಅಮ್ಮ ನನಗೆ ವಿದ್ಯೆ ಕೊಡಿಸಿದ್ದಾರೆ. ಅಷ್ಟೇ ಸಾಕು" ಎಂದಳು. ಲಂಕೇಶರು ಏನೂ ಹೇಳದೆ ಸುಮ್ಮನೆ ಸಿಗರೇಟು ಸೇದುತ್ತ ನಿಂತಿದ್ದರು.

ಕೊನೆಗೆ ಗೌರಿಗೆ ಹಟ ಮಾಡಬೇಡ ಎಂದು ಹೇಳಿದ ನಾನು "ನಮ್ಮ ಮನೆಯಲ್ಲೇ ಸರಳವಾದ ಮದುವೆ ಕಾರ್ಯಕ್ರಮ ಇಟ್ಟುಕೊಳ್ಳೋಣ. ಎರಡೂ ಕಡೆಯವರಿಂದ ಇಪ್ಪತ್ತು ಇಪ್ಪತ್ತೈದು ಜನರನ್ನು ಕರೆಯೋಣ" ಅಂದೆ. ಅದೂ ಲಂಕೇಶರು ಪ್ರತಿಪಾದಿಸುತ್ತಿದ್ದ ಸರಳ ಮದುವೆಯಂತಿದ್ದರಿಂದ ಅವರು ಒಪ್ಪಿದರು. ಅವಳ ಅಪ್ಪ ಒಪ್ಪಿದ ಮೇಲೆ ವಿಧಿ ಇಲ್ಲದೆ ಗೌರಿ ಸುಮ್ಮನಾದಳು.

ಇದಾದ ಐದಾರು ದಿನಗಳ ನಂತರ ಒಂದು ಭಾನುವಾರ ನಮ್ಮ ಮನೆಯಲ್ಲೇ ಒಂದು ಚಿಕ್ಕ ಕಾರ್ಯಕ್ರಮವನ್ನು ಇಟ್ಟುಕೊಂಡೆವು. ತರಾತುರಿಯಲ್ಲಿ ನಾನು ಎಲ್ಲ ವ್ಯವಸ್ಥೆಯನ್ನು ಮಾಡಿ ಮುಗಿಸಿದೆ. ಅಪ್ಪಯ್ಯ, ಶಿವು, ವಿಮಲಾ ಶಿವಮೊಗ್ಗೆಯಿಂದ ಬಂದರು. ಲಂಕೇಶರ ಅಣ್ಣ ಶಿವರುದ್ರಪ್ಪ ಮತ್ತು ಅವರ ಮಕ್ಕಳು ಬಂದರು. ಚಿದು ಮನೆಕಡೆಯಿಂದ ಸುಮಾರು ಐವತ್ತು ಜನ ಬಂದರು. ಆದರೆ ಈ ಕಾರ್ಯಕ್ರಮಕ್ಕೆ ಗೌರಿಯಾಗಲಿ, ಚಿದು ಆಗಲಿ ತಮ್ಮ ಯಾವ ಸ್ನೇಹಿತರನ್ನೂ ಕರೆಯದೆ ಇಂತಹ ಸಂಪ್ರದಾಯ ಮದುವೆಯ ವಿರುದ್ಧ ತಮ್ಮ ಬಂಡಾಯ ವನ್ನು ಮುಂದುವರೆಸಿದರು. ನನ್ನ ತಮ್ಮ ಶಿವು ಗೌರಿಯನ್ನು ಧಾರೆ ಎರೆದು ಕೊಟ್ಟ.

ನಮ್ಮ ಮನೆಯ ಡೈನಿಂಗ್ ರೂಮಿನಲ್ಲಿ ಮದುವೆಯ ಶಾಸ್ತ್ರಗಳು ನಡೆಯುತ್ತಿದ್ದರೆ ಲಂಕೇಶರು ಎಂದಿನಂತೆ ಎಲ್ಲವನ್ನೂ ತಮ್ಮ ಸ್ಟಡಿ ರೂಮಿನಲ್ಲಿ ಕೂತು ನೋಡುತ್ತಿದ್ದರು. ಕೊನೆಗೆ ಗಂಡು ಹೆಣ್ಣಿನ ಮೇಲೆ ಅಕ್ಷತೆ ಹಾಕಿ ಆಶೀರ್ವಾದ ಮಾಡಿ ಬನ್ನಿ" ಎಂದು ಯಾರೋ ಲಂಕೇಶರನ್ನು ಕರೆದಾಗ ಅವರು "ಅದೆಲ್ಲ ಬೇಡ. ನನ್ನ ಆಶೀರ್ವಾದ ಸದಾ ನನ್ನ ಮಗಳಿಗೆ ಇದ್ದೇ ಇರುತ್ತದೆ" ಎಂದರು. ಆದರೆ ಇತರರೂ ಒತ್ತಾಯ ಮಾಡಿದಾಗ ಲಂಕೇಶರು ಕೆಳಗೆ ಬಂದು ಮಗಳು ಮತ್ತು ಅಳಿಯನ ಮೇಲೆ ಅಕ್ಷತೆ ಹಾಕಿ ಇಬ್ಬರನ್ನೂ ಹಾರೈಸಿದರು.

ಮದುವೆಯ ಕಾರ್ಯಕ್ರಮ ಮುಗಿದನಂತರ ಲಂಕೇಶರು ತಮ್ಮ ಆಫೀಸಿಗೆ ಹೋದರು. ಆಗತಾನೇ ಅವರು ಪ್ರತಿ ಭಾನುವಾರ ಮಧ್ಯಾಹ್ನ ತಮ್ಮ ಹಲವು ಸ್ನೇಹಿತರೊಂದಿಗೆ ಆಫೀಸಿನಲ್ಲಿ ಇಸ್ಪೀಟು ಆಡುವುದನ್ನು ಪ್ರಾರಂಭಿಸಿದ್ದರು. ಹಲವೊಮ್ಮೆ ಗೌರಿ ಮತ್ತು ಚಿದು ಕೂಡ ಸೇರಿಕೊಳ್ಳುತ್ತಿದ್ದರು. ಅವತ್ತು ಕೂಡ ಚಿದು ಮತ್ತು ಗೌರಿ ಎಲ್ಲರೊಂದಿಗೆ ಊಟ ಮುಗಿಸಿ ಲಂಕೇಶರ ಆಫೀಸಿಗೆ ಹೋದರು. ಅಷ್ಟು ಹೊತ್ತಿಗೆ ಗೌರಿಗೂ ಲಂಕೇಶರು ಒಂದು ಮೋಟಾರ್ ಬೈಕ್ ಕೊಡಿಸಿದ್ದರು. ಅವತ್ತು ಗೌರಿ ಚಿದು ಜೊತೆ ಹೋಗಿದ್ದರಿಂದ ಆಕೆಯ ಬೈಕ್ ಮನೆಯಲ್ಲೇ ಇತ್ತು. ಆಗ ಅಜಿತು ಮತ್ತು ಶಾಂತಾಳ ಮಗ ವಿವೇಕ್ ಇಬ್ಬರೂ ಗೌರಿಯ ಮೋಟರ್ ಸೈಕಲ್‌ಅನ್ನು ಹತ್ತಿ ಹತ್ತಿರದಲ್ಲಿದ್ದ ಗೆಳೆಯರ ಮನೆಗೆ ಹೋಗುತ್ತೇವೆಂದು ಹೇಳಿ ಹೊರಟರು. ಆಗ ಅಜಿತುಗೆ ಇನ್ನೂ ಹದಿನಾರು ವ[...] ವಯಸ್ಸು. ನಾನು ತೊಟ್ಟಿದ್ದ ರೇಷ್ಮೆ ಸೀರೆ ಬದಲಾಯ[...] ಒಡವೆಗಳನ್ನು ಕಳಚಿಟ್ಟು ನನ್ನ ರೂಮಿನಿಂದ ಹೊರಬಂ[...] ಆಗ ಒಂದು ಫೋನ್ ಕರೆ ಬಂತು.

ಫೋನ್ ಮಾಡಿದ್ದವರು "ನಿಮ್ಮ ಮಗನಿಗೆ ಸಿ[...] ಸರ್ಕಲ್ ಹತ್ತಿರ ಆಕ್ಸಿಡೆಂಟ್ ಆಗಿದೆ, ಬೇಗ ಬನ್ನಿ" ಎಂದ[...] ನಾನು ತಕ್ಷಣವೇ ಹೊರಟೆ.

ಏನಾಗಿತ್ತೆಂದರೆ ಬೈಕ್ ಓಡಿಸುತ್ತಿದ್ದ ಅಜಿತು ಸರ್ಕ[...] ಹತ್ತಿರ ಲಾರಿ ಒಂದನ್ನು ಎಡಗಡೆಯಿಂದ ಓವರ್ ಟೆ[...] ಮಾಡಲು ಹೋಗಿ, ಅದೇಕ್ಷಣ ಲಾರಿ ಎಡಕ್ಕೆ ತಿರುಗಿದ್ದರಿ[...] ಅಜಿತು ಮತ್ತು ವಿವೇಕ್ ಲಾರಿ ಅಡಿ ಹೋಗಿ ಬಿದ್ದಿದ್ದ[...] ಅಜಿತುವಿನ ತೊಡೆಯ ಮೂಳೆ ಮುರಿದಿ[...] ವಿವೇಕ್‌ಗೆ ಚಿಕ್ಕಪುಟ್ಟ ಗಾಯಗಳಾಗಿ[...] ಶಾಕ್‌ನಿಂದ ಮಾತು ಹೊರಡದಂತಾಗಿ[...] ಬೈಕು ಜಜ್ಜಿ ಹೋಗಿತ್ತು.

ಹತ್ತಿರದ ಫೋನ್ ಮೂಲಕ ಲಂಕೇಶ[...] ಆಕ್ಸಿಡೆಂಟ್ ವಿಚಾರ ತಿಳಿಸಿದೆ. ಅವ[...] ಕೂಡಲೇ "ಅವನನ್ನು ಸಂಜಯ್ ಗಾ[...] ಆಸ್ಪತ್ರೆಗೆ ಕರೆದುಕೊಂಡು ಬಾ" ಎಂದ[...] ನಾನು ಮತ್ತು ಶಿವು ಅಜಿತುನನ್ನು ಆಸ್ಪ[...] ಕರೆದುಕೊಂಡು ಬರುವ ಹೊತ್ತಿಗೆ ಲಂಕೇಶ್, ಗೌರಿ, ಚಿ[...] ಲಂಕೇಶರ ಹಲವು ಸ್ನೇಹಿತರು ಎಲ್ಲರೂ ಆಸ್ಪತ್ರೆಗೆ ಬಂದಿದ್ದ[...]

ಗೌರಿಯ ಮದುವೆಗೆ ಅಂತ ಅಜಿತು ಆಗತಾನೆ ಫ್ಯಾ[...] ಆಗಿದ್ದ ಸ್ಟೋನ್ ವಾಶ್ ಜೀನ್ಸ್ ಕೊಡಿಸಿಕೊಂಡಿದ್ದ. ಆಕ್ಸಿಡೆ[...] ಆದಾಗ ಅದೇ ಪ್ಯಾಂಟ್ ತೊಟ್ಟಿದ್ದ. ತೊಡೆಯ ಮ[...] ಮುರಿದಿದ್ದ ಕಡೆ ಅವನ ಕಾಲು ಬಾತುಕೊಂಡಿತ್ತು. [...] ನೋವಿನಿಂದ ಚೀರುತ್ತಿದ್ದ. ಆಸ್ಪತ್ರೆಯಲ್ಲಿ ನರ್ಸ್‌ಗಳು ಅ[...] ಪ್ಯಾಂಟನ್ನು ಕತ್ತರಿಸಿಹಾಕಿ ಆಪರೇಶನ್‌ಗೆ ತಯಾರಿ ನಡೆಸಿದ[...] ಎಕ್ಸ್‌ರೇ ತೆಗೆದನಂತರ ವೈದ್ಯರು ನಾವಿದ್ದಲ್ಲಿಗೆ ಬಂ[...] ಮುರಿದಿದ್ದ ತೊಡೆಯ ಮೂಳೆಗೆ ಕಬ್ಬಿಣದ ರಾಡ್ ಹ[...] ಜೋಡಿಸಬೇಕಿದೆ ಎಂದರು.

ನಮ್ಮನ್ನೆಲ್ಲಾ ಹೊರಗೆ ಕಳುಹಿಸಿದ್ದರಿಂದ ಅಜ[...] ಒಳಗಿನಿಂದಲೇ "ಅಮ್ಮಾ, ಅಮ್ಮಾ" ಅಂತ ಕೂಗುತ್ತಿದ್ದ. [...] ನನ್ನ ಮಗನ ನೋವನ್ನು ನಾನೇ ನನ್ನದಾಗಿಸಿಕೊಳ್ಳುವಂತಿ[...] ಎನ್ನಿಸುತ್ತಿತ್ತು. ಅಂತಹ ಕ್ಷಣಗಳಲ್ಲಿ ಎಲ್ಲಾ ತಾಯಂದಿ[...] ಹಾಗೇ ಅನ್ನಿಸುತ್ತೆ ಎನಿಸುತ್ತದೆ.

ಆದರೂ, ಆ ನೋವಿನಲ್ಲೂ, ಸದ್ಯ ವಿವೇಕ್‌ಗೆ ಏ[...] ಆಗಲಿಲ್ಲ, ಶಾಂತಾಳಿಗಿರುವ ಮಗ ಅವನೊಬ್ಬನೆ ಎ[...] ಸಮಾಧಾನವಂತೂ ನನಗಿತ್ತು.

(ಈ ಪ್ರಕರಣವನ್ನು ಕುರಿತು ಲಂಕೇಶರು ಟ[...] ಟಿಪ್ಪಣಿಯಲ್ಲಿ ಬರೆದ 'ರಾಮು ಎಂಬ ಹುಡುಗ' ಲೇಖನ[...] ಬಹಳಷ್ಟು ಓದುಗರು ಇನ್ನೂ ನೆನಪಿಟ್ಟುಕೊಂಡಿದ್ದಾರೆ.[...]

ಆಪರೇಶನ್ ಆದನಂತರ ಮೂಳೆ ಸರಿಯಾಗಿ ಕ[...] ಕೊಳ್ಳಬೇಕೆಂದರೆ ಅಜಿತು ಒಂದು ತಿಂಗಳ ಕಾಲ ಹಾ[...] ಯಲ್ಲೇ ಮಲಗಿರಬೇಕು ಎಂದು ವೈದ್ಯರು ಹೇಳಿದ[...] ಅವನಿಗೆ ಪ್ರತಿ ದಿನ 8-9 ಇಂಜೆಕ್ಷನ್‌ಗಳನ್ನು ಕೊಡುತ್ತಿ[...] ಆಟವಾಡಿಕೊಂಡಿದ್ದ, ಲವಲವಿಕೆಯಿಂದಿದ್ದ ಆತ ಆಸ್ಪತ್ರೆ[...] ಹಾಸಿಗೆಯಲ್ಲಿ ಬಂಧಿ ಆಗಿದ್ದನ್ನು ನನ್ನಿಂದ ನೋಡಲಾಗುತ್ತಿರ[...]

ನಾನು ಕೂಡ ನನ್ನ ಮಗನೊಂದಿಗೆ ಆಸ್ಪತ್ರೆಯಲ್ಲಿ ಬ[...] ಆದೆ. ಪ್ರತಿದಿನ ಲಂಕೇಶರು ಬೆಳಗ್ಗೆಯೇ ಮನೆಯಿಂದ ನ[...] ಕಾಫಿ ಮತ್ತು ನಮ್ಮಿಬ್ಬರಿಗೆ ತಿಂಡಿ ತರುತ್ತಿದ್ದರು. ಮತ್ತೆ ಮಧ್ಯ[...] ಅಥವಾ ಸಂಜೆ ಬಂದು ಮಗನನ್ನು ನೋಡಿಕೊಂ[...] ಹೋಗುತ್ತಿದ್ದರು. ಗೌರಿ ಮತ್ತು ಬೇಬಿ ಕೂಡ ಆಸ್ಪತ್ರೆಗೆ ಬ[...] ತಮ್ಮ ಚಿಕ್ಕ ಸಹೋದರನ ಸೇವೆ ಮಾಡುತ್ತಿದ್ದರು.

ಒಂದು ತಿಂಗಳ ನಂತರ ಅಜಿತುನನ್ನು ಆಸ್ಪತ್ರೆಯಿ[...] ಮನೆಗೆ ವಾಪಸ್ ಕರೆದುಕೊಂಡು ಹೋದೆವು.

ಆಕ್ಸಿಡೆಂಟ್ ಆದಾಗ ಅಜಿತು ಪಿಯುಸಿ ಮೊದ[...] ವರ್ಷ ಓದುತ್ತಿದ್ದ. ಆದರೆ ಆ ವರ್ಷ ಅವನ ಓದು ಹ[...] ಯಿತು. ಪ್ರತಿ ದಿನ ಅವನಿಗೆ ಫಿಸಿಯೋಥೆರಪಿ ಮಾ[...] ಒಬ್ಬರು ಮನೆಗೆ ಬರುತ್ತಿದ್ದರು. ಅವನ ಕ್ರಿಕೆಟ್ ಆಟ ನಿ[...] ಹೋಯಿತು. ಅವನ ಅಪ್ಪನಿಗಂತೂ ಮಗನನ್ನು ಸಂತೋ[...] ಪಡಿಸುವುದೇ ಮುಖ್ಯವಾಯಿತು. ಅವನು ಏನು ಕೇಳಿದ[...] ಲಂಕೇಶರು ಇಲ್ಲ ಎನ್ನುತ್ತಿರಲಿಲ್ಲ. ಮನೆಯಲ್ಲಿ ಟೇಬಲ್ ಟೆ[...] ಹಾಕಿಸಿದರು. "ಅವನು ಏನು ಮಾಡದಿದ್ದರೂ ನನ್ನ ಮಗ[...] ದ್ದರೆ ಸಾಕು" ಎನ್ನುತ್ತಿದ್ದರು.


(ಮುಂದುವರೆಯು[...]

ವೈ ದಿಸ್ ಎಡೂರಪ್ಪ ಸೈಲೆಂಟ್ ಸೈಲೆಂಟ್

"ಈ ತರ ಸಳಿ ವಡಿಬೇಕಾದ್ರೆ ಸರಾಫ ಸರಿ" ಎಂದ ಸೀರ.

"ಇದ್ಯಾಕ್ ಸೀರಮಾವ ಸರಾಪ ನ್ನನಿಸಿಗತ್ತನಲ್ಲಾ?" ...ಳು ಜುಮ್ಮಿ.

"ಆಗ್ಲೇ ಮೂರುನಾಕೊರ್ಸಾಯ್ತೇನೊ ಕುಡುದು, ಅದ್ಕೆ ...ಗತ್ತನೆ. ಅಂಗೇನಾರ ಯಲ್ಲ ಕುಡಿಬೇಕು ಅನ್ನದಾದ್ರೆ ಆ



...ಮುಕಾಚಾರಿ ಕರದು ಸನ್ಮಾನ ಮಾಡಿ, ಜಯಲಕ್ಷ್ಮಿಯಿಂದ ...ವಿನಾರ ಹಾಕ್ಲೋಬೇಕಾದರೆ ತಿರಗ ಜಾರಿ ಮಾಡ್ತನೆ" ...ದ ಉಗ್ರಿ.

"ಅವುನೇನೋ ಅಂತೋನೆಯ. ಮದ್ದೆ ಹೋಲಿ ...ಂದೇದು. ಅಂತವ್ಯಲ್ಲ ಎಮ್ಮೆಲ್ಲೆ ಆಯ್ತುವಲ್ಲ ಹೇಳು" ಎಂದ ...ಣಮಾವ.

"ಹೆಚ್ಚು ಕಮ್ಮಿ ಈಗಿರೋವ್ಯಲ್ಲ ಅಂತವೆ ಕಣಮಾವ. ...ಜಾತಿ ಮೆಂಬ್ರು ಬೇಕು ಅವುಬ್ಯಾಡ ಅಂಗವೆ."

"ಕಾಂಗ್ರೆಸಲ್ಲೇ ಪರವಾಗಿಲ್ಲ ಕಂಡ್ಯ, ವಳ್ಳೆ ಯಮ್ಮೆಲ್ಲೆ ಅವೆ."

"ಆಲ್ಲೂ ಹಿಂದೆ ಭಾಳ ಜನಿದ್ರು. ಅಂಥೋರ್ಯಲ್ಲ ...ೋನಿಯಾಗಾಂಧಿ ಕಾಲ್ದದಲ್ಲಿ ಕಡಿಮಾದ್ರು."

"ಸೋನಿಯಾಗಾಂಧಿಗೇನೋ ಉಸಾರಿಲವಂತಲ್ಲಾ" ...ದಳು ಜುಮ್ಮಿ.

"ಯಾರೆ ಹೇಳಿದೋರು ನಿನಿಗೆ. ಚನಾಗೇ ಅವುಳೆ."

"ಅವುಳಿಗೆ ಉಸಾರಿಲ್ದೆಯಿರದ್ಕೆ ಯಲಕ್ಷನ್ ಮಾಡಕ್ಕೆ ...ವುಳ ಮಗಳ್ನ ಕಳಿಸಿದ್ದಳಂತೆ."

"ಈಗ್ಯಾವ್ಯಲಕ್ಷನ್ನ?"

"ಆ ಉತ್ತರ ಪ್ರದೇಶದ ಯಲಕ್ಷನ್ ಬಂದದೆ ಕಣಮಾವ. ...ಮಾಯಾವತಿಗೆ ಆನೆ ಗುರುತು ಕೊಟ್ಟವುರೆ. ಅವುಳೇನು ...ಡಿದ್ಲು ಅಂದ್ರೆ ಎಲ್ಲಿ ಅಂದ್ರಲ್ಲಿ ಆನೆ ಗುರುತ ಕೆತ್ತಿಸಿ ...ಡಗಿದ್ದಳಂತೆ. ಈ ಚುನಾವಣೆ ನ್ಯಡಸವು ಆನೆ ಹುಡುಕಿ ...ಡುಕಿ ಅವುಕ್ಯಲ್ಲಾ ಬಟ್ಟೆ ಮುಚ್ಚತಾ ಕುಂತವೆ."

"ಅದ್ಯಾಕಂಗೆ ಮಾಡ್ತಯಿದ್ದವು?"

"ಮಾಯಾವತಿ ಯಲಕ್ಷನ್ ಗುರುತು ಆನೆ. ಅದು ಎಲ್ಲೂ ...ಬಾರ್ದು ಅಂತ ಮುಚ್ಚತಾ ಕುಂತವೆ."

"ಅಲ್ಲಾ ಕಂಡ್ಯ ಅಂಗೆ ಮುಚ್ಚಿದ್ರೆ ಅದರ್ವಳಗಡೆ ಆನೆ ವಿಗ್ರಹ ...ತ್ತ ಅನ್ನದ ತೆಪ್ಪಸಕ್ಕಾದತೆ?"

"ಆಗದಿಲ್ಲ, ಇನ್ನ ಜಾಸ್ತಿನೆ ಪ್ರಚಾರಾಯ್ತದೆ."

"ಅದೆ ನಾನೇಳಿದ್ದು, ಆ ಮುಸಕಾಕಿರದೇನು ಅಂತರೆ, ಆನೆ ...ತರೆ, ಆಗಿನ್ನು ಇದಾಗದಿಲ್ಲವೆ?"

"ಊ ಕಣಮಾವ. ಈ ಚುನಾವಣೆ ನ್ಯಡಸವುಕೆ ತಲೆನೆ ...ಲ್ಲ. ಆಗ್ ಇಂದ್ರಾಗಾಂಧಿ ಹಸಕರ ಬುಟ್ಟು ಹಸ್ತ ಕೊಡಿ ...ದ್ದು, ಆ ಮುಂಡೆ ಮಕ್ಕಳು ಹಿಂದು ಮುಂದು ನೋಡದೆ ...ಟ್ಟೆ ಬುಡದೆ."

"ಕೊಡಬಾರದಿತ್ತೇನ್ಲ?" ಎಂದಳು ಜುಮ್ಮಿ.

"ಅಲ್ಲ ಕಣೆ, ಹಸ್ತ ಮನುಷ್ಯನ ದೇಹದ ಮುಖ್ಯ ವಾದ ಅಂಗ. ಅದೂ ಬಲಗ್ಯೆಲೇ ಅಲವೆ ನೀನು ಯಲ್ಲಾನು ಮಾಡದು. ಅಂತ ಕೈ ಯಲಕ್ಷನ್ ಗುರುತಿಗೆ ಕೊಟ್ಟುಬುಡದೆ. ಅಮ್ಯಾಲೇನಾಯ್ತು ಗೊತ್ತೆ? ಓಟು ನ್ಯಡೀವಾಗ ಚುನಾವಣೆ ಬೂತಿನಿಂದ ಇಷ್ಟು ದೂರದವರಿಗೂ ಚುನಾವಣೆ ಗುರುತ ಅಂಟುಸಂಗಿಲ್ಲ ಅಂತ ಕಾನೂನು ಮಾಡಿದ್ರು. ಇದಕಿಂತ್ಲೂ ತಮಾಸಿಬೇಕೆ. ಅಲ್ಲಿಗೆ ಯಲಕ್ಷನ್ ಮಾಡೋರ್ಯಲ್ಲ ಬಲಗ್ಯೆ ಕತ್ರಿಸಿಗಂಡು ಕುಂತಗಳಿ ಆಂದಂಗಾಯ್ತು."

"ನಿಜ ಕಂಡ್ಯ. ಯಲಕ್ಷನ್ ಗುರುತು ಕೊಡುವಾಗ ಅದನ್ನಲ್ಲ ಯೋಚನೆ ಮಾಡಬೇಕು. ಕೊಡಬೇಕು. ಆನೆ ಕೊಡದ್ಯಾಕೆ? ಅದನ್ನಲ್ಲ ಮುಚ್ಚದ್ಯಾಕೆ? ದಡ್ಡ ಬಡ್ಡಿ ಮಗನವು ಕಂಡ್ಯ" ಎಂದ ಕಾಳಮಾವ.

"ಪ್ರಪಂಚದಲ್ಲೇ ದಡ್ಡದೇಶ ದೊಡಪ್ಪ ನಮ್ಮದು" ಎನ್ನುತ್ತಾ ವಾಟಿಸ್ಸೆ ಬಂದ.

"ಅದರಲ್ಯಲ್ಲ ನೀನೊಬ್ಬ ಬುದ್ಧಿವಂತ ನೋಡು."

"ಇಲ್ಲಿರೋ ಯಲ್ಲಾರಿಗಿಂತ್ಲೂ ನಾನು ಬುದ್ಧಿವಂತ ದ್ವಡಪ್ಪ, ಯಾಕೆ ಅಂದ್ರೆ ನನಿಗೆ ಇಂಗ್ಲಿಸ್ ಬತ್ತದೆ ಅದ್ಕೆ."

"ನಿನ್ನೀಗ್ಲೀಸು ನನಿಗ್ಗೊತ್ತಿಲವೇನೋ. ಕನ್ನಡ ಮಾತಾಡುವಾಗ ಮದ್ಯ ಒಂದು ಇಂಗ್ಲಿಸ್ ಪದ ಹಾಕ್ತಿ ಅದ್ಕೆ ನನಿಗೆ ಇಂಗ್ಲಿಸ್ ಬತ್ತದೆ ಅಂತಿ."

"ಮಿಸ್ಟರ್ ಉಗ್ರಿ, ನಾನು ನಿಮ್ಮ ಜೊತೆ ಇರದ್ರಿಂದ ಅನಿವಾರ್ಯವಾಗಿ ಕನ್ನಡದಲ್ಲೇ ಮಾತಾಡ್ತಿನಿ. ಅದೇ ಪೊಲಿಟೀಸಿಯನ್ಸ್ ಸಿಕ್ಕಿದ್ರೆ ಇಂಗ್ಲಿಸಲ್ಲೇ ಮಾತಾಡದು. ಅಷ್ಟೇ ಅಲ್ಲ, ಇತ್ತೀಚೆಗೆ ಎಡೂರಪ್ಪನ ಮ್ಯಾಲೆ ಇಂಗ್ಲಿಸ್‌ನಲ್ಲಿ ಪದ ಬರದಿದ್ದಿನಿ ಗೊತ್ತಾ?"

"ಯಾಕೆ, ಕನ್ನಡದಲ್ಲೇ ಲಾವಣಿ ಬರಿಬವುದಿತ್ತು."

"ಲಾವಣಿನೂ ಬರಿಬವುದಿತ್ತು. ಆದ್ರೆ ಎಡೂರಪ್ಪ ಲಾವಣಿಗೆ ಲಗತ್ತಾದ ಮನುಸಲ್ಲ."

"ಅದೇನು ಬರೆದಿದ್ದಿ ಹೇಳಪ್ಪ."

"ಸೈಲೆಂಟಾಗಿ ಕೇಳಿಸಿಗಳಿ, ಮಧ್ಯದಲ್ಲಿ ಮಾತಾಡಬ್ಯಾಡಿ...

ಕೊಲವರಿ ಡಿ ಕೊಲವರಿ ಡಿ
ವೈ ದಿಸ್ ಎಡೂರಪ್ಪ ಸೈಲೆಂಟ್ ಸೈಲೆಂಟ್
ಡಿಸ್ಟನ್ಸಿಲ ಶೋಭ ಶೋಭ
ಶೋಭ ಕಲರು ಬ್ರೈಟು ಬ್ರೈಟು
ಬ್ಯಾಕ್ ಗ್ರೌಂಡು ನೈಟು ನೈಟು
ಯಡ್ಡಿ ಕಲರು ರೆಡ್ಡು ರೆಡ್ಡು
ಚೆಡ್ಡಿ ಕಲರು ಕ್ರೀಮು ಕ್ರೀಮು
ಯಡ್ಡಿ ಫ್ಯೂಚರ್ ಡಾರ್ಕು ಡಾರ್ಕು
ಹ್ಯಾಂಡ್ ಗ್ಲಾಸಲ್ಲಿ ಆರ್ಸಿ ವಿಸ್ಕಿ
ಮೈಂಡ್ ಫುಲ್ಲು ಸಿಎಂ ಕುರ್ಚಿ
ಡೋಂಟು ಪಾಲು ರಿವರ್ಸು ಗೇರು
ಯಡ್ಡಿ ಫ್ಯೂಚರ್ ಟಿಯರೊ ಟಿಯರ್

ಎಂದು ಹೇಳಿದ ವಾಟಿಸ್ಸೆ ಕೋಳಿ ಹುಂಜನಂತೆ ಕತ್ತು ಕೊಂಕಿಸಿ,

"ಯಂಗದೋ ಉಗ್ರಿ ಪದ?" ಎಂದ.

"ನಿಜವಾಗ್ಲು ನೀನು ಕನ್ನಡ ಫಿಲಂ ಮ್ಯೂಜಿಕ್ ಡೈರೆಕ್ಟರಾಗಬೇಕಾಗಿತ್ತು ಕಣೊ."



"ಯಾಕೊ ಅಂಗಂತೀ?"

"ಎಷ್ಟು ಚೆನ್ನಾಗಿ ಕದ್ದಿದ್ದಿಯಾ ನೀನು. ಈ ತರ ಕಳ್ಳತನದೋರಿಗೆ ವಳ್ಳೆ ಫ್ಯೂಚರ್ರದೆ ಕಣೊ."

"ಅದೇನ್ಲ ಕಳ್ಳತನ ಗಿಳ್ಳತನ ಅಂತಿರಿ?" ಎಂದಳು ಜುಮ್ಮಿ.

"ನೋಡೆ ಜುಮ್ಮಿ, ಆ ರಜನಿಕಾಂತನಳಿಯ ಒಂದು ಪದ ಹಾಡ್ಯವುನೆ. ಈ ವಾಟಿಸ್ಸೆ ಅಂತ ಗತಿಗ್ಯಟ್ಟ ನನ್ನ ಮಗನವು ಅಹಹಾ ಯಂಥಾ ಹಾಡಯ್ಯ, ನಮ್ಮ ಜೀವನದಲ್ಲೇ ಇಂತ ಪದ ಕೇಳಿಲ್ಲ ಅನ್ನಕಂಡು ತಿರುಗ್ತ ಅವೆ. ಅದ ಎಲ್ಲಿ ಕೇಳಿಸಿಗಂಡನೊ ಏನೋ ಈ ವಾಟಿಸ್ಸೆ ಎಡೂರಪ್ಪನ ಮ್ಯಾಲೆ ಬರದವುನೆ" ಎಂದ ಉಗ್ರಿ.

"ಅಂಗರವುನೇಳಿದ್ದು ಎಡೂರಪ್ಪನ ಮ್ಯಾಲೆ ಅನ್ನು."

"ಊ ಕಣೆ."

"ಏನಂತ ಹೇಳಿದಾ?"

"ಅದ ನಾನೇಳ್ತಿನಿ ಕಣಕ್ಕ, ಯಾಕೆ ಅಂದ್ರೆ ಅದ ಬರದಿದ್ದು ನಾನೆ ಅಲವಾ."

"ಬರದಿರದಲ್ಲ ಕಣೊ ಕದ್ದಿದ್ದು ಅನ್ನು."

"ಮಿಸ್ಟರ್ ಉಗ್ರಿ, ಕಳ್ಳತನ ಬ್ಯಾರೆ, ಸ್ಫೂರ್ತಿ ಬ್ಯಾರೆ. ನಾನು ಡ್ರಿಂಕ್ಸ್ ಮಾಡಿದಾಗ ಬಂದು ನನ್ನ ಎದುರಿಗೆ ಪೆನ್ನ ಪೇಪರ್ ತಗಂಡು ಕೂತ್ಗ. ನಾನೇನು ಅಂತ ಆಗ ಗೊತ್ತಾಯ್ತದೆ."

"ಈಗದೇನೇಳ್ಳ."

"ಇಷ್ಟೆ ಕಣಕ್ಕ, ಸಂಕ್ರಾಂತಿಗೆ ಬದಲಾಯ್ತಿನಿ ಅಂತ ನಮ್ಮ ಎಡೂರಪ್ಪ ಠೇಂಕಾರ ಮಾಡಿದ್ದ. ನಾನು ಏನೋ ಕ್ರಾಂತಿ ಮಾಡ್ತನೆ ಅಂತ ಕಾಯ್ತಿದ್ದೆ. ಆದ್ರೆ ಆಸಾಮಿ ಸೈಲೆಂಟಾಗಿ ಬುಡದಾ."

"ಅದ್ಯಾಕೆ ಅಂಗಾದ?"

"ಯಾಕೆ ಅಂದ್ರೆ ಆರೆಸ್ಸೆಸ್‌ನೋರು ಹೆದ್ರಿಸಿದರಂತೆ. ಡಿನೋಟಿಫಿಕೇಶನ್ ವಿಚಾರಣೆ ಇದೆ. ಹೆಂಡತಿ ಸಾವಿನ ಕೇಸಿದೆ. ಆಮ್ಯಾಲೆ ಲೋಕಾಯುಕ್ತರ ವರದಿ ಇದೆ. ನೀನೇನಾರ ಬದಲಾದ್ರೆ ನಾವೇ ಅವುಕ್ಯಲ್ಲ ಜೀವ ಕೊಡ್ತಿವಿ. ನೀನು ಸೈಲೆಂಟಾಗಿದ್ರೆ ನಾವು ಸೈಲೆಂಟಾಗಿರ್ತಿವಿ ಅಂದರಂತೆ. ಅದ್ಕೇ ವೈ ದಿಸ್ ಎಡೂರಪ್ಪ ಸೈಲೆಂಟ್ ಸೈಲೆಂಟ್ ಅಂತ ನಾನು ಹೇಳಿದ್ದು."

"ಓ ಅಂಗರೆ ಸುಮ್ಮನಾಗಿ ಬುಟ್ಟಾ ಅನ್ನು" ಎಂದ ಸೀರ.

"ಸುಮ್ಮನಾಯ್ತನೆ ಅಂದ್ರೆ ಯಾತಕೋ ತಯಾರಾಯ್ತನೆ ಅಂತ ಚಿಗಪ್ಪ. ನೋಡಾಗ್ಲೆ ಗುಲಬರ್ಗದ ಕಡೆಯಿಂದ ಭಾಷಣ ಮಾಡಿಕಂಡು ವಂಟವುನೆ."

"ಅದೇನು ಭಾಷಣ ಮಾಡ್ತನ್ಲಾ?" ಎಂದ ಕಾಳಮಾವ.

"ಅದೇ ದ್ವಡಪ್ಪ ನನಿಗೂ ಆಗಿರೋ ಕನ್‌ಫೀಜನ್ನ. ಇವುನು ವಿರೋಧ ಪಕ್ಷದೋನಾಗಿದ್ರೆ ಸರ್ಕಾರ ಟೀಕೆ ಮಾಡಬವುದಿತ್ತು. ಆಡಳಿತ ಪಕ್ಷದೋನಾಗಿದ್ರೆ ತನ್ನ ಸಾಧನೆ ಹೇಳಿಕೊಂಡು ತಿರುಗಬವುದಿತ್ತು."

"ಅದೇನೋ ನಿಜ."

"ಈಗ್ಯಂಗಾಗ್ಯದೆ ಅಂದ್ರೆ ಹಾಲಿ ಇರೊ ಸರ್ಕಾರ ಟೀಕೆ ಮಾಡಂಗಿಲ್ಲ. ತನ್ನನ್ನೇ ಹೊಗಳಂಗಿಲ್ಲ. ಹೊಗಳಿದ್ರೆ ಜೈಲಿಗ್ಯಾಕಪ್ಪ ಹೋಗಿದ್ದೆ ಅಂತರೆ. ಅದ್ಕೆ ಇದನ್ನಲ್ಲ ಯೋಚನೆ ಮಾಡಿ ಮಾಡಿ ಯಡ್ಡಿಲೈಫು ಡಾರ್ಕು ಡಾರ್ಕು, ಫ್ಯೂಚರಂತು ಟಿಯರು ಟಿಯರು ಅಂತ ಹೇಳಿದ್ದು" ಎಂದು ವಾಟಿಸ್ಸೆ ಹೊರಟ.


"ಅದೇನೇಳಿದೊ, ನಿನಿಗೇ ಗೊತ್ತಾಗಬೇಕು" ಎಂದ ಕಾಳಮಾವ. ✿

...ಗ್ರಹಿಕೆಯ ಎರಕಗಳನ್ನು ಮೀರಿ...

ಅನೇಕರಿಗೆ ಬದುಕು ಒಂದೇ ರೀತಿ ಇರುವ, ರೈಲು ಹಳಿಯ ಮೇಲೆ ಸಾಗುವ ಸುರಕ್ಷಿತ ಸಂಗತಿಯಾಗಿರುತ್ತದೆ. ಅ.ನ. ಕೃಷ್ಣರಾಯರು ಮೀನಾಕ್ಷಮ್ಮ, ವಿಶಾಲಾಕ್ಷಮ್ಮ ಇಬ್ಬರನ್ನೂ ಒಂದೇ ರೀತಿಯಲ್ಲಿ ರೂಪಿಸಿ ಮತ್ತೆಮತ್ತೆ ಹೊಸ ಕಾದಂಬರಿಗಳಲ್ಲಿ ...ಡುತ್ತಿದ್ದರು. ಸದಾ ಪತಿ ಮತ್ತು ಮಕ್ಕಳ ಯೋಗಕ್ಷೇಮದ ಬಗ್ಗೆ ಚಿಂತಿಸುವ, ಅತಿಥಿಗಳನ್ನು ಉದಾರವಾಗಿ ಸತ್ಕರಿಸುವ, ದೇವರಲ್ಲಿ ಗಾಢ ಶ್ರದ್ಧೆ ಇರುವ, ಜನ್ಮಜನ್ಮಕ್ಕೂ ಇದೇ ಗಂಡ, ಇದೇ ಮಕ್ಕಳು ಇರಬೇಕೆನ್ನುವ ಈ ಮೀನಾಕ್ಷಮ್ಮ (ಅಥವಾ ವಿಶಾಲಾಕ್ಷಮ್ಮ) ಸುಮಾರು ನಾಲ್ಕು ದಶಕಗಳ ಕಾಲ ಏಕಪ್ರಕಾರವಾಗಿ ಜನರ ಮೆಚ್ಚಿಗೆ ಗಳಿಸಿದಳು. ಆಕೆಗೆ ಸಮಾಜಕ್ಕೆ ಒಪ್ಪಿತವಾಗಬಲ್ಲ ಅಭಿರುಚಿ ಬಿಟ್ಟು ಬೇರೆ ಇರಲಿಲ್ಲವೇ, ಮೊದಲ ಪುಟದಲ್ಲಿ ಮೇಕಪ್ ಮತ್ತು ಸದ್ಭಾವನೆಯೊಂದಿಗೆ ಬಂದ ಅವಳು ಕೊನೇ ಪುಟದವರೆಗೆ ಅದೇ ರೀತಿಯಲ್ಲಿ ಇರಬೇಕಾದರೆ ಈಕೆಗೆ ನಿಜಕ್ಕೂ ಜೀವವಿತ್ತೇ... ಹಾಗೆಯೇ ಹುಡುಗಿ ಕಾಲೇಜಿಗೆ ಹೋಗಲಾಗದೆ ಮದುವೆಗಾಗಿ ಕಾಯುತ್ತಿದ್ದವಳು, ಆಮೇಲೆ ಕಾಲೇಜಿಗೆ ಹೋಗಿ ಮದುವೆ ಸ್ವಲ್ಪ ಮುಂದೂಡಿ ಡಿಗ್ರಿ ಮಾಡಿದವಳು, ಆಮೇಲೆ ಸ್ವಲ್ಪ ಬಂಡಾಯಗಾರ್ತಿಯಾಗಿ ಎಲ್ಲರಿಗೆ ಒಪ್ಪಿತವಾಗಿಯೇ ಮಿಂಚಿದವಳು. ನಮಗೆ ಹೇಗೆ ಈ ಲಾಗಾಯ್ತಿನ ಹುಡುಗಿ ಮತ್ತು ಅವಳ 'ಕ್ರಾಂತಿ' ಮತ್ತು ಹೊಸತನ ಪರಿಚಿತವಾಗಿರುತ್ತೆಂದರೆ ನಾವು ಜೀವನ ಹಾಗಿರಲಿಕ್ಕಿಲ್ಲ ಎಂದು ಚಿಂತಿಸುವುದೇ ಇಲ್ಲ. ನಾವು ಎಷ್ಟೇ ರಂಜು ಸ್ವಭಾವದವರಾಗಿದ್ದು, ನಮ್ಮ ಚಂಚಲತೆಯನ್ನು ...ಟಿಯಲ್ಲಿಟ್ಟುಕೊಂಡರೂ ನಮ್ಮ ಸೋಮಾರಿತನದ ವೇಳೆಯಲ್ಲಿ ಕಳ್ಳಿಯೊಬ್ಬಳು ...ಅದಿ ಇಟ್ಟಿರುತ್ತಾಳೆ, ಕಳ್ಳ ಕೃಷ್ಣ ಹುಟ್ಟಿದ್ದೇ ಹಾಗಿರಬಹುದು. ಆತ ದೇವರಾಗಿದ್ದರಿಂದ ಆತ ಕದ್ದು ಬಂದರೂ ಪರವಾಗಿಲ್ಲ, ಅದು ಕೂಡ ಪರಿಚಿತ ಬದುಕಿನ ಎರಕ (**mould**) ...ಗಿರುತ್ತದೆ. ಜೀವನ ಉಕ್ಕಿಸುವ ಹೊಸತನ, ಬೆಚ್ಚಿ ಬೀಳಿಸುವ ವಿಲಕ್ಷಣ ಸಂಗತಿಗಳು ನಮ್ಮನ್ನು ...ತ್ತಿಗೊಳಿಸುವುದೇ ಇಲ್ಲ, ವಿಜ್ಞಾನಿಗಳ ಪ್ರಕಾರ ತುಂಬು ಬಸರಿಗೆ ವಿಟರ ಕನಸು, ಮಿಲನದ ...ನು ಬೀಳುತ್ತದಂತೆ. ಅಂಥ ಸೂತಕದ ಬಗ್ಗೆ ಹೇಳಿದರೆ ಜನ ನಗುತ್ತಾರೆ. ಇರಲಿ, ಈ ನಿಮ್ಮಿಯನ್ನು



ನೀವು ಗಮನಿಸಿದ್ದೀರಾ? ತೀರಾ ಸಾಮಾನ್ಯಳಾಗಿದ್ದರೂ ನಮ್ಮನ್ನು ಚಕಿತಗೊಳಿಸುವ ಹುಡುಗಿ ಈಕೆ; ನಾವು ಬಲ್ಲ ಒಬ್ಬಳು ಹುಡುಗಿ ಎಂದು ತಿಳಿದು ಓದುತ್ತಿದ್ದರೆ ನಮ್ಮನ್ನು ರೋಮಾಂಚನಗೊಳಿಸುವ ಕ್ರಿಯೆ ಇವಳಲ್ಲಿ ಕಂಡುಬರುತ್ತದೆ. ಈ ಬಗ್ಗೆ ನಾನು ಚಿಂತಿಸುತ್ತಾ ಅಂದರೆ ನಮ್ಮ ನಿಮ್ಮಿ ಬಗ್ಗೆ ಯೋಚಿಸುತ್ತಾ ಕೂತಿದ್ದಾಗ ಒಂದು ನೆನಪಾಯಿತು. ಮರ್ಲಾನ್ ಬ್ರಾಂಡೋ ನಟಿಸಿದ 'ಲಾಸ್ಟ್ ಟ್ಯಾಂಗೋ ಇನ್ ಪ್ಯಾರಿಸ್' ಚಿತ್ರದಲ್ಲಿ ಒಬ್ಬಳು ಹುಡುಗಿ ಬೋರಾಗಿ ತನ್ನ ಸಿನಿಮಾ ವೃತ್ತಿ, ಪ್ರಿಯಕರ ಎಲ್ಲದನ್ನೂ ಕ್ಷಣ ಮರೆತು ದಾರಿಹೋಕನಾಗಿ ಸಿಗುವ ಬ್ರಾಂಡೋ ಜೊತೆಗೆ ಪ್ರೇಮಿಸುತ್ತಾ, ಸಂಭೋಗಿಸುತ್ತಾ ಇದ್ದುಬಿಡುತ್ತಾಳೆ. ಬ್ರಾಂಡೋಗೆ ಅವಳ ಹೆಸರು, ಪರಿಚಯ ಇಲ್ಲ; ಇವಳಿಗೆ ಅವನ ಗುರುತಿಲ್ಲ, ಅದೇ ಅಲ್ಲಿಯ ನಿಗೂಢ ಸೌಖ್ಯದ ಗುಟ್ಟು. ಹೀಗಿದ್ದಾಗ ಆ ಹುಡುಗಿ ಒಂದು ದಿನ ಬ್ರಾಂಡೋನನ್ನು ಬಿಟ್ಟು ತನ್ನ ಪ್ರೇಮಿಯ ಹತ್ತಿರ ಹೋಗುತ್ತಾಳೆ. ಆಕೆ ಇದ್ದಕ್ಕಿದ್ದಂತೆ ಕಣ್ಮರೆಯಾದದ್ದು ಅವನನ್ನು ರೇಗಿಸಿರುತ್ತದೆ. "ಎಲ್ಲಿಗೆ ಹೋಗಿದ್ದೆ?" ಎಂದು ಕೇಳುತ್ತಾನೆ.. ಅವಳು ಅಸ್ಪಷ್ಟವಾಗಿ ಗೊಣಗುತ್ತಾಳೆ. ಆತ ಇನ್ನಷ್ಟು ಕೆಂಡವಾಗಿ ಅವಳಿಗೆ ಒಂದು ಏಟು ಕೊಡುತ್ತಾನೆ. ಆಗ... ಆಕೆ ಅವನಿಗೆ ಅದಕ್ಕಿಂತ ಜೋರಾಗಿ ರಪಾರೆಂದು ಹೊಡೆಯುತ್ತಾಳೆ. ಆತ ಏನಾಯಿತು ಎಂದು ನೋಡುವಷ್ಟರಲ್ಲಿ ಆಕೆ ಇನ್ನೊಂದು ಸಲ ರಪ್ ಎಂದು ಕೊಡುತ್ತಾಳೆ.... ಆತ ಆಶ್ಚರ್ಯದಿಂದ ನೋಡುತ್ತಾನೆ, ಸಿಟ್ಟು ಇಳಿದು ಅವನಿಗೆ ವಿಸ್ಮಯವಾಗುತ್ತದೆ. ಇಬ್ಬರೂ ಮತ್ತೆ ಗೆಳೆತನದಲ್ಲಿ ನಡೆಯುತ್ತಾರೆ. ಅದು ಥ್ರಿಲ್ಲಿಂಗ್ ಕ್ಷಣ. ನಿಮ್ಮಿಯ ಜೀವಂತಿಕೆ ತಿಳಿಯಿತೆ? ಆದರೆ ಎಷ್ಟು ಜನ ಹೆಣ್ಣು ಮಕ್ಕಳಿಗೆ ನಮ್ಮನ್ನು ಬೆಚ್ಚಿ ಬೀಳಿಸುವ ಈ ಚೈತನ್ಯವಿದೆ?



ಮೇ 8.1996

ಸ್ಪೇಸ್ ಪ್ರಾಬ್ಲಮ್ಮು ಸಾರ್

ಹಿಂದೆಲ್ಲ ಕಲ್ಯಾಣ ಮಂಟಪಗಳು ಎಂದು ಪ್ರತ್ಯೇಕವಾಗಿ ಇರಲೇ ಇಲ್ಲ. ಮದುವೆಯಂತಹ ಶುಭಕಾರ್ಯಗಳನ್ನು ಮನೆ ಅಂಗಳದಲ್ಲೇ ನೆರವೇರಿಸುತ್ತಿದ್ದರು. ದಿನ ಕಳೆಯಿತು. ಆಚಾರಕ್ಕಿಂತಲೂ ಪ್ರಚಾರ ಮುಖ್ಯ ಅನ್ನಿಸಿತೊ ಅಥವಾ ಮನೆಯಲ್ಲಿ ಸಾಕಷ್ಟು ಅನುಕೂಲ ಇಲ್ಲ ಎನ್ನಿಸತೊಡಗಿತೋ ಗೊತ್ತಿಲ್ಲ, ನಿಧಾನವಾಗಿ ಕಲ್ಯಾಣ ಮಂಟಪಗಳು ಕಾಲಿಟ್ಟವು. ಈಗ ಯಾಕೋ ಏನೋ ಅವೂ ಮಾಯ ಆಗುತ್ತಿವೆ. ಅವುಗಳ ಜಾಗವನ್ನು 'ಸಮುದಾಯ ಭವನ'ಗಳು ಆಕ್ರಮಿಸುತ್ತಿವೆ. ಇಲ್ಲಿ ನಡೆಯುವುದೂ ಅದೇ ಕೆಲಸ. ಆದರೆ ಈ ಹೆಸರಿಟ್ಟರೆ ತೆರಿಗೆ ವಿನಾಯಿತಿ, ಸಾಲ ಸೌಲಭ್ಯ ದಾರಿ ಸುಗಮ ಆಗುತ್ತಂತೆ. ಆಗಲಿ ಪಾಪ. ಅಪ್ಪನೊಂದಿಗೆ ಉಂಡರೇನು, ಅವ್ವನೊಂದಿಗೆ ಉಂಡರೇನು. ಎಲ್ಲ ಒಂದೇಯ. ಒಟ್ಟಿನಲ್ಲಿ 'ಸಮುದಾಯ ಭವನ'ಗಳು ಅನಿವಾರ್ಯ ಅನ್ನುವ ವಾತಾವರಣ ಅಂತೂ ನಿರ್ಮಾಣವಾಗಿದೆ. ಈಗ ಪ್ರಶ್ನೆ ಏನು ಅಂದರೆ ಅವುಗಳಲ್ಲಿ ಶೌಚಾಲಯ ಇರುವುದು ಅನಿವಾರ್ಯವೆ?

ಒಂದು ಜಿಲ್ಲಾ ಪಂಚಾಯತಿಯನ್ನು ಈ ಪ್ರಶ್ನೆ ಕಾಡುತ್ತಿದೆಯಂತೆ.

ಅದು ನಡೆದದ್ದು ಹೀಗೆ. ಗ್ರಾಮೀಣ ಜನತೆಗೂ ಈ ಸೌಲಭ್ಯ ವಿಸ್ತರಿಸಲು ಅದು 'ಸಮುದಾಯ ಭವನ' ನಿರ್ಮಿಸಿತು. ಅದೂ ಅರವತ್ತು ಲಕ್ಷ ರೂಪಾಯಿ ವೆಚ್ಚದಲ್ಲಿ. ಆದರೆ ಆ ಭವನಕ್ಕೆ ಶೌಚಾಲಯ ಸೌಲಭ್ಯವೇ ಇರಲಿಲ್ಲ!

ಅದಕ್ಕೆ ಕಾರಣವೂ ಹೀಗಿರಬಹುದು:

ಮೊದಲೇ ಗ್ರಾಮೀಣ ಜನ. ಅವರಿಗಾಗಿ ನಿರ್ಮಿಸಿರುವ ಭವನ ಅದು. ಅವರಿಗೋ ಕಕ್ಕಸ್ಸನ್ನು ಬಳಸಿ ಅನುಭವ ಇಲ್ಲ. ಕೆಲವರಿಗೆ ಅಲ್ಲಿಗೆ ಹೋದರೆ ಯಾವುದೂ ಹೊರಕ್ಕೇ ಬರುವುದಿಲ್ಲ. ಅಲ್ಲೇ ಮುಷ್ಕರ ನಿರತವಾಗುತ್ತವೆ. ಬಯಲಿಗೆ ಹೋದರೇ ಅವಕ್ಕೆ ಸಲೀಸಾದ ಬಿಡುಗಡೆ! ಆ ಬಯಲ ವಿಸರ್ಜನಾ ಸುಖ ಅನುಭವಿಸಿದವರಿಗೇ ಗೊತ್ತು!

ಇಂತಹ ಹಳ್ಳಿಗರಿಗೆ ಏಕೆ ಶೌಚಾಲಯ?

ಅದೂಅಲ್ಲದೆ ಸಾರ್ವಜನಿಕ ಶೌಚಾಲಯಗಳನ್ನು ನೀವು ಎಂದಾದರೂ ಬಳಸಿದ್ದೀರಾ? ಅವನ್ನು ಬಳಸಲು ಯೋಗಪಟುವೇ ಆಗಿರಬೇಕು. ಮೂಗು ಮುಚ್ಚಿಕೊಂಡೇ ಪ್ರವೇಶಿಸಬೇಕು. ಕೆಲವು ಕಡೆ ಒಳಗೆ ಕಾಲಿಡುವುದೇ



ದುಸ್ಸಾಹಸ. 'ಇಲ್ಲಿ ಮಲಮೂತ್ರ ವಿಸರ್ಜಿಸಿ' ಎಂದು ಬರೆದಿದ್ದರೆ 'ಗೋಡೆ ಮೇಲೆ ಮಾಡುವುದು ಹೇಗೆ' ಎಂದು ನೆಲದ ಮೇಲೆ ಎಲ್ಲಿ ಅಂದರೆ ಅಲ್ಲಿ ಮಾಡಬಾರದ್ದನ್ನು ಮಾಡಿರುತ್ತಾರೆ. ನಾಗರಿಕರು ಬಳಸುವ ಶೌಚಾಲಯಗಳೇ ಹೀಗೆ. ಇನ್ನು ಹಳ್ಳಿಗಮಾರರು ಹೇಗೆ ಸ್ವಚ್ಛತೆ ಕಾಪಾಡಿಯಾರು?

ಸ್ಥಾಯಿ ಸಮಿತಿ ಅಧ್ಯಕ್ಷರೂ ಹಳ್ಳಿಗರೇ. ಅವರು ಇದು ತಮಗೇ ಆದ ಅವಮಾನ ಎಂದೇ ತಿಳಿದರು. ಇಂಜಿನಿಯರ್ ಸಾಹೇಬರನ್ನು ಕರೆಸಿದರು. 'ಇದೇನು ಇಂಜಿನಿಯರ್ರೇ ಇದು' ಎಂದು ಗುಟುಕು ಹಾಕಿದರು.

ಸಾಹೇಬರು ಅನುಭವಸ್ಥರು. 'ಯಾವುದು ಸಾರ್' ಅಂದರು.

'ಇದೂರೀ ಇದು.'

'ಸಮುದಾಯ ಭವನ ಸಾರ್.'

'ಅದು ನನಗೂ ಗೊತ್ತುರೀ ಏನ್ರಿ ಇದು. ಶೌಚಾಲಯವೇ ಇಲ್ಲವಲ್ರೀ.'

'ಹೌದು ಸಾರ್.'

'ಏನ್ರಿ ಹೌದು.'

'ಶೌಚಾಲಯ ಇಲ್ಲ ಸಾರ್.'

'ಹಾಗೆ ಹೇಳೋಕೆ ನಾಚಿಕೆ ಆಗಲ್ಲವೇನ್ರಿ.?'

'ತಾವೇ ಪ್ಲಾನ್ ಅಪ್ರೂವ್ ಮಾಡಿದ್ದೀರಿ. ನೋಡಿ ಸಾರ್.'

ಹೌದು ಪ್ಲಾನಿಗೆ ಅನುಮತಿ ನೀಡಿದ್ದರು. ಎಲ್ಲೆಲ್ಲಿ ಏನೇನು ಇರಬೇಕೋ ಅದೆಲ್ಲ ಇರುತ್ತದೆ ಎಂದು ತಿಳಿದು ಹಾಗೆ ಮಾಡಿದ್ದರು. ಇಲ್ಲಿ ಹೀಗಾಗಿದೆ. ಸ್ವಲ್ಪ ಮೆದುವಾದರು ಅಧ್ಯಕ್ಷರು.

'ಹಾಳಾಗಿ ಹೋಗಲೀರೀ. ಈಗಲಾದರೂ ಕಟ್ಟಿಸಿ.'

'ಈಗ ಆಗಲ್ಲ ಸಾರ್.'

'ಯಾಕ್ರಿ ಆಗಲ್ಲ?'

'ಹಣ ಎಲ್ಲ ಮುಗಿದುಹೋಗಿದೆ ಸಾರ್.'

ಅದು ಮಾತು ಅಂದರೆ. ಮೂರು ಕಾಸು ಕೊಟ್ಟು ಕ್ವಾಣೆ ತುಂಬ ಹಾಸು ಅಂದರೆ ಹೇಗೆ?


'ಬೇರೆ ಪ್ಲಾನಲಿ ಕೊಡುಸ್ತೀನಿ ಮಾಡ್ರಿ.'

'ಕೊಡಿಸಿದ್ರೂ ಆಗಲ್ಲ ಸಾರ್.'

'ಯಾಕ್ರಿ ಆಗಲ್ಲ?'

'ಜಾಗ ಸಾಲಲ್ಲ ಸಾರ್!'

ಇಂತಹ ಇಂಜಿನಿಯರುಗಳೂ ಇರುತ್ತಾರಾ ಅಂದ್ರಾ... ನೀವು ಯಾವಾಗಲಾದರೂ ಸಮುದಾಯ ಭವನಗಳಿಗೆ ಹೋಗಿದ್ದೀರಾ? ಹಾಗಿದ್ದರೆ ಅನುಭವ ಆಗಿಯೇ ಆಗಿರುತ್ತೆ. ಅದು ಹೇಗಿರುತ್ತೆ ಹೇಳಿ. ಬೆಟ್ಟ ಹತ್ತಿದ ಹಾಗೆ ಆಗುತ್ತೆ. ಹತ್ತಾರು ಮೆಟ್ಟಿಲು ಹತ್ತೇ ತೀರಬೇಕು. ಮುದುಕರು ಅತ್ತ ಸುಳಿಯುವಂತೆಯೇ ಇಲ್ಲ. ಒಂದು ರ್‍ಯಾಂಪ್ (ಇಳಿ ಜಾರು ದಾರಿ)ಯಾದರೂ ಮಾಡಿಸಬಾರದಿತ್ತಾ ಅನ್ನಿಸುತ್ತೆ. ಲಕ್ಷಾಂತರ ರೂಪಾಯಿನ ಬಾಡಿಗೆಗೆ ಅಂತಲೇ ಪೀಕಿರುತ್ತೀರಿ. 'ರ್‍ಯಾಂಪ್ ಯಾಕ್ರಿ ಮಾಡಿಸಿಲ್ಲ' ಅಂತ ಕೇಳಿದರೆ 'ಸ್ಪೇಸ್ ಪ್ರಾಬ್ಲಮ್ಮು ಸಾರ್' ಅಂತಾರೆ!



ಎಚ್.ಎಲ್. ಕೇಶವಮೂರ್ತಿ

ಅಣಕ

ಮೂರು ದಿನವೇ ಮಸ್ತು

ಪಾಪ ಮಾಧ್ಯಮದವರ ಸಂಕಟ ನೋಡಲಾಗುತ್ತಿಲ್ಲ. ಅವರೂ ಎಷ್ಟು ಅಂತ ಹೊಗಳ್ತಾರೆ. ಪೇಜುಗಟ್ಟಲೆ ಬರೆದರು. ಗಂಟೆಗಟ್ಟಲೆ ಹಾಡಿ ಹೊಗಳಿದರು. ಕ್ರಿಕೆಟ್ ಅಂದರೆ ಭಾರತೀಯರ ಧರ್ಮ ಅಂತ ಬೊಗಳೆ ಹೊಡೆದರು. ಧರ್ಮ ಅಂದಮೇಲೆ ಅನುಯಾಯಿಗಳು ಯಾನೆ ಭಕ್ತರು ಇರಲೇಬೇಕಲ್ಲವಾ... ಒಂದನೂರು ಇಪ್ಪತ್ತು ಕೋಟಿ ಅಂತೋರು ಇದ್ದಾರೆ ಅಂತ ಪುಂಗಿ ಊದಿದರು. ಭಕ್ತರು ಇದ್ದ ಮೇಲೆ ದೇವರು ಇದ್ದಿರಲೇಬೇಕು. ಇಲ್ಲದಿದ್ದರೆ ಧರ್ಮ, ಭಕ್ತರಿಗೆ ಅರ್ಥವೇ ಇರುವುದಿಲ್ಲ. ಅವರೂ ಇದ್ದರು. ಮೊದಮೊದಲು ಈ ಮಹಾನ್ ಭಕ್ತರು ಭಕ್ತರಾಗಿರಲೇ ಇಲ್ಲವಂತೆ. ಕೇವಲ ಫ್ಯಾನ್ ಯಾನೆ ಅನುಯಾಯಿಗಳಾಗಿದ್ದರಂತೆ. ಫ್ಯಾನ್‌ಗಳನ್ನು ಭಕ್ತರನ್ನಾಗಿ, ಪರಿವರ್ತಿಸಿ ಮಾಧ್ಯಮಗಳು ಪುಣ್ಯ ಕಟ್ಟಿಕೊಂಡಿದ್ದವು!

ಈಗ ನೋಡಿದರೆ ಆ ದೇವರುಗಳು ಮಕಾಡೆ ಮಲಗಿವೆ. ಆಸ್ಟ್ರೇಲಿಯಾದ ರಾಕ್ಷಸರ ಕೈಲಿ ತದುಕಿಸಿಕೊಳ್ಳುತ್ತಾ ಇವೆ. ಆದರೂ ಈ ದೇವರುಗಳನ್ನು ಮೆಚ್ಚಲೇಬೇಕು. ಹಿಗ್ಗಾಮುಗ್ಗಾ ಚಚ್ಚಿಸಿಕೊಂಡಿದ್ದರೂ ಗೆಲುವಾಗೇ ಇದಾವಂತೆ ಯಾಕೇಂತೀರಾ? ಇಲ್ಲಿ ಎಷ್ಟು ಚಚ್ಚಿಸಿ ಕೊಂಡರೆ ತಾನೆ ಏನು ಒಂದು T-20 ಪಂದ್ಯದಲ್ಲೋ, ಒಂದು ಒನ್‌ಡೇ ಮ್ಯಾಚಲ್ಲೋ ಗೆದ್ದರೆ...ರೆ ಅಂತಾನೆ ಇರಲಿ. ಆಗ ನೋಡಿ ಭಕ್ತರು ಓಡಿಬಂದು ಮುತ್ತುಕೊಳ್ತಾರೆ. ಯಾಕೇಳಿ, ಕ್ರಿಕೆಟ್ ಅಂದ್ರೆ ಭಾರತೀಯರ ಧರ್ಮ ಅಲ್ವ ಅದಕ್ಕೆ ಇದ ಇವರು ಚೆನ್ನಾಗಿ ತಿಳ್ಕೊಂಡಿದಾರೆ

ಇನ್ನು ದೇವರುಗಳ ದೇವರು ಅಂದ್ರೆ ಇನ್ನಾರು ಸಚಿನ್

ನಮ್ಮ ಊರಿನ ಕುಡುಕರ ಹಾಡುಗಳನ್ನೇ ಯಾರೋ ಕಾಪಿ ಹೊಡೆದು ಮಟ್ಟು ಹಾಕಿದ್ದಾರೆ!

ಜನವರಿ 18, 2012ರ ಸಂಚಿಕೆಯು ಮನಸು ಕಲಕುವಂತಹ ಸಂವೇದನೆ ಪಡೆದಿತ್ತು ಎಂದರೆ ಅತಿಶಯೋಕ್ತಿಯಾಗುವುದಿಲ್ಲ. ಇಂದಿರಮ್ಮನವರ ಅಂತರಾಳದ ಮಾತುಗಳು ಒಂದು ಗಳಿಗೆ ಲಂಕೇಶರನ್ನು ನಮ್ಮ ಎದುರಿಗೆ ತಂದು ನಿಲ್ಲಿಸಿದಂತಹ ಅನುಭವ ಕೊಟ್ಟಿತು. ಒಮ್ಮೆ ಲಂಕೇಶ್ ಮೇಷ್ಟ್ರು ತಮ್ಮ 'ಮರೆಯುವ ಮುನ್ನ' ಅಂಕಣದಲ್ಲಿ "ಒಬ್ಬ ಹೆಣ್ಣುಮಗಳು ಬೇರೆ ಮನೆಗೆ ಮದುವೆಯಾಗಿ ಬಂದು, ಅಲ್ಲಿ ಎಲ್ಲರೊಂದಿಗೆ ಹೊಂದಿಕೊಂಡು ಬದುಕುವುದು ಎಷ್ಟು ಕಷ್ಟವಿದೆಯಲ್ಲಾ, ಅದೊಂದು ಅನನ್ಯ ಸಂಗತಿ" ಎಂದು ಬರೆದಿದ್ದರು. ಇಂದಿರಮ್ಮನವರ ಬರಹ ಅದನ್ನು ನೆನಪಿಸಿತು.

ಲಂಕೇಶ್ ಮತ್ತು ಇಂದಿರಮ್ಮ ಅನುಗಾಲ ಜೊತೆಜೊತೆಯಾಗಿ, ಕಷ್ಟಸುಖದಲ್ಲಿ ಒಂದಾಗಿ, ಕಷ್ಟಸುಖ ಹಂಚಿಕೊಂಡು ಬದುಕಿದವರು. ಇವತ್ತು ಲಂಕೇಶರು ತಮಗೆ ಪ್ರಿಯವಾಗಿದ್ದ ಮಾವಿನ ಮರದ ಕೆಳಗೆ ಮಲಗಿದ್ದಾರೆ ಎನ್ನುವ ಇಂದಿರಮ್ಮನವರ ಮಾತು ನನ್ನ ಕರಳನ್ನು ಕಲುಕಿತು. 'ಅಯ್ಯೋ ತಾಯಿ! ಎಂಥ ಮಾತು' ಅನ್ನಿಸಿತು.

ಇಂದಿರಮ್ಮನವರ ನೆನಪಿನ ಜೀವದ್ರವ ಹರಿದುಬರಲಿ. ಅವರಿಗೆ ನಮಸ್ಕಾರಗಳು...

- ಉತ್ತನೂರು ರಾಜಮ್ಮ ವಿ.ಶೆಟ್ಟಿ, ಚಿಂತಾಮಣಿ

ದಲಿತ ಮಹೇಂದರ್ ಅವರನ್ನು ಸಿಕ್ಕಾಪಟ್ಟೆ ತೆಗಳಿದ್ದೀರಿ ಎಂದು ರಘೋತ್ತಮ ಹೊ.ಬ ಅವರು ಬೇಸರ ಮಾಡಿಕೊಂಡಿದ್ದರ ಬಗ್ಗೆ ಸಂತೋಷ್ ಗುಡ್ಡೆಯಂಗಡಿಯವರು ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ನನ್ನ ಸಹಮತವಿದೆ. ಕೇವಲ ದಲಿತನೆಂದ ಮಾತ್ರಕ್ಕೆ ವ್ಯಕ್ತಿಯೊಬ್ಬನ ಕುಕಾರ್ಯಗಳನ್ನು ಕಂಡೂಕಾಣದಂತೆ ಸುಮ್ಮನಿರುವುದಾಗಲೀ ಅದೇರೀತಿಯಲ್ಲಿ ಬ್ರಾಹ್ಮಣನೊಬ್ಬನ ಒಳ್ಳೆಯ ಕೆಲಸಗಳನ್ನು ವಿನಾಕಾರಣ ಮರೆಮಾಚುವುದಾಗಲೀ ಸರಿಯಲ್ಲ.


ಮಹೇಂದರ್ ಪ್ರಕರಣದಲ್ಲಿ 'ಲಂಕೇಶ್' ಮೊದಲಿಗೆ ಮಹೇಂದರ್ ಪರವಹಿಸಿಯೇ ಬರೆದಿದ್ದರೂ ನಂತರ ಶ್ರುತಿಯ ಅಳಲನ್ನು ವಿಸ್ತೃತವಾಗಿ ಬಹಿರಂಗಪಡಿಸಿತ್ತು, ಈ ಪ್ರಕರಣದಲ್ಲಿ ಜಾತಿಗಾಗಲೀ ಜಾತೀಯತೆಗಾಗಲೀ ಅಂತಹ ಸ್ಥಾನವೇನಿಲ್ಲ, ಇದ್ದರೂ, ಅದು ಮಹೇಂದರ್‌ಗೆ ಸಿಂಪಥಿಯ ಲಾಭವನ್ನಷ್ಟೆ ತಂದುಕೊಟ್ಟಿರಬಹುದು. ಪತ್ರಿಕೆ ಶೋಷಿತರ ಪರ ಇರುವುದು ಹೌದಾದರೂ ಈ 'ಶೋಷಿತ'ರೆನಿಸಿಕೊಂಡವರೇ 'ಶೋಷಕ'ರಾಗ ಹೊರಟಾಗ ಬುದ್ಧಿ ಹೇಳುವುದೂ ಕೂಡ ಮುಖ್ಯವಾಗುತ್ತದಲ್ಲವೇ? (ಒಂದು ಕಾಲದಲ್ಲಿ ಶಕ್ತಿಶಾಲಿಯಾಗಿದ್ದ ದಲಿತ ಚಳವಳಿ ಹಾಗು ದಲಿತ ನಾಯಕರು ಇದೀಗ ಸೊರಗಲು / ಹಾದಿ ತಪ್ಪುವಂತಾಗಲು ಈ ಕೊರತೆಯ ಪಾತ್ರವೂ ಪ್ರಮುಖವಿದೆ)


ರಾಜಕೀಯದಲ್ಲಿ ಮಾಯಾವತಿಯಿಂದ ಗೂಳಿಹಟ್ಟಿಯವರೆಗೆ ಅವರ ಎಲ್ಲಾ ಕಾರ್ಯಗಳಿಗೂ ಇದೇ ಕಾರಣದ ಹಿನ್ನೆಲೆಯನ್ನಿಟ್ಟುಕೊಂಡು ಉಫೇ ಉಫೇ ಎನ್ನುತ್ತಾ ಉಳಿದವರನ್ನೆಲ್ಲ ಇದೇ ಕಾರಣಕ್ಕೆ ಟೀಕಿಸುತ್ತಾ ಹೋದರೆ ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಕಟಣೆಗೂ ಪತ್ರಿಕೆಗೂ ವ್ಯತ್ಯಾಸವೇನು ಬಂತು?

- ರವಿ ಪುತ್ತೂರ್, ಬೆಂಗಳೂರು

ಬಾಗೇಶ್ರೀ ಅವರು ಅನುವಾದಿಸಿರುವ ಫೈಜ್ ಅಹಮದ್ ಫೈಜ್ ಅವರ ಕವನಗಳ ಪುಸ್ತಕ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.





ಬಿಡುಗಡೆ ಸಮಾರಂಭಕ್ಕೆ ನಾನು ಬಂದಿದ್ದೆ. ಕಾರ್ಯಕ್ರಮ ತುಂಬಾ ಚೆನ್ನಾಗಿತ್ತು. ಫೈಜ್ ಅವರ ಕವನಸಂಕಲನವನ್ನು ಕನ್ನಡದಲ್ಲಿ ಪ್ರಕಟಮಾಡಿದ್ದಕ್ಕೆ ಥ್ಯಾಂಕ್ಸ್. ಇದು ಕನ್ನಡ ಸಾಹಿತ್ಯ ಲೋಕಕ್ಕೆ ಹೊಸ ಬೆಳಕನ್ನು ಖಂಡಿತಾ ತೋರಲಿದೆ.

'ಲಂಕೇಶ್ ಪ್ರಕಾಶನ'ದ ಮೂಲಕ ಕೆಲವೇ ವರ್ಷಗಳಲ್ಲಿ ಅಷ್ಟೊಂದು ಪುಸ್ತಕಗಳು ಪ್ರಕಟವಾಗಿದ್ದು ನನ್ನಲ್ಲಿ ಬೆರಗು ಮೂಡಿಸಿದೆ.

- ಬಿ.ಶ್ರೀಪಾದ ಭಟ್, ಬೆಂಗಳೂರು

ನಮ್ಮ ಊರುಗಳಲ್ಲಿ ಎಣ್ಣೆ ಹೊಡೆದು ಫುಲ್ ಟೈಟಾದವರ ಬಾಯಿಂದ ಈ ಹಿಂದೆ ಅದೆಷ್ಟೋ 'ಕೊಲವರಿ-ಡಿ' ಹಾಡುಗಳನ್ನು ಕೇಳಿದ್ದೇನೆ. ಆದರೆ ಮೊನ್ನೆ ಮೊನ್ನೆ ಬಂದ 'ಕೊಲವರಿ-ಡಿ' ಹಾಡು ಯದ್ವಾತದ್ವ ಜನಪ್ರಿಯ ಆಗಿರುವುದನ್ನು ನೋಡಿದರೆ ನಮ್ಮ ಊರಿನ ಕುಡುಕರ ಹಾಡುಗಳನ್ನೇ ಯಾರೋ ಕಾಪಿ ಹೊಡೆದು ಮಟ್ಟು ಹಾಕಿದ್ದಾರೆ ಅನಿಸುತ್ತದೆ!



'ಕೊಲವರಿ-ಡಿ' ಗೀತೆ ಚೂರುಪಾರು ಯಶಸ್ಸು ಕಾಣುತ್ತಿರುವಾಗಲೇ ಹಾಡುಗಾರ ಸೋನು ನಿಗಮ್ ಕೂಡ ತಮ್ಮ ಪುಟ್ಟ ಮಗನಿಂದ ಅದನ್ನು ಹಾಡಿಸಿ ಯೂಟ್ಯೂಬ್‌ನಲ್ಲಿ ಚೆಲ್ಲಿದರು. ಆನಂತರ ಆ ಹಾಡಿನ ಸುತ್ತ ಪುಕಾರು ಹಬ್ಬಿಸಿ ಅಮಿತಾಭ್, ಶಾರೂಖ್ ಖಾನ್, ಅಮೀರ್ ಖಾನ್ ತರಹದ ಖ್ಯಾತನಾಮರಿಂದ ಪುಂಖಾನುಪುಂಖವಾಗಿ ಹಾಡಿನ ಬಗ್ಗೆ ತುತ್ತೂರಿ ಊದಿಸಿದ್ದೂ ಆಯಿತು. ಇಷ್ಟಾದಮೇಲೆ ಮಾಧ್ಯಮಗಳು ಆ ಹಾಡಿನ ಬಗ್ಗೆ ಸುಮ್ಮನಿರಲು ಸಾಧ್ಯವೇ?

ಇಡೀ ಘಟನೆ ನೋಡಿದಾಗ ನಗೆಬಂತು. ಯಾಕೆಂದರೆ 'ಕೊಲವರಿ-ಡಿ' ಹಾಡಿನ ಮಾರುಕಟ್ಟೆ ಹಕ್ಕು ಪಡೆದಿರುವ ಸೋನಿ ಎಂಟರ್‌ಟೈನಮೆಂಟ್ ಕಂಪನಿ ನಮ್ಮ ಊರಿನ ಕುಡುಕರ ಹಾಡನ್ನು ನಮಗೆ ಗೊತ್ತಿಲ್ಲದಂತೆ ಬೂದಿ ಉಗ್ಗಿ ತನ್ನ ಮಾರುಕಟ್ಟೆಯ ತಂತ್ರಗಳಿಂದ ಬಾಚಿ ಬಾಚಿ ಹಣ ಬಳಿದುಕೊಂಡಿದೆ. ಅದು ನಮ್ಮಿಂದಲೇ. ಎಂತಹ ವಿಪರ್ಯಾಸ!

ಜನಪರ ಕಾಳಜಿ ಇಲ್ಲದ ಸಿನಿ ನಟರು, ಮಹಾನ್ ನಟರು ಎಂದು ಬಿಂಬಿಸಿಕೊಳ್ಳುವ ಕಲಾವಿದರು ಬಹುರಾಷ್ಟ್ರೀಯ ಕಂಪನಿಗಳ ಕೈಗೊಂಬೆಗಳಾಗಿ ಜನರಿಂದ ಹೇಗೆ ಹಣ ಪೀಕುತ್ತಾರೆನ್ನುವುದಕ್ಕೆ 'ಕೊಲವರಿ-ಡಿ' ಹಾಡು ಸೃಷ್ಟಿಸಿರುವ ವಾತಾವರಣವೇ ಕೈಗನ್ನಡಿಯಾಗಿದೆ.

2011ರ ಬೆಂಗಳೂರು ಪ್ರೆಸ್‌ಕ್ಲಬ್ ಪ್ರಶಸ್ತಿ ಗೌರಿ ಲಂಕೇಶ್ ತಂಡಕ್ಕೆ ಲಭಿಸಿದ್ದಕ್ಕೆ ಅಭಿನಂದನೆಗಳು.


ಅಂಬಾನಿಯ ನಿಜಮುಖ ಓದುಗರಿಗೆ ಪರಿಚಯಿಸಿದ್ದಕ್ಕೆ ಧನ್ಯವಾದಗಳು. ಇದೇ ಅಂಬಾನಿ ಪತ್ರಕರ್ತರ ಪ್ರಶ್ನೆಯೊಂದಕ್ಕೆ 20 ವರ್ಷಗಳ ಹಿಂದೆ ಕೊಟ್ಟ ಉತ್ತರ ಈಗಿನ ಭ್ರಷ್ಟಾಚಾರ ವಿರೋಧಿ ಆಂದೋಲನದ ಸಂದರ್ಭಕ್ಕೆ ಹೆಚ್ಚು ಅನ್ವಯ.

"ಒಂದು ವೇಳೆ ಭಾರತದಲ್ಲಿ ಭ್ರಷ್ಟಾಚಾರವೇ ಇರದಿದ್ದರೆ, ಎಲ್ಲರೂ ಪ್ರಾಮಾಣಿಕರಾಗಿದ್ದರೆ ಏನಾಗುತ್ತಿತ್ತು?" ಎಂಬ ಪ್ರಶ್ನೆಗೆ ಸ್ವತಃ ಅಂಬಾನಿಯೇ ಕೊಟ್ಟ ಉತ್ತರ: "ಭಾರತದಲ್ಲಿ ಭ್ರಷ್ಟಾಚಾರ ಇಲ್ಲದಿದ್ದರೆ ಈ ಧೀರೂಭಾಯಿ ಒಂದು ಪೆಟ್ರೋಲ್ ಬಂಕ್ ಅಟೆಂಡರ್ ಆಗಿಯೇ ಜೀವನವಿಡೀ ಇರುತ್ತಿದ್ದ!"

ಇದರ ತಾತ್ಪರ್ಯವಿಷ್ಟೇ - ತಾನು ಭಾರತದಲ್ಲಿರುವ ಭ್ರಷ್ಟಾಚಾರವನ್ನೇ ಬಂಡವಾಳ ಮಾಡಿಕೊಂಡು ರಾಜಕಾರಣಿ ಹಾಗೂ ಅಧಿಕಾರಿಗಳನ್ನು ಲಂಚದ ಮೂಲಕ ಪಳಗಿಸಿ ತನ್ನ ಕಾರ್ಯ ಸಾಧಿಸಿದ್ದು ಎಂಬುದಾಗಿದೆ. ಟಾಟಾರಂತಹ ಮೂರು-ನಾಲ್ಕು ಉದ್ಯಮಿಗಳನ್ನು ಹೊರತುಪಡಿಸಿ ಹೆಚ್ಚಿನ ಭಾರತೀಯ ಉದ್ಯಮಿಗಳು ಈಗಿನ ಎತ್ತರಕ್ಕೆ ಮುಟ್ಟಿದ್ದು ಭ್ರಷ್ಟರಾಜಕಾರಣಿ ಹಾಗೂ ಅಧಿಕಾರಿಗಳನ್ನು ಕೈವಶ ಮಾಡಿಕೊಂಡೇ. ಸರಿಯಾದ ಪಬ್ಲಿಸಿಟಿಯ ಬಲ ಇದ್ದರೆ ಭಾರತೀಯರ ಮೂರ್ಖತೆಯನ್ನೇ ಬಂಡವಾಳ ಮಾಡಿಕೊಂಡು ಅವರಿಗೆ ಸೆಗಣಿಯನ್ನೂ ಚಿನ್ನದ ಬೆಲೆಗೆ ಮಾರಬಹುದು ಎಂದು ಇದೇ ಅಂಬಾನಿ ಹೇಳಿದ್ದ ಇನ್ನೊಂದು ಮಾತು.

ಅಪ್ಪಟ ಪ್ರಾಮಾಣಿಕ ಮಹಾತ್ಮ ಗಾಂಧೀಜಿ ಹಾಗೂ ಅಂಬಾನಿ ಒಂದೇ ಬನಿಯಾ (ವೈಶ್ಯ) ಜಾತಿಯಲ್ಲಿ ಹುಟ್ಟಿದ್ದು ವಿಪರ್ಯಾಸವೆಂದು ಗುಜರಾತಿಗಳೇ ಹೇಳುತ್ತಾರೆ. (ಅಂದಹಾಗೆ ದಕ್ಷಿಣ ಭಾರತೀಯರು ಸಾಮಾನ್ಯವಾಗಿ ಗುಜರಾತಿಗಳು ಹಾಗೂ ಮಾರ್ವಾಡಿಗಳು ಒಂದೇ ರಾಜ್ಯದವರು ಎಂದು ತಪ್ಪಾಗಿ ತಿಳಿಯುತ್ತಾರೆ. ವಾಸ್ತವವಾಗಿ ಮಾರ್ವಾಡಿಗಳು ವಾರ್ವಾಡ್ ಎಂಬ ಪ್ರದೇಶದವರು).

- ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು



ತೂಲ್ಕರ್ ತಾನೇ? ಈ ದೇವರ ದೇವರು ತೊಂಬ ಭತ್ತು ಸೆಂಚುರಿ ಹೊಡೆದಿದ್ದರಂತೆ. ಇನ್ನು ಒಂದು ಡೆದರೆ ನೂರು ಆದತ್ತಂತೆ. ಇಷ್ಟೊಂದು ಸೆಂಚುರಿಗಳ ಮ್ಯಾಚಲಿ ಹೊಡೆದಿದ್ದತೆ ಆ ದೇವರು ಅಂದ್ರೆ ಇಲ್ವಂತೆ. ದಿವಿಡಿ ಮ್ಯಾಚುಗಳದ್ದೆಲ್ಲ ಸೇರಿ ಅಷ್ಟಾಗಿದ್ದತ್ತಂತೆ. ಹೆಂಗೋ ರು ಸೆಂಚುರಿ ಆದರೆ ಸರಿ. ಹಂಗಾಗಲಿ ಅಂತ ನೂರ ಪ್ಪತ್ತು ಕೋಟಿ ಭಾರತೀಯರು ಪ್ರಾರ್ಥನೆ ಡುತ್ತಿದ್ದಾರಂತೆ! ಇಷ್ಟೇ ಅಂತ ಯಾರು ಅಂದೋರು, ಗೆ ಹೇಳಿದರು ಅಂದರೆ ಮಾಧ್ಯಮದವರು ಕಣ್ರಿ ಳ್ತಿರೋದು. ಹೆಂಗೇಳಿದ್ರು ಅಂದ್ರೆ ಅರೆ ಭಾರತೀಯರು ಷ್ಟು ಇದಾರೋ ಅಷ್ಟು ಹೇಳಿದರು. ಜಾಸ್ತಿ ಇದ್ದಿದ್ದರೆ ಅದನ್ನೇ ಳಿರೋರು! ಆದರೂ ಅನ್ಯಾಯ ನೋಡಿ. ನೂರು ಸೆಂಚುರಿ ಂದಕ್ಕೆ ಹೋಗ್ತಾನೆ ಇದೆಯಂತೆ. ಭಾರತೀಯರೆಲ್ಲ ನಿರಾಸೆ ಮುದ್ರದಲ್ಲಿ ಮುಳುಗುವಂತಾಗಿದೆಯಂತೆ! ಎಂತಹ ರಂತ ಇದು!

T-20 ಅಂದರೆ ಕುರುಡನ ಕೈಲಿ ದೊಣ್ಣೆ ಇದ್ದಂಗೆ ಅಂತೆ. ವ ಬೀಸಿದರೆ ಎಲ್ಲಿಗೆ ಬೇಕಾದರೂ ತಗುಲಬಹುದು ಲ್ಲವಾ. ಈ ಪಂದ್ಯನೂ ಹಂಗೇ ಅಂತೆ. ಬ್ಯಾಟು ಬೀಸೋನಿಗೆ ೀಟಿಕೋಟಿ ಕೊಡ್ತಾರಂತೆ. ಇದಪ್ಪ ಆಟ ಅಂದರೆ. ಅತ್ತಲಾಗಿ ಣವೂ ಬಂತು. ಇತ್ತಲಾಗಿ ಭಕ್ತರ ಗುಂಪೂ ಹೆಚ್ಚಿತು. ದಬುಟ್ಟು ಟೆಸ್ಟ್ ಆಡಲಿ ಅಂದ್ರೆ ಪಾಪ ಅವರು ಹೆಂಗೆ ತಾನೆ ಡ್ತಾರೆ!

ಇನ್ನು ಭಾರತೀಯ ತಂಡದವರಿಗೆ ವಯಸ್ಸು ಆಯಿತು ನ್ನುವವರೂ ಇದ್ದಾರೆ. ಮುವ್ವತ್ತು ಪ್ಲಸ್ ಆದವರೇ ಂಬವರಂತೆ. ಮುವ್ವತ್ತೆಂಟನೆ ಹುಟ್ಟುಹಬ್ಬ ಆಚರಿಸಿಕೊಂಡ ವರೂ ಇದ್ದತ್ತಂತೆ. ಇಂತೋರನೆಲ್ಲ ಕಿತ್ತೊಗೆಯಿರಿ ಅತ್ಲಾಗಿ ನ್ನುವವರೂ ಇದಾರೆ. ಭಾರಿ ಅನ್ಯಾಯ ಕಣ್ರಿ. ದೇವರುಗಳಿಗೆ ತಹ ವಯಸ್ಸು ಅಂತೀನಿ. ಇದಕ್ಕೆ ಪುಗಸಟ್ಟೆ ಸಲಹೆ ಏನು ಂದರೆ ಟೆಸ್ಟ್ ಮ್ಯಾಚು ಅಂದರೆ ಐದು ದಿನದ ಆಟ. ಮ್ಮೋರು ಅಷ್ಟು ದಿನ ಆಡಲಾರರು. ಹೆಂಗಿದ್ದರೂ ೂರುಮೂರು ದಿನಕ್ಕೆ ಮ್ಯಾಚ್ ಮುಗಿಸ್ತಾಕುಂತವರೆ. ಟೆಸ್ಟ್ ್ಯಾಚ್ ಐದು ದಿನ ಆಡುವುದರ ಬದಲು ಮೂರು ದಿನಕ್ಕೇ ಮಿತಗೊಳಿಸಿದರಾಗಬಹುದಾ ಅಂತಾವ.... ಹಂಗಾಗಲ್ಲ ್ರೆ ರೂಲ್ಸ್ ಹಂಗಿದೆ ಅಂತೀರಾ... ಅಯ್ಯೋ ರಾಮನೇ ೀವರು ಹೆಚ್ಚೋ ರೂಲ್ಸು ಹೆಚ್ಚೋ? ರೂಲ್ಸ್ ಅನ್ನೇ ದಲಾಯಿಸೋದಪ್ಪಾ...

❖

ಈಗ ಎಲ್ಲೆಲ್ಲಿ ಜನರು 'ಕೊಲವರಿ' ಹಾಡನ್ನು ಟಗುಟ್ಟುತ್ತಿದ್ದಾರೋ ನನಗೆ ತಿಳಿಯದು. ಆದರೆ ನಮ್ಮ ೂರ ಕಡೆ ಮಾತ್ರ ಅದರ ಸುಳಿವಿಲ್ಲ!

- ಬಸವರಾಜ ಹಳ್ಳಿ, ಹಸಮಕಲ್

ದಲಿತರ ಏಳಿಗೆಯನ್ನು ಸಹಿಸದವರು ಎಲ್ಲಾ ಕಡೆಯಲ್ಲೂ ಇದ್ದಾರೆ. ಮರಸೂರಿನಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆಸಿದವರಿಗೆ ತಕ್ಕ ಶಿಕ್ಷೆ ಆಗಲೇ ಬೇಕು.

- [illegible]

'ಮರೆಯುವ ಮುನ್ನ' ಪಿ.ಲಂಕೇಶರ ಚಿಂತನೆಯನ್ನು ನೆನಪಿಸಿದರೆ 'ಹುಳಿಮಾವು ಮತ್ತು ನಾನು' ಲಂಕೇಶರ ವ್ಯಕ್ತಿತ್ವವನ್ನು ಪರಿಚಯಿಸುತ್ತಿದೆ. ಇಂದಿರಾ ಲಂಕೇಶರ ಸರಳವಾದ ನಿರೂಪಣೆಯು ಮನಸ್ಸಿಗೆ ಮುದ ನೀಡುವುದಲ್ಲದೆ ಕೆಲವು ಸನ್ನಿವೇಶಗಳು ನಗು ತರಿಸುತ್ತವೆ.

- ಭಾನುಮತಿ ಭೋಜರಾಜ್, ಬಂಟ್ವಾಳ

ಖ್ಯಾತ ಲೇಖಕ ಮತ್ತು 'ಪ್ರಜಾವಾಣಿ'ಯ ದಿನಪತ್ರಿಕೆಯ ಅಂಕಣಕಾರ ದಿನೇಶ್ ಅಮೀನ್ ಮಟ್ಟು ಅವರು ಪ್ರಜಾವಾಣಿಯಲ್ಲಿ 'ಸ್ವಾಮಿ ವಿವೇಕಾನಂದ ಎನ್ನುವ ಮನುಷ್ಯ ಹೀಗಿದ್ದರು' ಎಂಬ ಶೀರ್ಷಿಕೆಯಡಿ ಬರೆದ ಲೇಖನವು ನಿರೀಕ್ಷೆಯಂತೆ ಭಾರಿ ಗದ್ದಲವನ್ನೆಬ್ಬಿಸಿದೆ. ವಿಶೇಷವಾಗಿ ಆರೆಸ್ಸೆಸ್‌ನ ಮಂದಿಗೆ ಆ ಸತ್ಯವನ್ನು ಕೇಳಲಾಗದೆ ಎಬಿವಿಪಿಯ ಗೂಂಡಾಗಳನ್ನು ಛೂಬಿಟ್ಟು 'ಪ್ರಜಾವಾಣಿ'ಯ ಶಿವಮೊಗ್ಗೆಯ ಜಿಲ್ಲಾ ಕಚೇರಿ ಮೇಲೆ ದಾಳಿ ನಡೆಸಿವೆ. ಆ ಮೂಲಕ ಪತ್ರಿಕಾ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಿರುವುದು ಸ್ಪಷ್ಟ.

ಸತ್ಯಕ್ಕೆ ಮೂರು ಕಾಸಿನ ಬೆಲೆ ಕೊಡದ ಎಬಿವಿಪಿಯ ಗೂಂಡಾಗಳನ್ನು ಕ್ರಿಮಿನಲ್ ಮೊಕದ್ದಮೆ ಅಡಿಯಲ್ಲಿ ಬಂಧಿಸಿ, ಆರೆಸ್ಸೆಸ್ ಮತ್ತು ಎಬಿವಿಪಿಯನ್ನು ನಿಶೇಷ ಮಾಡಬೇಕಿದೆ.

ಅಂದಹಾಗೆ, ಗೌರಿ ನೇತೃತ್ವದ 'ಲಂಕೇಶ್' ವಾರ ಪತ್ರಿಕೆ ಚೆನ್ನಾಗಿ ಬರುತ್ತಿದೆ. ಆದರೆ ಸಿನಿಮಾ ವಿಷಯಗಳು ಅತಿ ಎನ್ನಿಸುತ್ತಿದೆ. ಸತ್ಯ ಶೋಧನೆ ಮತ್ತು ವಸ್ತುನಿಷ್ಠ ವರದಿಗಳು ಹೆಚ್ಚಾಗಿ ಸಿನಿಮಾ ವಿಷಯಗಳು ಕಡಿಮೆ ಆಗಲಿ ಎಂಬುದು ನಮ್ಮ ಆಶಯ.

- ಮೊಹಮ್ಮದ್ ಇರ್ಷಾದ್, ಮಂಗಳೂರು

ಪತ್ರ ಮತ್ತು ಈ-ಮೇಲ್ ಜೊತೆಗೆ ಇನ್ನು ಮುಂದೆ ನಿಮ್ಮ ಪ್ರತಿಕ್ರಿಯೆಗಳನ್ನು **9980331427** ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

ನೇಮ್‌ಲೆಸ್ ಸಿನಿಮಾ!




'ಉಪ್ಪಿ ತಲೆ ಖಾಲಿಯಾಗಿದೆ. ಮತ್ತೆ ಆತ ಹಿಟ್ ಸಿನಿಮಾವನ್ನು ಕೊಡೋದು ಸಾಧ್ಯವಿಲ್ಲ' ಎಂದವರಿಗೆ ಉತ್ತರವಾಗಿ ಉಪೇಂದ್ರ 'ಸೂಪರ್' ಎಂಬ ಹಿಟ್ ಸಿನಿಮಾವನ್ನು ನೀಡಿದ್ದರು. ಈಗ ಅದೇ ಚಿತ್ರದ ಮುಂದುವರಿದ ಭಾಗವನ್ನು ಮಾಡುವ ಸಿದ್ಧತೆಯಲ್ಲಿದ್ದಾರೆ ಉಪ್ಪಿ ಎಂಬ ಸುದ್ದಿ ಹೊರಬಿದ್ದಿದೆ.

'ಸೂಪರ್' ಚಿತ್ರಕ್ಕೆ ಯಾವ ಹೆಸರನ್ನೂ ಬಳಸದೆ ಕೇವಲ ಸಂಕೇತವನ್ನೇ ಶೀರ್ಷಿಕೆಯನ್ನಾಗಿಟ್ಟಿದ್ದ ಉಪ್ಪಿ ಈ ಬಾರಿ ತನ್ನ ಸಿನಿಮಾಕ್ಕೆ ಯಾವ ಹೆಸರನ್ನಾಗಲಿ, ಸಂಕೇತವನ್ನಾಗಲಿ ಇಡದೆ - ಅಂದರೆ ಹೆಸರೇ ಇಲ್ಲದ - ಸಿನಿಮಾವನ್ನು ಮಾಡಲು ಹೊರಟಿದ್ದಾರೆ ಅನ್ನೋದು ನಮಗೆ ಸಿಕ್ಕಿರುವ ಮಾಹಿತಿ.

ಇಂತಹ ಹೆಸರೇ ಇಲ್ಲದ ಸಿನಿಮಾವನ್ನು ನಿರ್ಮಿಸಲು ಮುಂದಾಗಿರುವ ನಿರ್ಮಾಪಕ ಮಹಾಶಯ ಯಾರು? 'ಸೂಪರ್' ಚಿತ್ರವನ್ನು ನಿರ್ಮಿಸಿದ್ದ ರಾಕ್‌ಲೈನ್ ವೆಂಕಟೇಶ್ ಅವರೇ ಈ ಚಿತ್ರವನ್ನು ನಿರ್ಮಿಸಲಿದ್ದಾರಾ? ಎಂಬಿತ್ಯಾದಿ ಪ್ರಶ್ನೆಗಳಿಗಿನ್ನೂ ನಿಖರವಾದ ಉತ್ತರ ಬಂದಿಲ್ಲ.

ಈಗ ಉಪ್ಪಿ ನಟಿಸಿ, ಪಿ. ವಾಸು ನಿರ್ದೇಶಿಸಿರುವ 'ಆರಕ್ಷಕ' ಬಿಡುಗಡೆಗೆ ಸಿದ್ಧವಾಗಿದೆ. ಇದಲ್ಲದೆ 'ಗಾಡ್‌ಫಾದರ್', 'ಕಠಾರಿವೀರ ಸುರಸುಂದರಾಂಗಿ', 'ಕಲ್ಪನಾ', 'ಟೋಪಿವಾಲಾ' ಮುಂತಾದ ಚಿತ್ರಗಳಲ್ಲಿ ಉಪ್ಪಿ ಹೀರೋ ಆಗಿ ನಟಿಸುತ್ತಿದ್ದಾರೆ. ಈ ಎಲ್ಲ ಸಿನಿಮಾಗಳು ಮುಗಿದನಂತರ ಈ 'ನೇಮ್‌ಲೆಸ್' ಸಿನಿಮಾವನ್ನು ಉಪ್ಪಿ ಕೈಗೆತ್ತಿಕೊಳ್ಳಲಿದ್ದಾರಂತೆ.



ಕುಳ್ಳನ ಸಲಾಂ ಸಿನಿಮಾ!

ಈ ಹಿಂದೆ ದುಬಾರಿ ಸಿನಿಮಾಗಳನ್ನು ನಿರ್ಮಿಸಿ, ಅವುಗಳು ತೋಪೆದ್ದಾಗ ಬರ್ಬಾದಾಗಿದ್ದ ದ್ವಾರಕೀಶ್ ಈಗ ಭಾರೀ ಲೆಕ್ಕಾಚಾರಗಳನ್ನು ಹಾಕಿಕೊಂಡೇ ಸಿನಿಮಾಗಳನ್ನು ನಿರ್ಮಿಸಲಾರಂಭಿಸಿದ್ದಾರೆ. ಇತ್ತೀಚೆಗೆ 'ವಿಷ್ಣುವರ್ಧನ' ಎಂಬ ಸಿನಿಮಾ ಮಾಡಿದ್ದಲ್ಲದೆ, ವಿಷ್ಣು ಹೆಸರಿನ ಆಧಾರದ ಮೇಲೆಯೇ ತನ್ನ ಸಿನಿಮಾಕ್ಕೆ ಬಿಟ್ಟಿ ಪ್ರಚಾರವನ್ನೂ ಪಡೆದು, ಆ ಮೂಲಕ ಒಂದಷ್ಟು ಲಾಭವನ್ನೂ ಕಂಡಿರುವ ದ್ವಾರ್ಕಿ ಈಗ 'ಸಲಾಂ ಸಿನಿಮಾ' ಎಂಬ ಹೊಸ ಪ್ರಾಜೆಕ್ಟ್‌ಗೆ ಕೈಯಿಟ್ಟಿದ್ದಾರೆ. ಈ ಚಿತ್ರದಲ್ಲೂ ಅವರ ಹೊಸ ಮಿತ್ರ ಸುದೀಪನೇ ಹೀರೋ!

ಚಿತ್ರದ ಹೆಸರೇನೋ ಹೇಳುವಂತಿದೆ. ಆದರೆ ದ್ವಾರಕೀಶ್ ತನ್ನ ಸಿನಿಮಾ ಜೀವನವನ್ನೇ ಈ ಚಿತ್ರದ ಕಥೆಯನ್ನಾಗಿಸುತ್ತಿದ್ದಾರಾ ಎಂಬ ಸಂಶಯವೂ ಹುಟ್ಟಿಕೊಂಡಿದೆ. ಆದರೆ ಈ ಕುರಿತು ದ್ವಾರಕೀಶ್ ಬಾಯಿ ಬಿಡುತ್ತಿಲ್ಲ. "ನನ್ಗೆ ಬಂದಿದ್ದ ಒಂದಷ್ಟು ಕಥೆಗಳಲ್ಲಿ ಎರಡು ಕಥೆಗಳು ಓಕೆ ಆಗಿವೆ. ಅವುಗಳಲ್ಲಿ ಒಂದನ್ನು ಅಂತಿಮಗೊಳಿಸಲಾಗುತ್ತದೆ" ಎಂದಷ್ಟೇ ಹೇಳುತ್ತಿದ್ದಾರೆ.

ಈಗಾಗಲೇ ವಿಷ್ಣು ಹೆಸರಲ್ಲಿ ಯಶಸ್ಸು ಮತ್ತು ಲಾಭ ಕಂಡಿರುವ ಈ ಕುಳ್ಳ ತನ್ನ ಮತ್ತು ವಿಷ್ಣುವರ್ಧನ್ ನಡುವೆ ಇದ್ದ ಲವ್ ಅಂಡ್ ಹೇಟ್ ಸಂಬಂಧವನ್ನೇ ತನ್ನ ಹೊಸ ಚಿತ್ರದ ಹೂರಣವಾಗಿಸಿದ್ದಾರೆ ಅನ್ನೋದು ಗಾಂಧಿನಗರದವರ ಸಂಶಯ.

ಇದ್ದರೂ ಇರಬಹುದು. ಕುಳ್ಳನ ಮರ್ಮವನ್ನು ಬಲ್ಲವರ್‍ಯಾರು?


❖

ಆಕ್ಷನ್ ಕಿಂಗ್ ರೀ ಎಂಟ್ರಿ

ಆಕ್ಷನ್ ಕಿಂಗ್ ಅರ್ಜುನ್ ಸರ್ಜಾ ನಾಯಕರಾಗಿ ಕನ್ನಡದಲ್ಲಿ ಕಾಣಿಸಿಕೊಂಡ ಕೊನೆಯ ಚಿತ್ರ 'ಶ್ರೀ ಮಂಜುನಾಥ'. ಆ ಚಿತ್ರ ತೆರೆಕಂಡೂ ತೋಪೆದ್ದು ಹೋಗಿ ಈಗ ಬರೋಬ್ಬರಿ ಒಂದು ದಶಕವೇ ಕಳೆದುಹೋಗಿದೆ. ಅದಾದನಂತರ ಕಿಶೋರ್ ಸರ್ಜಾ ನಿರ್ದೇಶನದ 'ವಾಯುಪುತ್ರ'ದಲ್ಲಿ ಒಂದೇಒಂದು ಹಾಡಿನಲ್ಲಿ ಇಣುಕಿ ಮರೆಯಾಗಿದ್ದರು. ಈಗ ಸರ್ಜಾ ಕನ್ನಡದ 'ಪ್ರಸಾದ್' ಎಂಬ ಹೊಸ ಚಿತ್ರವೊಂದನ್ನು ಮುಗಿಸಿದ್ದಾರೆ. ಜೊತೆಗೆ ಸೈನೇಡ್ ರಮೇಶ್ ನಿರ್ದೇಶನದ 'ಅಟ್ಟಹಾಸ'ದಲ್ಲೂ ಪ್ರಮುಖ ಪಾತ್ರವೊಂದನ್ನು ಮಾಡಿದ್ದಾರೆ.

'ಕನ್ನಡದವರೇ ಆದ ನೀವು ಯಾಕೆ ಕನ್ನಡ ಸಿನಿಮಾಗಳಿಂದ ದೂರವಿದ್ದೀರಿ?' ಇದು ಕರ್ನಾಟಕದಲ್ಲಿ ಅರ್ಜುನ್ ಸರ್ಜಾಗೆ ಪ್ರತಿ ಬಾರಿ ಎದುರಾಗುವ ಪ್ರಶ್ನೆ.

ಅರ್ಜುನ್ ಸರ್ಜಾ ಪ್ರಕಾರ, ಅವರು ಕನ್ನಡದಲ್ಲಿ ಕೆಲಸ ಮಾಡದೇ ಇರಲು ಯಾವುದೇ



ನಿರ್ದಿಷ್ಟ ಕಾರಣಗಳಿಲ್ಲವಂತೆ. ಅಂತಹ ಯಾವುದೇ ಉದ್ದೇಶವೂ ಅವರಿಗಿಲ್ಲವಂತೆ. ಆದರೆ ಪ್ರತಿಬಾರಿ ಅವರು ಕನ್ನಡ ಸಿನಿಮಾವೊಂದರಲ್ಲಿ ನಟಿಸಬೇಕೆಂದು ಹೊರಟಾಗ ತಮಿಳು ಅಥವಾ ತೆಲುಗಿನ ಅತ್ಯುತ್ತಮ ಕಥೆಗಳು ಎದುರಾಗುತ್ತವಂತೆ. ಕಾಲ ಕೂಡಿಬಂದಾಗ ಅವರು ಕನ್ನಡ ಸಿನಿಮಾಗಳಲ್ಲಿ ನಟಿಸಿದ್ದಾರಂತೆ.

ಅಂದಹಾಗೆ ಅರ್ಜುನ್ ಸರ್ಜಾ ಈಗ ಹಿಂದಿ ಸಿನಿಮಾದತ್ತ ಹೊರಟಿದ್ದಾರೆ. ಅಲ್ಲಿನ ಸಿನಿಮಾಗಳಲ್ಲಿ ನಟಿಸಿ, ನಿರ್ದೇಶಿಸಿ ಹೆಸರು ಮಾಡಬೇಕೆನ್ನುವ ಆಸೆ ಅವರದ್ದು. ಅಂದರೆ ಇನ್ನು ಅರ್ಜುನ್ ಸರ್ಜಾ ಕರ್ನಾಟಕದತ್ತ ಮುಖ ಮಾಡುವುದು ಇನ್ಯಾವ ಕಾಲಕ್ಕೋ?

ಹಲ್ಲೋ ಹುಡುಗಿ...

ಸುಪ್ರಿತಾಗೆ ಕರೆನ್ಸಿ ನುಂಗೋ ಕಾಯಿಲೆ!

ಸುಪ್ರಿತಾ ಕನ್ನಡ ಸಿನಿಮಾ ರಸಿಕರಿಗೆ ಚಿರಪರಿಚಿತ ಹುಡುಗಿ. 'ಅಂಬಾರಿ' ಚಿತ್ರದ ಮೂಲಕ ಒಂದಷ್ಟು ಹೆಸರು ಪ್ಲಸ್ ತಕ್ಕಮಟ್ಟಿಗೆ ಕಾಸನ್ನೂ ಮಾಡಿಕೊಂಡ ಸಹಜ ಸುಂದರಿ ಈ ಸುಪ್ರಿತಾ! ಆದರೆ ಈಕೆಯ ಮೊದಲ ಚಿತ್ರ 'ಅಂಬಾರಿ' ಬಿಟ್ಟರೆ ಈವರೆಗೆ ಈಕೆ ನಟಿಸಿರುವ ಹತ್ತಾರು ಚಿತ್ರಗಳು ಬಿಡುಗಡೆಯಾಗಿದ್ದರೂ ಅವೆಲ್ಲಾ ತೋಪೆದ್ದುಹೋಗಿವೆ, ಪಾಪ!

ಸಿನಿಮಾ ಪತ್ರಕರ್ತರು ಈಕೆಯನ್ನು ಆರಂಭದಿಂದಲೂ ಅಕ್ಕರೆಯಿಂದ 'ಏನಮ್ಮಾ ಸುಪ್ರಿತಾ...' ಎಂದೇ ಕರೆದು ಮಾತಾಡಿಸುತ್ತಿದ್ದರು. ಆದರೆ ಇತ್ತೀಚೆಗೆ ಈಕೆ 'ನನ್ನನ್ನು ಸುಪ್ರಿತಾ ಅನ್ನಬೇಡಿ.... ಮೇಡಂ ಅನ್ನಿ ಅಥವಾ ಸುಪ್ರಿತಾ ಅವರೇ... ಎಂದು ಕರೀರಿ ಪ್ಲೀಸ್' ಎನ್ನಲು ಶುರುಮಾಡಿದ್ದಾಳೆ. ಯಾರೋ ಒಬ್ಬಿಬ್ಬರಿಗೆ ಈಕೆ ಈ ಮಾತನ್ನು ಹೇಳಿದ್ದರೆ ಪರವಾಗಿರಲಿಲ್ಲ, ಆದರೆ ಈಕೆ ಟಿವಿ ನೈನ್ ಚಾನೆಲ್‌ನ ಫೋಟಾಲ್, ಉದಯವಾಣಿಯ ಭರಮಸಾಗರ ವಿಜಿ, ರಾಜಶೇಖರಮೂರ್ತಿ ಸೇರಿದಂತೆ ಕನಿಷ್ಠ ಮುಕ್ಕಾಲು ಡಜನ್ ಮಂದಿಗೆ ಸೇಮ್ ಡೈಲಾಗು ಹೊಡೆದು ಎಲ್ಲರಲ್ಲಿ ಅಚ್ಚರಿ ಹುಟ್ಟಿಸಿದ್ದಾಳೆ. ಮರ್ಯಾದೆಯನ್ನು ಕೇಳಿ ಪಡೆಯಲಾಗದು ಎಂದು ಈ ಹುಡುಗಿಗೆ ಹೇಳುವವರು ಯಾರು?

ಈಕೆಗೆ ಇನ್ನೂ ಒಂದು ಕಾಯಿಲೆ ಇದೆ. ಅದೇನೆಂದರೆ ಸಿನಿಮಾ ಸೆಟ್‌ನಲ್ಲಿ ಇದ್ದಾಗ, ಐದೇ ಐದು ನಿಮಿಷ ಬಿಡುವು ಸಿಕ್ಕಾಗ, ಶೂಟಿಂಗ್ ಇಲ್ಲದಿದ್ದಾಗ ಸದಾಕಾಲ ತನ್ನ ಮೊಬೈಲ್ ಫೋನಲ್ಲಿ ಮಾತನಾಡುವ ಖಯಾಲಿ.

ಸದ್ಯ 'ನೆನಪಿನಂಗಳ', 'ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ' ಮೊದಲಾದ ಸಣ್ಣ-ಪುಟ್ಟ ಚಿತ್ರಗಳಲ್ಲಿ ನಟಿಸುತ್ತಿರುವ ಸುಪ್ರಿತಾಗೆ ಅದ್ಯಾರ ಜೊತೆ ಮಾತನಾಡುವ ಗೀಳೋ ಗೊತ್ತಿಲ್ಲ. ಇತ್ತೀಚೆಗೆ ಶೂಟಿಂಗ್ ಮುಗಿಸಿರುವ 'ಮೊದಲ ಮಿಂಚು' ಎಂಬ ಚಿತ್ರದ ಸೆಟ್‌ನಲ್ಲಿದ್ದಾಗಲೇ ಈಕೆ ಗಂಟೆಗಟ್ಟಲೇ ಫೋನನ್ನು ಕಿವಿಗೆ ಮೆತ್ತಿಕೊಂಡು ಓಡಾಡುತ್ತಿದ್ದದ್ದನ್ನು ಅಲ್ಲಿದ್ದ ಜನ ನೋಡಿದ್ದಾರೆ. ಕೆಲವರ ಪ್ರಕಾರ ಸುಪ್ರಿತಾ ಸದಾ ಹೀಗೆ ಫೋನ್ ನಲ್ಲಿ ಮಾತನಾಡುವುದು ತನ್ನ ಬಾಯ್ ಫ್ರೆಂಡ್ ಜೊತೆ. ಆದರೂ ಆಕೆ ಒಮ್ಮೆ ತನ್ನ ಮುಖಕ್ಕೆ



ಮೇಕಪ್ ಹಚ್ಚಿಕೊಂಡರೆ ಮುಗಿಯಿತು, ಸಿನಿಮಾ ಕ್ವಾಲಿಟಿಗೆ ಆಕೆ ಮೋಸ ಮಾಡುವುದಿಲ್ಲ ಎಂಬ ಮಾತೂ ಇದೆ.

ಅದೇನೇ ಇರಲಿ, ಸುಪ್ರಿತಾ ಚಿತ್ರೋದ್ಯಮದಲ್ಲಿ ಇನ್ನೂ ದೊಡ್ಡ ದೊಡ್ಡ ಹೆಜ್ಜೆ ಇಡಬೇಕಾದವಳು. ಹಲವಾರು ವರ್ಷ ನಟಿಯಾಗಿ ಬದುಕಬೇಕಾದವಳು. ಆಕೆಗೆ ಇನ್ನೂ ಚಿಲ್ಟು ಪಿಲ್ಟು ವಯಸ್ಸು. ಸರಿಯಾದ ದಾರಿಯಲ್ಲಿ ಆಕೆ ಸಾಗಲಿ, ಕತ್ತಲ್ಲ ಕರಡೀಗೆ ಜಾಮೂನು ತಿನಿಸುವ ಮಂದಿಯ ಗಾಳಕ್ಕೆ ಬೀಳದಿರಲಿ, ಆಕೆ ದಿನಗಟ್ಟಲೇ ಮಾತನಾಡುವ ಫೋನ್ ನಂಬರ್‌ನ ವ್ಯಕ್ತಿ ಒಳ್ಳೆಯವನಾಗಿರಲಿ ಎನ್ನುವುದು ನಮ್ಮೆಲ್ಲರ ಆಶಯ!

❖

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 01-02-2012



ಭಟ್ಟರು ಸಿಗರೇಟು ಸುಟ್ಟರೂ ಬ್ರೇಕಿಂಗ್ ನ್ಯೂಸ್!

'ಬ್ರೇಕಿಂಗ್ ನ್ಯೂಸ್, ಬ್ರೇಕಿಂಗ್ ನ್ಯೂಸ್, ಇಲಿ ಹೋದ್ರೂ ಹೆಗ್ಣಾ ಬಂದ್ರೂ ಬ್ರೇಕಿಂಗ್ ನ್ಯೂಸ್'- ಇದು ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಬ್ರೇಕಿಂಗ್ ನ್ಯೂಸ್' ಚಿತ್ರಕ್ಕಾಗಿ ಯೋಗರಾಜ್ ಭಟ್ ಬರೆದಿರುವ ಟೈಟಲ್ ಸಾಂಗ್...

ಈಗಷ್ಟೇ 'ಚಂಗಾರಿ' ಚಿತ್ರಕ್ಕಾಗಿ "ಹೈ ಹೈಯ ಕಚ್ಚ ಅಸಡಾ... ಬಸಡಾ... ತಲೆಕಟ್ಟಯಟ್ಟ ಯಬುಡಾ, ತಬುಡಾ.... ಚಂಗಾರಿ ಚುಟ್ಟ ಸುಟ್ಟ ಬಿಡ, ಪುಂಗಿ ಸೌಂಡು ಬಿಡಾ, ಲೊಳಲೊಟ್ಟೆ...." ಈ ತರಹ ಅರ್ಥವೇ ಇಲ್ಲದ ಸಾಲುಗಳನ್ನು ಬರೆದಿರುವ ಭಟ್ಟರಿಂದ ಹಾಡು ಬರೆಸುವಷ್ಟರಲ್ಲಿ ನಾಗತಿಹಳ್ಳಿಗೆ ಸಾಕುಸಾಕಾಗಿ ಹೋಯಿತಂತೆ. ಹಾಡು ಬರೆಯಲು ಹೇಳಿ ಆಮೇಲೆ ಭಟ್ಟರ ಹಿಂದೆ ಅಲೆಯೋರ್‍ಯಾರು ಎಂದು ನಿರ್ಧರಿಸಿದ ನಾಗತಿಹಳ್ಳಿ ಬನಶಂಕರಿಯಲ್ಲಿರುವ ತಮ್ಮ ಮನೆಗೇ ಭಟ್ಟರನ್ನು ಕರೆಸಿಕೊಂಡು, ಅವರಿಗೆಂದು ಒಂದು ಕುರ್ಚಿ ಹಾಕಿ, ಮುಂದೆ ಒಂದು ಟೇಬಲ್ ಇಟ್ಟು ಬರೆಯಲು ಬಿಟ್ಟರಂತೆ. ಕರೆಕ್ಟಾಗಿ ಮೂಡು ಬಂದು ಹಾಡು ಬರೆಯೋದ್ರೊಳಗೆ ಭಟ್ಟರು ಮೂರು ಪ್ಯಾಕ್ ಸಿಗರೇಟು, ಇಪ್ಪತ್ತೆರಡು ಕಾಫಿ ಕಪ್‌ಗಳನ್ನು ಖಾಲಿ ಮಾಡಿದ್ದರಂತೆ.

ಭಟ್ಟರ ಧೂಮಲೀಲೆಯನ್ನು ಕಂಡು ನಾಗತಿ ಬೆಚ್ಚಿಬಿದ್ದರಂತೆ. ಕೊನೆಗೆ ಭಟ್ಟರು ಹಾಡು ಬರೆದು ಮುಗಿಸಿದ ಮೇಲೆ ಲೆಕ್ಕ ಹಾಕಿದರೆ ಹಾಡಿನ ಒಂದೊಂದು ಸಾಲಿಗೂ ಒಂದೊಂದು ಸಿಗರೇಟು ಬೂದಿಯಾಗಿತ್ತಂತೆ!

ಸದ್ಯಕ್ಕೆ ಈ ವಿಚಾರವನ್ನು ಯಾವ ಚಾನೆಲ್‌ನವರೂ 'ಬ್ರೇಕಿಂಗ್ ನ್ಯೂಸ್' ಎಂದು ಟೆಲಿಕಾಸ್ಟ್ ಮಾಡದಿರುವುದು ಪುಣ್ಯ!

ಹಳೇಗಂಡನ ಪಾದವೇ ಗತಿ!

ಪ್ರಕಾಶ್ ರೈ ಮತ್ತು ಅವರ ಪತ್ನಿ ಲಲಿತಾ ಕುಮಾರಿ ವಿಚ್ಛೇದನ ಪಡೆದು, ರೈ ಪೋನಿ ವರ್ಮಾ ಎಂಬಾಕೆಯನ್ನು ಎರಡನೇ ಮದುವೆಯಾಗಿ ಇನ್ನೂ ಒಂದು ವರ್ಷವೂ ಕಳೆದಿಲ್ಲ. ಆದರೆ ಪ್ರಕಾಶ್ ರೈ ಮನೆಯ ಪಡಸಾಲೆಯಿಂದ ವಿಚಿತ್ರವಾದ ಸುದ್ದಿಯೊಂದು ಬಂದು ಕಿವಿ ಗುದ್ದುತ್ತಿದೆ!

ಅದೇನೆಂದರೆ, ವಿಚ್ಛೇದಿತ ಪತ್ನಿ ಲಲಿತಾ ಕುಮಾರಿ ಮತ್ತೆ ಬಂದು ಪ್ರಕಾಶ್ ರೈ ಜೊತೆ ಸಂಸಾರ ಶುರುವಿಟ್ಟುಕೊಂಡಿದ್ದಾಳೆ ಅನ್ನೋದು. 2005ರಲ್ಲಿ ಪ್ರಕಾಶ್ ಮತ್ತು ಲಲಿತಾರ ಐದು ವರ್ಷದ ಪುತ್ರ ಸೂರ್ಯ ಮಹಡಿಯಲ್ಲಿ ಗಾಳಿಪಟ ಬಿಡುತ್ತಿದ್ದಾಗ ಆಯತಪ್ಪಿ ಬಿದ್ದು ಜೀವಬಿಟ್ಟನಂತರ ರೈ ದಂಪತಿಗಳ ಬದುಕೂ ಜೀವ ಕಳೆದುಕೊಂಡಿತ್ತು. ಡಿಸ್ಕೋ ಶಾಂತಿಯ ಸಹೋದರಿಯೂ ಆದ ಲಲಿತಾ ಕುಮಾರಿ ಮತ್ತು ರೈ ಪರಸ್ಪರ ಒಪ್ಪಿ ವಿವಾಹ ವಿಚ್ಛೇದನ ಪಡೆದಿದ್ದರು.



ಇದಾದನಂತರ ಅತ್ತ ಲಲಿತಾ ಟಿವಿ ಧಾರಾವಾಹಿಗಳಲ್ಲಿ ತನ್ನ ಅದೃಷ್ಟವನ್ನು ಪರೀಕ್ಷಿಸಿದರೆ ಇತ್ತ ಪ್ರಕಾಶ್ ಪೋನಿಯನ್ನು ಮದುವೆಯಾಗಿ ಹೊಸ ಸಂಸಾರ ಆರಂಭಿಸಿದ್ದರು. ಆದರೆ ಲಲಿತಾ ಕುಮಾರಿಗೆ ಪ್ರಕಾಶನ ಆಸರೆ ಇಲ್ಲದೆ, ಮಕ್ಕಳೊಟ್ಟಿಗೆ ಒಬ್ಬಂಟಿಯಾಗಿ ಬದುಕು ಸಾಗಿಸಲು ಸಾಧ್ಯವಾಗಲಿಲ್ಲವಂತೆ. ಈ ಕಾರಣಕ್ಕೇ ಆಕೆ ಸಿಕ್ಕಾಪಟ್ಟೆ ಖಿನ್ನತೆಗೆ ಒಳಗಾದಳಂತೆ. ಇದನ್ನು ಕಂಡ ಪ್ರಕಾಶ್ ಆಕೆಯನ್ನೂ ಕರೆತಂದು ತಮ್ಮೊಟ್ಟಿಗೇ ಇಟ್ಟುಕೊಂಡಿದ್ದಾರಂತೆ.

ಸಣ್ಣಪುಟ್ಟ ನೆಪಗಳನ್ನು ನೀಡಿ ವಿಚ್ಛೇದನದ ಮೊರೆಹೋಗುವ ಸಿನಿಮಾ ಕಲಾವಿದರಿಗೆ ಈ ಪ್ರಕರಣ ಪಾಠದಂತಾಗಿದೆ. ಇನ್ನಾದರೂ ಡೈವೋರ್ಸ್ ನೀಡಲು ತುದಿಗಾಲಲ್ಲಿ ನಿಲ್ಲುವವರು ಮುಂದಾಲೋಚನೆ ವಹಿಸಲಿ....

'ವೀರ ಕನ್ನಡಿಗ'ನ ಕನ್ನಡ ಕಲಿಕೆ

ಕನ್ನಡದವರೇ ಆಗಿದ್ದರೂ ತಮ್ಮ ಬಾಲ್ಯವನ್ನು ಮುಂಬೈಯಲ್ಲಿ ಕಳೆದ ಶಂಕರ್ ನಾಗ್ ಕನ್ನಡ ಚಿತ್ರರಂಗದಲ್ಲಿ ಯಶಸ್ಸು ಗಳಿಸಿದ ನಂತರವೇ ಕನ್ನಡವನ್ನು ಓದಲು, ಬರೆಯಲು ಕಲಿಯಲಾರಂಭಿಸಿದ್ದು. ಈಗ ಅವರಂತೆಯೇ ಕನ್ನಡಿಗನೇ ಆಗಿದ್ದರೂ ತನ್ನ ಬಾಲ್ಯವನ್ನು ಚೆನ್ನೈಯಲ್ಲಿ ಕಳೆದು ಸದ್ಯ ಕನ್ನಡ ಚಿತ್ರರಂಗದಲ್ಲಿ 'ಪವರ್' ಪಡೆದಿರುವ ಹೀರೋ ಒಬ್ಬ ಶಂಕರನಾಗ್ ಹಾದಿಯಲ್ಲಿದ್ದು ಕನ್ನಡವನ್ನು ಓದಲು, ಬರೆಯಲು ಕಲಿಯಲಾರಂಭಿಸಿದ್ದಾನೆ.



ಹೌದು..!!

ಪುನೀತ್ ರಾಜ್‌ಕುಮಾರ್ ಎಂಬ ಕನ್ನಡ ಸಿನಿಮಾದ ಪವರ್ ಸ್ಟಾರ್ ಈಗ ತಮ್ಮ ಜೀವನದಲ್ಲಿ ಮೊದಲ ಬಾರಿಗೆ 'ಅಆಇಈ' ಕನ್ನಡಮಾಲೆಯನ್ನು ಕಲಿಯಲಾರಂಭಿಸಿದ್ದಾರೆ ಎಂದರೆ ನೀವು ನಂಬಲೇಬೇಕು!

ಅರೆ, ತೆರೆಯ ಮೇಲೆ ಕನ್ನಡದಲ್ಲಿ ಉದ್ದುದ್ದನೆಯ ಡೈಲಾಗು ಹೊಡೆದು, ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸಿಕೊಳ್ಳುವ ಪುನೀತ್‌ಗೆ ಕನ್ನಡ ಬರುವುದಿಲ್ಲವೇ? ಎಂದು ಅಚ್ಚರಿಪಡಬೇಡಿ.



ನಿಜ ಹೇಳಬೇಕೆಂದರೆ, ಪುನೀತ್‌ಗೆ ಮಾತ್ರವಲ್ಲ, ಅವರ ಸಹೋದರ... ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಮತ್ತು ರಾಘವೇ... ರಾಜ್‌ಕುಮಾರ್ ಅವರಿಗೂ ಕನ್ನಡ ಓದಲು, ಬರಯಲು ಅ... ವೃತ್ತಿಜೀವನದ ಆರಂಭದಲ್ಲಿ ಬರುತ್ತಿರಲಿಲ್ಲ, ಅದಕ್ಕೆ ಕಾರ... ಮೂವರೂ ತಮ್ಮ ಬಾಲ್ಯವನ್ನು ಕಳೆದದ್ದು ಚೆನ್ನೈನಲ್ಲಿ ವ... ಓದಿದ್ದು ಕೂಡ ಅಲ್ಲಿನ ತಮಿಳು ಇಂಗ್ಲಿಷ್ ಶಾಲೆಗಳಲ್ಲಿ... ಕನ್ನಡ ಚಿತ್ರರಂಗ ಚೆನ್ನೈಅನ್ನು ಅವಲಂಬಿಸಿದ್ದರಿಂದ ವಿಧಿ ಇ... ಅವರ ತಂದೆ ರಾಜ್‌ಕುಮಾರ್ ಮತ್ತು ತಾ... ಪಾರ್ವತಮ್ಮನವರು ಚೆನ್ನೈಯಲ್ಲೇ ಮನೆ ಮಾಡಿ ತಮ್ಮ ಮಕ್ಕ... ಅಲ್ಲಿನ ಶಾಲೆಗೆ ಸೇರಿಸಿದ್ದರು.

ಪುನೀತ್ ಚಿಕ್ಕ ಹುಡುಗನಾಗಿದ್ದಾಗಲೇ ರಾಜ್ ತ... ಸಂಸಾರವನ್ನು ಚೆನ್ನೈನಿಂದ ಬೆಂಗಳೂರಿಗೆ ಶಿಫ್ಟ್ ಮಾಡಿದರಾದರೂ ಪುನೀ... ವಿದ್ಯಾಭ್ಯಾಸ ಅರ್ಧಕ್ಕೆ ಮೊಟಕುಗೊಂಡಿತ್ತು, ಅಷ್ಟು ಹೊತ್ತಿಗಾಗಲೇ ತಾ... ಪಾರ್ವತಮ್ಮನವರು ನಿರ್ಮಾಪಕಿಯಾಗಿ ದೊಡ್ಡ ಜವಾಬ್ದಾರಿಯ... ಹೊತ್ತಿದ್ದರು. ಪುನೀತ್ ಕ... ಹಲವಾರು ಚಿತ್ರಗಳಲ್ಲಿ ಬಾಲ ನಟನಾ... ಮತ್ತು ತನ್ನ ತಾಯಿ ನಿರ್ಮಿಸು... ಸಿನಿಮಾಗಳ ಚಿತ್ರೀಕರಣ ನಡೆಯು... ಲ್ಲಿಗೆ ಅವರೊಂದಿಗೆ ಹೋಗುತ್ತಿದ್ದ...



ಚೆನ್ನೈಯಲ್ಲಿ ಮೂರನೇ ತರಗತಿ... ಸ್ಕೂಲಿಗೆ ಹೋಗಿದ್ದ ಪುನೀತ್‌ಗೆ ಆನಂತರ ಮನೆಯಲ್ಲೇ ಪಾಠ ಕಲಿ... ವ್ಯವಸ್ಥೆಯನ್ನು ಮಾಡಲಾಗಿತ್ತಾದರೂ ಹಲವಾರು ಕಾರಣಗಳಿಗೆ ಅದು ಯ... ಕಾಣಲಿಲ್ಲ. ಹೀಗಾಗಿ ಪುನೀತ್‌ಗೆ ಕನ್ನಡದಲ್ಲಿ ಮಾತನಾಡುವುದು ಗೊ... ಹೊರತು ನಮ್ಮ ಭಾಷೆಯನ್ನು ಓದುವುದಾಗಲಿ, ಬರೆಯುವುದಾ... ಗೊತ್ತಿಲ್ಲ. ಆ ಕಾರಣಕ್ಕೇ ಇಲ್ಲಿಯತನಕ ಪುನೀತ್ ನಟಿಸಿರುವ ಚಿತ್ರ... ಸಂಭಾಷಣೆಗಳನ್ನು ಅವರ ಸಹಾಯಕರೊಬ್ಬರು 'ರೀಡಿಂ... ಕೊಡುತ್ತಿದ್ದರು. ಅಂದರೆ ಪುನೀತ್ ತನ್ನ ಸಿನಿಮಾದಲ್ಲಿ ಹೇಳಬೇ... ಡೈಲಾಗ್‌ಗಳನ್ನು ಬೇರೊಬ್ಬರು ಓದಿ ಹೇಳಿದನಂತರ ಪುನಿ... ಅದನ್ನು ಕ್ಯಾಮೆರಾ ಮುಂದೆ ತನ್ನ ನಟನಾ ಸಾಮರ್ಥ್ಯದೊಂ... ಒಪ್ಪಿಸುತ್ತಿದ್ದರು. ಎಂಥದ್ದೇ ಕ್ಲಿಷ್ಟ ಮಾತುಗಳನ್ನು, ಉದ್ದನ... ಡೈಲಾಗ್‌ಗಳನ್ನು ಒಮ್ಮೆ ಕೇಳಿಸಿಕೊಂಡ ನಂತರ ಅದನ್ನು ತಪ್ಪಿ... ಹೇಳುವುದು ಪವರ್‌ಸ್ಟಾರ್‌ಗೆ ಒಲಿದಿರುವ ಪವರ್.

ಆದರೀಗ ಹಿಂದಿಯಲ್ಲಿ ಅಮಿತಾಬ್ ಬಚ್ಚನ್ ಅ... ನಿರ್ವಹಿಸಿದ್ದ 'ಕೌನ್ ಬನೇಗಾ ಕರೋಡ್‌ಪತಿ' ಎಂಬ ಜನಪ್ರಿ... ಕಾರ್ಯಕ್ರಮದ ಕನ್ನಡ ಅವತರಣಿಕೆಯಾದ 'ಕೋಟ್ಯಧಿಪತಿ' ಎ... ಟಿವಿ ರಿಯಾಲಿಟಿ ಶೋದ ನಿರೂಪಕರಾಗಿದ್ದಾರೆ ಪುನೀತ್. ಹಿ... ಕಾರ್ಯಕ್ರಮದಲ್ಲಿ ಹೇಗೆ ಅಮಿತಾಬ್ ಅವರು ಸುಲಲಿತವ... ಒಂದೇ ಪ್ರಶ್ನೆಯನ್ನು ಹಿಂದಿಯಲ್ಲೂ, ಇಂಗ್ಲಿಷ್‌ನಲ್ಲೂ ಕೇಳುತ್ತಿದ್ದ... ಅಂತಹದ್ದೇ ಪಾತ್ರವನ್ನು ಪುನೀತ್ ಈಗ ನಿಭಾಯಿಸಬೇಕಿದೆ. ಅದು ಸುಲ... ಮಾತಲ್ಲ. ಸಿನಿಮಾದಲ್ಲಿ ಬೇರೊಬ್ಬರು ಓದಿದ ಡೈಲಾಗನ್ನು ನೆನಪಿಟ್ಟುಕೊಂ... ಹೇಳಬಹುದು. ಆದರೆ ಟಿವಿ ಶೋದಲ್ಲಿ ಸಿದ್ಧ ಡೈಲಾಗ್‌ಗಳು ಇರುವುದಿ... ಹೀಗಾಗಿ ಪುನೀತ್‌ಗೆ ಈಗ ಕನ್ನಡದಲ್ಲಿ ಓದುವ ಅಗತ್ಯ ಉಂಟಾಗಿದೆ. ಅ... ನೆರವಿಗೆ ಈಗ ಬಂದಿರುವುದು ಅವರ ಹಲವಾರು ವರ್ಷಗಳ ಸ್ನೇಹಿತ... ಆಗಿರುವ, ಕನ್ನಡಿಗರಿಗೆ ಇಂಗ್ಲಿಷ್ ಕಲಿಸುವಲ್ಲಿ ಪರಿಣತಿಯನ್ನೂ ಪಡೆದಿರ... ಪ್ರಕೃತಿ ಬನವಾಸಿ.

ಪುನೀತ್ ಅವರ ತಂದೆ ರಾಜ್‌ಕುಮಾರ್ ಕನ್ನಡವನ್ನು ಸ್ಪಷ್ಟವ... ಮಾತನಾಡುತ್ತಿದ್ದರು ಎಂಬುದು ಎಲ್ಲರಿಗೂ ಗೊತ್ತಿರುವ ಹೆಮ್ಮೆಯ ವಿಚ... ಈ ಹಿನ್ನೆಲೆಯಲ್ಲಿ ಪುನೀತ್‌ಗೆ ಕನ್ನಡ ಭಾಷೆ ಎಂಬುದು ಕೇವಲ ಸಿನಿಮಾಗ... ಡೈಲಾಗ್ ಹೊಡೆಯುವುದಕ್ಕೆ, ಟಿವಿ ಕಾರ್ಯಕ್ರಮಗಳನ್ನು ನಡೆಸುವು... ಮಾತ್ರ ಸೀಮಿತವಾಗಕೂಡದು.

ಅದರೊಂದಿಗೆ ಕನ್ನಡ ಭಾಷೆಯಲ್ಲಿ ನಮ್ಮ ನಾಡಿನ ಸಂಸ್ಕೃತಿ, ಇತಿಹ... ಚಿಂತನೆ, ಸಿದ್ಧಾಂತ, ಭವಿಷ್ಯ ಎಲ್ಲವೂ ಅಡಕವಾಗಿದೆ ಎಂಬುದನ್ನೂ ಪುನಿ... ಅರಿತುಕೊಳ್ಳಬೇಕು ಮತ್ತು ಅವೆಲ್ಲದರ ಬಗ್ಗೆ ಜನರಲ್ಲೂ ಅರಿವು ಮ... ಸಬೇಕು ಎಂಬುದು ನಮ್ಮ ಆಶಯ. ಪವರ್ ಸ್ಟಾರ್ ಪುನೀತ್‌ಗೆ ಇದು ಕ... ಕೆಲಸ ಆಗಿರಲಿಕ್ಕಿಲ್ಲ. ಅಷ್ಟು ಮಾತ್ರವಲ್ಲ, ಹಾಗೆ ಮಾಡಿದರೆ ಪುನೀತ್ 'ತಂ... ತಕ್ಕ ಮಗ' ಆಗುತ್ತಾರೆ ಎಂಬ ವಿಶ್ವಾಸ ನಮಗೆ ಇದೆ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com